# ೧೪ನೇ ಭಾಗ.

## ಗ್ರಾಮಗಳು.—ಧಾರವಾಡ ಜಿಲ್ಲೆ.

ಅಬ್ಬಿಗೇರಿ.—ರೋಣದಿಂದ ೭ ಮೈಲಿನ ಮೇಲೆ ದಕ್ಷಿಣಕ್ಕೆ ದೊಡ್ಡ ಹಳ್ಳಿ; ಜನಸಂಖ್ಯೆ (೧೮೮೧) ೩೦೬೮. ಈಶ್ವರ, ಜ್ಯೋತಿಲಿಂಗ, ಯೆಂಬೆರಡು ಕರೆ ಕಲ್ಲಿನ ದೇವಸ್ಥಾನಗಳುಂಟು. ಅವುಗಳಲ್ಲಿ ವೊಂದು ಶಿಲಾಲಿಪಿಯದೆ.

ಅಬ್ಲೂರು.—ಕೋಡದ ದಕ್ಷಿಣಕ್ಕೆ ಯೆರಡು ಮೈಲಿನ ಮೇಲೆ ಸಣ್ಣ ಹಳ್ಳಿ; ನಿವಾಸಿಗಳು (೧೮೮೧) ೭೫೨; ಬಸವನ ಗುಡಿಯಲ್ಲಿ ಮೂರು ಲಿಪಿಗಳು ಇಸವೀ ಸನ್ ೧೧೦೦, ೧೧೧೯, ೧೧೪೪; ಸೋಮನಾಥನ ಗುಡಿಯಲ್ಲಿ ವೊಂದು ೧೧೬೮.

ಆಡೂರು.—ಹಾನಗಲ್ಲಿನ ಪೂರ್ವಕ್ಕೆ ೧೦ ಮೈಲಿನ ಮೇಲೆ, ನಿವಾಸಿಗಳು ೧೧೫೧—ಇದಕ್ಕೆ ಪೂರ್ವದಲ್ಲಿ ಪಾಂಡಿಪುರವೆನ್ನುವರು. ಕಲ್ಲೇಶ್ವರನ ಗುಡಿಯಲ್ಲಿ ಇ. ಸ. ೧೦೪೪ರದೊಂದು ಲಿಪಿಯುಂಟು; ಒಂದು ಹೊಲದೊಳಗೆ ಮತ್ತೊಂದು ಲಿಪಿಯು ೧೦೧೩ರರದು ಇರುತ್ತದೆ. ಮತ್ತೊಂದು ಲಿಪಿಯು ಮಿತಿ ಇಲ್ಲದ್ದು ಅರ್ಧ ಸಂಸ್ಕೃತದಲ್ಲಿ ಅರ್ಧ ಕನ್ನಡದಲ್ಲಿ ಬರಿದದ್ದು ಇರುತ್ತದೆ. ಇದು ಚಾಲುಕ್ಯರ ೬ನೇ ಅರಸನಾದ ಕೀರ್ತಿವರ್ಮನ ಕಾಲದ್ದಿರುವ ಕಾರಣ ಶಾ. ಶ. ೫ನೇ ಶತಕದ ಕಡೆಯಲ್ಲಿ ಹುಟ್ಟಿದ್ದಿರುತ್ತದೆ. ಇದು ಆ ಕಾಲದ ಕದಂಬ ಅರಸರ ರಾಜ್ಯದ ಮಧ್ಯದಲ್ಲಿ ಇರುವ ಕಾರಣ ಚಲುಕ್ಯರು ಕದಂಬರನ್ನು ಜಯಿಸಿದ್ದರೆಂದು ಅನುಮಾನವಾಗುತ್ತದೆ. ಈ ವೂರಲ್ಲಿ ರಾಷ್ಟ್ರಕೂಟರ ೨ನೇ ಕೃಷ್ಣರಾಜನು ಬರಿಸಿದ್ದಿನ್ನೊಂದು ಲಿಪಿಯುಂಟು. ಇವನು ಶಾ. ಶ. ೭೯೭ರಿಂದ ೮೩೩ರ ವರೆಗೆ ಆಳಿದನು.

ಐರಣಿ.—ರಾಣೇಬಿನ್ನೂರಿನ ಪೂರ್ವಕ್ಕೆ ೧೨ ಮೈಲಿನ ಮೇಲೆ ತುಂಗಭದ್ರೆಯ ಥಡದಲ್ಲಿ ದೊಡ್ಡ ಹಳ್ಳಿ; ನಿವಾಸಿಗಳು (೮೧) ೧೮೭೮. ಈ ವೂರ ದಕ್ಷಿಣಕ್ಕೆ ಭದ್ರವಾದದ್ದೊಂದು ಸಣ್ಣ ಕೋಟೆಯು ಪೂರ್ವದಲ್ಲಿ ಇತ್ತು; ಅದು ಈಗ ಹಾಳಾಗಿದೆ.

ಅಮರಗೊಳ.—ಧಾರವಾಡದಿಂದ ಹುಬ್ಬಳ್ಳಿಗೆ ಹೋಗುವ ಮಾರ್ಗದಲ್ಲಿ ಹುಬ್ಬಳ್ಳಿಯಿಂದ ೫ ಮೈಲಿನ ಮೇಲೆ ದೊಡ್ಡ ಹಳ್ಳಿ, ನಿವಾಸಿಗಳು (೮೧) ೧೫೪೭. ಈ ವೂರಲ್ಲಿ ಶಂಕರಲಿಂಗ, ಬನಶಂಕರಿ, ಯೆಂಬೆರಡು ಜಕಣಾಚಾರ್ಯನ ಬುನಾದಿಯ ದೇವಾಲಯಗಳುಂಟು. ಶಂಕರಲಿಂಗನ ಗುಡಿಯ ಯೆದುರಿಗೆ ಬಹಳ ಸವಿದದ್ದೊಂದು ಶಿಲಾಲಿಪಿಯುಂಟು.

ಅಮ್ಮಿನಭಾವಿ.—ಧಾರವಾಡದ ಈಶಾನ್ಯಕ್ಕೆ ೭ ಮೈಲಿನ ಮೇಲೆ ದೊಡ್ಡ ಹಳ್ಳಿ, ನಿವಾಸಿಗಳು (೮೧) ೩೩೯೨. ನೇಮಿನಾಥ, ಕಲಮೇಶ್ವರ, ಮಲ್ಲಿಕಾರ್ಜುನ, ಯೆಂಬ ಮೂರು ಬುನಾದಿಯ ಗುಡಿಗಳು. ನೇಮಿನಾಥನೆಂದರೆ ಜೈನರ ೨೨ನೇ ತೀರ್ಥಂಕರನು. ಈ ಗುಡಿಯು ದೊಡ್ಡದಿದೆ. ಕಲಮೇಶ್ವರನ ಗುಡಿಯಲ್ಲಿ ಯೆರಡು ಕಟ್ಟಿಗೇ ಕಂಬಗಳ

ಮೇಲೆ ವಿಠ್ಠಲ ಪಂತೀ ಅಳತೆಗಳ ಪರಿಮಾಣಗಳನ್ನು ಬಾಲಬೋಧ ಲಿಪಿಯಲ್ಲಿ ಬರಿದಿದ್ದಾರೆ. ಮೂರೂ ಗುಡಿಗಳಲ್ಲಿ ವೊಂದೊಂದು, ಬೇರೆ ಕಡೆಯಲ್ಲಿ ಮತ್ತೂ ಮೂರು, ಅಂತೂ ಆರು ಶಿಲಾಲಿಪಿಗಳು ಈ ವೂರಲ್ಲಿ ಇರುತ್ತವೆ. ಅವುಗಳಲ್ಲಿ ಯೆರಡು ಇ. ಸ. ೫೬೬ನೇ ವರ್ಷದವು, ಉಳಿದವೆಲ್ಲ ೧೨ನೇ ಶತಕಗಳಲ್ಲಿ ಬರಿದಂಥವು ಇರುತ್ತವೆ.

ಅಣ್ಣೀಗೇರಿ.—ನವಲಗುಂದದ ಆಗ್ನೇಯಕ್ಕೆ ೧೦ ಮೈಲಿನ ಮೇಲೆ ದೊಡ್ಡ ಗ್ರಾಮ, ನಿವಾಸಿಗಳು (೮೧) ೭೨೧೧. ಇಲ್ಲಿಯ ಅಮೃತೇಶ್ವರನೆಂಬ ದೇವಸ್ಥಾನವು ದೊಡ್ಡದು, ಪ್ರಖ್ಯಾತವಿರುತ್ತದೆ; ಅದಕ್ಕೆ ೭೬ ಕಂಬಗಳಿವೆ. ಈ ಗುಡಿಯಲ್ಲಿ ೬ ಶಿಲಾಲಿಪಿಗಳಿವೆ. ಅವೆಲ್ಲ ಇ. ಸ. ೧೧೫೭ರಿಂದಿತ್ತ ಬರಿದಂಥವು. ಇದರ ಹೊರ್ತು ಈ ವೂರಲ್ಲಿ ಬೇರೆ ೭ ಸಣ್ಣ ದೊಡ್ಡ ಗುಡಿಗಳಿವೆ. ಅವುಗಳಲ್ಲೆಲ್ಲ ಲಿಪಿಗಳಿರುತ್ತವೆ. ಅವೆಲ್ಲ ೧೧ನೇ ಶತಕದಿಂದ ಇತ್ತ ಹುಟ್ಟಿರುತ್ತವೆ. ಅಣ್ಣೀಗೇರಿಯು ಬಸವೇಶ್ವರನಿಂದ ಕೊಲ್ಲಿಸಲ್ಪಟ್ಟ ಬಿಜ್ಜಳ ರಾಜನ ರಾಜಧಾನಿಯು. ಇಂಗ್ಲಿಷ ಸರಕಾರದ ಅಮಲು ಆದಾಗ ಈ ವೂರು ನಿಪಾಣಿಕರನ ರಾಜ್ಯಕ್ಕೆ ಶೇರಿತ್ತು; ಅವ ಸತ್ತ ಬಳಿಕ ಸನ್ ೧೮೪೯ರಲ್ಲಿ ಖಾಲಸಾತಿಗೆ ಬಂತು. ಸನ್ ೧೮೨೭ರಲ್ಲಿ ಈ ವೂರಲ್ಲಿ ೪೫೦ ಮನೆಗಳೂ ೧೪ ಅಂಗಡಿಗಳೂ ಮಾತ್ರ ಇದ್ದವು.

ಅರಳೀ ಕಟ್ಟಿ.—ಕೋಡದ ಉತ್ತರಕ್ಕೆ ೫ ಮೈಲಿನ ಮೇಲೆ ಸಣ್ಣ ಹಳ್ಳಿ, ನಿವಾಸಿಗಳು (೮೧) ೪೬೫. ಇಲ್ಲಿ ಮೂರು ಕನ್ನಡ ಲಿಪಿಗಳಿರುತ್ತವೆ.

ಅರಳೇಶ್ವರ.—ಹಾನಗಲ್ಲಿನ ಈಶಾನ್ಯಕ್ಕೆ ೫ ಮೈಲಿನ ಮೇಲೆ ಸಣ್ಣ ಹಳ್ಳಿ, ಜನಸಂಖ್ಯೆ (೮೧) ೭೭೯. ಕದಂಬೇಶ್ವರನ ಗುಡಿಯಲ್ಲಿ ೩ ಲಿಪಿಗಳು ೧೧ನೇ ಶತಕದವು ಇರುತ್ತವೆ.

ಅರಟಾಳ.—ಬಂಕಾಪುರದ ವಾಯವ್ಯಕ್ಕೆ ೯ ಮೈಲಿನ ಮೇಲೆ; ಕೆಲವು ಬುನಾದಿಯ ಗುಡಿಗಳೂ ಲಿಪಿಗಳೂ ಇರುತ್ತವೆ.

ಅಸುಂಡಿ.—ಗದಗದ ನೈರುತ್ಯಕ್ಕೆ ೩ ಮೈಲಿನ ಮೇಲೆ ಸಣ್ಣ ಹಳ್ಳಿಯು, ಜನಸಂಖ್ಯೆ (೮೧) ೮೪೮. ಬೊಮ್ಮಪ್ಪ, ಹನುಮಂತ, ಈ ದೇವರ ಬುನಾದಿಯ ಗುಡಿಗಳಲ್ಲಿ ೧೧ನೇ ಶತಕದ ಲಿಪಿಗಳಿರುತ್ತವೆ.

ಅಸುಂಡಿ.—ರಾಣೀಬಿನ್ನೂರಿನ ಪಶ್ಚಿಮಕ್ಕೆ ೫ ಮೈಲಿನ ಮೇಲೆ; ಕಲ್ಲೇಶ್ವರನ ಗುಡಿಯಲ್ಲಿ ಯೆರಡು ಲಿಪಿಗಳು ೧೨ನೇ ಶತಕದವು ಇರುತ್ತವೆ.

ಬಳಗಾನೂರು.—ಗದಗದ ಉತ್ತರಕ್ಕೆ ೧೪ ಮೈಲಿನ ಮೇಲೆ ದೊಡ್ಡ ಹಳ್ಳಿ, ಜ. ಸ. (೮೧) ೧೭೩೪. ವೀರ ಭದ್ರನ ಗುಡಿಯಲ್ಲಿ ವೀರ ಬಲ್ಲಾಳ ರಾಜನ ಆಳಿಕೆಯಲ್ಲಿ ಬರಿದದ್ದೊಂದು ಲಿಪಿಯುಂಟು.

ಬಾಳಂಬೀಡ.—ಕೋಡದ ನೈರುತ್ಯಕ್ಕೆ ೫ ಮೈಲಿನ ಮೇಲೆ ಸಣ್ಣ ಹಳ್ಳಿ. ವಿಷಪರಿಹಾರೇಶ್ವರನ ಗುಡಿಯಲ್ಲಿ ೫ ಲಿಪಿಗಳಿವೆ; ಅವೆಲ್ಲ ೧೧ನೇ ಶತಕದಿಂದಿತ್ತ ಬರಿದಂಥವು.

ಬಾಳಂಬೀಡ.—ಹಾನಗಲ್ಲಿನ ಪೂರ್ವಕ್ಕೆ ೮ ಮೈಲಿನ ಮೇಲೆ ಸಣ್ಣ ಹಳ್ಳಿ, ಜನ

ಸ. (೮೧) ೪೪೫. ಕಲಮೇಶ್ವರ, ರಾಮೇಶ್ವರ, ಯೆಂಬ ಗುಡಿಗಳಲ್ಲಿ ಯೆರಡೆರಡು ಲಿಪಿಗಳು ೧೨ನೇ ಶತಕದವು ಇರುತ್ತವೆ.

ಬಾಳೇಹಳ್ಳಿ. — ಹಾನಗಲ್ಲಿನ ನೈರುತ್ಯಕ್ಕೆ ೬ ಮೈಲಿನ ಮೇಲೆ. ಮೈಲಾರದೇವ, ಮಲ್ಲಿಕಾರ್ಜುನ, ಯೆಂಬ ಗುಡಿಗಳೂ ೧೨ ಲಿಪಿಗಳೂ ಉಂಟು; ಅವೆಲ್ಲ ಬಹುತರ ೧೧ನೇ ೧೨ನೇ ಶತಕಗಳಲ್ಲಿ ಹುಟ್ಟಿದಂಥವು.

ಬಾಳೂರು. — ಹಾನಗಲ್ಲಿನ ಆಗ್ನೇಯಕ್ಕೆ ಮೂರು ಮೈಲಿನ ಮೇಲೆ. ರಾಮಲಿಂಗನ ಗುಡಿಯಲ್ಲಿಯೂ ಬೇರೊಂದು ಕಡೆಯಲ್ಲಿಯೂ ಯೆರಡು ಲಿಪಿಗಳು ೧೨ನೇ ೧೩ನೇ ಶತಕದವಿರುತ್ತವೆ.

ಬನ್ನೀಕೊಪ್ಪ. — ಶಿಗ್ಗಾವಿಯ ಈಶಾನ್ಯದಲ್ಲಿ ೨ ಮೈಲಿನ ಮೇಲೆ. ವರದರಾಯನ ಗುಡಿಯಲ್ಲಿ ಯೆರಡು ಲಿಪಿಗಳಿರುತ್ತವೆ.

ಬಂಕಾಪುರ ಅಥವಾ ಶಹಾಬಾಜಾರ. — ತಾಲೂಕಿನ ಮುಖ್ಯ ಗ್ರಾಮ, ಜ. ಸ. (೮೧) ೬೦೩೭. ಇಲ್ಲಿ ಹಾಳಾದದ್ದೊಂದು ಕೋಟೆಯೂ ಯೆರಡು ಬುನಾದಿಯ ಗುಡಿಗಳೂ ಇರುತ್ತವೆ. ಮಂಗಳವಾರದ ಸಂತೆಯಾಗಿ ದೇಶೀ ಬಟ್ಟೆಗಳು, ಕಂಬಳಿಗಳು, ಪಾತ್ರೆಗಳು, ಯೆಣ್ಣೆ, ಕಾಳು, ಇವುಗಳ ಮಾರಾಟವಾಗುತ್ತದೆ.

ಅರವತ್ತು ಕಂಬದ ಬಸ್ತಿ, ಸಿದ್ಧೇಶ್ವರನ ಗುಡಿ, ಇವೇ ಯೆರಡು ಪ್ರಾಚೀನ ದೇವಸ್ಥಾನಗಳು. ಬಸ್ತಿಗೆ ನಗರೇಶ್ವರನ ಬಸ್ತಿಯೆಂತಲೂ ಅನ್ನುವರು. ಅದು ಅರ್ಧ ಮರ್ಧ ಹಾಳಾಗಿದೆ, ಕೆಲವು ಭಾಗ ನೆಲದೊಳಗೆ ಹುಗಿದದೆ. ಈ ಬಸ್ತಿಯ ಸಭಾಮಂಟಪಕ್ಕೆ ಅರವತ್ತು ಕಂಬಗಳಿರುತ್ತವೆ; ಅದರ ಸುತ್ತು ಮುತ್ತಲಿನ ಗೋಡೆಯನ್ನು ಬಹು ಸುಂದರವಾಗಿ ಕಟ್ಟಿದ್ದಾರೆ. ಕಂಬಗಳೆಲ್ಲ ಕರಿಕಲ್ಲಿನವು, ಗಾಡಕ್ಕೆ ಹಚ್ಚಿ ನುಣುಪು ಮಾಡಲ್ಪಟ್ಟಿರುತ್ತವೆ. ಮುಖ್ಯ ಬಸ್ತಿಯೊಳಗೆ ಹೋಗಲಿಕ್ಕೆ ದಕ್ಷಿಣ ದಿಕ್ಕಿನಲ್ಲಿ ಮಾಡಿದ ಬಾಗಿಲು ಬಹು ಸುಂದರವಾಗಿರುತ್ತದೆ; ಆದರೆ ಅದರ ಯೆಡಬಲದಲ್ಲಿಯ ಕೆಲ ಕೆಲವು ಗೊಂಬೆಗಳನ್ನು ಜನರು ಕದ್ದು ಕೊಂಡು ಹೋಗಿದ್ದಾರೆ. ಈ ಬಸ್ತಿಯಲ್ಲಿ ಆರು ಶಿಲಾಲಿಪಿಗಳಿರುತ್ತವೆ. ಅವೆಲ್ಲ ೧೧ನೇ ೧೨ನೇ ಶತಕಗಳಲ್ಲಿ ಬರಿದಂಥವು. ಸಿದ್ಧೇಶ್ವರನ ಗುಡಿಯು ಬಸ್ತಿಗಿಂತ ಸಣ್ಣದು, ಅವರಷ್ಟು ಹಳೆದೂ ಅಲ್ಲ. ಇದರ ಸಭಾಮಂಟಪಕ್ಕೆ ೮ ಕಂಬಗಳಿವೆ. ಈ ಗುಡಿಗೆ ಸರಕಾರೀ ಇನಾಮು ನಡಿಯುತ್ತದೆ. ಇದರಲ್ಲಿ ವೊಂದು ಲಿಪಿಯು ೧೦೫೫ನೇ ವರ್ಷದ್ದು ಇರುತ್ತದೆ. ಇ. ಸ. ೮೯೮ನೇ ವರ್ಷ ಬರಿದದ್ದೊಂದು ಕೊಲ್ಲಾಪುರದಲ್ಲಿ ಇರುವ ಜೈನಗ್ರಂಥದಲ್ಲಿ ಬಂಕಾಪುರದ ಉಲ್ಲೆಖವಿದೆ. ಸವಣೂರಿನ ನಬಾಬನ ಪೂರ್ವಜನಾದ ಅಬದುಲ್ ಕರೀಮಖಾನನು ೧೬೭೩ರಲ್ಲಿ ಬಂಕಾಪುರದ ಶುಭೇದಾರನಾದನು. ಅವನು ಸ್ವತಂತ್ರನಾದ ಬಳಿಕ ಬಂಕಾಪುರದಲ್ಲಿ ಕೆಲವು ದಿವಸ ಆಳಿದನು. ಹೈದರನೂ ಟೀಪೂನೂ ಬಂಕಾಪುರವನ್ನು ಹಾಳು ಮಾಡಿದರು.

ಬನ್ನೀಹಟ್ಟಿ. — ಕೋಡದ ಉತ್ತರಕ್ಕೆ ೧೦ ಮೈಲಿನ ಮೇಲೆ. ಒಂದು ಹೊಲದಲ್ಲಿ ವೊಂದು ಲಿಪಿಯುಂಟು.

ಬರಡೂರು — ಗದಗದ ಆಗ್ನೇಯಕ್ಕೆ ೨೦ ಮೈಲಿನ ಮೇಲೆ. ಭಾರತೇಶ್ವರನ ಗುಡಿಯಲ್ಲಿ ವೊಂದು ಲಿಪಿಯುಂಟು.

ಬೆಳಗಲ. — ಹಾನಗಲ್ಲಿನ ಈಶಾನ್ಯಕ್ಕೆ ೭ ಮೈಲಿನ ಮೇಲೆ. ಇಲ್ಲಿ ಮೂರು ಲಿಪಿಗಳುಂಟು.

ಬೆಲವಂತ್ರ — ಕಲಘಟಗಿಯ ದಕ್ಷಿಣಕ್ಕೆ ಮೂರು ಮೈಲಿನ ಮೇಲೆ. ಈ ವೂರಲ್ಲಿ ಯೆರಡು ಲಿಪಿಗಳಿರುತ್ತವೆ.

ಬೆಳವಟಗಿ. — ನವಲಗುಂದದ ಈಶಾನ್ಯಕ್ಕೆ ಮೂರು ಮೈಲಿನ ಮೇಲೆ. ರಾಮಲಿಂಗನ ದೇವಾಲಯವೆಂಬದೊಂದು ಹಾಳು ಗುಡಿಯೂ ಕೆಲವು ಶಿಲಾಲಿಪಿಗಳೂ ಇರುತ್ತವೆ.

ಬೆಳವಟ್ಟಿ. — ಹಾನಗಲ್ಲಿನ ಈಶಾನ್ಯಕ್ಕೆ ೮ ಮೈಲಿನ ಮೇಲೆ. ಈ ಹಳ್ಳಿಯು ಬುನಾದಿಯಲ್ಲಿ ಲೀಲಾವತಿ ಯೆಂಬ ಪಟ್ಟಣವಾಗಿತ್ತೆಂದು ಹೇಳುತ್ತಾರೆ. ಗೋಕುಲೇಶ್ವರನ ಗುಡಿಯಲ್ಲಿ ೫, ಬೇರೆ ಕಡೆಯಲ್ಲಿ ೩ ಲಿಪಿಗಳುಂಟು.

ಬೆನಕನಕೊಂಡ. — ರಾಣೀಬಿನ್ನೂರಿನ ದಕ್ಷಿಣಕ್ಕೆ ೫ ಮೈಲಿನ ಮೇಲೆ. ಕಲಮೇಶ್ವರನ ಗುಡಿಯಲ್ಲಿ ೪ ಲಿಪಿಗಳಿವೆ. ಅವೆಲ್ಲ ೧೧ನೇ ಶತಕದೀಚೆ ಬರಿದಂಥವು.

ಭಾವೀಹಾಳ. — ಧಾರವಾಡದ ವಾಯವ್ಯಕ್ಕೆ ೧೨ ಮೈಲಿನ ಮೇಲೆ. ಸಿದ್ಧೇಶ್ವರನ ದೊಡ್ಡ ಗುಡಿಯಲ್ಲಿ ವೊಂದು ಲಿಪಿಯುಂಟು. ಈ ಗುಡಿಗೆ ಸರಕಾರದಿಂದ ಇನಾಮಿನ ಭೂಮಿ ನಡಿಯುತ್ತದೆ.

ಬಿದರಕಟ್ಟಿ. — ರಾಣೀಬಿನ್ನೂರಿನ ಪಶ್ಚಿಮಕ್ಕೆ ೧೨ ಮೈಲಿನ ಮೇಲೆ. ಸಂಗಮೇಶ್ವರನ ಗುಡಿಯಲ್ಲಿ ವೊಂದು ಲಿಪಿಯುಂಟು.

ಬ್ಯಾಡಗಿ. — ರಾಣೀಬಿನ್ನೂರಿನ ವಾಯವ್ಯಕ್ಕೆ ೧೦ ಮೈಲಿನ ಮೇಲೆ. ಜ. ಸ. (೮೧) ೪೧೧೭. ಇಲ್ಲಿ ಮ್ಯುನಿಸಿಪಾಲಿಟಿಯುಂಟು; ಶನಿವಾರ ದಿವಸ ಬಹು ದೊಡ್ಡ ಸಂತೆಯಾಗುತ್ತದೆ. ಅದರಲ್ಲಿ ಕಿರಾಣಿ, ಕಾಳು, ಮೆಣಸಿನಕಾಯಿ, ಇವುಗಳ ಮಾರಾಟವು ಬಹಳವಾಗುತ್ತದೆ. ಈ ವೂರಲ್ಲಿ ಪೋಸ್ಟ ಆಫೀಸು, ಯೆರಡು ಸರಕಾರೀ ಶಾಲೆಗಳು ಇರುತ್ತವೆ. ಮ್ಯುನಿಸಿಪಾಲಿಟಿಯ ಆದಾಯವು ಸನ್ ೧೮೮೨-೮೩ರಲ್ಲಿ ೪೮೭೮ ರೂಪಾಯಿ ಇತ್ತು. ಇಲ್ಲಿ ರಾಮೇಶ್ವರನ ಗುಡಿಯಲ್ಲಿ ಯೆರಡು ಲಿಪಿಗಳಿರುತ್ತವೆ. ಸನ್ ೧೮೪೭ರಲ್ಲಿ ಇಲ್ಲಿ ೨೫೦ ಮಗ್ಗಗಳಿದ್ದವು; ಈಗೂ ಮಗ್ಗಗಳಿರುತ್ತವೆ.

ಬ್ಯಾಹಟ್ಟಿ. — ಹುಬ್ಬಳ್ಳಿಯ ಈಶಾನ್ಯಕ್ಕೆ ೮ ಮೈಲಿನ ಮೇಲೆ. ಜ. ಸ. (೮೧) ೩೦೮೪. ರಾಮಲಿಂಗನ ಗುಡಿಯಲ್ಲಿ ವೊಂದು ಲಿಪಿಯುಂಟು. ಆದಲ್ಲದೆ ಲಿಂಗವಂತರ ಯೆರಡು ಮಠಗಳಲ್ಲಿ ವೊಂದೊಂದು, ವೊಂದು ಭಾವಿಯ ಬಳಿಯಲ್ಲಿ ಮತ್ತೊಂದು ಶಿಲಾಲಿಪಿಗಳಿವೆ. ಇವುಗಳ ಹೊರ್ತು ಈ ಊರವರ ಬಳಿಯಲ್ಲಿ ಯೆರಡು ತಾಮ್ರ ಪಟಗಳಿವೆ. ಇವೆಲ್ಲ ೧೨ನೇ ೧೩ನೇ ಶತಕಗಳಲ್ಲಿ ಆದಂಥವು.

ಛಬ್ಬಿ. — ಹುಬ್ಬಳ್ಳಿಯ ದಕ್ಷಿಣಕ್ಕೆ ೮ ಮೈಲಿನ ಮೇಲೆ, ಜ. ಸ. (೮೧) ೧೬೧೫.

ಇದರ ಬುನಾದಿಯ ಹೆಸರು ಶೋಭನಪುರವೆಂದು ಹೇಳುತ್ತಾರೆ. ಕೋಟೆಯೊಳಗೂ ಕಾಳಕಾದೇವಿಯ ಗುಡಿಯಲ್ಲಿಯೂ ಬೇರೆ ಕಡೆಯಲ್ಲಿಯೂ ಶಿಲಾಲಿಪಿಗಳಿವೆ.

ಚಳಮಟ್ಟಿ. — ಕಲಘಟಗಿಯ ಈಶಾನ್ಯಕ್ಕೆ ೧೦ ಮೈಲಿನ ಮೇಲೆ. ಇದರ ಬಳಿಯಲ್ಲಿ ಅಜವನ ಕಟ್ಟೆಯೆಂಬ ಗವಿಯುಂಟು.

ಚೌದಾದಾಮಪುರ. — ರಾಣೇಬಿನ್ನೂರಿನ ಉತ್ತರಕ್ಕೆ ೧೫ ಮೈಲಿನ ಮೇಲೆ ತುಂಗಭದ್ರೆಯ ದಂಡೆಯಲ್ಲಿ. ಇಲ್ಲಿ ಮುಕ್ತೇಶ್ವರ, ಈಶ್ವರ, ಗೋಪದೇವಸ್ವಾಮಿ, ಯೆಂಬ ಗುಡಿಗಳಿವೆ. ಇವುಗಳಲ್ಲೆಲ್ಲ ಕೂಡಿ ೮ ಲಿಪಿಗಳುಂಟು; ಒಂದು ಮಾತ್ರ ೮೯ನೇ ವರ್ಷದಲ್ಲಿ ಆದದ್ದುಂಟು; ಉಳಿದವುಗಳೆಲ್ಲ ೧೦ನೇ ಶತಕದ ಈಚೆಯಲ್ಲಿ ಆದಂಥವು.

ಛಪ್ಪರಧಳ್ಳಿ. — ಕೋಡದ ಆಗ್ನೇಯಕ್ಕೆ ೧೦ ಮೈಲಿನ ಮೇಲೆ; ಊರ ಹೊರಗೆ ವೊಂದು ಲಿಪಿಯುಂಟು.

ಚಿಕಂಜಿ. — ಹಾನಗಲ್ಲಿನ ಪಶ್ಚಿಮಕ್ಕೆ ೩ ಮೈಲಿನ ಮೇಲೆ; ಇಲ್ಲಿ ಅಮೃತ ಲಿಂಗನ ಗುಡಿಯಲ್ಲಿ ೪ ಲಿಪಿಗಳಿವೆ. ಈ ಗುಡಿಯು ೫೦೦ ವರ್ಷದ ಹಿಂದೆ ಕಟ್ಟಿದ್ದೆಂದು ಹೇಳುತ್ತಾರೆ.

ಚಿಕ್ಕೆರೂರು. — ಕೋಡದ ಪಶ್ಚಿಮಕ್ಕೆ ೧೦ ವೈಲಿನ ಮೇಲೆ, ಜ. ಸ. (೮೧) ೧೫೫೦ ಈ ವೂರಲ್ಲಿ ಹಿರೇಕೆರಿಯು ದೊಡ್ಡದಿರುತ್ತದೆ. ಆ ಕೆರೆಯ ಮೇಲೂ, ಬನಶಂಕರಿ, ಹನುಮಂತ, ಸೋಮೇಶ್ವರ, ಯೆಂಬ ಗುಡಿಗಳಲ್ಲಿಯೂ, ಬೇರೆ ಕಡೆಯಲ್ಲಿಯೂ ಕೂಡಿ ೭ ಲಿಪಿಗಳೂ, ಯೆರಡು ಲಿಪಿಯುಳ್ಳ ವೀರಗಲ್ಲುಗಳೂ ಇರುತ್ತವೆ. ಅವೆಲ್ಲ ೧೦ನೇ ಶತಕದ ಈಚಿಯಲ್ಲಿ ಬರಿದಂಥವು.

ಚಿನ್ನಮುಳಗುಂದ. — ಕೋಡದ ವಾಯವ್ಯಕ್ಕೆ ೭ ಮೈಲಿನ ಮೇಲೆ, ಜ. ಸ. (೮೧) ೧೫೮೪ ಚಿಕ್ಕೇಶ್ವರನ ಬುನಾದಿಯ ಗುಡಿಯು ದೊಡ್ಡದಿರುತ್ತದೆ. ಅದರಲ್ಲಿಯೂ ಮತ್ತೊಂದು ಈಶ್ವರನ ಗುಡಿಯಲ್ಲಿಯೂ ವೊಂದೊಂದು ಲಿಪಿಗಳಿವೆ. ಊರ ಹೊರಗೆ ಸಿದ್ದೇಶ್ವರವೆಂಬದೊಂದು ಸ್ವಯಂಭು ಲಿಂಗವಿರುತ್ತದೆಂದು ಹೇಳುತ್ತಾರೆ. ಅದರ ಸಮೀಪದಲ್ಲಿ ನೆಲದೊಳಗೆ ವೊಂದು ಗವಿಯುಂಟೆಂತಲೂ ಹೇಳುವರು.

ಡಂಬಳ. — ಗದಗದ ಆಗ್ನೇಯಕ್ಕೆ ೧೩ ವೈಲಿನ ಮೇಲೆ, ಜ. ಸ. (೮೧) ೩೭೭೦. ಈ ವೂರು ಸನ್ ೧೮೬೦ರ ಪೂರ್ವದಲ್ಲಿ ತಾಲೂಕಿನ ಮುಖ್ಯ ಗ್ರಾಮವಿತ್ತು. ೧೧ನೇ ಶತಕದಲ್ಲಿ ಈ ವೂರಿಗೆ ಧರ್ಮಪುರ ಅಥವಾ ಧರ್ಮವೊಳಲೆಂಬ ಹೆಸರಿತ್ತು. ಇಲ್ಲಿ ದೊಡ್ಡಬಸಬ್ಬ, ಕಾಲೇಶ್ವರ, ಸೋಮೇಶ್ವರ, ಯೆಂಬ ಬುನಾದಿಯ ಗುಡಿಗಳುಂಟು. ದೊಡ್ಡಬಸಪ್ಪನ ಗುಡಿಯು ವಿಸ್ತಾರವಾಗಿಯೂ ಬಹು ಮನೋಹರವಾಗಿಯೂ ಕಟ್ಟಿದ್ದುಂಟು; ಅದರೆ ಈಗ ಬಹಳವಾಗಿ ಹಾಳಾಗಿದೆ. ಅದರಂತೆ ಬೇರೆ ಗುಡಿಗಳಾದರೂ ಹಾಳಾಗಿವೆ. ಊರ ಹೊರಗೆ ಹೆಸರಾದ ತೋಟದ ಸ್ವಾಮಿಯ ದೊಡ್ಡ ಮಠವಿರುತ್ತದೆ. ಈ ಮಠಕ್ಕೆ ಲಿಂಗವಂತರು ಬಹಳ ನಡಕೊಳ್ಳುತ್ತಾರೆ. ಈ ಮಠಕ್ಕೂ, ಅದಕ್ಕೆ ಅಂಕಿತವಾಗಿ ಸುತ್ತಲಿನ ಹಳ್ಳಿಗಳಲ್ಲಿ ಇರುವ ಸಣ್ಣ ಮಠಗಳಿಗೂ ಇನಾಮು ಭೂಮಿಗಳು ನಡಿಯುತ್ತವೆ.

ಡಂಬಳದ ಪಶ್ಚಿಮಕ್ಕೆ ಹಾಳಾದದ್ದೊಂದು ಕೋಟೆಯುಂಟು. ಅದರೊಳಗೊಂದು ಜೈನರ ಗುಡಿಯೂ ಸುತ್ತು ಮುತ್ತು ಕಂದಕವೂ ಉಂಟು. ಊರ ಹೊರಗೆ ಹಲಕೆಲವು ತೋಟಗಳಿರುತ್ತವೆ. ಡಂಬಳದಲ್ಲಿ ೫ ಶಿಲಾಲಿಪಿಗಳಿವೆ. ಅವೆಲ್ಲ ೧೧ನೇ ಶತಕದ ಈಚೆಯಲ್ಲಿ ಆದಂಥವು. ಇಲ್ಲಿಯ ದೇಸಾಯಿಯು ಬಹು ಕಾಲದಿಂದ ಹೆಸರಾದವನು. ಅವನ ಬಳಿಯಲ್ಲಿ ೯ ತಾಮ್ರ ಪಟಗಳಿವೆ. ಅವು ವಿಜಯನಗರದ ೨ನೇ ಹರಿಹರ ರಾಯನ (೧೩೭೯-೧೪೦೧) ಕಾಲದವು. ಈ ತಾಮ್ರ ಪಟಗಳಲ್ಲಿ ಹರಿಹರ ರಾಯನು ಶಕ ೧೩೦೧ನೇ ವರ್ಷದಲ್ಲಿ ಹಸ್ತಿನಾವತಿಯ ರಾಜ್ಯಕ್ಕೆ ಶೇರಿದ ಗದಗ ಪ್ರಾಂತದ ೬೬ ಗ್ರಾಮುಗಳಲ್ಲಿ ೩ ಸಮಭಾಗಗಳನ್ನು ಮಾಡಿ, ವೊಂದು ತಾನು ಇಟ್ಟು ಕೊಂಡು, ಯೆರಡನೇದನ್ನು ಗದಗಿನ ವೀರನಾರಯಣನಿಗೂ ತ್ರಿಕೂಟೇಶ್ವರನಿಗೂ, ಮೂರನೇದನ್ನೂ ಬೇರೆ ದೇವಸ್ಥಾನಗಳಿಗೂ ಬ್ರಾಹ್ಮಣನಿಗೂ ಕೊಟ್ಟನೆಂದು ಬರಿದದೆ. ಧೊಂಡಜೀ ವಾಘನು ಡಂಬಳದ ಕೋಟೆಯನ್ನು ಆಕ್ರಮಿಸಿದ್ದನು. ಇದರ ಹೊರ್ತು ಇಂಗ್ಲಿಷ ಸರಕಾರದ ಅಮಲಿನ ಆರಂಭದಲ್ಲಿ ಕೆಲ ಕೆಲವು ಯುದ್ಧಗಳು ಈ ಕೋಟೆಯಲ್ಲಿ ಆದವು.

ದೇವರ ಹುಬ್ಬಳ್ಳಿ. — ಧಾರವಾಡದ ನೈರುತ್ಯಕ್ಕೆ ೬ ಮೈಲಿನ ಮೇಲೆ, ಜ. ಸಂ. (೮೧) ೨೬೧೮. ಇಲ್ಲಿ ಯೆಲ್ಲಮ್ಮನ ಗುಡಿಯು ಪುರಾತನದ್ದಿರುತ್ತದೆ. ಊರ ಹೊರಗೆ ಅಸಿಷ್ಟಾಂಟ ಕಲೆಕ್ಟರನ ಬಂಗಲೆಯುಂಟು. ಸನ್ ೧೮೭೬ರಲ್ಲಿ ಇಲ್ಲಿಯದೊಂದು ಸಣ್ಣ ಕೆರೆಯನ್ನು ಅಗಿಯುವಾಗ ಮೂರು ತಾಮ್ರ ಪತ್ರದಲ್ಲಿ ಬರಿದ ಶಾಶನಗಳು ದೊರಿದವು. ಇವು ಬನವಾಸಿಯ ಕದಂಬ ವಂಶದ ಕೃಷ್ಣವರ್ಮಾ, ನೃಗೇಶವರ್ಮಾ, ಯೆಂಬ ಅರಸರು ಬರಿಸಿದ ಲೇಖಗಳಿವೆ. ಇವುಗಳಿಗೆ ಮಿತಿಗಳನ್ನು ಹಾಕಿಲ್ಲ. ಆದರೂ ಅರಸರ ಹೆಸರು, ಲೇಖದ ಸ್ವರೂಪ, ಮುಂತಾದ ಆಧಾರಗಳಿಂದ ಇವು ಕ್ರಿಸ್ತೀ ಶಕದ ೫ನೇ ಶತಕದಲ್ಲಿ ಹುಟ್ಟಿದವೆಂದು ಫ್ಲೀಟ ಸಾಹೇಬರ ತರ್ಕವಿರುತ್ತದೆ. ಇವುಗಳಲ್ಲಿ ಬೌದ್ಧ ಗುಡಿಗಳಿಗೆ ಇನಾಮುಗಳನ್ನು ಕೊಟ್ಟ ಬಗ್ಗೆ ಲೇಖವಿರುತ್ತದೆ.

ದೇವೀಹೊಸೂರು. — ಕರ್ಜಗಿಯ ನೈರುತ್ಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೧೨೮೬. ಬನಶಂಕರಿ, ಬಸವಣ್ಣ ಭೋಗೇಶ್ವರ, ಯೆಂಬ ಬುನಾದಿಯ ಗುಡಿಗಳಲ್ಲಿಯೂ ಬೇರೆ ಕಡೆಯಲ್ಲಿಯೂ ಕೂಡಿ ಈ ವೂರಲ್ಲಿ ೧೧ ಲಿಪಿಗಳಿರುತ್ತವೆ.

ಧಾರವಾಡ. — ಉತ್ತರ ಅಕ್ಷಾಂಶ ೧೫°, ೨೭′, ಪೂರ್ವ ರೇಖಾಂಶ ೭೫°, ೬′; ಬೆಳಗಾವಿಯ ದಕ್ಷಿಣಕ್ಕೆ ೪೮ ಮೈಲಿನ ಮೇಲೆ. ಊರಿನ ಕ್ಷೇತ್ರ ೭೩೫ ಯೆಕರು; ಜನಸಂಖ್ಯೆ (೧೮೮೧) ೨೭೯೧. ಅಂದರೆ ಯೆಕರೆಗೆ ೩೬ ಜನ. ಈ ವೂರು ಸಮುದ್ರದ ಪೃಷ್ಠ ಭಾಗದ ಮೇಲೆ ೨೫೮೦ ಫೂಟು ಯೆತ್ತರಿರುತ್ತದೆ; ಕಲೆಕ್ಟರನ ಬಂಗಲೆಯು ಊರಲ್ಲಿ ಯೆಲ್ಲಕ್ಕಿಂತ ಹೆಚ್ಚು ಯೆತ್ತರವಾದದ್ದು. ಊರಿನ ಸುತ್ತು ಮುತ್ತಲಿನ ಭೂಮಿಯು ಪಶ್ಚಿಮದಲ್ಲಿ ಮಾತ್ರ ಯೇರಿಕೆಯ ನೆಲವದೆ, ಉಳಿದ ಕಡೆಯಲ್ಲೆಲ್ಲ ಇಳಕಲು ಭೂಮಿಯುಂಟು.

ಧಾರವಾಡದ ಗ್ರಾಮದಲ್ಲಿ ಕೋಟಿ, ಕಸಬೆ, ನೆರೆಹಳ್ಳಿಗಳು, ಯುರೋಪಿಯನ್ ವಸ್ತಿ, ಲಷ್ಕರು, ಯೆಂಬ ಐದು ವಿಭಾಗಗಳನ್ನು ಮಾಡ ಬಹುದು.

ಕೋಟೆಯು ಬಹುತರ ವರ್ತುಲಾಕಾರವಾಗಿರುತ್ತದೆ; ಇದರ ವ್ಯಾಸವು ಸುಮಾರು ೮೦೦ ಯಾರ್ಡು, ಕ್ಷೇತ್ರ ೭೬ ಯೆಕರು; ಯೆತ್ತರವಾದ ಗೋಡೆಗಳೂ, ಭದ್ರವಾದ ಕೊತ್ತಳಗಳೂ, ಆಳವಾದ ಅಗಳತೆಯೂ ವೊಟ್ಟುಗೂಡಿ ಈ ಕೋಟೆಯಾಗಿದೆ. ಒತ್ತಟ್ಟಿಗೆ ಮಾತ್ರ ಗೋಡೆಯ ಕೆಡವಿ, ಕಂದಕಕ್ಕೆ ಭರಿ ಹಾಕಿ, ವೊಳಗೆ ಹೋಗಲಿಕ್ಕೆ ಮಾರ್ಗ ಮಾಡಿದ್ದಾರೆ. ಬೇರೆ ಕಡೆಯಲ್ಲೆಲ್ಲ ಗೋಡೆಯೂ ಕಂದಕವೂ ಈಗ್ಯೂ ವುಂಟು. ಪೂರ್ವ ದಿಕ್ಕಿನಲ್ಲಿ ಈ ಕೋಟೆಗೆ ವೊಂದರೊಳಗೊಂದು ನಾಲ್ಕು ಅಗಸೇ ಬಾಗಿಲುಗಳಿದ್ದವು; ಅವುಗಳಲ್ಲಿ ಯೆರಡು ಮಾತ್ರ ಸದ್ಯಕ್ಕೆ ಇರುತ್ತವೆ; ಉಳಿದ ಯೆರಡು ಹಾಳಾಗಿವೆ. ವೊದಲಿನ ಬಾಗಿಲು ದಾಟ ಹೋದ ಬಳಿಕ ರಣಸ್ತಂಭವೆಂಬದೊಂದು ಯೆತ್ತರವಾಗಿ ನಿಲ್ಲಿಸಿದ ಕಲ್ಲು ಕಾಣಿಸುತ್ತದೆ. ಅದನ್ನು ಯಾರು ಯಾವ ಕಾಲಕ್ಕೆ ನಿಲ್ಲಿಸಿದರೆಂಬುವದು ತಿಳಿದಿಲ್ಲ. ಪೂರ್ವದಲ್ಲಿ ಕೊಲ್ಲ ತಕ್ಕಂಥ ಶರೆಯವರನ್ನು ಈ ರಣಸ್ತಂಭದ ಮುಂದೆ ಕೊಲ್ಲುತ್ತಿದ್ದರೆಂದು ಹೇಳುತ್ತಾರೆ. ಇಂಗ್ಲಿಷ ಸರಕಾರದ ಅಮಲು ಆದ ಬಳಿಕ ಬಹು ಕಾಲದ ವರೆಗೆ ಈ ಕಲ್ಲಿನ ಮುಂದೆ ಕುರಿಗಳನ್ನು ಕೊಯ್ಯುತ್ತಿದ್ದರು. ಕೋಟೆಯೊಳಗೆ ಪೂರ್ವದಲ್ಲಿ ದಂಡಾಳುಗಳಿರುತ್ತಿದ್ದರು. ಆದರೆ ಈಗ ಯುರೋಪಿಯನ್ ಅಧಿಕಾರಿಗಳಿರುತ್ತಾರೆ.

ಕಸಬೆ. — ಈಗಿನ ಮಂಗಳವಾರ ಪೇಟೆಯ ದಕ್ಷಿಣ ಭಾಗ, ಶುಕ್ರವಾರ ಪೇಟೆ, ಇಷ್ಟೇ ಬುನಾದಿಯ ವಸ್ತಿಯ ಪ್ರದೇಶವು. ಇದಕ್ಕೆ ಕಸಬೆ ಅಥವಾ ಪೇಟೆಯನ್ನುವರು. ಈ ಕಸಬೆಯ ಸುತ್ತು ಮುತ್ತು ಮಣ್ಣಿನ ಗೋಡೆ ಇತ್ತು. ಈ ಸುತ್ತು ಗೋಡೆಗೆ ಐದು ಅಗಸೆಗಳಿದ್ದವು; ಉತ್ತರಕ್ಕೆ ಕಿಲ್ಲೇದ ಅಗಸೆ, ಈಶಾನ್ಯಕ್ಕೆ ಮುದಿ ಹಣಮಪ್ಪನ ಅಗಸೆ, ಆಗ್ನೇಯಕ್ಕೆ ನವಲೂರ ಅಗಸೆ, ನೈರುತ್ಯಕ್ಕೆ ನುಚ್ಚಂಬಲೀ ಅಗಸೆ, ವಾಯವ್ಯಕ್ಕೆ ತೇಗೂರ ಅಗಸೆ. ಇವುಗಳಲ್ಲಿ ಈಗ ನವಲೂರ ಅಗಸೆಯ ಕುರುಹು ಮಾತ್ರ ಅಲ್ಪ ಸ್ವಲ್ಪ ಉಳಿದದೆ; ಬೇರೆ ಅಗಸೆಗಳ ಗುರ್ತು, ಇಲ್ಲವೆ ಸುತ್ತು ಗೋಡೆಯ ಗುರ್ತು ಯೆಷ್ಟು ಮಾತ್ರವೂ ಉಳಿದಿಲ್ಲ. ಈಗ ಪಂಚ ಕಚೇರಿ ಇದ್ದ ಸ್ಥಳದಿಂದ ಹಾಲಗೆರೆಯ ವರೆಗೆ ಹೊಲೆಗೇರಿ ಇತ್ತು. ಆದ್ದರಿಂದ ಈಗಿನ ಊರು ವೊದಲಿನ ಯೆರಡು ಮೂರು ಪಾಲಷ್ಟು ಬೆಳಿದದೆಂದು ಸಿದ್ಧವಾಗುತ್ತದೆ. ಈಗ ಊರಲ್ಲಿ ಪಂಚ ಕಚೇರಿಯ ಓಣಿ, ಮಂಗಳವಾರ ಪೇಟೆಯ ಓಣಿ, ಯೆಂಬ ಯೆರಡು ದೊಡ್ಡ ದಕ್ಷಿಣೋತ್ತರ ಬೀದಿಗಳು ವೊಂದಕ್ಕೊಂದು ಸಮಾಂತರವಾಗಿರುತ್ತವೆ. ಪಂಚ ಕಚೇರಿಯ ಓಣಿಯ ದಕ್ಷಿಣದ ಅರ್ಧ ಭಾಗಕ್ಕೆ ಆದಿತ್ಯವಾರ ಪೇಟೆಯೆಂತಲೂ, ಮಂಗಳವಾರ ಪೇಟೆಯ ದಕ್ಷಿಣ ಭಾಗಕ್ಕೆ ಕುಂಬಾರ ವೋಣಿಯೆಂತಲೂ ಜೋಸಿಗೇರ ವೋಣಿಯೆಂತಲೂ ಅನ್ನುವರು. ಈ ಯೆರಡು ಬೀದಿಗಳನ್ನು ಉತ್ತರ ತುದಿಯಲ್ಲಿ ಕೆರೆಯ ಓಣಿಯೆಂಬ ಬೀದಿಯು, ಮಧ್ಯದಲ್ಲಿ ಕಾಮನಕಟ್ಟೆಯ ಓಣಿಯೆಂಬ ಬೀದಿಯು, ದಕ್ಷಿಣ ತುದಿಯಲ್ಲಿ ತಿರುಕುಳ

ರಾಯರ ಓಣಿಯೆಂಬ ಬೀದಿಯು ಪೂರ್ವ ಪಶ್ಚಿಮವಾಗಿ ನಡಿದು ಅಡ್ಡ ಕಡಿಯುತ್ತವೆ. ಅದರಿಂದ ಊರೊಳಗೆ ೬ ದೊಡ್ಡ ಭಾಗಗಳಾಗಿ— ಈ ಭಾಗಗಳಲ್ಲಿ ಸಣ್ಣ ಪುಟ್ಟ ಓಣಿಗಳು ಹಲವುಂಟು. ಆದಿತ್ಯವಾರ ಪೇಟೆಯು ಮುಖ್ಯ ಬ್ರಾಹ್ಮಣರ ವಸ್ತಿಯ ಪ್ರದೇಶವು. ಮಂಗಳವಾರ ಪೇಟೆಯಲ್ಲಿಯೂ ಬಹು ಜನ ಬ್ರಾಹ್ಮಣರು ವಾಸಿಸುತ್ತಾರೆ. ಎರಡೂ ಕಡೆಯಲ್ಲಿ ವಾಸಿಸುವ ಸರಕಾರೀ ಉದ್ಯೋಗಸ್ಥರು, ವಕೀಲರು, ವ್ಯಾಪಾರಸ್ಥರು, ಭಿಕ್ಷುಕರು ಮುಂತಾದವರು ಕೂಡಿ ಸುಮಾರು ೫೦೦ ಮನೆಗಳಾಗ ಬಹುದು. ಆದರೆ ಊರೊಳಗೆ ಲಿಂಗವಂತರ ವಸ್ತಿ ಹೆಚ್ಚಿರುತ್ತದೆ. ಯೆಲ್ಲ ಕಡೆಯಲ್ಲಿಯೂ ಲಿಂಗವಂತರ ಮನೆಗಳುಂಟು. ಒಕ್ಕಲತನದವರೆಲ್ಲರು ಬಹುತರ ಲಿಂಗವಂತರೇ ಇದ್ದಾರೆ. ಅಂಗಡಿಕಾರರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಲಿಂಗವಂತರಿದ್ದಾರೆ. ಮುಸಲ್ಮಾನರ ವಸ್ತಿಯಾದರೂ ತಕ್ಕ ಮಟ್ಟಿಗೆ ಇರುತ್ತದೆ. ಅವರು ಹೆಚ್ಚಾಗಿ ಊರಿನ ಪಶ್ಚಿಮ ಭಾಗದಲ್ಲಿ ವಾಸಿಸುತ್ತಾರೆ. ನವಲೂರ ಅಗಸೆಯ ಹತ್ತರ, ಅಂದರೆ ತಿರುಮಲರಾಯರ ಓಣಿಯ ಪೂರ್ವ ತುದಿಯಲ್ಲಿ ಬೇಡರ ವಸ್ತಿಯು ವೊಳಿತಾಗಿ ಇರುತ್ತವೆ.

ನೆರೆಹಳ್ಳಿಗಳು.—ಮದೀಹಾಳ, ಹಾವೇರೀ ಪೇಟೆ, ಗುಲಗಂಜೀಕೊಪ್ಪ, ಮಾಳಾಪುರ, ಕಾಮಲಾಪುರ, ನಾರಾಯಣಪುರ, ಹೊಸ ಮಾಳಾಪುರ, ಸೈದಾಪುರ, ಯೆಂಬ ೮ ಸಣ್ಣ ಹಳ್ಳಿಗಳು ಕಸಬೆಯ ಉತ್ತರಕ್ಕೆ ಅರ್ಧ ಮೈಲಿನೊಳಗೆ ವೊಂದಕ್ಕೊಂದು ಹೊಂದಿ ಇರುತ್ತವೆ. ಮದೀಹಾಳವು ಯೆಲ್ಲಕ್ಕೂ ಪೂರ್ವಕ್ಕೆ ಇರುತ್ತದೆ. ದಿವಾಣ ಶ್ರೀನಿವಾಸ ರಾಯರ ಕಾಲಕ್ಕೆ ಈ ಹಳ್ಳಿಯು ವೊಳಿತಾಗಿ ತುಂಬಿತ್ತು. ಅವರು ತಮ್ಮ ಮನೆಯನ್ನು ಮದೀಹಾಳದಲ್ಲಿ ಕಟ್ಟಿದ್ದರಿಂದ, ಆಗಿನ ಕಾಲಕ್ಕೆ ಧಾರವಾಡದಲ್ಲಿ ಇರುತ್ತಿದ್ದ ಸಂಸ್ಥಾನಿಕರ ವಕೀಲರಿಗಾಗಿ ಅವರವರ ವೊಡೆಯರು ಮದೀಹಾಳದಲ್ಲಿಯೇ ಮನೆಗಳನ್ನು ಕಟ್ಟಿಸಿದ್ದರು. ಅವೆಲ್ಲ ಈಗ ಹಾಳಾಗಿವೆ. ಶ್ರೀನಿವಾಸರಾಯರ ಮನೆಯಲ್ಲಿ ಸಹ ಯಾರು ಇರುವದಿಲ್ಲ. ಈಗ ಮದೀಹಾಳದಲ್ಲಿ ಮುಖ್ಯವಾಗಿ ಕೂಲಿಕಾರರು ವಾಸಿಸುತ್ತಾರೆ. ಬ್ರಾಹ್ಮಣರ ಮನೆಗಳು ಹತ್ತೆಂಟಕ್ಕಿಂತ ಹೆಚ್ಚಿಲ್ಲ. ಮದೀಹಾಳದಲ್ಲಿ ಇಪ್ಪತ್ತು ಮೂವತ್ತು ಫೂಟು ಅಗಿದರೆ ಶೀ ನೀರು ಹತ್ತುತ್ತದೆ. ಬೇರೆ ಕಡೆಯಲ್ಲೆಲ್ಲ ನೀರು ಇಂಗಿ ದುರ್ಭಿಕ್ಷವಾದಾಗ್ಯೂ ಮದೀಹಾಳದಲ್ಲಿ ನೀರಿನ ಕೊರತೆಯಾಗುವದಿಲ್ಲ. ಇದೇ ಕಾರಣದಿಂದ ಮೇಲೆ ಹೇಳಿದಂತೆ ದೊಡ್ಡ ದೊಡ್ಡ ಜನರು ಮದೀಹಾಳದಲ್ಲಿ ಮನೆಗಳನ್ನು ಕಟ್ಟಿದ್ದರು. ಆದರೆ ಅಲ್ಲಿಯ ಹವೆಯಲ್ಲಿಯೂ ನೀರೊಳಗೂ ಶೈತ್ಯ ಬಹಳ. ಆದ್ದರಿಂದ ಮಳೆಗಾಲ ಚಳಿಗಾಲಗಳಲ್ಲಿ ಮದೀಹಾಳದ ನಿವಾಸಿಗಳಿಗೆ ರೋಗೋಪದ್ರವ ಬಹಳಾಗುತ್ತದೆ; ಇದಲ್ಲದೆ ಕಳ್ಳರ ಉಪದ್ರವವೂ ಬಹಳಾಗುತ್ತದೆ. ಈ ಕಾರಣಗಳಿಂದ ಮದೀಹಾಳವು ಹಾಳಾಗುತ್ತ ನಡಿದದೆ.

ಹಾವೇರೀ ಪೇಟೆಯು ಮದೀಹಾಳದ ಪಶ್ಚಿಮಕ್ಕೆ ಇರುತ್ತದೆ. ಮುಸಲ್ಮಾನರ ಅಮಲಿನಲ್ಲಿ ಕೋಟೆಯೊಳಗೆ ದಂಡು ಇರುತ್ತಿತ್ತು. ಆ ದಂಡಿನವರು ಸಾಮಾನುಗಳನ್ನು ಕೊಳ್ಳಲಿಕ್ಕೆ ಪೇಟೆಗೆ, ಅಂದರೆ ಕಸಬೆಗೆ, ಬರುತ್ತಿದ್ದರು. ಆದರೆ ಆ ದಂಡಿನವರಿಗೂ ಪೇಟೆಯ ಅಮಲದಾರರಿಗೂ ಮೇಲೆ ಮೇಲೆ ಜಗಳಗಳಾಗುತ್ತಿದ್ದವು. ಸನ್ ೧೭೫೩ರಲ್ಲಿ

ಬಾಳಾಜೀರಾವ ಪೇಶವನು ಧಾರವಾಡವನ್ನು ಮೊಗಲರ ಕೈಯಿಂದ ಕಸುಕೊಂಡ ಬಳಿಕ, ಮೇಲೆ ಹೇಳಿದ ಜಗಳವನ್ನು ಮುರಿಯುವ ಆಲೋಚನೆಯಿಂದ ದಂಡಿನವರಿಗಾಗಿ ಹೊಸ ದೊಂದು ಪೇಟೆಯನ್ನು ಕಟ್ಟಿಸಿ, ಅದಕ್ಕೆ ತನ್ನ ಕಕ್ಕನ ಮಗನಾದ ಸದಾಶಿವರಾಯನ ಹೆಸರು ಜೋಡಿಸಿ ಸದಾಶಿವ ಪೇಟೆಯೆಂದು ಹೆಸರಿಟ್ಟನು. ಈ ಪೇಟೆಯಲ್ಲಿ ಆದಿತ್ಯವಾರ ಸಂತೆ ನೆರೆಯುತ್ತಿದ್ದ ಕಾರಣ ಇದಕ್ಕೆ ಆದಿತ್ಯವಾರ ಪೇಟೆ ಯೆಂತಲೂ ಅನ್ನುವರು. ಮುಂದೆ ಬರ ಬರುತ್ತಾ ಇವೆರಡೂ ಹೆಸರುಗಳು ಮಾಜಿ ಹಾವೇರೀ ಪೇಟೆ ಯೆಂಬ ಹೆಸರು ಬಂತು. ಈ ಹೆಸರು ಬಂದದ್ದರ ಕಾರಣವು ತಿಳಿದಿಲ್ಲ. ಹಾವೇರೀ ಪೇಟೆಯಲ್ಲಿ ಈಗ ಲಿಂಗವಂತ, ಮುಸಲ್ಮಾನ ಜಾತಿಗಳ ಸಾವುಕಾರರು ಸ್ವಲ್ಪ ಜನರು, ದೊಡ್ಡ ದೊಡ್ಡ ಲಿಂಗವಂತ ವ್ಯಾಪಾರಸ್ಥರು, ವೊಕ್ಕಲತನದವರು ವಾಸಿಸುತ್ತಾರೆ. ಧಾರವಾಡ ಪಟ್ಟಣದ ಖಜಾನೆಯು ಹಾವೇರೀ ಪೇಟೆ ಯೆಂದು ಹೇಳ ಬಹುದು.

ಗುಲಗಂಜೀ ಕೊಪ್ಪ, ಕಾಮಲಾಪುರ, ಹೊಸ ಮಾಳಾಪುರ, ಮಾಳಾಪುರ, ನಾರಾಯಣಪುರ, ಈ ೫ ಸಣ್ಣ ಹಳ್ಳಿಗಳು ಹಾವೇರೀ ಪೇಟೆಯ ಪಶ್ಚಿಮಕ್ಕೆ ವೊಂದಕ್ಕೊಂದು ಹೊಂದಿ ಇರುತ್ತವೆ. ಇವು ಬುನಾದಿಯ ಹಳ್ಳಿಗಳು. ಆದರೆ ಓಣಿಗಳು ಸಣ್ಣವು, ಹೊಲಸು ಬಹಳ, ನಿವಾಸಿಗಳು ಬಡವರು. ಮುಖ್ಯವಾಗಿ ಲಿಂಗವಂತ ಜಾತಿಯ ವೊಕ್ಕಲತನದವರೂ ಕೂಲಿಕಾರರೂ ಇವುಗಳಲ್ಲಿ ವಾಸಿಸುತ್ತಾರೆ. ದೊಡ್ಡ ವ್ಯಾಪಾರಸ್ಥರು ಇಬ್ಬರು ಮೂವರಿಗಿಂತ ಹೆಚ್ಚಿಲ್ಲ. ಬಡಿಗಿಗಳು, ಕಮ್ಮಾರರು, ಕುಂಬಾರರು, ಕೆಲವರುಂಟು.

ಸೈದಾಪುರವು ಮೇಲೆ ಹೇಳಿದ ಗುಂಪಿನ ಪಶ್ಚಿಮಕ್ಕೆ ಇರುತ್ತದೆ. ಇದರಲ್ಲಿ ಮುಖ್ಯವಾಗಿ ಲಿಂಗವಂತ ಮಹಾರಾಷ್ಟ್ರ, ಮುಸಲ್ಮಾನ ಜಾತಿಗಳ ಬಡ ವೊಕ್ಕಲಿಗರೂ ಕೂಲಿಕಾರರೂ ಇರುತ್ತಾರೆ. ದೇಶೀ ಕ್ರಿಸ್ತೀ ಜನರ ವಸ್ತಿಯು ಸ್ವಲ್ಪ ವುಂಟು. ಅವರದೊಂದು ಗುಡಿಯು ಈ ಹಳ್ಳಿಯಲ್ಲಿ ಇರುತ್ತದೆ.

ಯುರೋಪಿಯನ್ ವಸ್ತಿಯು.— ಊರು ಕೋಟೆಗಳ ಪಶ್ಚಿಮಕ್ಕೆ ಸುಮಾರು ೬೦ ಬಂಗಲೆಗಳಲ್ಲಿ ಯುರೋಪಿಯನ್ ಕಾಮದಾರರು ವಾಸಿಸುತ್ತಾರೆ. ಆದರೆ ಅವರೇ ಕಟ್ಟಿಸಿದ ಬಂಗಲೆಗಳು ಬಹು ಸ್ವಲ್ಪ ವುಂಟು. ಊರವರು ಕಟ್ಟಿಸಿ, ಅವರಿಗೆ ಬಾಡಿಗೆಯಿಂದ ಕೊಟ್ಟಂಥವೇ ಬಹಳ ಇರುತ್ತವೆ. ಈ ಬಂಗಲೆಗಳ ಸುತ್ತು ಮುತ್ತಲಿನ ಅವಾರಗಳು ವಿಸ್ತಾರವಾಗಿಯೂ ಬಂಗಲೆಗಳ ಕಟ್ಟಡವು ಭದ್ರವಾಗಿಯೂ ವುಂಟು. ಬಹುತರ ಯಲ್ಲ ಬಂಗಲೆಗಳ ಮುಂದೆ ಹೂ ಗಿಡಗಳ ತೋಟಗಳಿರುತ್ತವೆ. ಈ ವಸ್ತಿಯ ಪ್ರದೇಶವು ನಿರ್ಮಲವಾಗಿಯೂ ಆರೋಗ್ಯವುಳ್ಳದ್ದಾಗಿಯೂ ಇರುತ್ತದೆ.

ಲಷ್ಕರ.— ಊರಿನ ವಾಯವ್ಯಕ್ಕೆ ಸುಮಾರು ಯೆರಡು ಮೈಲಿನ ಮೇಲೆ ಲಷ್ಕರದ ಛಾವಣಿಯುಂಟು. ಇದು ವೊಂದು ರೆಜಿಮೆಂಟು ಇರಲಿಕ್ಕೆ ಸಾಕಾಗುವಷ್ಟಿರುತ್ತದೆ. ಇಲ್ಲಿಯ ಹವೆಯು ವೊಳಿತಾಗಿ ಆರೋಗ್ಯದ್ದಿರುತ್ತದೆ; ನೀರಾದರೂ ತಕ್ಕಮಟ್ಟಿಗೆ ಸಮೃದ್ಧಿಯಾಗಿರುವದು. ಸನ್ ೧೮೭೨ರಲ್ಲಿ ಈ ಛಾವಣಿಯಲ್ಲಿ ೪೧೦ ಜನ ದಂಡಾಳುಗಳು ೧೯೬ ಜನ ಅವರ ಪರಿವಾರದವರು ಇದ್ದರು.

ನಿವಾಸಿಗಳು.—ಸನ್ ೧೮೭೨ನೇ ವರ್ಷದ ಖಾನೇಸುಮಾರಿಯಲ್ಲಿ ಧಾರವಾಡದ ಜನಸಂಖ್ಯವು ೨೭೧೩೬ ಇತ್ತು; ಮುಂದೆ ೧೦ ವರ್ಷದ ನಂತರ ಸನ್ ೧೮೮೧ ಖಾನೇಸುಮಾರಿಯಲ್ಲಿ ೨೭೧೯೧ ಇತ್ತು. ಇದರಿಂದ ಸನ್ ೧೮೭೭-೭೮ರ ಬರಗಾಲದಲ್ಲಿ ಬಹು ಜನ ಸತ್ತದ್ದರಿಂದ ಹತ್ತು ವರ್ಷದಲ್ಲಿ ಜನಸಂಖ್ಯೆ ಬೆಳಿಯ ತಕ್ಕಷ್ಟು ಬೆಳಿಯಲಿಲ್ಲೆಂದು ಸಿದ್ಧವಾಗುತ್ತದೆ. ಆದರೆ ಹೋದ ಸನ್ ೧೮೯೧ರ ಖಾನೇಸುಮಾರಿಯಲ್ಲಿ ಈ ಜನಸಂಖ್ಯವು ಸುಮಾರು ೩೨೦೦೦ ಇತ್ತೆಂದು ತಿಳಿದದೆ. ಆದ್ದರಿಂದ ಈ ಕಡೆಯ ಹತ್ತು ವರ್ಷದಲ್ಲಿ ಸುಮಾರು ೭ ಜನರಲ್ಲಿ ವೊಬ್ಬ ಮನುಷ್ಯನು ಬೆಳಿದನೆಂದು ತಿಳಿಯುತ್ತದೆ. ಈ ವೂರಿಗೆ ಹೊಗೆಬಂಡಿ ಬಂದದ್ದರಿಂದ ಜನಸಂಖ್ಯದ ಬೆಳುವಣಿಗೆಯು ತುಸು ಹೆಚ್ಚಾಯಿತು. ಸನ್ ೧೮೮೧ರ ಖಾನೇಸುಮಾರಿಯಂತೆ ಜಾತಿಗಳ ವಿವರ ಹ್ಯಾಗಂದರೆ—ಹಿಂದೂ ಜನರು ೧೯೭೧೯, ಜೈನರು ೨೭೧, ಮುಸಲ್ಮಾನರು ೬೫೮೫, ಕ್ರಿಸ್ತಿಯನ್ನರು ೬೧೮, ಪಾರ್ಸೀ ಜನರು ೨೮, ಅನ್ಯ ಜಾತಿಗಳು ೨೪.

ವಿದ್ಯದ ಬೆಳುವಣಿಗೆ.—ಧಾರವಾಡದಲ್ಲಿ ವೊಂದು ಸರಕಾರೀ ಹಾಯಸ್ಕೂಲು, ವೊಂದು ಮಿಶನರೀ ಹಾಯಸ್ಕೂಲು, ವೊಂದು ಟ್ರೇನಿಂಗ ಕಾಲೇಜ, ವೊಂದು ಮರಾಠೀ ಶಾಲೆ, ೧೧ ಕನ್ನಡ ಗಂಡು ಹುಡುಗರ ಶಾಲೆಗಳು, ೫ ಹೆಣ್ಣು ಮಕ್ಕಳ ಶಾಲೆಗಳು ಇರುತ್ತವೆ. ಇವುಗಳಲ್ಲಿ ಮೂರು ಕನ್ನಡ ಗಂಡು ಹುಡುಗರ ಶಾಲೆಗಳೂ, ಯೆರಡು ಹೆಣ್ಣು ಮಕ್ಕಳ ಶಾಲೆಗಳೂ ಮಿಶನರಿಯವರವು. ಇವಲ್ಲದೆ ವೊಂದು ಖಾಸಗೀ ಇಂಗ್ಲಿಷ ಶಾಲೆಯೂ ಯೆರಡು ಮೂರು ಕನ್ನಡ ಶಾಲೆಗಳೂ ಇರುತ್ತವೆ. ಈ ಯಾವತ್ತು ಶಾಲೆಗಳಲ್ಲಿ ಕೂಡಿ ಯೆರಡು ಸಾವಿರಕ್ಕಿಂತ ಹೆಚ್ಚು ಜನ ವಿದ್ಯಾರ್ಥಿಗಳು ಕಲಿಯುತ್ತಾರೆ. ಊರವರು ಸ್ಥಾಪಿಸಿದ್ದೊಂದು ಪುಸ್ತಕಾಲಯವು ಊರಿನ ಮಧ್ಯದಲ್ಲಿ ಇರುತ್ತದೆ. ಆದರೆ ಅದು ನೆಟ್ಟಗೆ ನಡಿಯುವದಿಲ್ಲ; ಮೇಲೆ ಮೇಲೆ ಪ್ರಾಣೋತ್ಕ್ರಮಣದ ಸ್ಥಿತಿಗೆ ಬರುತ್ತದೆ. ಊರೊಳಗೆ ನಾಲ್ಕು ವೊಳಿಯ ಛಾಪಖಾನೆಗಳೂ, ಯೆರಡು ಶಿಲೆಯ ಛಾಪಖಾನೆಗಳೂ ಇರುತ್ತವೆ. ಇವುಗಳಲ್ಲಿ ಧಾರವಾಡ ವೃತ್ತವೆಂಬ ಮರಾಠೀ ಪತ್ರ, ಕರ್ನಾಟಕ ಪತ್ರ, ಕರ್ನಾಟಕ ವೃತ್ತ, ಚಂದ್ರೋದಯ, ಲೋಕಬಂಧು, ಯೆಂಬ ನಾಲ್ಕು ಕನ್ನಡ ಪತ್ರಗಳು ಹೊರಡುತ್ತವೆ. ವಿದ್ಯದ ಸಂಬಂಧದಲ್ಲಿ ಊರು ಬೆಳುವಣಿಗೆಯ ಸ್ಥಿತಿಯಲ್ಲಿ ಇರುತ್ತದೆಂಬದಕ್ಕೆ ಸಂಶಯವಿಲ್ಲ. ಆದರೆ ಊರೊಳಗಿನ ಪ್ರಮುಖ ಜನರೊಳಗೆ ಸಮಾಜ ಕೂಡಿ ಸಾರ್ವಜನಿಕ ಕೆಲಸಗಳನ್ನು ನೆರವೇರಿಸುವ ಗುಣವು ಇನ್ನೂ ಯೆಷ್ಟು ಮಾತ್ರವೂ ಬಂದಂತೆ ಕಾಣುವದಿಲ್ಲ.

ಕೈಗಾರಿಕೆಗಳು.—ಸರಕಾರೀ ತುರಂಗದಲ್ಲಿ ಮೇಲಾದ ಜಮ್ಮಖಾನೆಗಳೂ ನಾನಾ ಪ್ರಕಾರದ ಸೂಸಿಗಳೂ, ಖುರ್ಚಿ, ಮೇಜು, ಪೆಟ್ಟಿಗೆ, ಮುಂತಾದ ಕಟ್ಟಿಗೆಯ ಸಾಮಾನುಗಳೂ ಹುಟ್ಟುತ್ತವೆ. ನೇಕಾರರ ಮನೆಗಳು ಸುಮಾರು ೪೦೦ ಇರುತ್ತವೆ. ಇವರು ಶೀರೆ, ಧೋತ್ರ, ವಲ್ಲಿ, ಮುಂತಾದ ಉರುಟು ಬಟ್ಟೆಗಳನ್ನು ನೆಯುತ್ತಾರೆ. ಆದರೆ ಇವರಿಗೆಲ್ಲ ಬಹುತರ ಸಾಲವಿರುತ್ತದೆ. ಸನ್ ೧೮೭೭ನೇ ವರ್ಷದ ಬರದಲ್ಲಿ ಇಲ್ಲಿಯ ನೇಕಾ

ರರು ಬಹಳ ಹಾಳಾದರು. ಆದರೂ ಇವರ ಹೋರೆಯು ಕ್ರಮ ಕ್ರಮವಾಗಿ ಬೆಳಿಯುತ್ತ ನಡಿದದೆ. ಈ ನೇಕಾರರಲ್ಲಿ ಕೆಲವರು ನೂಲಿಗೆ ನೀಲಿಯ ಬಣ್ಣ ಯೆದ್ದಿ ಅದನ್ನು ಮಗ್ಗಕ್ಕೆ ಹಾಕುತ್ತಾರೆ. ಅವರಲ್ಲದೆ ನೀಲಗಾರರು ಬೇರೆ ಕೆಲವರುಂಟು. ಅವರು ಬಿಳೆ ನೂಲಿಗೂ ಅರಿವೆಗೂ ನೀಲಿ ಯೆದ್ದುವ ಹೋರೆಯನ್ನು ಮಾತ್ರ ಮಾಡುತ್ತಾರೆ. ತಾಮ್ರ ಹಿತ್ತಾಳೆಗಳ ಪಾತ್ರೆಗಳನ್ನು ಮಾಡುವ ಮುಸಲ್ಮಾನ ತಾಂಬಟಗಾರರ ಮನೆಗಳು ಯೆರಡೇ ಇರುತ್ತವೆ. ಅವರು ಕೊಡ, ಸಣ್ಣ ತಪೇಲಿ, ಬೋಗುಣಿ ಮುಂತಾದ ಪಾತ್ರೆಗಳನ್ನು ಮಾಡುತ್ತಾರೆ. ಆದರೆ ಹುಬ್ಬಳ್ಳಿ, ತೇರದಾಳ, ಪುಣೆ, ಮುಂತಾದ ಪರಸ್ಥಳಗಳಿಂದ ನಾನಾ ಪ್ರಕಾರದ ಪಾತ್ರೆಗಳನ್ನು ತಂದು ಮಾರಾಟ ಮಾಡುವ ಜೈನ ಮುಸಲ್ಮಾನ ಜಾತಿಗಳ ತಾಂಬಟಗಾರರು ಸುಮಾರು ೩೦ ಜನರಿದ್ದಾರೆ. ಅವರ ಮಾರಾಟವು ತಕ್ಕಮಟ್ಟಿಗೆ ಆಗುತ್ತವೆ. ಇವರಲ್ಲದೆ ಕಂಚುಗಾರರ ಮನೆಗಳು ಆರು ಇರುತ್ತವೆ. ಆದರೆ ಈ ಕಂಚುಗಾರರು ಕಾಲುಂಗರುಗಳ ಹೊರ್ತು ಹೆಚ್ಚಿನ ಹೊಯಿಗೆಯ ವೊಡವೆಗಳನ್ನು ಬಹುತರ ಮಾಡುವದಿಲ್ಲ. ಕುಂಬಾರರ ಮನೆಗಳು ಕಸಬೆಯಲ್ಲಿಯೂ ನೆರೆ ಹಳ್ಳಿಗಳಲ್ಲಿಯೂ ಕೂಡಿ ೫೦ ಇರುತ್ತವೆ. ಇವರು ಕೊಪ್ಪದ ಕೆರೆಯಿಂದಲೂ, ಅತ್ತೀ ಕೊಳ್ಳದಿಂದಲೂ ಅರ್ಲು ತಂದು ಯೆರಡೂ ಕೂಡಿಸಿ ಹದ ಮಾಡಿ ಗಡಿಗಿ, ಹರಿವೆ, ಕೊಡ, ಮುಚ್ಚಳ, ಮುಂತಾದ ಪಾತ್ರೆಗಳನ್ನೂ ಮನೆಗೆ ಹಾಕುವ ಹಂಚುಗಳನ್ನೂ ಮಾಡುತ್ತಾರೆ. ಸಂತೆಯ ದಿವಸ ಇವರ ಪಾತ್ರೆಗಳ ಮಾರಾಟವು ವೊಳಿತಾಗಿ ಆಗುತ್ತದೆ. ಆದರೆ ಕುಂಬಾರರೆಲ್ಲರು ಬಹುತರ ಬಡವರಿದ್ದಾರೆ. ಜೀನಗಾರರ ಅಥವಾ ಚಿತ್ರಗಾರರ ಮನೆಗಳು ೧೧ ಇರುತ್ತವೆ. ಇವರು ಬಣ್ಣದ ತೊಟ್ಟಿಲು, ಪಗಡಿ, ಕಿಟ್ಟದ ಗೊಂಬೆಗಳು, ಗಣಪತಿ, ಕಾಮಣ್ಣ, ಮುಂತಾದ ಬಣ್ಣದ ವೊಡವೆಗಳನ್ನೂ ಕುದುರೆಯ ಜೀನುಗಳನ್ನೂ ಮಾಡುತ್ತಾರೆ; ಕಾಗದದ ಮೇಲೆ ಬಣ್ಣದ ಚಿತ್ರಗಳನ್ನು ಬರಿಯುತ್ತಾರೆ. ಇವರು ವೊಟ್ಟೆಗೆ ಮಧ್ಯಮ ಸ್ಥಿತಿಯಲ್ಲಿದ್ದಾರೆ— ಮೇದಾರರ ಮನೆಗಳು ಸುಮಾರು ೯೦ ಇರುತ್ತವೆ. ಇವರು ಚಾಪಿ, ಬುಟ್ಟಿ, ಮೊರ, ಸಾಣಿಗೆ, ಮುಂತಾದ ಬಿದರಿನ ವೊಡವೆಗಳನ್ನು ಮಾಡಿ ಮಾರುತ್ತಾರೆ. ಇವರಲ್ಲಿ ಬಹುಜನರಿಗೆ ಸಿಂದೀ ಕುಡಿಯುವ ಚಟವಿರದಿದ್ದರೆ ಇವರು ಹೆಚ್ಚು ಸೌಖ್ಯದಿಂದ ಇರುತ್ತಿದ್ದರು— ಕಂದೀಲು ಮಾಡುವ ಮುಸಲ್ಮಾನರ ಅಂಗಡಿಗಳು ಬಾಜಾರಿನಲ್ಲಿ ಆರೇಳು ಇರುತ್ತವೆ. ಅವರು ಕಂದೀಲು, ಸತುವಿನ ಡಬ್ಬಿ, ದೀಪ ಹಚ್ಚುವ ಚಿಮಣಿ, ಮುಂತಾದವುಗಳನ್ನು ಮಾಡಿ ಮಾರುತ್ತಾರೆ— ಅತ್ತಾರರ ಮನೆಗಳು ೧೦ ಇರುತ್ತವೆ. ಇವರು ಚಂದನದ ಯೆಣ್ಣೆ, ಊದಿನೆಣ್ಣೆ, ಊದಿನ ಅರ್ಕ, ಬುಕ್ಕಿಟ್ಟು, ಊದಿನ ಕಡ್ಡಿ ಮುಂತಾದವುಗಳನ್ನು ಮಾಡಿ ಮಾರುತ್ತಾರೆ— ನಸ್ಯಗಾರರು ಮೂವರು ಮದ್ರಾಸಿಗಳು ಇರುತ್ತಾರೆ. ಇವರು ಕೆರೆಪುಡಿ ಯೆಂಬ ಉರುಟು ನಸ್ಯವನ್ನೂ ಜಿಣುಗು ನಸ್ಯವನ್ನೂ ಮಾಡುವರು— ಪಟಯಿಗಾರರೆಂಬ ಮುಸಲ್ಮಾನರ ಅಂಗಡಿಗಳು ಆರೇಳು ಇರುತ್ತವೆ. ಇವರು ಟಿಕ್ಕಿ, ಸರ, ಮುಂತಾದವುಗಳನ್ನು ರೇಶಿಮೆಯಿಂದ ಹೆಣಿಯುವರು. ರೇಶಿಮೆಯ ದಾರಗಳನ್ನೂ ವೊಹರಮದ ಲಾಡಿ, ಸೈಲಿ, ಮುಂತಾದವುಗಳನ್ನೂ ಮಾಡಿ ಮಾರುವರು— ಸುಮಾರು ೪೦

ಜನ ಕುರುಬರು ಕಂಬಳಿಗಳನ್ನು ನೆಯ್ದು ಮಾರುವರು - ಚರ್ಮದ ಹೋರೆಯನ್ನು ಮಾಡುವವರ ಮನೆಗಳು ೭೫. ಅವರಲ್ಲಿ ಸಮ್ಮಗಾರ ಕುಲದವರು ಜೋಡು ಬೂಟುಗಳನ್ನು ಮಾಡುವರು. ಢೋರರು ಚರ್ಮವ ಕರೇ ಹಾಸಿ ಅದರ ವೊಡವೆಗಳನ್ನು ಮಾಡುವರು. ಹೊಲಿಯರು ಮಿಣಿ ಬಾರಕೋಲು, ತೋಬರಿ ಲಗಾಮು, ಮುಂತಾದವುಗಳನ್ನು ಮಾಡುವರು. ಇವರೆಲ್ಲ ಬಹುತರ ಶರೆಬಡಕರು, ಜಗಳಗಂಟರು. ಆದ್ದರಿಂದ ಬಡತನದ ಸ್ಥಿತಿಯಲ್ಲಿದ್ದಾರೆ.

ವ್ಯಾಪಾರ.— ಊರ ಪಶ್ಚಿಮಕ್ಕೆ ಊರಿಗೂ ಕೋಟೆಗೂ ನಡುವೆ ಹೊಸ ಮಾರ್ಕೇಟು ಕಟ್ಟಿಸಿದ್ದಾರೆ. ಅಲ್ಲಿ ಮಂಗಳವಾರ ಸಂತೆ ನೆರೆಯುತ್ತದೆ. ಈ ಸಂತೆಯಲ್ಲಿ ಅಕ್ಕಿ, ಜೋಳ, ಗೋಧಿ, ಮುಂತಾದ ಕಾಳಿನ ವ್ಯಾಪಾರವೂ ದನಗಳ ವ್ಯಾಪಾರವೂ ಬಹಳ ಆಗುತ್ತದೆ. ಅವುಗಳ ತರುವಾಯ ವಸ್ತ್ರಗಳು, ಕಿರಾಣಿ, ಪಾತ್ರೆಗಳು, ತೊಲೆಗಳು ಮುಂತಾದ ಸರಕುಗಳ ವ್ಯಾಪಾರವಾದರೂ ತಕ್ಕಮಟ್ಟಿಗೆ ನಡಿಯುತ್ತದೆ. ಮಂಗಳವಾರ ಪೇಟೆಯಲ್ಲಿ ದಕ್ಷಿಣೋತ್ತರ ಸಾಲಿನಲ್ಲಿ ಕಿರಾಣಿ, ಪಾತ್ರೆಗಳು, ಕಬ್ಬಿಣದ ಸಾಮಾನು, ವೀಳ್ಯದೆಲೆ, ಮುಂತಾದ ಸರಕುಗಳ ಅಂಗಡಿಗಳುಂಟು. ಪೂರ್ವ ಪಶ್ಚಿಮ ಸಾಲಿನಲ್ಲಿ ಜವಳೀ ಅಂಗಡಿಗಳೂ ಕಂದೀಲುಗಳ ಅಂಗಡಿಗಳೂ ಯುರೋಪ ಶಾಪಗಳೂ ಇರುತ್ತವೆ. ಇವಲ್ಲದೆ ಮಾರ್ಕೇಟನಲ್ಲಿಯೂ ಕಿರಾಣಿ, ಕಾಳು, ಪಲ್ಲೆಗಳು, ಫಲಗಳು, ಬಟ್ಟೆಗಳು, ಮುಂತಾದ ಸರಕುಗಳ ಅಂಗಡಿಗಳಲ್ಲಿ ಬೆಳಗಿನಿಂದ ಯೆರಡು ತಾಸು ರಾತ್ರಿಯ ವರೆಗೆ ಮಾರಾಟವಾಗುತ್ತಿರುತ್ತದೆ. ಹಾವೇರೀ ಪೇಟೆಯ ಲಿಂಗವಂತ ವ್ಯಾಪಾರಸ್ಥರು ಹಲ್ಯಾಳದಿಂದ ಲಕ್ಷಾವಧಿ ರೂಪಾಯಿಯ ತೊಲೆಗಳನ್ನು ತಂದು ಮಾರಾಟ ಮಾಡುತ್ತಾರೆ. ಸುಗ್ಗಿಯ ಪೂರ್ವದಲ್ಲಿ ಕೂಲಿಕಾರ ಜನರು ಪಾಲು ಕೂಡಿ ಇಪ್ಪತ್ತು ಮೂವತ್ತು ಸಾವಿರದ ವರೆಗೆ ಹೊಲಗಳಲ್ಲಿಯ ಬೆಳೆಗಳನ್ನು ಕೊಂಡು, ಬಾಟೀ ಮಾರಿ ಬಹಳ ರೊಕ್ಕ ಗಳಿಸುವರು. ಒಟ್ಟಿಗೆ ಸಂಸಾರಕ್ಕೆ ಬೇಕಾಗುವ ಯಾವತ್ತು ಪದಾರ್ಥಗಳ ವ್ಯಾಪಾರವು ಧಾರವಾಡದಲ್ಲಿ ವೊಳಿತಾಗಿ ನಡಿಯುತ್ತದೆಂದು ಹೇಳ ಬಹುದು. ಈ ವ್ಯಾಪಾರವು ಇನ್ನು ಬೆಳೆಯುತ್ತ ನಡಿದದೆ.

ಮ್ಯುನಿಸಿಪಾಲಿಟಿ.— ಧಾರವಾಡದ ಸಿಟೀ ಮ್ಯುನಿಸಿಪಾಲಿಟಿಯಲ್ಲಿ ಹನ್ನೆರಡು ಜನ ಊರವರಿಂದ ನೇಮಿಸಲ್ಪಟ್ಟವರು, ಹನ್ನೆರಡು ಜನ ಸರಕಾರದಿಂದ ನೇಮಿಸಲ್ಪಟ್ಟವರು, ಅಂತೂ ೨೪ ಜನ ಕಮಿಶನರರು ತಮ್ಮೊಳಗಿನ ೯ ಜನರನ್ನು ಚೇರಮನ್ನ ಸಹಿತ ಮ್ಯಾನೇಜಿಂಗ ಕಮಿಟಿಯಾಗಿ ನೇಮಿಸಿ, ಅವರ ಮುಖಾಂತರ ಸುಧಾರಣೆಯ ಕೆಲಸಗಳನ್ನು ಮಾಡುತ್ತಾರೆ. ಬೀದಿಗಳನ್ನು ಉಡುಗಿಸುವದು, ಗಟಾರು ಕಟ್ಟಿ ಆಗಾಗ್ಗೆ ಅವುಗಳನ್ನು ಬಳಿಸುವದು, ಬೀದಿಗಳಿಗೆ ಗರಸು ಹಾಕಿಸುವದು, ಹೊಸ ಮಾರ್ಗಗಳನ್ನು ಮಾಡಿಸುವದು, ರಾತ್ರಿಯಲ್ಲಿ ಬೀದಿಗಳಲ್ಲಿ ಕಂದೀಲುಗಳನ್ನು ಹಚ್ಚುವದು, ಮುಂತಾದ ಕೆಲಸಗಳು ವೊಳಿತಾಗಿ ನಡಿಯುತ್ತವೆ. ಮ್ಯುನಿಸಿಪಾಲಿಟಿಯ ಆದಾಯವು ಸುಮಾರು ४೦೦೦೦ ರೂಪಾಯಿ ಇರುತ್ತದೆ. ಮನೆಪಟ್ಟಿ, ಜಕಾತಿ, ಗಾಲಿಯಪಟ್ಟಿ, ಇವೇ ಮುಖ್ಯ ಆದಾಯದ ಬಾಬುಗಳಿರುತ್ತವೆ.

ನೀರಿನ ಪುರೋತೆ.—ಧಾರವಾಡಕ್ಕೆ ಮುಖ್ಯ ನೀರಿನ ಆಶ್ರಯವು ಹಾಲಗೆರೆಯು ಮಾರ್ಕೇಟಿನ ಬಳಿಯಲ್ಲಿ ಇರುತ್ತದೆ. ಅದರ ಹೊರ್ತು ಊರಿನ ದಕ್ಷಿಣ ಮೇರೆಯಲ್ಲಿ ಕೆಂಪು ಕೆರೆ, ಬಾಗತಲಾವೆಂಬ ಕೆರೆ, ನೆರೆ ಹಳ್ಳಿಗಳಲ್ಲಿ ಮೂರು ಸಣ್ಣ ಕೆರೆಗಳು ಇರುತ್ತವೆ. ಇವಲ್ಲದೆ ಮೂರು ಮುಖ್ಯ ಇಳಿಯುವ ಬಾವಿಗಳು, ಜಗಣಿ, ತಿರುಮಲರಾಯರದು, ನುಚ್ಚಂಬಲಿಯೆಂಬವು ಊರೊಳಗೆ ಇರುತ್ತವೆ. ಕೋಟೆಯ ಕಂದಕದಲ್ಲಿಯೂ ಕುಡಿಯುವ ನೀರು ತಕ್ಕಮಟ್ಟಿಗೆ ದೊರಿಯುತ್ತದೆ. ಇವುಗಳ ಹೊರ್ತು ಊರೊಳಗೆ ಬಹುತರ ಮನೆ ಮನೆಗೆ ಸೌಳು ನೀರಿನ ಸೇದುವ ಬಾವಿಗಳೂ, ಊರ ಹೊರಗೆ ಸುತ್ತುಮುತ್ತು ಇಪ್ಪತ್ತಕ್ಕಿಂತ ಹೆಚ್ಚು ಶೀ ನೀರಿನ ಸೇದುವ ಬಾವಿಗಳೂ ಇರುತ್ತವೆ. ಆದರೆ ವೊಂದು ವರ್ಷ ಮಳೆ ಕಡಿಮೆಯಾಯಿತೆಂದರೆ ನೀರು ದೊರಿಯುವದು ಕಷ್ಟವಾಗುತ್ತದೆ. ಹಾಲಗೆರೆ ಅಟ್ಟಿಸಿತೆಂದರೆ ಊರೊಳಗಿನ ಬಾವಿಗಳೆಲ್ಲ ಬಹುತರ ವೊಣಗುತ್ತವೆ. ನುಚ್ಚಂಬಲಿಯ ಬಾವಿಯ ಶಲೆ ಮಾತ್ರ ದೊಡ್ಡದಿರುತ್ತದೆ. ನೀರಿನ ವೊಳ್ಳೇ ಬರದಲ್ಲಿ ಸಹ ಯೆರಡು ತಾಸು ಬಿಟ್ಟರೆ ಕೊಡ ತುಂಬುವಷ್ಟು ನೀರು ಬರುತ್ತದೆ. ಒಟ್ಟಿಗೆ ಧಾರವಾಡಕ್ಕೆ ನೀರಿನ ತಾಪತ್ರಯವಿದ್ದಷ್ಟು ಬೇರೆ ಯಾವ ಮಾತಿನ ತಾಪತ್ರಯವೂ ಇಲ್ಲೆಂದು ಹೇಳಬಹುದು. ನೀರಿನ ಬರ ಬಿದ್ದಾಗ ಯೆರಡು ಆಣೆಗೆ ವೊಂದು ಕೊಡ ಶೀ ನೀರು ದೊರಿಯುವದು ಕಷ್ಟವಾಗುತ್ತದೆ. ನೀರು ಹಾಕುವ ಹೋರೆ ಮಾಡುವ ಜನರು ತಿಂಗಳಿಗೆ ೨೦, ೩೦ ರೂಪಾಯಿಯ ವರೆಗೆ ಸಂಪಾದಿಸುತ್ತಾರೆ. ಆದರೆ ಲೋಕಲ್ ಫಂಡಿನಿಂದಲೂ ಸರಕಾರದಿಂದಲೂ ರೇಲ್ವೇ ಕಂಪನಿಯಿಂದಲೂ ಹಣ ಕೂಡಿಸಿ, ಅತ್ತೀಕೊಳ್ಳದಲ್ಲಿ ದೊಡ್ಡದೊಂದು ಕೆರೆ ಕಟ್ಟಿ ಊರೊಳಗೆ ನಳ ತರುವ ಆಲೋಚನೆಯು ನಡಿದದೆ. ಅದು ದೇವರ ದಯದಿಂದ ಬೇಗ ಕೊನೆಗಂಡರೆ ಆರೋಗ್ಯ, ವ್ಯಾಪಾರದ ಬೆಳುವಣಿಗೆ, ಧಾನ್ಯದ ಸಮೃದ್ಧಿ, ಮುಂತಾದ ಸಂಬಂಧದಲ್ಲಿ ಧಾರವಾಡವು ದಕ್ಷಿಣ ಮಹಾರಾಷ್ಟ್ರದಲ್ಲಿ ಹೆಸರಾದ ಪಟ್ಟಣವೆನಿಸುವದು.

ವಿಶೇಷ ಸ್ಥಳಗಳು.—ಊರೊಳಗೆ ತಿರುಮಲ ರಾಯರ ಬಾವಿಯು ಬಹು ಭದ್ರವಾಗಿಯೂ ಭವ್ಯವಾಗಿಯೂ ಕಟ್ಟಿದ್ದಿರುತ್ತದೆ. ಅದರಲ್ಲಿಯ ಅರ್ಧ ಸೌಳು ನೀರು ಬಹುತರಯೆಂದೂ ಅಟ್ಟಸುವದಿಲ್ಲ. ಅದರ ಬಳಿಯಲ್ಲೇ ಛತ್ರವೆಂಬ ದೊಡ್ಡ ಧರ್ಮಶಾಲೆಯನ್ನು ತಿರುಮಲ ರಾಯರೇ ಕಟ್ಟಿಸಿದ್ದಾರೆ. ಆ ಧರ್ಮಶಾಲೆಯು ಮಾರ್ಗಸ್ಥರಾದಂಥ ಕುಟುಂಬ ಸಹಿತವಾಗಿ ಪ್ರವಾಸ ಮಾಡುವ ಜನರಿಗೆ ಇಳಿಯಲಿಕ್ಕೆ ಅತ್ಯುಪಯುಕ್ತವಾದದ್ದಿರುತ್ತದೆ. ಊರ ಹೊರಗೆ ಹೊಸ ಪದ್ಧತಿಯಂತೆ ಕಟ್ಟಿಸಿದ ದೊಡ್ಡ ಮಾರ್ಕೇಟಿನಲ್ಲಿ ಜನರ ಗದ್ದಲವು ಮೂರು ತಾಸು ರಾತ್ರಿಯ ವರೆಗೆ ಇರುತ್ತದೆ. ಊರ ಪಶ್ಚಿಮಕ್ಕೆ ಸುಮಾರು ವೊಂದುವರೆ ಮೈಲಿನ ಮೇಲೆ ಹಾಯಸ್ಕೂಲು, ಟ್ರೇನಿಂಗ ಕಾಲೇಜ, ಇವೆರಡು ದೊಡ್ಡ ಇಮಾರತುಗಳು ಸಾಧಾ ಆದಾಗ್ಯೂ ಭವ್ಯವಾಗಿ ಕಟ್ಟಿಸಲ್ಪಟ್ಟಿರುತ್ತವೆ. ಈ ಇಮಾರತುಗಳ ದಕ್ಷಿಣಕ್ಕೆ ನೂರಿನ್ನೂರು ಹೆಜ್ಜೆಯ ಮೇಲೆ ರೇಲ್ವೆಯ ಕಚೇರಿಯು ಬಹು ಭವ್ಯವಾಗಿಯೂ ಸುಂದರವಾಗಿಯೂ ಕಟ್ಟಿಸಿದ ಮುಂಬಯಿ ಪದ್ಧತಿಯ ದೊಡ್ಡ ಇಮಾರತು

ನೋಡ ತಕ್ಕಂಥಾದಿರುತ್ತದೆ. ಮುನಿಸಿಫ ಕೋರ್ಟಿನ ಬಳಿಯಲ್ಲಿ ಮಿಶನರೀ ಹಾಯ ಸ್ಕೂಲಾದರೂ ತಕ್ಕಮಟ್ಟಿಗೆ ಸುಶೋಭಿತವಾಗಿ ಕಟ್ಟಿದ್ದಿರುತ್ತದೆ. ಊರ ವಾಯವ್ಯಕ್ಕೆ ಸುಮಾರು ಯೆರಡು ಮೈಲಿನ ಮೇಲೆ ಹೊಗೆಬಂಡಿಯ ಸ್ಟೇಶನ್ನು ಭವ್ಯವಾಗಿ ಕಟ್ಟಿದ ದೊಡ್ಡ ಇಮಾರತು ಇರುತ್ತದೆ. ಸ್ಟೇಶನ್ನಿನ ಆಚೆಯಲ್ಲಿ ಸುಮಾರು ಅರ್ಧ ಮೈಲಿನ ಮೇಲೆ, ಅಂದರೆ ಊರಿಂದ ಸುಮಾರು ಯೆರಡೂವರೆ ಮೈಲಿನ ಮೇಲೆ ಅಚ್ಚ ಕಲ್ಲಿನಿಂದ ಕಟ್ಟಿದ ಸೋಮೇಶ್ವರನ ಪುರಾತನದ ದೇವಾಲಯವಿರುತ್ತದೆ. ಆ ಗುಡಿಯ ಮುಂದಿನ ಹೊಂಡದೊಳಗಿನ ನೀರು ಯೆಂದೆಂದು ಇಂಗುವದಿಲ್ಲ. ಗುಡಿಯ ಮುಂದೆ ದೊಡ್ಡ ದೊಡ್ಡ ಮರಗಳ ನಿಬಿಡವಾದ ಛಾಯೆಯು, ಸುತ್ತು ಮುತ್ತು ಯೆತ್ತರವಾದ ಗುಡ್ಡಗಳ ಆವರಣವು, ಗುಡಿಯ ಬಳಿಯಲ್ಲಿಯೇ ಹನ್ನೆರಡು ಕಾಲವೂ ಸಣ್ಣಾಗಿ ಹರಿಯುವ ಶಾಲ್ಮಲಾ ನದಿಯ ಉಗಮವು, ಇವೆಲ್ಲವುಗಳಿಂದ ಈ ದೇವಸ್ಥಾನಕ್ಕೆ ಅತಿ ರಮಣೀಯವಾದ ಶೋಭೆಯುಂಟಾಗಿದೆ. ಏಕಾಂತ ವಾಸ ಮಾಡಲಿಚ್ಛಿಸುವಂಥ ಯೋಗಿಗಳಿಗೆ ಇದು ತಕ್ಕ ಸ್ಥಾನವೆಂದು ಹೇಳ ಬಹುದು. ಶಾಲ್ಮಲೆಯ ಉಗಮದ ಶಲೆ ಹೊರಡುವ ಸ್ಥಳದಲ್ಲಿ ಈ ವೂರಲ್ಲಿ ಪೂರ್ವದಲ್ಲಿ ಸಬಜಡಜರಾಗಿದ್ದ ಬಾಬಾಜೀ ಲಕ್ಷ್ಮಣ ಯೆಂಬವರು ನೆಲ ಕಡಿಸಿ ವಿಸ್ತಾರವಾದ ಹೊಂಡವನ್ನು ಮಾಡಿಸಿದ್ದಾರೆ. ಅದರಲ್ಲಿ ವೊಂದು ಆಳಿನ ಪ್ರಮಾಣವಾಗಿ ನೀರು ಸರ್ವ ಕಾಲವೂ ಇರುತ್ತದೆ. ಆ ಹೊಂಡದಿಂದ ವೊಂದು ಅಂಗುಲ ಪ್ರಮಾಣವಾಗಿ ನೀರು ಸರ್ವ ಕಾಲವೂ ಹರಿಯುತ್ತಿರುತ್ತದೆ. ಗುಡಿಯ ಮುಂದಿನ ಹೊಂಡದ ನೀರು ಕೆಟ್ಟಿರುತ್ತದೆ. ಆದರೆ ಈ ಶಾಲ್ಮಲೆಯ ಹೊಂಡದ ನೀರು ಹರಿಯುತ್ತಿರುವ ಕಾರಣ ಸ್ನಾನಕ್ಕೂ ಕುಡಿಯಲಿಕ್ಕೂ ಬರುತ್ತದೆ. ಶಾಲ್ಮಲೆಯ ಶಲೆಯಲ್ಲಿ ಬೀಳುವ ನೀರಿನಷ್ಟು ಆರೋಗ್ಯಕರವಾದ ನೀರು ಧಾರವಾಡದಲ್ಲಿ ಯೆಲ್ಲಿಯೂ ಇಲ್ಲೆಂದು ಹೇಳ ಬಹುದು. ಧಾರವಾಡದ ಸುತ್ತು ಮುತ್ತು ಹತ್ತೆಂಟು ಮೈಲಿನ ವರೆಗೆ ಸರ್ವ ಕಾಲವೂ ಹರಿಯುವ ನೀರು ಯೆಲ್ಲಿಯೂ ಇಲ್ಲದ್ದರಿಂದ ಈ ಶಾಲ್ಮಲೆಯ ಉಗಮವು ಧಾರವಾಡದ ಜನರಿಗೆ ವೊಂದು ಅಪರೂಪವಾದ ನಿಧಿಯಂತೆ ಇರುತ್ತದೆ. ಊರಿನ ದಕ್ಷಿಣಕ್ಕೆ ಸಣ್ಣದೊಂದು ಗುಡ್ಡದ ಮೇಲೆ ಮೈಲಾರ ಲಿಂಗನ ಗುಡಿ ಇರುತ್ತದೆ. ಅದು ತೀರ ಸಾಧಾರಣ ತರದ್ದು. ಆ ಗುಡಿಯ ಯೆರಡು ಕಂಬಗಳ ಮೇಲೆ ಫಾರ್ಶೀ ಲಿಪಿಯುಂಟು. ಅದರಿಂದ ಮಹಮ್ಮದ ಖಾನನೆಂಬ ಹವಾಲದಾರನು ಸನ್ ೧೬೭೦ರಲ್ಲಿ ಮೊದಲಿನ ಮೂರ್ತಿಯನ್ನು ತೆಗಿದು ಅದನ್ನು ಮಶೀದಿಯನ್ನು ಮಾಡಿದ್ದನೆಂದು ತಿಳಿಯುತ್ತದೆ. ಪೇಶವೆಯವರ ಅಮಲು ಆದ ಬಳಿಕ ಅದು ಮತ್ತೆ ಗುಡಿಯಾಯಿತು. ಮದೀಹಾಳದಲ್ಲಿ ನರಸಿಂಹ ದೇವರ ಗುಡಿಯು ವಿಶಾಲವಾಗಿಯೂ ರಮಣೀಯವಾಗಿಯೂ ಇರುತ್ತದೆ. ಅದು ಮಾರ್ಗಸ್ಥರಿಗೆ ಇಳಿಯಲಿಕ್ಕೆ ಬಹಳ ಅನುವಾದ ಸ್ಥಳವು. ಮದೀಹಾಳದ ಪೂರ್ವಕ್ಕೆ ಸರಕಾರೀ ಸರಾಯಿಯ ಕಾರಖಾನೆಯುಂಟು. ಆ ಕಾರಖಾನೆಯ ದೊಡ್ಡ ಬಾವಿಯಲ್ಲಿಯೂ ಅದರ ಬಳಿಯಲ್ಲಿ ಮ್ಯುನಿಸಿಪಾಲಿಟಿಯವರು ಅಗಿಸಿದ ಬೇರೊಂದು ದೊಡ್ಡ ಬಾವಿಯಲ್ಲಿಯೂ ಶೀ ನೀರು ಸಮೃದ್ಧಿಯಾಗಿ ಇರುತ್ತದೆ; ಒಣಗುವದಿಲ್ಲ.

ಪೈರು.—ಧಾರವಾಡದ ಭೂಮಿಗೆ ಕರಿಸಾಲೆಂಬುವದು ಗೊತ್ತೇ ಇಲ್ಲ. ಮಳೆ ಹೆಚ್ಚಾದರೆ ಯೆರೆ ಭೂಮಿ ಭತ್ತದ ಗದ್ದೆಗಳು ಬೆಳೆಯುತ್ತವೆ; ಕಡಿಮೆಯಾದರೆ ಕರ್ಲು ಭೂಮಿಯು ವೊಳಿತಾಗಿ ಬೆಳೆಯುತ್ತದೆ. ಯಾವ ಭೂಮಿಯಲ್ಲಿಯೂ ಕೂರಿಗೆ ಹಾಕ ದಷ್ಟು ವೊಣ ಮಳೆಗಾಲವು ಈ ವೂರಿಗೆ ಯೆಂದೆಂದು ವೊದಗಿದ್ದಿಲ್ಲವೆಂದು ಹೇಳುತ್ತಾರೆ. ಮಳೆಯು ತೀರ ಕಡಿಮೆಯಾದರೂ ೨೦ ಇಂಚಿಗಿಂತ ಕಡಿಮೆ ಯೆಂದೂ ಆಗುವದಿಲ್ಲ. ಕೆಂಪು ಭೂಮಿಯಲ್ಲಿ ಮೇಲಾದ ಭತ್ತವು ಹೇರಳವಾಗಿ ಬೆಳೆಯುತ್ತದೆ. ಯೆರೆ ಭೂಮಿ ಯಲ್ಲಿ ಹತ್ತಿ, ಜೋಳ, ಗೋಧಿ, ಕಡ್ಲೆ, ಮುಂತಾದ ಧಾನ್ಯಗಳು ಬರುತ್ತವೆ. ಅವಲ್ಲದೆ ಹೀರಿ, ಬೆಂಡಿ, ಚವಳಿ, ಬದನಿ, ಅವರೆ, ಸವತಿ, ಕೋತಂಬರಿ, ಸಾಸಿವೆ, ಮುಂತಾದ ತೋಟಗಳಲ್ಲಿ ಬೆಳೆಯುವ ಪಲ್ಲೆಕಾಯಿಗಳು ಈ ವೂರ ಹೊಲಗಳಲ್ಲಿ ಸಮೃದ್ಧಿಯಾಗಿ ಬೆಳೆಯುತ್ತವೆ. ಆದರೆ ಸಜ್ಜಿ, ಬಿಳಿ ಜೋಳ ಈ ವೂರ ಭೂಮಿಯಲ್ಲಿ ನೆಟ್ಟಗೆ ಬರುವ ದಿಲ್ಲ. ತೋಟಗಳು ಯೆರಡು ಮೂರಕ್ಕಿಂತ ಹೆಚ್ಚಿಲ್ಲ. ಅವುಗಳಲ್ಲಿ ಬಾಳೆ, ಕಬ್ಬು, ಗೋವಿಂಜೋಳ, ಮುಂತಾದವು ಬರುತ್ತವೆ. ಧಾರವಾಡದ ಮಾವಿನ ಹಣ್ಣು, ಪೇರೂ ಹಣ್ಣು ಹೆಸರಾಗಿರುತ್ತವೆ. ಆದರೆ ಬೇರೆ ಫಲವೃಕ್ಷಗಳು ಬಹುತರ ಇಲ್ಲ.

ಹವೆಯು.—ಬೇಸಿಗೆಯಲ್ಲಿ ಪರಮಾವಧಿ ೧೦೦ ಅಂಶದ ವರೆಗೆ ಶಕೆ ಇರುತ್ತದೆ; ಚಳಿಗಾಲದಲ್ಲಿ ಬಹು ಕಡಿಮೆಯಾದರೆ ೬೪ ಅಂಶವಿರುತ್ತದೆ. ಆದ್ದರಿಂದ ಬೇಸಿಗೆಯೂ ಚಳಿಗಾಲವೂ ಬಹಳ ದುಃಸಹವಾಗುವದಿಲ್ಲ. ಹವೆಯಲ್ಲಿ ಶೈತ್ಯವು ಸ್ವಲ್ಪ ಹೆಚ್ಚು ಇರು ತ್ತದೆ. ಆದರೂ ಇಲ್ಲಿಯ ಹವೆ ವೊಟ್ಟಿಗೆ ಆರೋಗ್ಯದ್ದೆಂದು ಯೆಣಿಸಲ್ಪಡುತ್ತದೆ. ಬೆಳ ಗಾವಿಯ ಹವೆಗಿಂತ ಹತ್ತು ಪಾಲು ಲೇಸು. ಪಟಕೀ ಬೇನೆಯು ಕ್ವಚಿತ್ತಾಗಿ ಬಂದರೂ ಉಗ್ರ ಸ್ವರೂಪದ್ದಿರುವದಿಲ್ಲ. ಆದರೆ ಮಳೆಗಾಲದ ಆರಂಭದಲ್ಲಿ ಜ್ವರೋಪದ್ರವವು ವೊಳಿ ತಾಗಿ ಆಗುತ್ತದೆ. ಆದರೂ ಇಲ್ಲಿಯ ಮರಣದ ಪ್ರಮಾಣವು ಬೆಳಗಾವಿ, ವಿಜಾಪುರ, ಕಾರವಾಡಗಳಿಗಿಂತ ಕಡಿಮೆ ಇರುತ್ತದೆ.

ಇತಿಹಾಸವು.—ಧಾರವಾಡದ ಕೋಟೆಯನ್ನು ವಿಜಯನಗರದವರ ಮಹಾರಾಷ್ಟ್ರ ಸರದಾರನಾದ ಧಾರರಾವನೆಂಬವನು ಸನ್ ೧೪೦೩ನೇ ವರ್ಷ ಕಟ್ಟಿಸಿದನೆಂದು ತಿಳಿದದೆ. ಅದರ ಪೂರ್ವದಲ್ಲಿ ಧಾರವಾಡದ ಗ್ರಾಮವಿದ್ದಿಲ್ಲವೆಂದು ತೋರುತ್ತದೆ. ಧಾರರಾವನು ಮೊದಲು ಧಾರವಾಡದಿಂದ ೨ ಮೈಲಿನ ಮೇಲೆ ಇರುವ ನವಲೂರಿನ ಬಳಿಯಲ್ಲಿ ಕೋಟೆ ಯನ್ನು ಕಟ್ಟಿಸುವ ಆಲೋಚನೇ ಮಾಡಿದ್ದನು. ಆ ಹಳ್ಳಿಯ ಬಳಿಯಲ್ಲಿ ಅವನು ಮಾಡಿಸಿದ ಕಟ್ಟಡದ ಕುರುಹುಗಳು ಈಗ್ಯೂ ಇರುತ್ತವೆ. ಆದರೆ ನವಲೂರಿನ ಬಳಿ ಯಲ್ಲಿ ಗುಡ್ಡಗಳು ಬಹಳ ಇರುವ ಕಾರಣ ಅವುಗಳಿಂದ ಶತ್ರುಗಳಿಗೆ ಆಶ್ರಯವಾಗುವ ದೆಂದು ನೋಡಿ ಅವನು ಅಲ್ಲಿಯ ಕೆಲಸ ಬಿಟ್ಟು ಧಾರವಾಡದ ಕೋಟೆಯನ್ನು ಕಟ್ಟಿಸಿದ ನೆಂದು ಹೇಳುತ್ತಾರೆ. ಮುಂದೆ ಸನ್ ೧೫೭೩ರಲ್ಲಿ ವಿಜಾಪುರದ ಅಲ್ಲೀ ಅದಿಲ್‌ಶಹನು ಯುದ್ಧ ಮಾಡಿ ಈ ಕೋಟೆಯನ್ನು ವಿಜಯನಗರದವನೊಬ್ಬ ಸ್ವತಂತ್ರನಾದ ಸರದಾರನ ಕೈಯಿಂದ ಕಸುಕೊಂಡನು. ಸನ್ ೧೬೬೦ರಲ್ಲಿ ವಿಜಾಪುರದ ಅಲ್ಲೀ ಶಹನು ಕೋಟೆಯು

ಯೆರಡನೇ ಅಗಸೆಯನ್ನು ಹೊಸದಾಗಿ ಕಟ್ಟಿಸಿದನು. ಅದರ ಮೇಲೆ ಬರಿದ ಫಾರ್ಶೀ ಲಿಪಿಯಲ್ಲಿ ಈ ಸಂಗತಿಯಲ್ಲದೆ ಅಬುದುಲ ಗಫರನೆಂಬ ಕಿಲ್ಲೇದಾರನ ಹೆಸರೂ, ಅಬದುಲ್ಲಾಯೆಂಬ ಜಮಾದಾರನ ಹೆಸರೂ ಹಿಜರಿ ಸನ್ ೧೦೭೧, ತಾ. ೧೧ನೇ ಮೊಹರಮ್ ಶುಕ್ರವಾರದ ಮಿತಿಯೂ ಬರಿಯಲ್ಪಟ್ಟವೆ. ಸನ್ ೧೬೭೦ರಲ್ಲಿ ಸವಣೂರಿನ ನಬಾಬನ ಮೂಲ ಪುರುಷನಾದ ಅಬದುಲ ಕರೀಮಖಾನನು ಬಂಕಾಪುರ ಸರಕಾರದ ಸುಭೇದಾರನಾಗಿ, ಧಾರವಾಡದ ಕೋಟೆಗೆ ವೊಡೆಯನಾಗಿದ್ದನು. ಆಗ ಈ ವೂರಿಗೆ ನಸಿರಾಬಾದೆಂಬ ಹೆಸರಿತ್ತು. ಸನ್ ೧೬೭೪ರಲ್ಲಿ ಶಿವಾಜಿಯು ಈ ಕೋಟೆಯನ್ನು ತಕ್ಕೊಂಡನು. ಸನ್ ೬೧೮೫ರಲ್ಲಿ ಔರಂಗಜೇಬನ ಮಗನಾದ ಸುಲ್ತಾನ ಮುವಾಝೀಮನು ಹುಬ್ಬಳ್ಳಿ, ಧಾರವಾಡ, ಇವೆರಡೂ ಪಟ್ಟಣಗಳನ್ನು ಆಕ್ರಮಿಸಿದನು. ಮುಂದೆ ಅರವತ್ತೆಂಟು ವರ್ಷ ಧಾರವಾಡವು ಮೊಗಲರ ವಶದಲ್ಲಿಯೇ ಇತ್ತು. ಸನ್ ೧೭೫೩ರಲ್ಲಿ ಪುಣೆಯ ಬಾಳಾಜೀರಾವ ಪೇಶವನು ಮೊಗಲರ ಕೈಯಿಂದ ಧಾರವಾಡವನ್ನು ಕಸುಕೊಂಡನು. ಸನ್ ೧೭೬೪ರಲ್ಲಿ ಹೈದರನ ಸರದಾರನಾದ ಫಝುಲ್ ಉಲ್ಲಾಖಾನನು ಈ ಕೋಟೆಯನ್ನು ತಕ್ಕೊಂಡಿದ್ದನು. ಆದರೆ ಸ್ವಲ್ಪ ದಿವಸದೊಳಗೇ ಮಾಧವರಾವ ಪೇಶವನು ಅದನ್ನು ಹಿಂದಕ್ಕೆ ತಕ್ಕೊಂಡನು. ಮುಂದೆ ಸನ್ ೧೭೭೮ರಲ್ಲಿ ಹೈದರನು ಧಾರವಾಡವನ್ನು ಮತ್ತೆ ತಕ್ಕೊಂಡ ಬಳಿಕ ಅದು ಹನ್ನೆರಡು ವರ್ಷ ಮೈಸೂರವರ ವಶದಲ್ಲಿಯೇ ಇತ್ತು. ಸನ್ ೧೭೯೧ರ ಆರಂಭದಲ್ಲಿ ಪೇಶವನ ತರ್ಫಿನಿಂದ ಪರಶುರಾಮ ಭಾವೂನೂ ಇಂಗ್ಲಿಷರೂ ಕೂಡಿ ಧಾರವಾಡವನ್ನು ಮತ್ತೆ ತಕ್ಕೊಂಡ ಬಳಿಕ ಅದು ಮತ್ತೆ ಪೇಶವನ ವಶಕ್ಕೆ ಬಂತು. ಮುಂದೆ ಸನ್ ೧೮೧೭ರಲ್ಲಿ ಪೇಶವ ಬಾಜೀರಾಯನು ಧಾರವಾಡವನ್ನು ದಂಡಿನ ವೆಚ್ಚಕ್ಕಾಗಿ ಇಂಗ್ಲಿಷರಿಗೆ ಕೊಟ್ಟನು. ಇಲ್ಲಿಗೆ ಧಾರವಾಡದ ಯುದ್ಧಗಳು ತೀರಿದವು. ಸನ್ ೧೮೫೭ರ ಬಂಡಾಯದ ಕಾಲದಲ್ಲಿ ನರಗುಂದದ ಬಾಬಾ ಸಾಹೇಬನೂ ಮುಂಡರಿಗೆಯ ರಂಗರಾಯನೂ ದಾಳಿಯನ್ನೆಬ್ಬಿಸಲಾಗಿ ಧಾರವಾಡದ ಕೋಟೆಯು ಹಗೆಗಳ ಕೈಶೇರೀತೆಂಬ ಹೆದರಿಕೆಯಿಂದ ಇಂಗ್ಲಿಷ ಸರಕಾರದವರು ವೊಂದು ಕಡೆಯಲ್ಲಿ ಕೋಟೆಯ ಗೋಡೆಯನ್ನು ಕೆಡವಿ ಕಂದಕಕ್ಕೆ ಭರಿ ಹಾಕಿ ವೊಳಗೆ ಹೋಗಲಿಕ್ಕೆ ಮಾರ್ಗ ಮಾಡಿದರು.

ಧುಂಡಸಿ.— ಶಿಗ್ಗಾವಿಯ ವಾಯವ್ಯಕ್ಕೆ ಆರು ಮೈಲಿನ ಮೇಲೆ ಕಾನಡಾ ಜಿಲ್ಲೆಯ ಸರಹದ್ದಿನಲ್ಲಿ ದೊಡ್ಡ ಪೇಟೆಯು, ಜ. ಸ. (೮೧) ೨೩೭೪. ಗುರುವಾರದ ಸಂತೆಯಲ್ಲಿ ಅಡಿಕೆ, ಮೆಣಸು, ಯಾಲಕ್ಕಿ, ಮೆಣಸಿನ ಕಾಯಿ, ಕೊಬ್ಬರಿ, ಬೆಲ್ಲ, ಅಕ್ಕಿ, ಉಪ್ಪು, ಸಕ್ಕರಿ, ಇವುಗಳ ಮಾರಾಟವು ಬಹಳ ಆಗುತ್ತದೆ.

ದಿಡಗೂರು.— ಕರ್ಜಗಿಯ ನೈರುತ್ಯಕ್ಕೆ ೧೫ ಮೈಲಿನ ಮೈಲೆ. ಹನುಮಂತನ ಗುಡಿಯಲ್ಲಿಯೂ ಬೇರೆ ಕಡೆಯಲ್ಲಿಯೂ ಕೂಡಿ ೮ ಲಿಪಿಗಳಿರುತ್ತವೆ.

ಗಂಗಿಭಾವಿ.— ಈ ಬಾವಿಯು ಶಿಗ್ಗಾವಿಯ ಪಶ್ಚಿಮಕ್ಕೆ ನಾಲ್ಕು ಮೈಲಿನ ಮೇಲೆ ಎದಲಾಬಾದೆಂಬ ಹಾಳು ಹಳ್ಳಿಯ ಹದ್ದಿನೊಳಗೆ ಇರುತ್ತದೆ. ಈ ಬಾವಿಯು ಮಾವಿನ

ಬನದೊಳಗೆ ಇರುತ್ತದೆ. ಸುತ್ತು ಮುತ್ತು ಕಿರಿ ಅಡವಿ ಬೆಳೆದಂಥ ಸಣ್ಣ ಸಣ್ಣ ಗುಡ್ಡಗಳಿವೆ. ಬಾವಿಯ ದಂಡೆಯಲ್ಲಿ ಕಾಮೇಶ್ವರಸೆಂಬ ಈಶ್ವರನ ದೇವಾಲಯವಿರುತ್ತದೆ. ಈ ಬಾವಿಯಲ್ಲಿ ಸ್ನಾನ ಮಾಡಿದವರ ಜ್ವರ ಮುಂತಾದ ರೋಗಗಳು ಪರಿಹಾರವಾಗುತ್ತವೆಂದು ಪ್ರಸಿದ್ಧಿಯುಂಟು. ಆದ್ದರಿಂದ ಮಾಹಾತ್ಮ್ಯವು ಬೆಳೆದದೆ. ಕಾಮೇಶ್ವರನಿಗೆ ೯೩ ರೂಪಾಯಿಯ ಇನಾಮು ಭೂಮಿಯಲ್ಲದೆ ನಗದು ೨೦ ರೂಪಾಯಿ ಸರಕಾರದಿಂದ ದೊರಿಯುತ್ತದೆ. ಪೂಜಾರಿಯು ನಿತ್ಯದಲ್ಲಿ ಪೂಜೆ ಮಾಡಿ ಗುಡಿಯಲ್ಲಿ ನಂದಾದೀಪವಿಡುತ್ತಾನೆ. ಮಕರ ಸಂಕ್ರಾಂತಿಯ ಮರು ದಿವಸ ಈ ದೇವರ ಜಾತ್ರೆಯಾಗುತ್ತದೆ. ಸುಮಾರು ೨೦೦೦ ಜನ ಕೂಡುತ್ತದೆ. ಆದರೆ ವ್ಯಾಪಾರವು ಬಹಳ ಆಗುವದಿಲ್ಲ. ಗಂಗಿಬಾಯಿಂದ ವೊಂದು ಸಣ್ಣ ಸರುವು ಹೊರಟು ಹನ್ನೆರಡು ತಿಂಗಳೂ ಹರಿಯುತ್ತದೆ. ಒಟ್ಟಿಗೆ ಇದು ರಮಣೀಯವಾದ ಸ್ಥಳವಿರುತ್ತದೆ.

ಗದಗು. —ಉತ್ತರ ಅಕ್ಷಾಂಶ ೧೫°, ೨೬′, ಪೂರ್ವ ರೇಖಾಂಶ ೭೫°, ೪೩′. ಇದರ ಬಳಿಯಲ್ಲಿ ಬೆಟಗೇರಿಯೆಂಬ ಹಳ್ಳಿ ಇರುವ ಕಾರಣ ವಾಡಿಕೆಯಾಗಿ ಇದಕ್ಕೆ ಗದಗು ಬೆಟಗೇರಿಯೆಂದೆನ್ನುವರು; ಜನಸಂಖ್ಯ (೮೧) ೧೭೦೦೦. ಗದಗ ತಾಲೂಕಿನ ಮುಖ್ಯ ಗ್ರಾಮವು, ಇಲ್ಲಿ ಅರಳೆಯ ವ್ಯಾಪಾರವು ಬಹಳ ನಡಿಯುತ್ತದೆ. ಇಲ್ಲಿಯ ಜನಸಂಖ್ಯವು ಸನ್ ೧೮೭೨ರ ಖಾನೇಸುಮಾರಿಯಲ್ಲಿ ೧೯೦೩೫ ಇತ್ತು. ಮುಂದೆ ಬಂದ ಬರದಿಂದ ವಸ್ತಿಯು ಕಡಿಮೆಯಾಯಿತು. ಗದಗಿನ ಪೇಟೆಯಲ್ಲಿ ವರ್ಷಕ್ಕೆ ೫ ಲಕ್ಷಕ್ಕಿಂತ ಹೆಚ್ಚು ರೂಪಾಯಿಯ ಅರಳೆಯ ಮಾರಾಟವಾಗುತ್ತದೆ. ಇಲ್ಲಿ ಅರಳೇ ವೊತ್ತಿ ಗಂಟು ಕಟ್ಟುವ ಯಂತ್ರಗಳು ಯೆರಡು, ಹತ್ತಿಯನ್ನು ಅರಿಯುವ ಯಂತ್ರ ವೊಂದು ಉಂಟು. ಗದಗಿನ ಶೀರೆಗಳು ಬಹಳ ಪ್ರಸಿದ್ಧ; ಶನಿವಾರ ಸಂತೆಯ ದಿವಸ ವಸ್ತ್ರ, ಅಕ್ಕಿ, ಮುಂತಾದವುಗಳ ಮಾರಾಟವು ಬಹಳ ಆಗುತ್ತದೆ.

ಗದಗಿನಲ್ಲಿ ಮಾಮಲೇದಾರ ಕಚೇರಿ, ಮುನಸೀಫ ಕೋರ್ಟು, ಟಪಾಲು, ತಂತಿ ಟಪಾಲುಗಳ ಆಫೀಸುಗಳು, ದವಾಖಾನೆ, ಮ್ಯುನಿಸಿಪಾಲಿಟಿ, ಇಂಗ್ಲಿಷ ಶಾಳೆ, ೪ ಕನ್ನಡ ಶಾಲೆಗಳು ಇರುತ್ತವೆ. ಊರ ಹೊರಗೆ ಹಾಳು ಕೋಟೆಯೊಂದುಂಟು. ಇದು ಧಾರವಾಡದ ಕೋಟೆಗಿಂತ ಸಣ್ಣದು, ಅದರಪ್ಪು ಭದ್ರವಾದದ್ದಲ್ಲ.

ಗದಗಿನಲ್ಲಿ ತ್ರಿಕೂಟೇಶ್ವರ, ಸರಸ್ವತಿ, ನಾರಾಯಣ, ಸೋಮೇಶ್ವರ, ರಾಮೇಶ್ವರ, ಯೆಂಬ ಮುಖ್ಯ ಪ್ರಾಚೀನ ದೇವಾಲಯಗಳಿರುತ್ತವೆ. ತ್ರಿಕೂಟೇಶ್ವರನ ಗುಡಿ, ಸರಸ್ವತಿಯ ಗುಡಿ, ಇವೆರಡೂ ವೊಂದಕ್ಕೊಂದು ಅತಿ ನಿಕಟವಾಗಿ ಕಟ್ಟಲ್ಪಟ್ಟವೆ. ತ್ರಿಕೂಟೇಶ್ವರನ ಗುಡಿ ದೊಡ್ಡದು, ಸರಸ್ವತೀದು ಸಣ್ಣದು. ಆದರೆ ಸರಸ್ವತಿಯ ಗುಡಿಯಷ್ಟು ಸುಂದರವಾದ ಗುಡಿಯನ್ನು ಈ ಶೀಮೆಯಲ್ಲಿ ಕಾಣುವದು ಅಪರೂಪ. ಅದರ ಕಂಬಗಳ ಮೇಲೆಯೂ ಗೋಡೆಗಳ ಮೇಲೆಯೂ ಬಹು ಸೂಕ್ಷ್ಮ ರೇಖೆಗಳುಳ್ಳಂಥ ಮನೋಹರವಾದ ಚಿತ್ರಗಳನ್ನು ಕೊರಿದಿದ್ದಾರೆ. ಎರಡು ಕಂಬಗಳ ಮೇಲಿನ ಚಿತ್ರಗಳು ಯೆಲ್ಲಕ್ಕೂ ಶ್ರೇಷ್ಠವಿರುತ್ತವೆ. ಕರೆ ಶಿಲೆಯಿಂದ ಮಾಡಿದ ಸರಸ್ವತಿಯ ಮೂರ್ತಿಯು ಮನುಷ್ಯಾಕೃತಿಯಷ್ಟೇ ದೊಡ್ಡದಾಗಿ ಪದ್ಮಾಸನದಿಂದ ಕೂತಿರುತ್ತದೆ. ಆದರ ಕೊರಳಲ್ಲಿಯೂ

ಕೈಗಳಲ್ಲಿಯೂ ಕೊರಿದು ಹುಟ್ಟಿಸಿದ ಅಲಂಕಾರಗಳು ಅಪ್ರತಿಮ ಶೋಭೆಯುಳ್ಳವುಗಳಿರುತ್ತವೆ. ಇಷ್ಟು ಸುಂದರವಾದ ಮೂರ್ತಿಯನ್ನು ಕಾಣುವದು ಅಪರೂಪವು. ತ್ರಿಕೂಟೇಶ್ವರನ ಗುಡಿಯು ದೊಡ್ಡದಿರುತ್ತದೆ. ಅದಕ್ಕೂ ವೊಂದಕ್ಕೊಂದು ಜೋಡಿಸಿದಂಥ ಸಭಾ ಮಂಟಪಗಳು ಯೆರಡುಂಟು. ಅವುಗಳ ಮೂರು ದಿಕ್ಕುಗಳಲ್ಲಿ ಮೂರು ಗರ್ಭಾಗಾರಗಳಿರುತ್ತವೆ. ಪಶ್ಚಿಮದ ಗರ್ಭಾಗಾರದಲ್ಲಿ ವೊಂದೇ ಶಾಳುಂಖಿಯಲ್ಲಿ ಮೂರು ಲಿಂಗಗಳನ್ನು ಸ್ಥಾಪಿಸಿದ್ದಾರೆ. ಅದರಿಂದ ಈ ಗುಡಿಗೆ ತ್ರಿಕೂಟೇಶ್ವರವೆಂಬ ಹೆಸರು ಬಂದದೆ. ಉತ್ತರದ ಗರ್ಭಾಗಾರದಲ್ಲಿಯೂ ವೊಂದು ಲಿಂಗವಿರುತ್ತದೆ; ಆದರೆ ಪೂರ್ವದ ಗರ್ಭಾಗಾರದಲ್ಲಿ ವೊಂದು ಸಿಂಹಾಸನ ಮಾತ್ರವಿರುತ್ತದೆ, ಮೂರ್ತಿ ಇಲ್ಲ. ಈ ಗುಡಿಯು ವೊಳ ಮೈಯಲ್ಲಿ ಸಾಧಾ ಇರುತ್ತದೆ; ಹೊರ ಮೈಯಲ್ಲಿ ಮಾತ್ರ ಹಲ ಕೆಲವು ಅಲಂಕಾರಗಳುಂಟು. ಸಭಾ ಮಂಟಪದ ದಕ್ಷಿಣ ದ್ವಾರವು ಸೊಬಗಿನ ಗೊಂಬೆಗಳಿಂದ ಅಲಂಕರಿಸಲ್ಪಟ್ಟಿದೆ. ಸೋಮೇಶ್ವರನ ಗುಡಿಯ ಹೊರ ಮೈಯಲ್ಲಿ ಅಲಂಕಾರಗಳೂ ಚಿತ್ರಗಳೂ ಬಹಳ ವುಂಟು. ಇದರ ಬಾಗಿಲು ನೋಡ ತಕ್ಕಂಥಾದಿರುತ್ತದೆ. ಸೋಮೇಶ್ವರನ ದಕ್ಷಿಣಕ್ಕೆ ರಾಮೇಶ್ವರನ ಗುಡಿಯುಂಟು. ಆದರ ಸುತ್ತು ಮುತ್ತು ದಟ್ಟಾಗಿ ಮನೆಗಳನ್ನು ಕಟ್ಟಿದ್ದರಿಂದ ಗುಡಿಯು ಬಹುತರ ಕಾಣಿಸುವದಿಲ್ಲ. ವೀರನಾರಾಯಣನ ಗುಡಿಯು ಮಾರ್ಕೇಟನಲ್ಲಿ ಇರುತ್ತದೆ. ಅದರ ಮಹಾದ್ವಾರದ ಮೇಲಿನ ಗೋಪುರವು ಸುಮಾರು ೧೦೦ ಫೂಟು ಯೆತ್ತರವಾಗುವದು. ಈ ಗುಡಿಯಲ್ಲಿ ವರ್ಣಿಸ ತಕ್ಕಂಥ ಸೌಂದರ್ಯವೇನು ಇಲ್ಲ. ಇದು ಮೇಲೆ ಹೇಳಿದ ಗುಡಿಗಳಿಗಿಂತ ಅರ್ವಾಚೀನ ಕಾಲದ್ದು, ಅಂದರೆ ಸುಮಾರು ೧೩ನೇ ಅಥವಾ ೧೪ನೇ ಶತಕದಲ್ಲಿ ಆದದ್ದು.

ಬೆಟಗೇರಿಯಲ್ಲಿ ಹದಿನೈದು ವೀರಗಲ್ಲುಗಳು ವೊಂದೇ ಕಡೆಯಲ್ಲಿ ಗುಂಪಾಗಿ ನಿಲ್ಲಿಸಲ್ಪಟ್ಟಿವೆ. ಇವುಗಳ ಸುತ್ತು ಮುತ್ತು ಗೋಡೆಯುಂಟು. ಯೆಲ್ಲಕ್ಕೂ ಯೆತ್ತರವಾದದ್ದು ೧೩ ಫೂಟು ಯೆತ್ತರವಿರುತ್ತದೆ. ಈ ಶಿಲೆಗಳ ತೋರಿಕೆಯ ಮೋರೆಯಲ್ಲಿ ಮೂರು ವಿಭಾಗಗಳನ್ನು ಅಂದರೆ ಅಂತಸ್ತುಗಳನ್ನು ಕಟಮ ಮಾಡಿದ್ದಾರೆ. ಎಲ್ಲಕ್ಕೂ ಕೆಳಗಿನ ಅಂತಸ್ತಿನಲ್ಲಿ ವೀರನು ಮಡಿದ ರಣ ಭೂಮಿಯ ಚಿತ್ರವನ್ನು ಕೊರಿದಿದ್ದಾರೆ. ಇದೇ ಅಂತಸ್ತಿನಲ್ಲಿ ಕೆಲವು ಶಿಲೆಗಳ ಮೇಲೆ ನೇಗಲು ಇಲ್ಲವೆ ಗಾಣದ ವೊರಳು ಇರುತ್ತದೆ. ಎರಡನೇ ಅಂತಸ್ತಿನಲ್ಲಿ ಸತ್ತ ವೀರನನ್ನು ರೆಕ್ಕೆಗಳುಳ್ಳ ದೇವದೂತರು ಆಕಾಶಕ್ಕೆ ವೊಯ್ಯುವ ಹಾಗೆ ತೋರಿಸಿದ್ದಾರೆ. ಮೂರನೇ, ಅಂದರೆ ಯೆಲ್ಲಕ್ಕೂ ಮೇಲಿನ ಅಂತಸ್ತಿನಲ್ಲಿ ಸತ್ತ ವೀರನನ್ನು ಸಿಂಹಾಸನದ ಮೇಲೆ ಕೂಡ್ರಿಸಿದ್ದಾರೆ. ಈ ಶಿಲೆಗಳ ಮೇಲೆ ಹಳೆಗನ್ನಡ ಲಿಪಿಗಳಾದರೂ ಇರುತ್ತವೆ. ಅಗಸೇ ಬಾಗಿನ ಯೆದುರಿಗೆ ಇರುವದಿನ್ನೊಂದು ವೀರಗಲ್ಲಿನ ಮೇಲೆ ವಿಸ್ತಾರವಾದ ಲಿಪಿಯುಂಟು.

ಗದಗಿನ ಮಾಮಲೆದಾರ ಕಚೇರಿಯಲ್ಲಿ ಕೆಲವು ತಾಮ್ರ ಪತ್ರ ಶಾಸನಗಳಿರುತ್ತವೆ; ಮೇಲೆ ಹೇಳಿದ ಗುಡಿಗಳಲ್ಲಿಯೂ ಬೇರೆ ಗುಡಿಗಳಲ್ಲಿಯೂ ಕೂಡಿ ಇಪ್ಪತ್ತು ಹಳೆಗನ್ನಡ ಶಿಲಾಲಿಪಿಗಳಿರುತ್ತವೆ. ಇವೆಲ್ಲ ಕ್ರಿಸ್ತ ಶಕದ ೧೦ನೇ ಶತಕದ ಈಚೆಯಲ್ಲಿ ಆದಂಥವು.

ಇವುಗಳಲ್ಲಿ ಕೆಲವು ಚಾಲುಕ್ಯರ ಕಾಲದವೂ ಕೆಲವು ಕಲಚೂರೀ ಬಿಜ್ಜಳನ ಮಕ್ಕಳ ಕಾಲದವು, ಕೆಲವು ದೇವಗಿರಿಯ ಯಾದವರ ಕಾಲದವು, ಕೆಲವು ದ್ವಾರ ಸಮುದ್ರದ ಬಲ್ಲಾಳರ ಕಾಲದವು, ಕೆಲವು ವಿಜಯನಗರದವರ ಕಾಲದವು ಇರುತ್ತವೆ. ಆದ್ದರಿಂದ ಗದಗು ೧೧ನೇ ಶತಕದ ಈಚೆಯಲ್ಲಿ ಈ ರಾಜವಂಶಗಳಿಗೆ ಅಂಕಿತವಾಗಿತ್ತೆಂದು ತಿಳಿಯುತ್ತದೆ. ಗದಗಿಗೆ ಪೂರ್ವದಲ್ಲಿ ಕೃತಪುರ ಇಲ್ಲವೆ ಕೃತಕವೆಂದು ಹೆಸರಿತ್ತು. ಇದರ ಅರ್ವಾಚೀನ ಕಾಲದ ಇತಿಹಾಸವು ಧಾರವಾಡದಂತೆಯೇ ಇರುತ್ತದೆ.

ಗಳಗನಾಥ.— ತುಂಗಭದ್ರೆಯ ದಂಡೆಯಲ್ಲಿ ಕರ್ಜಗಿಯ ಈಶಾನ್ಯಕ್ಕೆ ೨೦ ಮೈಲಿನ ಮೇಲೆ. ಹೊಳೆಯ ದಂಡೆಯಲ್ಲಿ ಗಾಳೇಶ್ವರನ ಗುಡಿಯು ಪುರಾತನದ್ದು ದೊಡ್ಡದಿರುತ್ತದೆ. ಅದರಲ್ಲಿ ಯೆರಡು ಶಿಲಾಲಿಪಿಗಳುಂಟು. ಹನುಮಂತನ ಗುಡಿಯಲ್ಲಿ ವೊಂದು ವೀರಗಲ್ಲು ಲಿಪಿಯುಳ್ಳದ್ದಿರುತ್ತದೆ.

ಗರಗ.— ಧಾರವಾಡದ ವಾಯವ್ಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೪೪೬೫. ಉರುಟು ಬಟ್ಟೆಗಳ ವ್ಯಾಪಾರವು ವೊಳಿತಾಗಿ ಆಗುತ್ತದೆ.

ಗುಡ್ಡಗುಡ್ಡಾಪುರ ಅಥವಾ ದೇವರ ಗುಡ್ಡ.— ರಾಣೀಬಿನ್ನೂರಿನ ಉತ್ತರಕ್ಕೆ ಯೆಂಟು ಮೈಲಿನ ಮೇಲೆ ವೊಂದು ಯೆತ್ತರವಾದ ಗುಡ್ಡದ ಮೇಲೆ ಇರುತ್ತದೆ. ಜನ ಸಂಖ್ಯೆವು ೫೪೬ಕ್ಕಿಂತ ಹೆಚ್ಚಿಲ್ಲ. ಇಲ್ಲಿಯ ಮಲ್ಲಾರಿ ಅಥವಾ ಮೈಲಾರಲಿಂಗ ಯೆಂಬ ದೇವಸ್ಥಾನವು ಪ್ರಸಿದ್ಧ ಉಂಟು. ಗುಡಿಯು ತಕ್ಕಮಟ್ಟಿಗೆ ದೊಡ್ಡದಿರುತ್ತದೆ; ದೇವರಿಗೆ ಇನಾಮು ಭೂಮಿಯು ೩೩೪ ರೂಪಾಯದ್ದು ನಡಿಯುತ್ತದೆ. ಈಶ್ವರನು ಇಲ್ಲಿ ಅವತಾರ ಮಾಡಿ ಮಲ್ಲನೆಂಬ ದೈತ್ಯನನ್ನು ೫ ಫೂಟು ಉದ್ದವಾದ ಬಿಲ್ಲಿನಿಂದ ಯುದ್ಧ ಮಾಡಿ ಕೊಂದನೆಂದು ಹೇಳುತ್ತಾರೆ. ಬಿಲ್ಲು ಈಗ್ಯೂ ಇರುತ್ತದೆ. ಗುಡಿಯ ಸುತ್ತು ಮುತ್ತು ೬೦ ವಗ್ಗಯ್ಯಗಳ ಮನೆಗಳುಂಟು. ದಸರೆಯ ಪೂರ್ವ ದಿವಸದಿಂದ ಮೂರು ದಿವಸ ದೊಡ್ಡ ಜಾತ್ರೆಯಾಗುತ್ತದೆ, ೫೦೦೦ದಿಂದ ೧೦೦೦೦ದ ವರೆಗೆ ಜನ ಕೂಡುತ್ತದೆ. ಈ ಜಾತ್ರೆಯಲ್ಲಿ ವಗ್ಗಯ್ಯಗಳು ಸರ್ಪಣಿಯ ಹರಿಯೋಣ, ಕಾಲೊಳಗೆ ಕಬ್ಬಿಣದ ಸಲಾಖಿಯ ಚುಚ್ಚಿ ಪಾರು ಮಾಡೋಣ, ಮುಂತಾದ ಅಸುರೀ ಕೃತ್ಯಗಳನ್ನು ಮಾಡುತ್ತಾರೆ. ವ್ಯಾಪಾರವು ಅಷ್ಟಕ್ಕಷ್ಟೇ. ಜಾತ್ರೆಯಲ್ಲಿ ಮಲ್ಲಾರಿಗೆ ಸುಮಾರು ೧೦೦೦ ರೂಪಾಯಿ ಕಾಣಿಕೆ ಬರುತ್ತದೆ. ಈ ಹಳ್ಳಿಯಲ್ಲಿ ಮ್ಯುನಿಸಿಪಾಲಿಟಿಯುಂಟು.

ಗುತ್ತಲ.— ಕರ್ಜಗಿಯ ಪೂರ್ವಕ್ಕೆ ೧೨ ಮೈಲಿನ ಮೇಲೆ. ಜ. ಸ. (೮೧) ೩೧೭೬. ಸೋಮವಾರದ ಸಂತೆಯಲ್ಲಿ ಕಾಳು ಕಡಿಯ ಮಾರಾಟವು ವೊಳಿತಾಗಿ ಆಗುತ್ತದೆ. ಚಂದ್ರಶೇಖರನ ಗುಡಿಯಲ್ಲಿ ಯೆರಡು ಲಿಪಿಗಳಿರುತ್ತವೆ. ಇಲ್ಲಿ ಪುರಾತನವೊಂದು ಹೊಂಡವು ಬಹು ಭದ್ರವಾಗಿ ಕಟ್ಟಿದ್ದಿರುತ್ತದೆ. ಪೂರ್ವ ಕಾಲದಲ್ಲಿ ಇದು ಪ್ರಸಿದ್ಧ ಗ್ರಾಮವಿತ್ತು.

ಹಮ್ಮಿಗಿ.— ಶಿರಹಟ್ಟಿಯ ಬಳಿಯಲ್ಲಿ. ಶಿರಹಟ್ಟಿಯ ದೇಸಾಯಿಯು ಇಲ್ಲಿ ಇರುತ್ತಿದ್ದನು.

ಅವನು ಸನ್ ೧೮೫೮ರಲ್ಲಿ ಬಂಡಾಯದಲ್ಲಿ ಶೇರಿದ್ದರಿಂದ ಅವನ ಸಂಸ್ಥಾನವು ಸರಕಾರಕ್ಕೆ ಶೇರಿತು.

ಹಾನಗಲ್ಲು.— ಉತ್ತರ ಅಕ್ಷಾಂಶ ೧೫°, ೪೬′, ಪೂರ್ವ ರೇಖಾಂಶ ೭೫°, ೧೨′, ಧಾರವಾಡದ ದಕ್ಷಿಣಕ್ಕೆ ೫೦ ಮೈಲಿನ ಮೇಲೆ; ಜನಸಂಖ್ಯೆ (೮೧) ೫೭೭೭. ತಾಲೂಕ ಕಚೇರಿ, ಪೋಷ್ಟ ಆಫೀಸು, ಮ್ಯುನಿಸಿಪಾಲಿಟಿ, ಸರಕಾರೀ ಶಾಲೆಗಳು ಇರುತ್ತವೆ. ಊರ ಹೊರಗೆ ಹಾಳು ಕೋಟೆಯು ಸುಮಾರು ೧೯೦೦ ಫೂಟು ಸುತ್ತಳತೆಯುಳ್ಳದ್ದಾಗಿ ಮಣ್ಣಿನಿಂದ ಕಟ್ಟಿದ್ದಿರುತ್ತದೆ. ಊರಿನ ಸುತ್ತು ಮುತ್ತು ವಿಸ್ತಾರವಾದ ಕೋಟೆ ಇದ್ದದ್ದರ ಕುರುಹುಗಳು ಕಾಣುತ್ತವೆ. ಹಾನಗಲ್ಲಿನಲ್ಲಿ ಹದಿಮೂರು ಸಣ್ಣ ದೊಡ್ಡ ಗುಡಿಗಳಿರುತ್ತವೆ; ಅವುಗಳಲ್ಲಿ ತಾರಕೇಶ್ವರನ ಗುಡಿಯು ಶ್ರೇಷ್ಠ. ಇದು ಊರ ಹೊರಗೆ ಪೂರ್ವಕ್ಕೆ ಇರುತ್ತದೆ. ಇದರ ಸಭಾಮಂಟಪವು ೭೦ ಫೂಟು ಉದ್ದ, ೪೦ ಫೂಟು ಅಗಲು ಇರುತ್ತದೆ. ಗರ್ಭಾಗಾರದ ಮುಂದೆ ಬಹು ಚಂದವಾಗಿ ಕೊರಿದಂಥ ಕಮಲವು ತೂಗಬಿಟ್ಟ ಹಾಗೆ ಕಾಣಿಸುತ್ತದೆ. ಅದು ಸುಮಾರು ೩೦ ಫೂಟಿನ ವ್ಯಾಸವುಳ್ಳ ಅಷ್ಟಕೋನಾಕೃತಿಯಾದ ಅಖಂಡ ಶಿಲೆಯಲ್ಲಿ ಕೊರಿದು ೮ ಚಿತ್ರ ವಿಚಿತ್ರವಾಗಿ ಕೊರಿದಂಥ ಕಂಬಗಳ ಆಧಾರದಿಂದ ನಿಲ್ಲಿಸಲ್ಪಟ್ಟಿರುತ್ತದೆ. ಅದೇ ಕೋಣೆಯಲ್ಲಿ ಅಷ್ಟದಿಕ್ಪಾಲಕರ ಮೂರ್ತಿಗಳು ಬಹು ಸುಂದರವಾಗಿ ಕೊರಿಯಲ್ಪಟ್ಟವೆ. ಗುಡಿಯೊಳಗೆ ಯಲ್ಲ ಕಡೆಯಲ್ಲಿಯೂ ನಾನಾ ಪ್ರಕಾರದ ಪೌರಾಣಿಕ ಚಿತ್ರಗಳನ್ನು ಕೊರಿದಿದ್ದಾರೆ. ಗುಡಿಯ ಹೊರಗೆ ಮೂರು ವೀರಗಲ್ಲುಗಳು ಗೋಡೆಗೆ ಆನಿಸಿ ಇಟ್ಟಿರುತ್ತವೆ. ಹನುಮಂತನ ಗುಡಿಯ ಹತ್ತರ ಬೇರೊಂದು ಸಣ್ಣ ಗುಡಿಯಲ್ಲಿ ನಾಗ ಜಾತಿಯ ಮನುಷ್ಯರ ಆಕೃತಿಗಳನ್ನು ಕೊರಿದಿದ್ದಾರೆ. ಬಲೇಶ್ವರನ ಗುಡಿಯು ಊರಿಂದ ಸ್ವಲ್ಪ ದೂರ ಇರುತ್ತದೆ.

ಹಾನಗಲ್ಲಿನಲ್ಲಿ ಒಟ್ಟಿಗೆ ೧೧ ಶಿಲಾಲಿಪಿಗಳಿರುತ್ತವೆ. ಅವುಗಳಲ್ಲಿ ೫ ಲಿಪಿಗಳ ಮಿತಿಗಳು ತಿಳಿದವೆ. ಅವೆಲ್ಲ ಕ್ರಿ. ಶ.ದ. ೧೧ನೇ ಶತಕದ ಈಚೆಯಲ್ಲಿ ಹುಟ್ಟಿರುತ್ತವೆ. ಈ ೧೧ ಲಿಪಿಗಳಲ್ಲಿ ಕೆಲವು ವೀರಗಲ್ಲುಗಳ ಮೇಲೆ ಇರುತ್ತವೆ.

ಹೊಸ ಹಾನಗಲ್ಲಿನ ಪಶ್ಚಿಮಕ್ಕೆ ಸುಮಾರು ೭೦೦ ಯಾರ್ಡಿನ ಮೇಲೆ "ಕುಂತಿಯ ದಿಬ್ಬ"ವೆಂಬದೊಂದು ಶಂಕ್ವಾಕೃತಿಯಾದ ದಿಬ್ಬವಿರುತ್ತದೆ. ಕುಂತಿಯು ಜೋಳವನ್ನು ಕೇರಿ ತೆಗಿದು ಚಲ್ಲಿದ ಹೊಟ್ಟಿನಿಂದ ಆ ದಿಬ್ಬವಾಗಿದೆ ಯೆಂದು ಜನರು ಹೇಳುತ್ತಾರೆ.

ಹಾನಗಲ್ಲಿಗೆ ಶಿಲಾಲಿಪಿಗಳಲ್ಲಿ ವಿರಾಟನ ಕೋಟೆ, ವಿರಾಟನಗರಿ, ಪನ್ನಂಗಲ್, ಯೆಂಬ ಹೆಸರುಗಳು ಕೊಡಲ್ಪಟ್ಟವೆ. ಪಾಂಡವರು ಅಜ್ಞಾತವಾಸದಲ್ಲಿ ವಿರಾಟರಾಜನ ಮತ್ಸ್ಯಪುರವೆಂಬ ರಾಜಧಾನಿಯಲ್ಲಿ ವಾಸಿಸಿದರೆಂದು ಭಾರತದಲ್ಲಿ ಹೇಳಿರುತ್ತದೆ. ಆ ಮತ್ಸ್ಯಪುರವು ಹಾನಗಲ್ಲೇ ಯೆಂದು ಜನರ ಗ್ರಹಿಕೆಯುಂಟು. ಈ ಬಗ್ಗೆ ಹಲ ಕೆಲವು ಪ್ರಮಾಣಗಳಾದರೂ ಇರುತ್ತವೆ. ಮೇಲೆ ಹೇಳಿದಂತೆ ಪ್ರಾಚೀನ ಕಾಲದಿಂದ ಹಾನಗಲ್ಲಿಗೆ ವಿರಾಟನಗರಿ ಯೆಂಬ ಹೆಸರು ನಡಿದು ಬಂದದ್ದಲ್ಲದೆ, ಹಳೆ ಹಾನಗಲ್ಲಿನಲ್ಲಿ ಬಾಲೇ ಕಲ್ಲೆಯೊಳಗೆ ಭೀಮಸೇನನ ಗುಡಿಯೆಂಬದೊಂದು ಗುಡಿಯುಂಟು. ಅದೇ ಸ್ಥಳದಲ್ಲಿ ಭೀಮಸೇನನು ಕೀಚ

ಕನನ್ನು ಕೊಂದನೆಂದು ಹೇಳುತ್ತಾರೆ. ಪಾಂಡವರು ಅಜ್ಞಾತವಾಸ ಮುಗಿಸಿದ ಬಳಿಕ ಉಪಪ್ಲಾವ್ಯವೆಂಬ ಗ್ರಾಮದಲ್ಲಿ ಹೋಗಿ ನಿಂತು, ಅಲ್ಲಿ ತಮ್ಮ ಸಿಂಹಾಸನವನ್ನು ಸ್ಥಾಪಿಸಿದರೆಂದು ಭಾರತದಲ್ಲಿ ಲೇಖವದೆ. ಆ ಉಪಪ್ಲಾವ್ಯವೇ ಈಗ ತುಂಗಭದ್ರೆಯ ದಂಡೆಯಲ್ಲಿ ಸಣ್ಣದೊಂದು ಹಾಳು ಹಳ್ಳಿಯಾಗಿದ್ದ ಆನೇಗುಂದಿಯೆಂಬ ಬಗ್ಗೆ ಪ್ರಮಾಣಗಳು ದೊರೆಯುತ್ತವೆ. ಮಧ್ಯಕಾಲದ ಇತಿಹಾಸದಲ್ಲಿ ಆನೇಗುಂದಿಯು ಹೆಸರಾದ ರಾಜಧಾನಿಯೆನಿಸುತ್ತಿತ್ತು. ಇದಕ್ಕೆ ಬುನಾದಿಯಲ್ಲಿ "ದಕ್ಷಿಣ ಹಸ್ತಿನಾವತಿ" ಯೆಂಬ ಹೆಸರಿತ್ತೆಂದು ಶಿಲಾಲಿಪಿಗಳು ಹೇಳುತ್ತವೆ. "ಆನೇಗುಂದಿ" ಯೆಂಬ ಹೆಸರಾದರೂ "ಹಸ್ತಿನಾವತಿ" ಯೆಂಬ ಹೆಸರಿನ ಕನ್ನಡ ಭಾಷಾಂತರವೇ ಇರುತ್ತದೆ. ಆನೇಗುಂದಿಯಲ್ಲಿ ಪಾಂಡವರ ವಂಶದ ಅರಸರು ಬಹು ಕಾಲ ಆಳಿದರೆಂತಲೂ ಶಿಲಾಲಿಪಿಗಳಿಂದ ತಿಳಿಯುತ್ತದೆ. ಆನೇಗುಂದಿಯ ಹೊರ್ತು ಮಧುರೆ, ತಿರುವಂಕೋಡು (ತ್ರಾವಣಕೋರ), ಮುಂತಾದ ಕಡೆಯಲ್ಲಿ ಬುನಾದಿಯಲ್ಲಿ ಆಳಿದ ಅರಸರಾದರೂ ಪಾಂಡವರ ವಂಶದವರೇ ಯೆಂದು ಅವರವರ ವಂಶಾವಳಿಗಳು ಹೇಳುತ್ತವೆ. ಇದಲ್ಲದೆ ವಿರಾಟನ ರಾಜ್ಯಕ್ಕೆ ತ್ರಿವರ್ಗದೇಶದ ಸುಶರ್ಮನ ರಾಜ್ಯವು ಹೊಂದಿತ್ತೆಂದು ವಿರಾಟ ಪರ್ವದಲ್ಲಿ ಹೇಳಿರುತ್ತದೆ. "ತ್ರಿಗರ್ತ" ವೆಂದರೆ ಮೂರು ತಗ್ಗುಗಳ ನಡುವಿನ ಶೀಮೆಯೆಂಬ ಅರ್ಥವಿರುತ್ತದೆ. ಈಗಿನ ಮೈಸೂರಿನ ರಾಜ್ಯದ ಪೂರ್ವ, ಪಶ್ಚಿಮ, ದಕ್ಷಿಣ, ಈ ಮೂರು ದಿಕ್ಕುಗಳಲ್ಲಿ ಪೂರ್ವ ಘಟ್ಟ, ಪಶ್ಚಿಮ ಘಟ್ಟ (ಸಹ್ಯಾದ್ರಿ), ನೀಲಗಿರಿ, ಈ ಮೂರು ಪರ್ವತಗಳ ಆಚೆಯಲ್ಲಿ ತಗ್ಗು ನೆಲವಿರುವ ಕಾರಣ ಮೈಸೂರಿನ ಶೀಮೆಯೇ ತ್ರಿವರ್ಗ ದೇಶವಾಗುತ್ತದೆ. ಇದರಂತೆ ಬಲರಾಮನು ದಕ್ಷಿಣ ದೇಶದಲ್ಲಿ ತೀರ್ಥಯಾತ್ರೆ ಮಾಡುವಾಗ ರಾಮೇಶ್ವರದಿಂದ ತ್ರಿಗರ್ತ ದೇಶದೊಳಗೆ ಹಾದು ಗೋಕರ್ಣಕ್ಕೆ ಹೋದನೆಂದು ಭಾಗವತದಲ್ಲಿ ಲೇಖವದೆ. ಈ ಯಾವತ್ತು ಕಾರಣಗಳಿಂದ ಮೈಸೂರಿನ ಶೀಮೆಯೇ ತ್ರಿವರ್ಗ ದೇಶವೆಂತಲೂ, ಆನೇಗುಂದಿಯೇ ಉಪಪ್ಲಾವ್ಯವೆಂತಲೂ, ಹಾನಗಲ್ಲೇ ಮತ್ಸ್ಯಪುರವೆಂತಲೂ ಅನುಮಾನವಾಗುತ್ತದೆ.

ಆನೇಗುಂದಿಯಲ್ಲಿ ಇಜಿಪ್ತ ದೇಶದ ಅರಸರೂ ಬೇರೆ ಕೆಲವು ರಾಜವಂಶಗಳೂ ಆಳಿದ ಬಳಿಕ ಅಲ್ಲಿಯೂ ಬನವಾಸಿಯಲ್ಲಿಯೂ ಕದಂಬ ವಂಶದ ಅರಸರು ಬಹು ಕಾಲ ಆಳಿದರು. ಹಾನಗಲ್ಲು ಕದಂಬರ ರಾಜ್ಯಕ್ಕೆ ಬಹು ಪ್ರಾಚೀನ ಕಾಲದಿಂದ ಶೇರಿತ್ತೆಂದು ತೋರುತ್ತದೆ. ಅವರನ್ನು ಚಲುಕ್ಯರು ಗೆದ್ದ ಬಳಿಕ ಹಾನಗಲ್ಲು ಅವರ ಕೈ ಶೇರಿತ್ತು; ಆದರೆ ಕದಂಬರು ಚಲುಕ್ಯರ ಮಾಂಡಲಿಕರಾದ ಬಳಿಕ ಸಹ ಹಾನಗಲ್ಲು ಕದಂಬರ ರಾಜ್ಯದಲ್ಲಿಯೇ ಇತ್ತೆಂದು ತೋರುತ್ತದೆ. ಚಾಲುಕ್ಯರ ರಾಜ್ಯವನ್ನು ಬಲ್ಲಾಳರು ಆಕ್ರಮಿಸಿದ ಬಳಿಕ ಹಾನಗಲ್ಲು ಅವರ ರಾಜ್ಯದ ಭಾಗವಾಯಿತು. ಮುಂದೆ ವಿಜಯನಗರದವರ ಕಾಲದಿಂದ ಹಾನಗಲ್ಲು ಬಂಕಾಪುರ ಶೀಮೆಯ ಕೆಳಗೆ ಹೋಯಿತೆಂದು ತೋರುತ್ತದೆ. ಆದ್ದರಿಂದ ಬಂಕಾಪುರದ ಇತಿಹಾಸವೇ ಹಾನಗಲ್ಲಿನ ಇತಿಹಾಸವೆಂದು ಹೇಳ

ಬಹುದು. ಸನ್ ೧೮೧೮ರಲ್ಲಿ ಜನರಲ್ ಮನ್ರೋನ ಕೈಕೆಳಗಿನ ದಂಡಿನವರು ಹಾನಗಲ್ಲಿನ ಕೋಟೆಯನ್ನು ತಕ್ಕೊಂಡರು.

ಹರಳಹಳ್ಳಿ.—ಕರ್ಜಗಿಯ ಪೂರ್ವಕ್ಕೆ ೧೫ ಮೈಲಿನ ಮೇಲೆ. ಈ ಸಣ್ಣ ಹಳ್ಳಿಯಲ್ಲಿ ಮೂರು ಶಿಲಾಲಿಪಿಗಳಿರುವದಲ್ಲದೆ ಸನ್ ೧೮೮೦ರಲ್ಲಿ ವೊಂದು ತಾಮ್ರ ಪಟ ದೊರಿದದೆ. ಅದರಲ್ಲಿ ೩೦ ಜನ ಬ್ರಾಹ್ಮಣರಿಗೆ ರಿತ್ತಿಯೆಂಬ ಗ್ರಾಮವನ್ನು ಯಾದವ ವಂಶದ ೨ನೇ ಸಿಂಹಣನು ಕ್ರಿ. ಶ. ೧೨೩೮ರಲ್ಲಿ ಅಗ್ರಹಾರ ಹಾಕಿ ಕೊಟ್ಟ ಬಗ್ಗೆ ಲೇಖವದೆ. ಈ ತಾಮ್ರ ಪಟವು ಈಗ ಮುಂಬಯಿಯಲ್ಲಿ ಏಶಿಯಾಟಿಕ ಸೋಸಾಯಿಟಿಯವರ ಪದಾರ್ಥ ಸಂಗ್ರಹಾಲಯದಲ್ಲಿ ಇರುತ್ತದೆ.

ಹತ್ತಿಮುತ್ತೂರು.—ಕರ್ಜಗಿಯ ಉತ್ತರಕ್ಕೆ ೫ ಮೈಲಿನ ಮೇಲೆ. ಇಲ್ಲಿ ವೊಂದೇ ಕಲ್ಲಿನ ಮೇಲೆ ಯೆರಡು ಲಿಪಿಗಳು, ವೊಂದು ೯೧೬ನೇ ವರ್ಷದ್ದು ಯೆರಡನೇದು ೧೧ನೇ ಶತಕದ ಈಚೆಯಲ್ಲಿ ಆದದ್ದು, ಇರುತ್ತವೆ.

ಹಾರೋಗೊಪ್ಪ.—ರಾಣೇಬಿನ್ನೂರಿನ ದಕ್ಷಿಣಕ್ಕೆ ೮ ಮೈಲಿನ ಮೇಲೆ. ಹನುಮಂತನ ಗುಡಿಯಲ್ಲಿ ಬಹಳ ಸವಿದದ್ದೊಂದು ಲಿಪಿಯುಂಟು.

ಹಾವಸಬಾವಿ.—ಕೋಡದ ಈಶಾನ್ಯದಲ್ಲಿ ೭ ಮೈಲಿನ ಮೇಲೆ, ಜ. ಸ. (೮೧) ೧೨೭೩. ಇಲ್ಲಿ ವೊಂದು ವೀರಗಲ್ಲಿನ ಮೇಲೆ ಲಿಪಿಯುಂಟು.

ಹವಣಗಿ.—ಹಾನಗಲ್ಲಿನ ಆಗ್ನೇಯಕ್ಕೆ ೭ ಮೈಲಿನ ಮೇಲೆ. ಇಲ್ಲಿ ರಾಮೇಶ್ವರನ ಗುಡಿಯಲ್ಲಿಯೂ ಬೇರೆ ಕಡೆಯಲ್ಲಿಯೂ ಕೂಡಿ ೭ ಲಿಪಿಗಳಿವೆ.

ಹಾವೇರಿ.—ಕರ್ಜಗಿಯ ಈಶಾನ್ಯಕ್ಕೆ ೭ ಮೈಲಿನ ಮೇಲೆ, ಜ. ಸ. (೮೧) ೫೬೫೦. ಈ ವೂರಲ್ಲಿ ಸಬಜಡಜ ಕೋರ್ಟು, ಪೋಷ್ಟ ಆಫೀಸು, ಮ್ಯುನಿಸಿಪಾಲಿಟಿ, ಆಸಪತ್ರಿಗಳು ಇರುತ್ತವೆ. ಇಲ್ಲಿ ಯಾಲಕ್ಕಿ, ಅರಳೆ, ಮುಂತಾದ ಸರಕುಗಳ ವ್ಯಾಪಾರವು ವೊಳಿತಾಗಿ ನಡಿಯುತ್ತದೆ. ಈ ವೂರಲ್ಲಿ ಇರುವದೊಂದು ಸೌಳು ನೀರಿನ ಬಾವಿಯಲ್ಲಿ ಯಾಲಕ್ಕಿಗಳನ್ನು ತೊಳಿದರೆ ಅವು ಉಬ್ಬಿ ಬೆಳ್ಳಗೆ ಆಗುತ್ತವೆ. ಆ ಬಾವಿಯ ನೀರೊಳಗೆ ಸುಣ್ಣವಿರುವದರಿಂದ ಹೀಗಾಗುತ್ತದೆಂದು ಹೇಳುತ್ತಾರೆ. ಹಾವೇರಿಯ ಮ್ಯುನಿಸಿಪಾಲಿಟಿಯ ಆದಾಯವು ಸನ್ ೧೮೮೩ರಲ್ಲಿ ೧೪೬೦ ರೂಪಾಯಿ ಇತ್ತು. ಬಸವಣ್ಣನ ಗುಡಿಯಲ್ಲಿ ನಾಲ್ಕು ಲಿಪಿಗಳಿರುತ್ತವೆ. ಇಲ್ಲಿ ರಾಘವೇಂದ್ರ ಸ್ವಾಮಿಯ ಮಠವಿರುತ್ತದೆ.

ಹೆಬ್ಬಳ್ಳಿ.—ಧಾರವಾಡದ ಪೂರ್ವಕ್ಕೆ ೮ ಮೈಲಿನ ಮೇಲೆ, ಜ. ಸ. (೮೧) ೪೮೯೨. ಈ ಗ್ರಾಮವನ್ನು ಪೇಶವೆ ನಾನಾಸಾಹೇಬನು ಮೊದಲು ನರಗುಂದದ ವೊಡಿಯನಾಗಿದ್ದ ಸರದಾರನಿಗೆ ಸನ್ ೧೭೪೮ರಲ್ಲಿ ಜಹಾಗೀರು ಹಾಕಿ ಕೊಟ್ಟನು. ಅದು ಅವನ ವಂಶದವರಿಗೆ ಈಗ್ಯೂ ನಡಿಯುತ್ತದೆ. ಈ ವೂರಿಗೆ ವೊಂದು ಹಾಳು ಕೋಟೆಯುಂಟು; ಬುಧವಾರ ದಿವಸ ಸಂತೆಯಾಗುತ್ತದೆ. ಶಂಭುಲಿಂಗನ ಗುಡಿಯಲ್ಲಿ ವೊಂದು ಶಿಲಾಲಿಪಿಯುಂಟು. (ರಾಮದುರ್ಗ ಸಂಸ್ಥಾನದ ಇತಿಹಾಸ ನೋಡು).

ಹಿರೇಬಿದರಿ.—ರಾಣೇಬಿನ್ನೂರಿನ ಈಶಾನ್ಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೧೧೭೭. ಒಂದು ಗುಡಿಯಲ್ಲಿ ಮೂರು ಲಿಪಿಗಳಿರುತ್ತವೆ.

ಹಿರೇಬಾಸೂರು.—ಹಾನಗಲ್ಲಿನ ಆಗ್ನೇಯಕ್ಕೆ ೧೫ ಮೈಲಿನ ಮೇಲೆ. ಹನುಮಂತನ ಗುಡಿಯಲ್ಲಿಯೂ ವಿಶ್ವೇಶ್ವರನ ಗುಡಿಯಲ್ಲಿಯೂ ಲಿಪಿಗಳಿರುತ್ತವೆ. ಊರ ಹೊರಗೆ ಇರುವದೊಂದು ಗವಿಯು ಬಹಳ ದೂರ ಹೋಗಿರುತ್ತದೆಂದು ಹೇಳುತ್ತಾರೆ.

ಹಿರೇ ಬೆಂಡೀಗೇರಿ—ಶಿಗ್ಗಾವಿಯ ಉತ್ತರಕ್ಕೆ ೭ ಮೈಲಿನ ಮೇಲೆ, ಜ. ಸ. (೮೧) ೧೩೬೦. ಕಾಳಪ್ಪನ ಗುಡಿಯಲ್ಲಿಯೂ ಯೆರಡು ಮಠಗಳಲ್ಲಿಯೂ ಕೂಡಿ ಮೂರು ಲಿಪಿಗಳಿರುತ್ತವೆ. ಬುಧವಾರ ಸಂತೆಯಾಗುತ್ತದೆ.

ಹಿರೇ ಕೆರೂರು.—ಉತ್ತರ ಅಕ್ಷಾಂಶ ೧೪°, ೨೮′, ಪೂರ್ವ ರೇಖಾಂಶ ೭೫°, ೨೮′, ಧಾರವಾಡದ ಆಗ್ನೇಯಕ್ಕೆ ೭೦ ಮೈಲಿನ ಮೇಲೆ, ಜ. ಸ. (೮೧) ೨೩೪೮. ಇಲ್ಲಿ ಕೋಡ ತಾಲೂಕಿನ ಮಾಮಲೇದಾರ ಕಚೇರಿ ಇರುತ್ತದೆ. ಸೋಮವಾರ ಸಂತೆಯಾಗುತ್ತದೆ; ಹವೆಯು ರೋಗಕಾರಕ. ಈ ವೂರಲ್ಲಿ ನಾಲ್ಕು ಬುನಾದಿಯ ಗುಡಿಗಳೂ ೧೧ ಲಿಪಿಗಳೂ ಇರುತ್ತವೆ; ಅವೆಲ್ಲ ೧೦ನೇ ಶತಕದ ಈಚೆಯಲ್ಲಿ ಆದಂಥವು. ವಿಷಪರಿಹಾರೇಶ್ವರನ ಗುಡಿಯಲ್ಲಿ ಹಾವಿನ ವಿಷವು ಪರಿಹಾರವಾಗುತ್ತದೆಂದು ಹೇಳುತ್ತಾರೆ. ಊರ ಹೊರಗೆ ಯೆರಡು ಮೈಲಿನ ಮೇಲೆ ಜನಮೇಜಯನ ಕೆರೆ ಯೆಂಬದೊಂದು ದೊಡ್ಡ ಕೆರೆಯುಂಟು. ಅದರ ನೀರು ಗದ್ದೆಗಳಿಗೆ ಬಹಳ ಉಪಯೋಗಿಸುತ್ತದೆ. ವಿಷಪರಿಹಾರೇಶ್ವರನ ಗುಡಿಯ ಬಳಿಯಲ್ಲಿ ಇರುವದೊಂದು ಲಿಪಿಯಲ್ಲಿ ಈ ಕೆರೆಯನ್ನು ಕಟ್ಟಿಸಿದ ವೃತ್ತಾಂತವೆಲ್ಲ ಬರಿದಿರುತ್ತದೆಂದು ಹೇಳುತ್ತಾರೆ.

ಹೊಂಬಳ.—ಗದಗಿನ ವಾಯವ್ಯಕ್ಕೆ ೭ ಮೈಲಿನ ಮೇಲೆ, ಜ. ಸ. (೮೧) ೩೨೦೬. ಈಶ್ವರನ ಗುಡಿಯಲ್ಲಿಯೂ ಭೋಗೇಶ್ವರ ಲಿಂಗನ ಗುಡಿಯ ಹತ್ತರವೂ ವೊಂದೊಂದು ಲಿಪಿಗಳಿರುತ್ತವೆ.

ಹೊಸೂರು.—ಗದಗಿನ ಆಗ್ನೇಯಕ್ಕೆ ಹತ್ತು ಮೈಲಿನ ಮೇಲೆ. ಬಲ್ಲಾಳೇಶ್ವರನ ಗುಡಿಯ ಗೋಡೆಗೆ ಬಣ್ಣ ಕೊಟ್ಟಿದ್ದಾರೆ. ಬೇರೆ ಮೂರು ಹಾಳು ಗುಡಿಗಳಿವೆ. ಯಾದವ ಬಲ್ಲಾಳ ನಾರಾಯಣನೆಂಬವನು ಸನ್ ೧೨೦೭ರಲ್ಲಿ ಬರಿಸಿದ್ದೊಂದು ಲಿಪಿಯುಂಟು.

ಹುಬ್ಬಳ್ಳಿ.—ಉತ್ತರ ಅಕ್ಷಾಂಶ ೧೫°, ೨೦′, ಪೂರ್ವ ರೇಖಾಂಶ ೭೫°, ೧೩′, ಧಾರವಾಡದ ಆಗ್ನೇಯಕ್ಕೆ ೧೩ ಮೈಲಿನ ಮೇಲೆ; ಜನಸಂಖ್ಯೆ (೮೧) ೩೬೬೬೭. ಇದು ದಕ್ಷಿಣ ಮಹಾರಾಷ್ಟ್ರದಲ್ಲಿ ಹೆಸರಾದ ಪೇಟೆಯು, ತಾಲೂಕಿನ ಮುಖ್ಯ ಗ್ರಾಮವು. ಇಲ್ಲಿ ಮಾಮಲೇದಾರ ಕಚೇರಿ, ಮುನಸಿಫ ಕಚೇರಿ, ಪೋಲೀಸ ಕಚೇರಿ, ಟಪಾಲ ಆಫೀಸು, ತಂತೀಟಪಾಲ ಆಫೀಸು, ಆಸಪತ್ರೆ, ಇಂಗ್ಲಿಷ ಶಾಲೆ, ಇಷ್ಟು ಸರಕಾರೀ ಸಂಸ್ಥೆಗಳಲ್ಲದೆ ಹತ್ತೀ ಅರಿಯುವ ಕಾರಖಾನೆ, ಅರಳಿಯ ವಸ್ತುವ ಕಾರಖಾನೆ, ನೂಲು ನೆಯ್ಯುವ ಯಂತ್ರದ ಕಾರಖಾನೆ, ರೇಲ್ವೇ ವರ್ಕ ಶಾಪೆಂಬ ಕಾರಖಾನೆ, ಯೆರಡು ಇಂಗ್ಲಿಷ ವ್ಯಾಪಾರಸ್ಥರ ಅಂಗಡಿಗಳು ಇರುತ್ತವೆ.

ಈ ವೂರಿನ ಪಶ್ಚಿಮ ಭಾಗಕ್ಕೆ ಹಳೆ ಹುಬ್ಬಳ್ಳಿ ಯೆಂತಲೂ ಪೂರ್ವ ಭಾಗಕ್ಕೆ ಹೊಸ ಹುಬ್ಬಳ್ಳಿ ಯೆಂತಲೂ ಅನ್ನುವರು; ಯೆರಡುಗಳ ನಡುವೆ ೪೦೦ ಯಾರ್ಡಿಗಿಂತ ಹೆಚ್ಚು ಅಂತರವಿಲ್ಲ. ಕ್ಷೇತ್ರವು ಸುಮಾರು ೧೭೭೮ ಯೆಕರು ಅಥವಾ ೨¾ ಚಚ್ಚೌಕು ಮೈಲು, ಸಮುದ್ರದ ಮೇಲೆ ಯೆತ್ತರವು ೨೫೦೦ ಫೂಟು. ಊರಿನ ಸುತ್ತು ಮುತ್ತು ಸ್ವಲ್ಪ ಸಣ್ಣ ಸಣ್ಣ ಗುಡ್ಡಗಳಿರುತ್ತವೆ. ಉಳಿದದ್ದೆಲ್ಲ ಕರೆ ಭೂಮಿಯು. ಹಳೆ ಹುಬ್ಬಳ್ಳಿಯು ಕೃಷ್ಣಾಪುರ, ತಿಮ್ಮಸಾಗರ, ಅಯೋಧ್ಯ, ಯೆಂಬ ನೆರೆ ಹಳ್ಳಿಗಳ ಭೂಮಿಯಲ್ಲಿ ಇರುತ್ತದೆ. ಸನ್ ೧೭೨೭ರಲ್ಲಿ ಬಸಪ್ಪನೆಂಬವನೊಬ್ಬ ಸಾವಕಾರನಿಗೂ ಹಳೆ ಕೋಟೆಯ ಕಿಲ್ಲೆದಾರನಿಗೂ ಜಗಳವಾದ್ದರಿಂದ ಆ ಸಾವಕಾರನು ಸವಣೂರಿನ ನಬಾಬನ ಅಪ್ಪಣೆಯಿಂದ ಹೊಸ ಹುಬ್ಬಳ್ಳಿಯನ್ನೂ ಅದರ ಬಳಿಯಲ್ಲಿ ಹೊಸದೊಂದು ಕೋಟೆಯನ್ನೂ ಕಟ್ಟಿಸಿದನು. ಈ ಹೊಸ ಹುಬ್ಬಳ್ಳಿಯು ಯೆಲ್ಲ ಕಡೆಯಲ್ಲಿ ಬಹಳವಾಗಿ ಬೆಳೆದದ್ದರಿಂದ ಇದರಲ್ಲಿ ವೊಂಬತ್ತು ಸಣ್ಣ ಸಣ್ಣ ಹಳ್ಳಿಗಳು ಕೂಡಿ ಕೊಂಡಿರುತ್ತವೆ. ಅವು — ಬೊಮ್ಮಾಪುರ, ಮರಿಯನ ತಿಮ್ಮಸಾಗರ, ಮಾದಿನಾಯಕನ ಅರಳೀ ಕಟ್ಟಿ, ಬಿಡನಾಳ, ಯೆಲ್ಲಾಪುರ, ವೀರಾಪುರ, ನಾರಾಯಣಪುರ, ನಾಗಶೆಟ್ಟೀ ಕೊಪ್ಪ, ಕೇಶವಪುರ. ಈ ಪಟ್ಟಣದಲ್ಲಿ ಹಳೆ ಹುಬ್ಬಳ್ಳಿ, ಹೊಸ ಹುಬ್ಬಳ್ಳಿ, ನೆರೆ ಹಳ್ಳಿಗಳು, ಯೆಂಬ ಮೂರು ವಿಭಾಗಗಳನ್ನು ಮಾಡ ಬಹುದು.

ಸನ್ ೧೮೨೩-೨೪ರಲ್ಲಿ ಹಳೆ ಕೋಟೆಯು ಬಹಳವಾಗಿ ಹಾಳಾಗಿದ್ದಿಲ್ಲ; ಅದರಲ್ಲಿ ಯೆರಡು ಶೀ ನೀರಿನ ಬಾವಿಗಳೂ, ಯೇಳು ಸೌಳು ನೀರಿನ ಬಾವಿಗಳೂ ಇದ್ದವು. ಹಳೆ ಹುಬ್ಬಳ್ಳಿಯಲ್ಲಿ ೪೧೬ ಮನೆಗಳು, ೫೦೮ ಮಗ್ಗಗಳು, ೮೯ ಅಂಗಡಿಗಳು, ೧೧ ಗಾಣಗಳು ಇದ್ದವು; ೧೦ ಶೀ ನೀರಿನ ಬಾವಿಗಳೂ ೩೮ ಸೌಳು ನೀರಿನ ಬಾವಿಗಳೂ ಇದ್ದವು. ಕೋಟೆಯಲ್ಲಿಯೂ ಊರೊಳಗೂ ಕೂಡಿ ೨೯ ಗುಡಿಗಳು, ೨೨ ಮಠಗಳು, ೧೨ ಮಶೀದಿಗಳು ಇದ್ದವು.

ಹಳೆ ಕೋಟೆಯು. — ಕ್ಷೇತ್ರ ೨೩½ ಯೆಕರು, ಮನೆಗಳು ೨೨೫, ನಿವಾಸಿಗಳು ೧೦೦೦; ಇವರಲ್ಲಿ ಸುಮಾರು ೬೦೦ ಜನ ಬ್ರಾಹ್ಮಣರು, ಉಳಿದವರು ಮುಸಲ್ಮಾನ ಸೇಕಾರರು, ವೊಕ್ಕಲಿಗರು. ಕೋಟೆಗೆ ಪೂರ್ವಕ್ಕೂ ಪಶ್ಚಿಮಕ್ಕೂ ಅಗಸೆಗಳಿದ್ದವು; ಪೂರ್ವಕ್ಕೆ ವೊಂದರೊಳಗೊಂದು ಮೂರು ಅಗಸೆಗಳು, ಪಶ್ಚಿಮಕ್ಕೆ ಅದರಂತೆ ಯೆರಡು ಅಗಸೆಗಳು. ಆದರೆ ಇವೆಲ್ಲ ಅಗಸೆಗಳೂ ಸುತ್ತಲಿನ ಕೋಟೆಯೂ ಈಗ ಬಿದ್ದು ನೆಲಸಮ ಆಗಿರುತ್ತವೆ. ಕಂದಕದೊಳಗೆ ಮುಳ್ಳಗಳ್ಳಿ ಬೆಳೆದದೆ. ಕೋಟೆಯೊಳಗಿನ ಮನೆಗಳಾದರೂ ಬಹಳ ಹಳೇವಿರುತ್ತವೆ. ಹಳೆ ಹುಬ್ಬಳ್ಳಿಯ ಊರಿಗೆ ಕೋಟೆ ಇತ್ತೆಂದು ತೋರುವದಿಲ್ಲ; ಆದರೂ ಹಲವು ಅಗಸೆಗಳುಂಟು. ಮನೆಗಳು ಕೋಟೆಯೊಳಗಿನ ಮನೆಗಳಂತೆ ಹಳೆವೇ ಇರುತ್ತವೆ; ಆದರೂ ಅಷ್ಟು ಹಳೆವಲ್ಲ.

ಹೊಸ ಕೋಟೆ. — ಕೋಟೆಯ ಕ್ಷೇತ್ರವು ೮ ಯೆಕರು, ಮನೆಗಳು ೧೪೭, ನಿವಾಸಿಗಳು ೭೫೦, ಬಹುತರ ಜಿನಿವಾರರೂ, ವಕೀಲರೂ, ಸರಕಾರೀ ಕಾಮದಾರರೂ ಮುಂತಾದ ಬ್ರಾಹ್ಮಣರು. ಮಾಮಲೇದಾರ ಕಚೇರಿ, ಮುನಸಿಫ ಕೋರ್ಟು, ಪಂಚ ಕಚೇರಿ,

ಇವು ಕೋಟೆಯೊಳಗೇ ಇರುತ್ತವೆ; ನೂರು ಶೀ ನೀರಿನ ಸೇದುವ ಬಾವಿಗಳಿವೆ. ಅಗಸೆ ವೊಂದೇ ಇರುತ್ತದೆ; ಆದರೂ ವೊಂದರೊಳಗೊಂದು ಯೆರಡು ಬಾಗಿಲುಗಳಿವೆ; ಹೊರಗಿನ ಬಾಗಿಲು ಈಗ ಬಿದ್ದದೆ. ಕೋಟೆಯ ಗೋಡೆಯು ಅಷ್ಟು ಭದ್ರವಾದದ್ದಲ್ಲ; ಅದನ್ನು ಬಹಳ ಕಡೆಯಲ್ಲಿ ಕೆಡವಿ, ಕಂದಕವನ್ನು ತುಂಬಿ ಮಾರ್ಗಗಳನ್ನು ಮಾಡಿದ್ದಾರೆ. ಹೊಸ ಹುಬ್ಬಳ್ಳಿಯ ಊರ ಸುತ್ತು ಮುತ್ತು ಗೋಡೆಯನ್ನು ಯೆಂದೂ ಕಟ್ಟಿದಂತೆ ತೋರುವದಿಲ್ಲ; ಆದರೂ ನಾಲ್ಕೂ ಅಗಸೆಗಳಿರುತ್ತವೆ. ಹೊಸ ಹುಬ್ಬಳ್ಳಿಯಲ್ಲಿ ಆರಂಭದಲ್ಲಿ ಆರು ಪೇಟೆಗಳಿದ್ದವು. ಆದರೆ ಅವು ಈಗ ವೊಂದರೊಳಗೊಂದು ಕೂಡಿ ವಿಂಗಡಿಸಲಿಕ್ಕೆ ಬರುವ ಹಾಗಿಲ್ಲ.

ಈ ಪಟ್ಟಣದ ರಿವಿಜನ್ ಸರ್ವೇ ಆಗುವ ಕಾಲಕ್ಕೆ ಅಳಿಯುವವರು **ಅ, ಬ, ಕ, ಡ,** ಯೆಂಬ ನಾಲ್ಕು ವಿಭಾಗಗಳನ್ನು ಮಾಡಿದ್ದಾರೆ. ಅ ವಿಭಾಗದಲ್ಲಿ ಹೊಸ ಹುಬ್ಬಳ್ಳಿಯ ಆಗ್ನೇಯ ಭಾಗ, ಬಿದನಾಳ, ನಾರಾಯಣಪುರ, ಯೆಲ್ಲಾಪುರ, ಬೊಮ್ಮಾಪುರ, ವೀರಾಪುರ, ಇಷ್ಟೆಲ್ಲ ಬರುತ್ತವೆ. ಇದರಲ್ಲಿ ಬ್ರಾಹ್ಮಣರು, ಚಿನಿವಾರರು, ಲಿಂಗವಂತ ವ್ಯಾಪಾರಸ್ಥರು, ಅಂಗಡಿಕಾರರು, ವೊಕ್ಕಲಿಗರು ಮುಂತಾದವರು ವಾಸಿಸುತ್ತಾರೆ; ಜಮ್ಮಖಾನೆ ಮುಂತಾದವುಗಳನ್ನು ನೆಯ್ಯುವ ಮುಸಲ್ಮಾನ ನೇಕಾರರೂ ಹಿಂದೂ ನೇಕಾರರೂ ಇದೇ ಭಾಗದಲ್ಲಿ ಇರುತ್ತಾರೆ. ರಾಬರ್ಟಸನ್ ಮಾರ್ಕೇಟು, ವಿಠೋಬ, ವೆಂಕಟರಮಣ, ರಾಧಾಕೃಷ್ಣ, ಯೆಂಬ ದೇವರ ಗುಡಿಗಳು, ಈ ಭಾಗದಲ್ಲಿ ಇರುತ್ತವೆ. ಬ ಭಾಗವು ಹಳೇ ಹುಬ್ಬಳ್ಳಿಯೇ ಇರುತ್ತದೆ. ಇದನ್ನು ಮುಂದೆ ವಿವರಿಸಿದ್ದೇವೆ. ಕ ಭಾಗದೊಳಗೆ ತಿಮ್ಮಸಾಗರ, ನಾಗಶಟ್ಟೀ ಕೊಪ್ಪ, ಮಾದಿನಾಯಕನ ಅರಳೀ ಕಟ್ಟೆ, ಈ ಹಳ್ಳಿಗಳ ಭಾಗಗಳು ಬರುತ್ತವೆ. ಇದರಲ್ಲಿ ಮಿಶನರಿಗಳ ಮನೆ, ಚರ್ಚ, ಶಾಲೆಗಳು, ಯೆಲ್ಲ ಬಗೆಯ ದೇಶೀ ಕ್ರಿಸ್ತೀ ಜನರು, ನೂಲುವ ನೆಯ್ಯುವ ಯಂತ್ರದ ಕಾರಖಾನೆ, ಅರಳೇ ವೊತ್ತುವ ಕಾರಖಾನೆ, ಮುಶಾಫರೀ ಬಂಗಲೆ, ಬೇರೆ ಕೆಲವು ಬಂಗಲೆಗಳು, ಯೆರಡು ಧರ್ಮಶಾಲೆಗಳು, ಗುರು ಶಿದ್ಧಪ್ಪನ ಮಠ, ಗುರು ಶಿದ್ಧಪ್ಪನ ಹೊಂಡ, ಹದಿನೈದು ಹಿಂದೂ ಜನರ ಓಣಿಗಳು, ಇರುತ್ತವೆ. ಡ ಭಾಗದೊಳಗೆ ಅರಳೀ ಕಟ್ಟೆಯ ಭಾಗ, ಕೇಶವಪುರ, ನಾಗಶಟ್ಟಿಯ ಕೊಪ್ಪ, ಹೊಸ ಹುಬ್ಬಳ್ಳಿಯ ಕೋಟೆ, ಇಷ್ಟು ಭಾಗಗಳು ಬರುತ್ತವೆ. ಇದರಲ್ಲಿ ಕಲೆಕ್ಟರನ ಬಂಗಲೆ, ಅರಳೆಯ ಇನಸ್ಪೆಕ್ಟರನ ಬಂಗಲೆ, ತಂತಿಟಪಾಲ ಕಚೇರಿ, ಹೊಸ ಕೋರ್ಟಿನ ಇಮಾರತು, ಇರುತ್ತವೆ. ಇವಲ್ಲದೆ ಈ ಭಾಗದಲ್ಲಿ ಆರೇ ವೊಕ್ಕಲಿಗರು, ಕೂಲಿಕಾರರು, ಪಟವೇಗಾರರು, ನೇಕಾರರು, ಬಣಜಿಗರು, ಬೋಗಾರರು, ಬುರಡರು, ಕುರುಬರು, ಬೇಡರು, ಮುಂತಾದ ಹಿಂದೂ ಜನರು ವಾಸಿಸುತ್ತಾರೆ.

ಹಳೇ ಹುಬ್ಬಳ್ಳಿಯ ಊರು, ಕೋಟೆ, ಕೂಡಿ ಬ ಭಾಗವು. ಇದರೊಳಗೆ ಕೃಷ್ಣಾಪುರ, ಅಯೋಧ್ಯಾ, ತಿಮ್ಮಸಾಗರದ ಭಾಗ, ಬೊಮ್ಮಾಪುರದ ಭಾಗ, ಬರುತ್ತವೆ. ಇದರಲ್ಲಿ ಭಿಕ್ಷುಕ ಬ್ರಾಹ್ಮಣರು, ಚಿನಿವಾರರು, ಬಣಜಿಗರರು, ವೊಕ್ಕಲಿಗರು, ಕೂಲಿಕಾರರು, ಚನ್ನ ಪೇಟೆಯಲ್ಲಿ ಹಟಗಾರರು, ಕೃಷ್ಣಾಪುರದಲ್ಲಿ ಸಮ್ಮಗಾರರೂ ಹೊಲಿಯರೂ ಇರು

ತ್ತಾರೆ. ಇಲ್ಲಿಯ ಓಣಿಗಳು ಸಣ್ಣವು, ಡೊಂಕ, ಹೊಲಸು; ಹಾಳು ಮನೆಗಳನ್ನು ಅಲ್ಲಲ್ಲಿಗೆ ಕಾಣ ಬಹುದು.

ಸನ್ ೧೮೮೧ರ ಖಾನೇಸುಮಾರಿಯ ಸಂಖ್ಯೆವು ೩೬೬೭೭ ಯೆಂದು ಮೇಲೆ ಹೇಳಿದ್ದೇವೆ. ಇದರಲ್ಲಿ ೨೫೪೭೧ ಹಿಂದೂ ಜನರು, ೧೦೯೦೩ ಜನ ಮುಸಲ್ಮಾನರು, ೨೯೮ ಜನ ಕ್ರಿಸ್ತಿಗಳು. ಹೋದ (೧೮೯೧) ಖಾನೇಸುಮಾರಿಯಲ್ಲಿ ಹುಬ್ಬಳ್ಳಿಯ ನಿವಾಸಿಗಳ ಅಂದಾಜು ಸುಮಾರು ೫೦ ಸಾವಿರ ಆಗಿರುತ್ತದೆ. ನಿಜವಾದ ಸಂಖ್ಯೆವು ಇನ್ನೂ ಪ್ರಸಿದ್ಧವಾಗಿಲ್ಲ. ಹೊಗೆಬಂಡಿ ಬಂದದ್ದರಿಂದ ಧಾರವಾಡದ ಸಂಖ್ಯೆ ಬೆಳೆದಂತೆ ಹುಬ್ಬಳ್ಳಿಯ ಸಂಖ್ಯೆವಾದರೂ ಬಹಳ ಬೆಳೆದದೆ.

ಹವೆ.—ಹುಬ್ಬಳ್ಳಿಯ ಹವೆಯು ಧಾರವಾಡಕ್ಕಿಂತ ಸ್ವಲ್ಪ ಶಕೆಯುಳ್ಳದ್ದು; ಆದ್ದರಿಂದ ಜ್ವರೋಪದ್ರವವು ತುಸು ಕಡಿಮೆಯೆಂದು ಹೇಳ ಬಹುದು. ಆದರೆ ಪಟಕೀ ಬೇನೆ ಬಂದಾಗ ಧಾರವಾಡಕ್ಕಿಂತ ಉಗ್ರ ಸ್ವರೂಪದ್ದಿರುತ್ತದೆ. ಒಟ್ಟಿಗೆ ಹವೆಯು ಆರೋಗ್ಯದ್ದೆಂಬದಕ್ಕೆ ಸಂಶಯವಿಲ್ಲ. ಮಳೆಯು ೧೮ರಿಂದ ೪೩ ಇಂಚಿನ ವರೆಗೆ, ಅಂದರೆ ಸರಾಸರೀ ೨೮ ಇಂಚು ಆಗುತ್ತದೆ.

ನೀರು.—ಹೊಸ ಹುಬ್ಬಳ್ಳಿಯ ಉತ್ತರಕ್ಕೆ ಇರುವ ತಿರಕಾರಾಮನ ಕೆರೆಯೇ ಮುಖ್ಯ ಜಲಾಶಯವು. ಸುಮಾರು ೧೦೦ ವರ್ಷಗಳ ಹಿಂದೆ ತಿರಕಾರಾಮನೆಂಬ ರಜಪೂತ ಕುಲದ ವೊಕ್ಕಲಿಗನು ಯೆರಡು ಯೆತ್ತರವಾದ ದಿನ್ನೆಗಳ ನಡುವೆ ವೊಡ್ಡು ಹಾಕಿ ಈ ಕೆರೆಯನ್ನು ಮಾಡಿದನೆಂದು ಹೇಳುತ್ತಾರೆ. ಸನ್ ೧೮೪೦ರಲ್ಲಿ ಸರಕಾರದವರು ಹೊಸ ವೊಡ್ಡು ಹಾಕಿ ಕೆರೆಯನ್ನು ಬೆಳಿಸಿದರು. ಮುಂದೆ ಸನ್ ೧೮೫೫ರಲ್ಲಿ ಮ್ಯುನಿಸಿಪಾಲಿಟಿಯ ಸ್ಥಾಪನೆಯಾದ ಕೂಡಲೆ ಮತ್ತೊಂದು ಹೊಸ ವೊಡ್ಡು ಹಾಕಿ ೫ ಯೆಕರು ಕ್ಷೇತ್ರವನ್ನು ಬೆಳಿಸಿದರು. ಈಗ ಕೆರೆಯ ಕ್ಷೇತ್ರವು ೫೯ ಯೆಕರು ಇರುತ್ತವೆ. ಪುಣೆಯಿಂದ ಹರಿಹರಕ್ಕೆ ಹೋಗುವ ದೊಡ್ಡ ಮಾರ್ಗವು ಈ ಕೆರೆಯ ವೊಡ್ಡಿನ ಮೇಲಿಂದ ಹೋಗುತ್ತದೆ. ಈ ಕೆರೆಯಿಂದ ನೀರು ಗುರುಸಿದ್ದಪ್ಪನ ಹೌದಿಗೆ ಹೋಗಿ ಅಲ್ಲಿಂದ ಭೂಸ ಪೇಟೆಯ ಹೌದಿಗೆ ಹೋಗುತ್ತದೆ. ಹಳೆ ಹುಬ್ಬಳ್ಳಿಯ ಪಶ್ಚಿಮಕ್ಕೆ ಕೃಷ್ಣಾಪುರದ ಹದ್ದಿನೊಳಗೆ ಹೆಗ್ಗೆರೆಯೆಂಬ ಹಳೆ ಕೆರೆಯುಂಟು. ಈ ಕೆರೆಯಿಂದ ಭವಾನೀ ಶಂಕರನ ಗುಡಿಯ ಹತ್ತರಕ್ಕೆ ಇರುವ ಹೊಂಡಕ್ಕೆ ನೀರು ಹೋಗುತ್ತದೆ. ಹೊಸ ಹುಬ್ಬಳ್ಳಿಯ ಪೂರ್ವಕ್ಕೆ ಅರ್ಧ ಮೈಲಿನ ಮೇಲೆ ಕರಕೀ ಹಳ್ಳದ ಕೆರೆಯುಂಟು. ಇದನ್ನು ಸನ್ ೧೮೫೬ರಲ್ಲಿ ಗಾರ್ಡನ್ನನೆಂಬ ಅಸಿಸ್ಟಾಂಟ ಕಲೆಕ್ಟರನು ಕರಿಕೀ ಹಳ್ಳಕ್ಕೆ ವೊಡ್ಡು ಹಾಕಿ ಕಟ್ಟಿಸಿದನು. ಇದರಲ್ಲಿ ವಸ್ತ್ರಗಳನ್ನು ವೊಗೆಯುವರು, ದನಗಳಿಗೆ ನೀರು ಕುಡಿಸುವರು. ಇವಲ್ಲದೆ ಊರಿನ ಸುತ್ತು ಮುತ್ತು ಯೆರಡು ಮೂರು ಸಣ್ಣ ಕೆರೆಗಳಿರುತ್ತವೆ. ಅವು ಬೇಸಿಗೆಯಲ್ಲಿ ವೊಣಗುತ್ತವೆ.

ಈ ಕೆರೆಗಳಲ್ಲದೆ ಹೊಸ ಹುಬ್ಬಳ್ಳಿಯಲ್ಲಿ ೩೮೬ ಸೀ ನೀರಿನ ಬಾವಿಗಳೂ, ೨೫೦ ಸೌಳು ನೀರಿನ ಬಾವಿಗಳೂ ಇರುತ್ತವೆ; ಹಳೆ ಹುಬ್ಬಳ್ಳಿಯಲ್ಲಿ ೧೦೦ ಸೀ ನೀರಿನ ಬಾವಿಗಳೂ ೧೫೦ ಸೌಳು ನೀರಿನ ಬಾವಿಗಳೂ ಇರುತ್ತವೆ. ಎರಡೂ ಹುಬ್ಬಳ್ಳಿಗಳ ನಡುವೆ

ವೊಂದು ಹಳ್ಳವು ಹರಿಯುತ್ತದೆ. ಹಳೆ ಹುಬ್ಬಳ್ಳಿಯ ಪಶ್ಚಿಮಕ್ಕೆ ಕೆಲವು ಬನಗಳೂ ತೋಟಗಳೂ ಇರುತ್ತವೆ. ತೋಟಗಳಲ್ಲಿ ಪಲ್ಲೆಗಳು, ಬಾಳೆ, ಕಬ್ಬು, ಮುಂತಾದವು ಬೆಳೆಯುತ್ತವೆ. ಒಂದು ತೋಟದ ಮಧ್ಯದಲ್ಲಿ ಕಲ್ಲಿನಿಂದ ಬಹು ಅಂದವಾಗಿ ಕಟ್ಟಿದ್ದೊಂದು ದೊಡ್ಡ ಬಾವಿಯುಂಟು. ಅದಕ್ಕೆ ಸತ್ಯಪೂರ್ಣತೀರ್ಥರ ಬಾವಿಯೆಂದೆನ್ನುವರು. ಅದನ್ನು ವೊಬ್ಬ ಬ್ರಾಹ್ಮಣನು ಸನ್ ೧೭೦೪ರಲ್ಲಿ ಕಟ್ಟಿಸಿದನೆಂದು ಅದರ ಮೇಲೆ ಇರುವ ಲಿಪಿಯಿಂದ ತಿಳಿಯುತ್ತದೆ.

ಹುಬ್ಬಳ್ಳಿಯಲ್ಲಿ ಇಷ್ಟು ಜಲಾಶಯಗಳಿದ್ದಾಗ್ಯೂ ಬೇಸಿಗೆಯಲ್ಲಿ ನೀರಿನ ತಾಪತ್ರಯವಾಗುತ್ತದೆ. ಮಳೆ ಕಡಿಮೆಯಾದ ವರ್ಷ ಕುಡಿಯುವ ನೀರು ದೊರಿಯುವದು ಕಷ್ಟವಾಗುತ್ತದೆ. ಆದ್ದರಿಂದ ಸರಕಾರದವರೂ, ರೇಲ್ವೇ ಕಂಪನಿಯವರೂ, ಮ್ಯುನಿಸಿಪಾಲಿಟಿಯವರೂ ಕೂಡಿ ಯೆರಡು ಮೂರು ಲಕ್ಷ ರೂಪಾಯಿ ವೆಚ್ಚ ಮಾಡಿ ಉಣಕಲ್ಲಿನ ಹತ್ತರ ದೊಡ್ಡದೊಂದು ಕೆರೆ ಕಟ್ಟಿಸಿ ಊರೊಳಗೆ ನಳ ತರುವ ಕೆಲಸವನ್ನು ಸದ್ಯಕ್ಕೆ ನಡಿಸಿದ್ದಾರೆ. ಈ ಕೆಲಸ ಮುಗಿಯಲಿಕ್ಕೆ ಸುಮಾರು ಯೆರಡು ವರ್ಷ ಬೇಕಾಗುವದೆಂದು ಹೇಳುತ್ತಾರೆ.

**ವಿದ್ಯದ ಬೆಳುವಣಿಗೆ.**—ಹುಬ್ಬಳ್ಳಿಯಲ್ಲಿ ವೊಟ್ಟಿಗೆ ೨೬ ಶಾಲೆಗಳಿರುತ್ತವೆ. ಇವುಗಳಲ್ಲಿ ೧೩ ಸರಕಾರೀ, ೧೩ ಮಿಶನರೀ ಮುಂತಾದ ಖಾಸಗೀ ಶಾಲೆಗಳು. ಸರಕಾರೀ ಶಾಲೆಗಳಲ್ಲಿ ೧ ಇಂಗ್ಲಿಷ, ೧ ಮರಾಠಿ, ೧ ಹಿಂದುಸ್ತಾನೀ, ೩ ಹೆಣ್ಣು ಮಕ್ಕಳವು, ೬ ಗಂಡು ಹುಡುಗರ ಕನ್ನಡ ಶಾಲೆಗಳು, ೧ ಹೊಲೆ ಮಾದಿಗರ ಶಾಲೆ. ಖಾಸಗೀ ಶಾಲೆಗಳಲ್ಲಿ ೭ ಕನ್ನಡ, ೪ ಮರಾಠೀ, ೧ ಸಂಸ್ಕೃತ, ೧ ಹಿಂದುಸ್ತಾನೀ. ಈ ೨೬ ಶಾಲೆಗಳಲ್ಲಿ ಕೂಡಿ ಸನ್ ೧೮೮೩ರಲ್ಲಿ ವೊಟ್ಟಿಗೆ ೨೩೯೯ ವಿದ್ಯಾರ್ಥಿಗಳು ಕಲಿಯುತ್ತಿದ್ದರು; ಇವರಲ್ಲಿ ಹೆಣ್ಣು ಮಕ್ಕಳು ೪೯೨. ಇಂಗ್ಲಿಷ ಶಾಲೆಯಲ್ಲಿ ೧೧೮ ಜನ ವಿದ್ಯಾರ್ಥಿಗಳಿದ್ದರು.

ಊರೊಳಗೆ ಪುಸ್ತಕಾಲಯ ವೊಂದು ಇರುತ್ತದೆ. ಅದಕ್ಕೆ ಮ್ಯುನಿಸಿಪಾಲಿಟಿಯವರು ವರ್ಷಕ್ಕೆ ಸುಮಾರು ೧೦೦ ರೂಪಾಯಿ ಕೊಡುವದಲ್ಲದೆ ವರ್ಗಣಿಯ ಹಣವು ಸುಮಾರು ೮೦ ರೂಪಾಯಿ ವರ್ಷಕ್ಕೆ ಬರುತ್ತದೆ. ಆದರೆ ಅದರಲ್ಲಿ ಪುಸ್ತಕಗಳ ಸಂಗ್ರಹವು ಸ್ವಲ್ಪವಿರುತ್ತದೆ. ಮ್ಯುನಿಸಿಪಾಲಿಟಿಯ ಆಶ್ರಯವಿದ್ದದ್ದರಿಂದ ಪುಸ್ತಕಾಲಯವು ವೊಳಿತಾಗಿ ನಡಿಯುತ್ತದೆಂದು ಹೇಳ ಬಹುದು.

**ಕೈಗಾರಿಕೆಗಳು.**—ಹುಬ್ಬಳ್ಳಿಯ ವಸ್ತ್ರಗಳೂ ಪಾತ್ರೆಗಳೂ ಈ ಶೀಮೆಯಲ್ಲಿ ಹೆಸರಾಗಿರುತ್ತವೆ. ನೇಕಾರರ ಮನೆಗಳು ವೊಟ್ಟಿಗೆ ೧೮೭೫ ಇರುತ್ತವೆ. ಇವರು ಧೋತ್ರ, ವಲ್ಲಿ, ಶೀರೆ, ಕಿರಿಗಿ, ಖಣ, ಮುಂತಾದ ನಾನಾ ಪ್ರಕಾರದ ವಸ್ತ್ರಗಳನ್ನು ನೂರಾರು ರೂಪಾಯಿ ಬೆಲೆ ಬಾಳುವ ಹಾಗೆ ನೆಯ್ಯುತ್ತಾರೆ. ಇಲ್ಲಿಯ ನೇಕಾರರು ಬೆಲೆಯುಳ್ಳ ಪೀತಾಂಬರಗಳನ್ನು ಸಹ ನೆಯ್ಯುತ್ತಾರೆ; ಆದರೆ ಹೇಳಿ ಮಾಡಿಸಿದ ಹೊರ್ತು ನೆಯ್ಯುವದಿಲ್ಲ. ಧಾರವಾಡ ಜಿಲ್ಲೆಯ ನಿವಾಸಿಗಳೆಲ್ಲರು ಬಹುತರ ಹುಬ್ಬಳ್ಳಿಯ ಧೋತ್ರಗಳನ್ನೂ ಶೀರೆಗಳನ್ನೂ ಕೊಳ್ಳುವರು. ಕಾನಡಾ ಜಿಲ್ಲೆಯಲ್ಲಿಯೂ ಈ ವಸ್ತ್ರಗಳ

ವ್ಯಾಪಾರವು ಬಹಳವಾಗುತ್ತದೆ. ಧಪೋತಿಯ ಸನಗುಗಳು ವೊಳಿತಾಗಿ ತಾಳುವದರಿಂದ ಅವುಗಳಿಗೆ ಗಿರಾಕಿ ಬಹಳ—ತಂಬಟಗಾರರ ಮನೆಗಳು ೩೫೦ ಇರುತ್ತವೆ. ಪಂಚಾಳರು, ಮುಸಲ್ಮಾನರು, ಮಹಾರಾಷ್ಟ್ರರು, ಕುರುಬರು ಸಹ ಪಾತ್ರೆಗಳನ್ನು ಮಾಡುತ್ತಾರೆ. ದೊಡ್ಡ ದೊಡ್ಡ ಹಂಡೆಗಳು, ಕೊಳಗಗಳು, ಪಾತೇಲಿಗಳು, ಆಗುವದಲ್ಲದೆ ನಿತ್ಯದ ಕೆಲಸಕ್ಕೆ ಬೇಕಾಗುವ ಕೊಡ ತಪೇಲಿ, ಬೋಗುಣಿ, ಸವಿಟು, ಮುಂತಾದ ಪಾತ್ರೆಗಳು ಹೇರಳವಾಗಿ ಹುಟ್ಟುತ್ತವೆ. ಈ ವೂರಲ್ಲಿ ಹುಟ್ಟುವ ಪಾತ್ರೆಗಳು ದಕ್ಷಿಣದಲ್ಲಿ ಮೈಸೂರಿನ ವರೆಗೂ ಉತ್ತರದಲ್ಲಿ ಮಿರ್ಜಸಾಂಗಲಿಗಳ ವರೆಗೂ ಹೋಗುತ್ತವೆಂದು ಹೇಳುತ್ತಾರೆ. ಇದಲ್ಲದೆ ಬೇರೆ ಕೈಗಾರಿಕೆಯ ವೊಡವೆಗಳನ್ನು ಹುಟ್ಟಿಸುವವರ ವಿವರ ಹ್ಯಾಗಂದರೆ—ಕುಂಬಾರರ ಮನೆಗಳು ೫೫, ಅತ್ತಾರರ ಮನೆಗಳು ೩೫, ಬುರುಡರ ಮನೆಗಳು ೪೦, ನೀಲಗಾರರ ಮನೆಗಳು ೫೨, ಕಂದೀಲು ಮಾಡುವ ರಜಪೂತರ ಅಂಗಡಿಗಳು ೪, ನಾಶೀ ಪುಡಿ ಮಾಡುವವರ ಅಂಗಡಿಗಳು ೪, ಕುಂಕುಮ ಮಾಡುವವರ ಮನೆಗಳು ೧೫, ಚಿತ್ರಗಾರರ, ಅಂದರೆ ಜೀನಗಾರರ ಮನೆಗಳು ೫೦, ಚರ್ಮದ ವೊಡವೆಗಳನ್ನು ಮಾಡುವ ಹೊಲಿಯರು ಮಾದಿಗರು, ಡೋರರು, ಸಮ್ಮಗಾರರು, ಈ ನಾಲ್ಕು ಜಾತಿಗಳ ಮನೆಗಳು ೧೫೦.

ವ್ಯಾಪಾರವು.—ಹುಬ್ಬಳ್ಳಿಯು ದಕ್ಷಿಣ ದೇಶದಲ್ಲಿ ಮೊದಲನೇ ಪ್ರತಿಯ ಪೇಟಿಯೆನಿಸುತ್ತದೆ. ವ್ಯಾಪಾರದ ಕಾರಣದಿಂದಲೇ ಈ ಪಟ್ಟಣದ ಜನಸಂಖ್ಯವು ಇಷ್ಟು ಬೆಳೆದದೆ. ದಕ್ಷಿಣದಲ್ಲಿ ಬೆಂಗಳೂರಿನ ವರೆಗೂ ಉತ್ತರದಲ್ಲಿ ಪುಣೆಯ ವರೆಗೂ ಹುಬ್ಬಳ್ಳಿಯಷ್ಟು ದೊಡ್ಡ ಪೇಟೆ ಇಲ್ಲೆಂದು ಹೇಳ ಬಹುದು. ಪೂರ್ವದಲ್ಲಿ ನಾನಾ ಪ್ರಕಾರದ ನಾಣ್ಯಗಳ ಬದಲಾ ಬದಲಿಯಿಂದಲೂ ಹುಂಡಿಯ ವ್ಯಾಪಾರದಿಂದಲೂ ಇಲ್ಲಿಯ ಚಿನಿವಾರರಿಗೆ ಬಹಳ ಲಾಭವಾಗುತ್ತಿತ್ತು. ಆದರೆ ಸರಕಾರೀ ರೂಪಾಯಿ ವ್ಯವಹಾರದಲ್ಲಿ ಬಂದು ಬ್ಯಾಂಕ ನೋಟುಗಳೂ, ಮನೀ ಆರ್ಡರಿನ ವ್ಯವಹಾರವೂ ನಡಿಯ ಹತ್ತಿದಂದಿನಿಂದ ಚಿನಿವಾರರ ವ್ಯವಹಾರವು ಬಹುತರ ಯಾವತ್ತು ನಷ್ಟವಾಯಿತು. ಆದರೆ ಹುಬ್ಬಳ್ಳಿಯ ವ್ಯಾಪಾರದ ಮುಖ್ಯ ಸರಕು ಅರಳೆ ಇರುತ್ತದೆ. ಅರಳೆಯ ಹೊರ್ತು ಧಾನ್ಯ, ವಸ್ತ್ರ, ಪಾತ್ರೆಗಳು, ಚರ್ಮ, ಕೋಡುಗಳು, ಮುಂತಾದ ಸರಕುಗಳು ಇಲ್ಲಿಂದ ಪರ ಪೇಟೆಗೆ ಹೋಗುತ್ತವೆ. ಮುಂಬಯಿ ಅರಿವೆ, ಯುರೋಪದ ಅರಿವೆ, ನೂಲು, ಧಾನ್ಯ, ನೀಲಿ, ಬೆಲ್ಲ, ತೆಂಗಿನಕಾಯಿ, ಅಡಿಕೆ, ಮುಂತಾದವುಗಳು ಪರಪೇಟೆಯಿಂದ ಹುಬ್ಬಳ್ಳಿಗೆ ಬರುತ್ತವೆ. ಸನ್ ೧೮೮೩ನೇ ವರ್ಷದಲ್ಲಿ ಹಬ್ಬಳ್ಳಿಯ ಪೇಟೆಯಲ್ಲಿ ವೊಟ್ಟಿಗೆ ೪೧೦೦೦೦೦ ರೂಪಾಯಿಯ ವ್ಯಾಪಾರವಾಯಿತು. ಇದರಲ್ಲಿ ೩೨೩೬೦೦೦ ರೂಪಾಯಿಯ ಮಾಲು ಹೊರಗಿಂದ ಬಂದದ್ದು, ೮೫೦೦೦೦ ರೂಪಾಯಿಯ ಮಾಲು ಇಲ್ಲೇ ಹುಟ್ಟಿದ್ದು. ಹೊರಗಿಂದ ಬಂದ ಮಾಲಿನಲ್ಲಿ ೧೮೫೬೦೦೦ ರೂಪಾಯಿಯ ಮಾಲು ಈ ಪಟ್ಟಣದಲ್ಲಿಯೇ ಖರ್ಚಾಯಿತು; ಉಳಿದದ್ದು ಪರಪೇಟೆಗೆ ಹೋಯಿತು. ಹೊರಗಿಂದ ಬಂದ ಮಾಲಿನ ವಿವರ ಹ್ಯಾಗಂದರೆ.—

## ಹುಬ್ಬಳ್ಳಿ, ಹೊರಗಿಂದ ಬಂದ ಮಾಲು ೧೮೮೩.

| ಮಾಲು. | ಬೆಲೆ. | ಊರೊಳಗೆ ಖರ್ಚಾದದ್ದು. | ಹೊರಗೆ ಕಳಿಸಿದ್ದು. | ಮಾಲು. | ಬೆಲೆ. | ಊರೊಳಗೆ ಖರ್ಚಾದದ್ದು. | ಹೊರಗೆ ಕಳಿಸಿದ್ದು. |
|---|---|---|---|---|---|---|---|
| ವಸ್ತ್ರ ....... | ೬೦೦೦೦೦ | ೨೦೦೦೦೦ | ೪೦೦೦೦೦ | ಸಕ್ಕರೆ ...... | ೫೦೦೦೦ | ೨೫೦೦೦ | ೨೫೦೦೦ |
| ನೂಲು ...... | ೫೦೦೦೦೦ | ೩೦೦೦೦೦ | ೨೦೦೦೦೦ | ಉಪ್ಪು ...... | ೫೦೦೦೦ | ೪೦೦೦೦ | ೧೦೦೦೦ |
| ರೇಶಿಮೆ ..... | ೩೦೦೦೦೦ | ೨೦೦೦೦೦ | ೧೦೦೦೦೦ | ಮೆಣಸಿನಕಾಯಿ . | ೫೦೦೦೦ | ೨೫೦೦೦ | ೨೫೦೦೦ |
| ಜೋಳ ..... | ೪೦೦೦೦೦ | ೩೦೦೦೦೦ | ೧೦೦೦೦೦ | ಬೆಣ್ಣೆ ....... | ೩೬೦೦೦ | ೩೬೦೦೦ | ,, |
| ಅಕ್ಕಿ ....... | ೪೦೦೦೦೦ | ೨೦೦೦೦೦ | ೨೦೦೦೦೦ | ಪಾತ್ರೆಗಳು .... | ೧೦೦೦೦೦ | ೨೫೦೦೦ | ೭೫೦೦೦ |
| ಗೋಧಿ ...... | ೪೦೦೦೦೦ | ೨೦೦೦೦೦ | ೨೦೦೦೦೦ | ಕಬ್ಬಿಣ ...... | ೨೫೦೦೦ | ೧೫೦೦೦ | ೧೦೦೦೦ |
| ಕಡ್ಲಿ ....... | ೧೦೦೦೦೦ | ೧೦೦೦೦೦ | ,, | ತೊಲೆ ...... | ೨೫೦೦೦ | ೧೫೦೦೦ | ೧೦೦೦೦ |
| ತೊಗರಿ ..... | ೧೦೦೦೦೦ | ೧೦೦೦೦೦ | ,, | | | | |
| ಬೆಲ್ಲ ....... | ೧೦೦೦೦೦ | ೭೫೦೦೦ | ೨೫೦೦೦ | ಒಟ್ಟು ...... | ೩೨೩೬೦೦೦ | ೧೮೫೬೦೦೦ | ೧೩೮೦೦೦೦ |

## ಹುಬ್ಬಳ್ಳಿ, ಊರೊಳಗೆ ಹುಟ್ಟಿದ ಮಾಲು ೧೮೮೩.

| ಮಾಲು. | ಬೆಲೆ. | ಊರೊಳಗೆ ಖರ್ಚಾದದ್ದು. | ಹೊರಗೆ ಕಳಿಸಿದ್ದು. |
|---|---|---|---|
| ವಸ್ತ್ರ .................. | ೬೦೦೦೦೦ | ೨೦೦೦೦೦ | ೪೦೦೦೦೦ |
| ತಾಮ್ರ ಹಿತ್ತಾಳೆಗಳ ಪಾತ್ರೆಗಳು ... | ೨೦೦೦೦೦ | ೨೫೦೦೦ | ೧೭೫೦೦೦ |
| ಕಟ್ಟಿಗೇ ಸಾಮಾನು ಮುಂತಾದದ್ದು . | ೫೦೦೦೦ | ೧೦೦೦೦ | ೪೦೦೦೦ |
| ಒಟ್ಟು ........ | ೮೫೦೦೦೦ | ೨೩೫೦೦೦ | ೬೧೫೦೦೦ |
| ಹೊರಗಿಂದ ಬಂದದ್ದು ........ | ೩೨೩೬೦೦೦ | ೧೮೫೬೦೦೦ | ೧೩೮೦೦೦೦ |
| ಒಟ್ಟು ವ್ಯವಹಾರ .... | ೪೦೮೬೦೦೦ | ೨೦೯೧೦೦೦ | ೧೯೯೫೦೦೦ |

ಈ ವ್ಯಾಪಾರವು ಪೊಳಗಡೆಯಲ್ಲಿ ಹೊಗೆಬಂಡಿ ಬಂದಂದಿನಿಂದ ಬಹಳವಾಗಿ ಬೆಳಿದದೆ.

ನೂಲುವ ನೆಯ್ಯುವ ಯಂತ್ರ.—"ಸದರ್ನ ಮರಾಠಾ ಸ್ಪಿನ್ನಿಂಗ ಆಂಡ್ ವೀವಿಂಗ ಕಂಪನಿಯು" (ದಕ್ಷಿಣ ಮಹಾರಾಷ್ಟ್ರದ ನೂಲುವ ನೆಯ್ಯುವ ಸಂಘ) ಸನ್ ೧೮೮೧ರಲ್ಲಿ ಸ್ಥಾಪನೆಯಾಯಿತು. ಈ ಕಂಪನಿಯವರ ಬಂಡವಲು ೬ ಲಕ್ಷದ್ದಿರುತ್ತದೆ; ಇದರಲ್ಲಿ ೨೫೦ ರೂಪಾಯದ್ದು ವೊಂದೊಂದರಂತೆ ೨೪೦೦ ಹಿಸೆಗಳು (ಶೇಯರ್) ಮಾಡಲ್ಪಟ್ಟವೆ. ಈ ಯಂತ್ರದಲ್ಲಿ ೧೪೦೦೦ ಕದರುಗಳು ಏಕ ಕಾಲಕ್ಕೆ ನೂಲುತ್ತವೆ; ನೆಯ್ಯುವ ಮಗ್ಗಗಳನ್ನು ಮೂಲ ಗ್ರಂಥದ ರಚನೆಯಾದಾಗ (೧೮೮೪) ಇನ್ನೂ ಹೂಡಿದ್ದಿಲ್ಲ. ಈ ನೂಲುವ ನೆಯ್ಯುವ ಯಂತ್ರವನ್ನು ನಡಿಸಲಿಕ್ಕೆ ೪೦೦ ಕುದುರೆಗಳ ಶಕ್ತಿಯುಳ್ಳದ್ದೊಂದು ಉಗಿ ಯಂತ್ರವನ್ನು ಹಚ್ಚಿದ್ದಾರೆ. ಅದು ೨೪ ಫೂಟು ಅಗಲಾದದ್ದೊಂದು ಬಹು ಭಾರವುಳ್ಳಂಥ ಕಬ್ಬಿಣದ ಗಾಲಿಯನ್ನು ತಿರುಗಿಸುತ್ತದೆ. ಆ ಗಾಲಿಯಿಂದ ಯಾವತ್ತು ಕದರುಗಳೂ ಮಗ್ಗಗಳೂ ನಡಿಯುತ್ತವೆ. ಈ ಕಾರಖಾನೆಯ ಕೆಲಸವು ಆರಂಭದಲ್ಲಿ ಯೆರಡು ವರ್ಷ ಚನ್ನಾಗಿ ನಡಿಯಲಿಲ್ಲ. ಆದರೆ ಈಗ ಭಾಗೀದಾರರಿಗೆ ವೊಳಿತಾಗಿ ಲಾಭವಾಗುತ್ತದೆ. ಈ ಯಂತ್ರದಲ್ಲಿ ಹುಟ್ಟುವ ನೂಲು ಧಾರವಾಡ, ಹುಬ್ಬಳ್ಳಿ, ಗದಗು, ಮುಂತಾದ ನೆರೆಹೊರೆಯ ಗ್ರಾಮಗಳಲ್ಲಿಯೇ ಖರ್ಚಾಗುತ್ತದೆ.

ಹತ್ತೀ ಅರಿಯುವ ಯಂತ್ರ.—ಅರಳೆಯ ಸುಗ್ಗಿಯ ಕಾಲಕ್ಕೆ ಯೇಳು ಯಂತ್ರಗಳು ಹತ್ತಿಯನ್ನು ಅರಿಯುತ್ತವೆ. ಉಗಿ ಯಂತ್ರದ ಸಹಾಯದಿಂದ ನಡಿಯುವ ಯೆರಡು ಗಡುತರವಾದ ಕಬ್ಬಿಣದ ರೂಲುಗಳ ಬಾಯಿಗೆ ಹತ್ತಿಯನ್ನು ಕೊಡಲಾಗಿ, ಅದರೊಳಗಿನ ಕಾಳು ಮುಂದೇ ಉದರಿ ಬಿದ್ದು ಅರಿದ ಅರಳಿಯು ರೂಲುಗಳ ಆಚೆಯಲ್ಲಿ ಹೋಗಿ ಬೀಳುತ್ತದೆ. ಒಂದೊಂದು ಯಂತ್ರವು ಪ್ರತಿ ದಿವಸ ೨೬೮೪ ಪೌಂಡು ಹತ್ತಿಯನ್ನು ಅರಿಯುತ್ತದೆ; ಅಂದರೆ ಸುಮಾರು ೧೪೬ ಜನ ಹೆಂಗಸರು ಅರಿಯುವಷ್ಟು ಹತ್ತಿಯನ್ನು ವೊಂದು ಯಂತ್ರವು ಅರಿಯುತ್ತದೆ. ಇಂಥಾ ಯೇಳು ಯಂತ್ರಗಳಲ್ಲಿ ಕೂಡಿ ೧೩೦೨ ಜನ ಹೆಂಗಸರು ಮಾಡುವಷ್ಟು ಕೆಲಸವಾಗುತ್ತದೆ.

ಅರಳೆಯನ್ನು ವೊತ್ತುವ ಯಂತ್ರ.—ಈ ಯಂತ್ರಗಳು ಯೆರಡು ನಡಿಯುತ್ತವೆ. ಇವಕ್ಕೂ ಉಗಿ ಯಂತ್ರವೇ ಚಾಲಕ ಶಕ್ತಿಯು. ಒಂದು ಯಂತ್ರವು ೧೨ ತಾಸಿನೊಳಗೆ ೧೦೦ ಗಂಟುಗಳನ್ನು ವೊತ್ತಿ ಕಟ್ಟುತ್ತದೆ; ಒಂದು ಗಂಟಿನೊಳಗೆ ೩೯೨ ಪೌಂಡು, ಅಂದರೆ ೧೪ ಮಣ ಅರಳೆ ಇರುತ್ತದೆ. ಒಂದು ಗಂಟು ಕಟ್ಟಲಿಕ್ಕೆ ೪ ರೂಪಾಯಿ ಕೂಲಿ ತಕ್ಕೊಳ್ಳುವರು. ಅರಳೆಯನ್ನು ವೊಳಿತಾಗಿ ವೊತ್ತಿ ಸಣ್ಣ ಗಂಟು ಕಟ್ಟಿದರೆ, ಪರದೇಶಕ್ಕೆ ಕಳಿಸುವಾಗ ಹಡಗದೊಳಗೆ ಸ್ವಲ್ಪ ಸ್ಥಳದಲ್ಲಿ ಬಹಳ ಅರಳೆ ನಿಲ್ಲುತ್ತದೆ. ಆದ್ದರಿಂದ ಹೀಗೆ ವೊತ್ತಿ ಗಂಟು ಕಟ್ಟುವರು.

ಮಾರ್ಕೇಟು.—ಧಾರವಾಡದ ಕಲೇಕ್ಟರರಾದ ರಾಬರ್ಟಸನ್ ಸಾಹೇಬರು ಇದನ್ನು ಸನ್ ೧೮೭೪ರಲ್ಲಿ ಕಟ್ಟಿಸಿದರು; ಇದಕ್ಕೆ ೬೫೦೦೦ ರೂಪಾಯಿ ವೆಚ್ಚವಾಯಿತು. ಈ ಮಾರ್ಕೇಟು ಹೊಸ ಹುಬ್ಬಳ್ಳಿಯ ಮಧ್ಯ ಭಾಗದಲ್ಲಿ ಇರುತ್ತದೆ. ಇದರಲ್ಲಿ ೨೬೪ ಮಾರಾಟದ ವಿಭಾಗಗಳನ್ನೂ ಮಾಡಿದ್ದಾರೆ. ಇವುಗಳ ಹೊರ್ತು ಮಾರ್ಕೇಟಿನ ಸುತ್ತು

ಮುತ್ತು ಬಹಳ ಅಂಗಡಿಗಳಿರುತ್ತವೆ. ಈ ಮಾರ್ಕೇಟನಿಂದ ಮ್ಯುನಿಸಿಪಾಲಿಟಿಗೆ ೨೭೦೦ ರೂಪಾಯಿ ಆದಾಯವಾಗುತ್ತದೆ.

ಮ್ಯುನಿಸಿಪಾಲಿಟಿ.—ಹುಬ್ಬಳ್ಳಿಯ ಮ್ಯುನಿಸಿಪಾಲಿಟಿಯು ಸನ್ ೧೮೫೫ರಲ್ಲಿ ಹುಟ್ಟಿತು. ಸನ್ ೧೮೮೩-೮೪ರಲ್ಲಿ ಇದರ ಆದಾಯವು ೩೩೧೮೦ ರೂಪಾಯಿ ಇತ್ತು. ಜಕಾತಿ, ಮನೆ ಪಟ್ಟಿ, ಇವೆರಡೇ ಮುಖ್ಯ ಆದಾಯದ ಬಾಬುಗಳು. ಆರಂಭದಿಂದ ಮ್ಯುನಿಸಿಪಾಲಿಟಿಯವರು ಮಾರ್ಕೇಟನ್ನೂ ೧೩ ಪಾಯಖಾನೆಗಳನ್ನೂ ಕಟ್ಟಿಸಿದ್ದಲ್ಲದೆ ನೀರಿನ ಪುರೋತೆಗಾಗಿ ೬೫೦೦ ರೂಪಾಯಿ ವೆಚ್ಚ ಮಾಡಿದರು. ಇವಲ್ಲದೆ ಊರೊಳಗಿನ ಸಡಕುಗಳನ್ನು ಮಾಡುವದು, ಓಣಿಗಳನ್ನು ಉಡುಗಿಸುವದು, ರಾತ್ರಿಯಲ್ಲಿ ಕಂದೀಲುಗಳನ್ನು ಹಚ್ಚುವದು, ಮುಂತಾದ ಕೆಲಸಗಳು ನಿರಂತರವಾಗಿ ನಡಿದವೆ.

ವಿಶೇಷ ಸ್ಥಳಗಳು.—ಹುಬ್ಬಳ್ಳಿಯಲ್ಲಿ ೩೭ ಗುಡಿಗಳು, ೨೭ ಮಠಗಳು, ೧೭ ಮಶೀದಿಗಳು, ವೊಂದು ಪ್ರಾಟೆಸ್ಟಂಟ ಚರ್ಚವು, ವೊಂದು ರೋಮನ್ ಕ್ಯಾಥೋಲಿಕ್ ಚರ್ಚವು, ಇಷ್ಟು ಧರ್ಮ ಸಂಬಂಧದ ಸಂಸ್ಥೆಗಳು ಇರುತ್ತವೆ. ಭವಾನೀಶಂಕರನ ಗುಡಿಯು ಪುರಾತನ ಕಾಲದ್ದಿರುತ್ತದೆ. ಇದರ ಸಭಾಮಂಟಪದ ಯೆದುರಿಗೆ, ಅಂದರೆ ಪಶ್ಚಿಮಕ್ಕೆ ದೊಡ್ಡದೊಂದು ಗರ್ಭಾಗಾರವಲ್ಲದೆ, ಯೆಡಕ್ಕೂ ಬಲಕ್ಕೂ ವೊಂದೊಂದು ಸಣ್ಣ ಗರ್ಭ ಗುಡಿಗಳಿರುತ್ತವೆ. ಈ ಯೆಡ ಬಲದ ಗರ್ಭ ಗುಡಿಗಳಲ್ಲಿ ವೊಂದರೊಳಗೆ ಲಿಂಗವೂ ಮತ್ತೊಂದರೊಳಗೆ ಗಣಪತಿಯೂ ಉಂಟು; ಇವೆರಡೂ ಸಾಮಾನ್ಯ ತರದ ಮೂರ್ತಿಗಳಿವೆ. ಪಶ್ಚಿಮದ ದೊಡ್ಡ ಗರ್ಭಾಗಾರದಲ್ಲಿ ಮೂರು ಫೂಟು ಯೆತ್ತರವಾದ ಕರೆ ಶಿಲೆಯಿಂದ ಬಹು ಸುಂದರವಾಗಿ ಮಾಡಿದಂಥ ನಾರಾಯಣನ ಮೂರ್ತಿಯುಂಟು. ಈ ಮೂರ್ತಿಯ ಹಿಂದಿನ ಪ್ರಭಾವಳಿಯಲ್ಲಿ ಮನೋಹರವಾಗಿ ಕೊರಿದಂಥ ಬೇರೆ ಮೂರ್ತಿಗಳು ಹಲವುಂಟು. ಈ ನಾರಾಯಣನ ಮೂರ್ತಿಯನ್ನು ವೊಳಗಡೆಯಲ್ಲಿ ಕೂಡ್ರಿಸಿದಂತೆ ಕಾಣುತ್ತದೆ. ಅಡ್ಡ ಬದಿಯ ಗರ್ಭ ಗುಡಿಯಲ್ಲಿ ಇರುವ ಲಿಂಗವೇ ಮೊದಲು ಈ ದೊಡ್ಡ ಗರ್ಭಾಗಾರದಲ್ಲಿ ಇತ್ತೆಂದು ಹೇಳುತ್ತಾರೆ. ಇದೇ ಕಾರಣದಿಂದ ಈ ಗುಡಿಗೆ ನಾರಾಯಣನ ಗುಡಿಯನ್ನದೆ ಭವಾನೀಶಂಕರನ ಗುಡಿಯೆನ್ನುತ್ತಾರೆಂದು ತೋರುತ್ತದೆ. ಈ ಗುಡಿಯ ಹೊರಗೆ ವೊಂದು ಶಿಲಾಲಿಪಿಯುಂಟು. ಅದರಲ್ಲಿ ಶಾಲಿವಾಹನ ಶಕದ ೧೦ನೇ ಶತಕದಲ್ಲಿ ಚಾಲುಕ್ಯರ ಭುವನೈಕ ಮಲ್ಲನೆಂಬ ಅರಸು ಭವಾನೀಶಂಕರನಿಗೆ ಕೆಲವು ಭೂಮಿಯನ್ನು ಕೊಟ್ಟ ಬಗ್ಗೆ ಲೇಖವಿರುತ್ತದೆ.

ಲಿಂಗವಂತರ ಮಠಗಳಲ್ಲಿ ಮೂರು ಸಾವಿರದ ಅಯ್ಯನ ಮಠವು ದೊಡ್ಡದಿರುತ್ತದೆ. ಇದನ್ನು ಭದ್ರವಾಗಿ ಕಟ್ಟಿದ್ದಾರೆ. ಮೂರು ಸಾವಿರದ ಅಯ್ಯನವರ ಇತಿಹಾಸವನ್ನು ಈ ಪ್ರಕಾರ ಹೇಳುತ್ತಾರೆ. ಬಸವೇಶ್ವರನ ಇಪ್ಪತ್ತೊಂದು ಸಾವಿರ ಜನ ಶಿಷ್ಯರಲ್ಲಿ ಹನ್ನೆರಡು ಸಾವಿರ ಗೃಹಸ್ಥರು, ಆರು ಸಾವಿರ ಜಂಗಮರು, ಮೂರು ಸಾವಿರ ವಿರಕ್ತರು ಇದ್ದರು. ಈ ವಿರಕ್ತರ ಮುಖ್ಯಸ್ಥನಿಗೆ ಮೂರು ಸಾವಿರದ ಸ್ವಾಮಿಯೆನ್ನುವರು. ಈ ಸ್ವಾಮಿಯೂ ಮುರಗೀ ಸ್ವಾಮಿಯೂ ಕೂಡಿ ಮೊದಲು ಚಿತ್ರಗಲ್ ದುರ್ಗದಲ್ಲಿ ಇರುತ್ತಿದ್ದರು. ಆಮೇಲೆ

ಮುಂದೆ ಅವರವರೊಳಗೆ ವ್ಯಾಜ್ಯ ಹುಟ್ಟಿದ್ದರಿಂದ ಮೂರು ಸಾವಿರದ ಸ್ವಾಮಿಯು ಅಲ್ಲಿಂದ ಹೊರಟು ಹುಬ್ಬಳ್ಳಿಗೆ ಬರಲಾಗಿ ಬಸಪ್ಪ ಶೆಟ್ಟಿಯು ಅವನನ್ನು ಸತ್ಕರಿಸಿ ಇಟ್ಟು ಕೊಂಡನು. ಬಸಪ್ಪನು ಸನ್ ೧೭೨೭ರಲ್ಲಿ ಹೊಸ ಹುಬ್ಬಳ್ಳಿಯನ್ನು ಕಟ್ಟಿಸಿದಾಗ ಈ ಸ್ವಾಮಿಗೆ ಈಗಿನ ವಿಸ್ತಾರವಾದ ಮಠವನ್ನು ಕಟ್ಟಿಸಿ ಕೊಟ್ಟನು. ಈ ಮಠಕ್ಕೆ ಕೆಲವು ಇನಾಮು ಭೂಮಿಗಳು ನಡಿಯುತ್ತವೆ. ಧಾರವಾಡ ಜಿಲ್ಲೆಯ ಲಿಂಗವಂತರು ಈ ಸ್ವಾಮಿಗೆ ಭಕ್ತಿಯಿಂದ ನಡಕೊಳ್ಳುತ್ತಾರೆ. ಶ್ರಾವಣ ಸೋಮವಾರಗಳಲ್ಲಿ ಬಹು ಜನರು ಸ್ವಾಮಿಯ ದರ್ಶನಕ್ಕೆ ಹೋಗುತ್ತಾರೆ; ಕಡೆಯ ಯೆರಡು ಸೋಮವಾರಗಳಲ್ಲಿ ಸ್ವಾಮಿಯ ಪಾದ ಪೂಜೆಯ ಸಮಾರಂಭವಾಗುತ್ತದೆ.

**ಇತಿಹಾಸವು.**—ಹುಬ್ಬಳ್ಳಿಯು ಪುರಾತನ ಕಾಲದಿಂದ ಹೆಸರಾದ ಗ್ರಾಮವಿರುತ್ತದೆ. ಮೇಲೆ ಹೇಳಿದ ಭವಾನೀಶಂಕರನ ಗುಡಿಯಲ್ಲಿಯ ಲಿಪಿಯಿಂದ ಹುಬ್ಬಳ್ಳಿಯು ಶಾಲಿವಾಹನ ಶಕದ ೧೧ನೇ ಶತಕದಲ್ಲಿ ಇತ್ತೆಂದು ತಿಳಿಯುತ್ತದೆ. ಆದರೆ ಅದಕ್ಕೂ ಪೂರ್ವದ ಲಿಪಿಗಳಲ್ಲಿ ಹುಬ್ಬಳ್ಳಿಯ ಉಲ್ಲೇಖವನ್ನು ಕಾಣ ಬಹುದು. ಹಳೆ ಹುಬ್ಬಳ್ಳಿಗೆ ರಾಯರ ಹುಬ್ಬಳ್ಳಿಯೆಂದೆನ್ನುವರು. ರಾಯರೆಂದರೆ ವಿಜಯನಗರದ ಅರಸರು. ಈ ಅರಸರ ಆಳಿಕೆಯಲ್ಲಿ ಹುಬ್ಬಳ್ಳಿಯು ಅವರ ರಾಜ್ಯಕ್ಕೆ ಸೇರಿತ್ತು. ಸನ್ ೧೫೪೭ರಲ್ಲಿ ವಿಜಯನಗರದ ಅರಸನಿಗೂ ಪೋರ್ತುಗೀಸರಿಗೂ ಆದ ಒಪ್ಪಂದದಲ್ಲಿ ಹುಬ್ಬಳ್ಳಿಯಲ್ಲಿ ಸೋರುಪ್ಪಿನ ವ್ಯಾಪಾರ ಬಹಳ ನಡಿಯುತ್ತಿತ್ತೆಂದು ಬರಿದದೆ. ಸನ್ ೧೬೭೪ರಲ್ಲಿ ಶಿವಾಜಿಯ ಸರದಾರನಾದ ಅಣ್ಣಾಜೀ ದತ್ತೋ ಯೆಂಬವನು ವಿಜಾಪುರದವರ ರಾಜ್ಯವನ್ನು ಹಾಳು ಮಾಡುತ್ತ ಹುಬ್ಬಳ್ಳಿಗೆ ಬಂದು ಅದನ್ನು ಸುಲಿದನು; ಅವನಿಗೆ ಅಪರಿಮಿತ ದ್ರವ್ಯ ದೊರೀತೆಂದು ಹೇಳುತ್ತಾರೆ. ಆಗ ಕಾರವಾಡದಲ್ಲಿ ಇಂಗ್ಲಿಷರ ದೊಡ್ಡದೊಂದು ಅಂಗಡಿ ಇತ್ತು. ಹುಬ್ಬಳ್ಳಿಯವನೊಬ್ಬ ದಲಾಲನು ಸುತ್ತು ಮುತ್ತಲಿನ ಗ್ರಾಮಗಳಲ್ಲಿ ವಸ್ತ್ರಗಳನ್ನು ಖರೇದಿ ಮಾಡಿ ಕಾರವಾಡದ ಇಂಗ್ಲಿಷರಿಗೆ ಕಳಿಸುತ್ತಿದ್ದರು; ಅಲ್ಲಿಂದ ಆ ವಸ್ತ್ರಗಳು ವಿಲಾಯತಿಗೆ ಹೋಗುತ್ತಿದ್ದವು. ಹುಬ್ಬಳ್ಳಿಯನ್ನು ಶಿವಾಜಿಯ ದಂಡಿನವರು ಸುಲಿದಾಗ ಸದರೀ ದಲಾಲನ ಅಂಗಡಿಯಲ್ಲಿ ೨೭೬೨೦ ರೂಪಾಯಿ ಬೆಲೆ ಬಾಳುವ ಇಂಗ್ಲಿಷರ ಮಾಲು ಹೋಯಿತೆಂದು ಹೇಳಿ ಇಂಗ್ಲಿಷರು ಶಿವಾಜಿಗೆ ಅಷ್ಟು ಹಣ ಬೇಡಿದರು. ಆದರೆ ಶಿವಾಜಿಯು ಸುಮಾರು ೭೦೦ ರೂಪಾಯಿಗಿಂತ ನಿಮ್ಮ ಲುಕಸಾನು ಹೆಚ್ಚು ಆಗಿಲ್ಲವೆಂದು ಅವರಿಗೆ ಹೇಳಿ ಕಳಿಸಿದನು. ಸನ್ ೧೬೭೭ರಲ್ಲಿ ದಿಲ್ಲಿಯ ಔರಂಗಜೇಬ ಬಾದಶಹನು ತಾರಿನ್ನನೆಂಬ ಸರದಾರನ ಮಗನಾದ ಶಹಾ ಮಹಮ್ಮದಖಾನನೆಂಬವನಿಗೆ ಹುಬ್ಬಳ್ಳಿ ಸಹಿತ ಕೆಲವು ಶೀಮೆಯನ್ನು ಜಹಾಗೀರು ಹಾಕಿ ಕೊಟ್ಟಿದ್ದನು. ಮುಂದೆ ಸನ್ ೧೬೮೯ರಲ್ಲಿ ಕಿತ್ತೂರಿನ ದೇಸಾಯಿಯ ವಶಕ್ಕೆ ಹುಬ್ಬಳ್ಳಿ ಹೋಯಿತು. ಸನ್ ೧೭೨೭ರಲ್ಲಿ ಬಸಪ್ಪ ಶೆಟ್ಟಿಯು ಹೊಸ ಹುಬ್ಬಳ್ಳಿಯನ್ನು ಕಟ್ಟಿಸಿದನೆಂದು ಮೇಲೆ ಹೇಳಿದ್ದೇವೆ. ಆಗ ಹುಬ್ಬಳ್ಳಿಯು ಸವಣೂರಿನ ನಬಾಬನ ವಶದಲ್ಲಿ ಇತ್ತು. ಸನ್ ೧೭೫೫ರಲ್ಲಿ ಆ ನಬಾಬನು ಈ ಪಟ್ಟಣವನ್ನು ಪೇಶವನಿಗೆ ಕೊಟ್ಟನು. ಸನ್ ೧೭೭೮ರಲ್ಲಿ ಹೈದರನು ದಕ್ಷಿಣ ಮಹಾರಾ

ಪ್ಪುದ ಶೀಮೆಗಳನ್ನು ಆಕ್ರಮಿಸಿದಾಗ ಈ ಊರು ಅವನ ರಾಜ್ಯಕ್ಕೆ ಶೇರಿತು. ಮುಂದೆ ಪುಣೆಯ ಪೇಶವ, ಸವಣೂರಿನ ನಬಾಬ, ಮೈಸೂರು ಸಂಸ್ಥಾನ, ಈ ಮೂರು ಜನ ವೊಡಿಯರ ಅಧಿಕಾರಕ್ಕೆ ಕೆಲ ಕೆಲವು ದಿವಸ ಶೇರಿದ ಬಳಿಕ ಕಡೆಯಲ್ಲಿ ಪಟವರ್ಧನರಿಗೆ ಪೇಶವನು ಕೊಟ್ಟ ಸರಂಜಾಮಿನ ಶೀಮೆಯಲ್ಲಿ ಹುಬ್ಬಳ್ಳಿಯು ಪಟವರ್ಧನರ ವಶಕ್ಕೆ ಹೋಯಿತು; ಬಾಜೀ ರಾಯನ ಆಳಿಕೆಯಲ್ಲಿ ಇದು ಸಾಂಗಲಿಯ ಪಟವರ್ಧನನ ರಾಜ್ಯಕ್ಕೆ ಶೇರಿತ್ತು. ಸನ್ ೧೮೧೮ರಲ್ಲಿ ಬಾಜೀರಾಯನ ರಾಜ್ಯವನ್ನು ಇಂಗ್ಲಿಷರು ತಕ್ಕೊಂಡಾಗ ಜನರಲ್ ಮನ್ರೋನು ಹುಬ್ಬಳ್ಳಿಯನ್ನು ತಕ್ಕೊಂಡನು. ಆದರೂ ಇದು ಆಗ ಸಾಂಗಲಿಯ ಸಂಸ್ಥಾನಿಕನ ವಶದಲ್ಲಿಯೇ ನಿಂತಿತು. ಮುಂದೆ ಸನ್ ೧೮೨೦ರಲ್ಲಿ ಸಾಂಗಲಿಯ ಚಿಂತಾಮಣರಾವ ಅಪ್ಪಾ ಸಾಹೇಬನು ಇಂಗ್ಲಿಷರ ಚಾಕರಿಗೆ ರಾಹುತರನ್ನು ಇಡುವದಕ್ಕೆ ಬದಲಾಗಿ ಅವರಿಗೆ ಕೆಲವು ಶೀಮೆಯನ್ನು ಕೊಟ್ಟದ್ದರಲ್ಲಿ ಹುಬ್ಬಳ್ಳಿಯು ಇಂಗ್ಲಿಷರ ವಶಕ್ಕೆ ಬಂತು. ಸನ್ ೧೮೪೪ರಲ್ಲಿ ಹುಬ್ಬಳ್ಳಿಯಲ್ಲಿ ೫೪೫೮ ಮನೆಗಳಲ್ಲಿ ೩೩೦೦೦ ನಿವಾಸಿಗಳು ಇರುತ್ತಿದ್ದರೆಂದು ಕಪ್ತಾನ ವಿಂಗೇಟನೆಂಬ ಸರದಾರನು ಬರಿದು ಇಟ್ಟದ್ದಾನೆ.

ಹುಲಗೂರು.—ಶಿಗ್ಗಾವಿಯ ಈಶಾನ್ಯಕ್ಕೆ ೮ ಮೈಲಿನ ಮೇಲೆ, ಜ. ಸ. (೮೧) ೨೯೭೩. ಈ ವೂರ ಬಳಿಯಲ್ಲಿ ಹಜರತಶಹಾ ಕಾದೆರಿ ಯೆಂಬ ಫಕೀರನ ಗೋರಿಯುಂಟು. ಈ ಪೀರನ ಜಾತ್ರೆಯು ಮಾಘ ಪೂರ್ಣಿಮೆಯಲ್ಲಿ ಆಗುತ್ತದೆ; ಸುಮಾರು ೫೦೦೦ ಜನ ಕೂಡುತ್ತದೆ. ವೊದಲು ಸವಣೂರಿನ ನಬಾಬನು ಈ ಜಾತ್ರೆಗೆ ಹೋಗುತ್ತಿದ್ದಾಗ ಬಹಳ ಜನ ಕೂಡುತ್ತಿತ್ತು. ಈ ಪೀರನಿಗೆ ೫೦೦ ರೂಪಾಯಿಯ ಭೂಮಿಯು ನಡಿಯುತ್ತಿದ್ದದ್ದಲ್ಲದೆ ೧೫೦ ರೂಪಾಯಿ ನಗದು ದೊರಿಯುತ್ತದೆ. ಹುಲಗೂರಲ್ಲಿ ಸಿದ್ಧಲಿಂಗನ ಗುಡಿಯಲ್ಲಿ ೮ ಲಿಪಿಗಳಿರುತ್ತವೆ; ಅವನ್ನು ಇನ್ನೂ ಯಾರು ಓದಿಲ್ಲ.

ಹೂಲೀ ಹಳ್ಳಿ.—ರಾಣಿಬಿನ್ನೂರ ವಾಯವ್ಯಕ್ಕೆ ಮೂರು ಮೈಲಿನ ಮೇಲೆ. ಒಂದು ಹಾಳು ಕೋಟೆಯೂ ಯೆರಡು ರಾಮೇಶ್ವರನ ಗುಡಿಗಳೂ ಇರುತ್ತವೆ. ಈ ಗುಡಿಗಳಲ್ಲಿ ವೊಂದೊಂದು ಲಿಪಿಗಳು ೧೨ನೇ ಶತಕದವು ಇರುತ್ತವೆ.

ಹುರಳೀ ಕೊಪ್ಪ.—ಬಂಕಾಪುರದ ಪೂರ್ವಕ್ಕೆ ೬ ಮೈಲಿನ ಮೇಲೆ, ಜ. ಸ. (೮೧) ೧೯೯೦. ಈಶ್ವರನ ಗುಡಿಯಲ್ಲಿಯೂ ಬೇರೆ ಕಡೆಯಲ್ಲಿಯೂ ನಾಲ್ಕು ಲಿಪಿಗಳಿವೆ.

ಹುಯಿಲಗೋಳ.—ಗದಗಿನ ಉತ್ತರಕ್ಕೆ ಆರು ಮೈಲಿನ ಮೇಲೆ, ಜ. ಸ. (೮೧) ೧೩೭೫. ರಾಮಲಿಂಗನ ಗುಡಿಯಲ್ಲಿಯೂ ಕಲಮೇಶ್ವರನ ಗುಡಿಯಲ್ಲಿಯೂ ವೊಂದೊಂದಲ್ಲದೆ ಬೇರೆ ಕಡೆಯಲ್ಲಿ ಐದು ಲಿಪಿಗಳಿವೆ.

ಕಚವಿ.—ಕೋಡದ ಈಶಾನ್ಯಕ್ಕೆ ೧೫ ಮೈಲಿನ ಮೇಲೆ. ರಾಮೇಶ್ವರನ ಗುಡಿಯ ಯೆದುರಿಗೆ ವೊಂದು ವೀರಗಲ್ಲಿನ ಮೇಲೆ ಲಿಪಿಯುಂಟು. ಗಣಪತಿಯ ಗುಡಿಯಲ್ಲಿ ಬೇರೊಂದು ಲಿಪಿಯುಂಟು. ಇವೆರಡೂ ೧೨೫೪ನೇ ವರ್ಷ ಆದಂಥವು.

ಕವರಮುಂಡಲಗಿ.—ರಾಣೀಬಿನ್ನೂರಿನ ಪಶ್ಚಿಮಕ್ಕೆ ೯ ಮೈಲಿನ ಮೇಲೆ, ಜ. ಸ. ೧೭೫೩. ಇಲ್ಲಿಯ ಹೆಸರಾದ ಹನುಮಂತನ ಮೂರ್ತಿಯನ್ನು ಜನಮೇಜಯ ರಾಜನು

ಸ್ಥಾಪಿಸಿದನೆಂದು ಹೇಳುತ್ತಾರೆ; ಆದರೆ ಗುಡಿಯಲ್ಲಿ ಇರುವ ಲಿಪಿಯು ೧೫೭೬ನೇ ವರ್ಷದ್ದಿರುತ್ತದೆ.

ಕಾಗಿನೆಲ್ಲಿ.—ಕೋಡದ ಈಶಾನ್ಯಕ್ಕೆ ಮೂರು ಮೈಲಿನ ಮೇಲೆ, ಜ. ಸ. ೧೦೩೦. ಇದು ಪರಗಣೆಯ ಗ್ರಾಮವಿರುತ್ತದೆ. ಇಲ್ಲಿ ಆದಿಕೇಶವ ಮುಂತಾದ ಆರು ಪ್ರಾಚೀನ ಗುಡಿಗಳುಂಟು. ಆದಿಕೇಶವನ ಗುಡಿಯು ದೊಡ್ಡದುಂಟು; ಅದರ ಬಳಿಯಲ್ಲಿಯೇ ಲಕ್ಷ್ಮೀ ನರಸಿಂಹನ ಗುಡಿ ಇರುತ್ತದೆ. ಆದಿಕೇಶವನ ಮೂರ್ತಿಯನ್ನು ಬಾಡವೆಂಬ ಗ್ರಾಮದಿಂದ ಕನಕದಾಸನು (೧೫೭೪) ತಂದು ಸ್ಥಾಪಿಸಿದನೆಂದು ಹೇಳುತ್ತಾರೆ. ಈ ಗುಡಿಯಲ್ಲಿಯೂ ಬೇರೆ ಬುನಾದಿಯ ಗುಡಿಗಳಲ್ಲಿಯೂ ಹತ್ತಕ್ಕಿಂತ ಹೆಚ್ಚು ಲಿಪಿಗಳಿರುತ್ತವೆ. ಕೆಲವು ಲಿಪಿಗಳನ್ನು ಇನ್ನೂ ಯಾರು ಓದಿಲ್ಲ; ಕೆಲವುಗಳ ಮಿತಿಗಳು ತಿಳಿದಿಲ್ಲ.

ಕಳಸ.—ಶಿಗ್ಗಾವಿಯ ಈಶಾನ್ಯಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೨೧೨೫. ಶನಿವಾರ ಸಂತೆಯಾಗುತ್ತದೆ. ನಾರಾಯಣ ದೇವರ ಗುಡಿಯಲ್ಲಿಯೂ ಬೇರೆ ಕಡೆಯಲ್ಲಿಯೂ ೫ ಲಿಪಿಗಳಿರುತ್ತವೆ. ಇವುಗಳಲ್ಲಿ ವೊಂದು ೯೩೦ನೇ ವರ್ಷದ್ದಿರುತ್ತದೆ.

ಕಲಘುಟಗಿ.—ಉತ್ತರ ಅಕ್ಷಾಂಶ ೧೫°, ೧೦′, ಪೂರ್ವ ರೇಖಾಂಶ ೭೫°, ೩′; ಧಾರವಾಡದ ದಕ್ಷಿಣಕ್ಕೆ ೨೦ ಮೈಲಿನ ಮೇಲೆ; ಜನಸಂಖ್ಯ (೮೧) ೩೨೭೧. ಇದು ತಾಲೂಕಿನ ಮುಖ್ಯ ಗ್ರಾಮವು; ಇಲ್ಲಿ ಮಾಮಲೇದಾರ ಕಚೇರಿ, ಪೋಷ್ಟ ಆಫೀಸು, ತಾಲೂಕಾ ಸ್ಕೂಲು ಇರುತ್ತವೆ. ಬುಧವಾರ ಸಂತೆಯಾಗಿ, ಮುಖ್ಯವಾಗಿ ಅಕ್ಕಿಯ ಮಾರಾಟವಾಗುತ್ತದೆ. ಮಹಾರಾಷ್ಟ್ರರ ಆಳಿಕೆಯಲ್ಲಿ ಇದು ಸಂಮತಿನ ಮುಖ್ಯ ಗ್ರಾಮವಿತ್ತು.

ಕಾಮಧೇನು.—ಕಲಘುಟಗಿಯ ಈಶಾನ್ಯಕ್ಕೆ ೬ ಮೈಲಿನ ಮೇಲೆ. ಕಲಮೇಶ್ವರನ ಗುಡಿಯ ಗೋಡೆಯಲ್ಲಿ ನಾನಾ ಪ್ರಕಾರದ ಚಿತ್ರಗಳಿರುತ್ತವೆ; ಅದರ ಬಳಿಯಲ್ಲಿ ಸವಿದಂಥ ಲಿಪಿಗಳು ಯೆರಡು ಇರುತ್ತವೆ. ಊರ ದಕ್ಷಿಣಕ್ಕೆ ಮೈಲಿನ ಮೇಲೆ ಹರಿಯುವ ಕಲ್ಲ ಹಳ್ಳಕ್ಕೆ ಸರಕಾರದವರು ಸನ್ ೧೮೫೦ರಲ್ಲಿ ಕಲ್ಲಿನ ವೊಡ್ಡು ಕಟ್ಟಿ, ಭೂಮಿಗಳ ಉಪಯೋಗಕ್ಕಾಗಿ ನೀರು ಯೇರಿಸಿದ್ದಾರೆ.

ಕಣವೀ ಸಿದ್ಧಗೇರಿ.—ಕೋಡದ ಆಗ್ನೇಯಕ್ಕೆ ೧೦ ಮೈಲಿನ ಮೇಲೆ. ಕಣವೀ ಸಿದ್ಧೇಶ್ವರನ ಗುಡಿಯಲ್ಲಿ ನಾಲ್ಕು ಲಿಪಿಗಳಿರುತ್ತವೆ. ಅವೆಲ್ಲ ೧೧ನೇ ಶತಕದ ಈಚೆಯಲ್ಲಿ ಆದಂಥವು.

ಕನವಳ್ಳಿ.—ಕರ್ಜಗಿಯ ಆಗ್ನೇಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೧೩೩೪. ಪರಮೇಶ್ವರ, ಭೋಗೇಶ್ವರ, ಯೆಂಬ ಯೆರಡು ಬನಾದಿಯ ಗುಡಿಗಳಿರುತ್ತವೆ, ಮೂರು ಲಿಪಿಗಳಿರುತ್ತವೆ.

ಕಾರಡಗಿ.—ಬಂಕಾಪುರದ ಈಶಾನ್ಯಕ್ಕೆ ೮ ಮೈಲಿನ ಮೇಲೆ, ದೊಡ್ಡ ಹಳ್ಳಿಯು ಪೂರ್ವದಲ್ಲಿ ಪರಗಣೆಯ ಮುಖ್ಯ ಗ್ರಾಮವಿತ್ತು.

ಕರ್ಜಗಿ.—ಉತ್ತರ ಅಕ್ಷಾಂಶ ೧೪°, ೫೨′, ಪೂರ್ವ ರೇಖಾಂಶ ೭೫°, ೩೧′;

ಜನಸಂಖ್ಯೆ ೩೮೩೮, ತಾಲೂಕಿನ ಮುಖ್ಯ ಗ್ರಾಮವು. ಮಂಗಳವಾರ ಸಂತೆಯಾಗುತ್ತದೆ.

ಕೋಡ.—ಹಿರೆ ಕೆರೂರಿನ ಈಶಾನ್ಯಕ್ಕೆ ೬ ಮೈಲಿನ ಮೇಲೆ, ಜ. ಸ. ೧೦೫೦. ಇದೇ ಊರಿನಿಂದ ಕೋಡ ತಾಲೂಕೆಂಬ ಹೆಸರು ಬಂದದೆ. ಅಕ್ಕಿ, ಮೆಣಸಿನ ಕಾಯಿ, ಇವುಗಳ ವ್ಯಾಪಾರವು ತಿಂಗಳಿಗೆ ಸುಮಾರು ೨೦೦೦ ರೂಪಾಯದ್ದಾಗುತ್ತದೆ. ಹನುಮಂತನ ಗುಡಿಯಲ್ಲಿ ಕನ್ನಡ ಲಿಪಿಯೊಂದು ಇರುತ್ತದೆ.

ಕೋಡಮಾಗಿ.—ಕೋಡದ ದಕ್ಷಿಣಕ್ಕೆ ೧೧ ಮೈಲಿನ ಮೇಲೆ. ಬೈಲಪ್ಪನ ಗುಡಿಯಲ್ಲಿಯೂ ಸಿದ್ಧರಾಮೇಶ್ವರನ ಗುಡಿಯಲ್ಲಿಯೂ ಕೂಡಿ ಮೂರು ಲಿಪಿಗಳಿರುತ್ತವೆ.

ಕೋಲೂರು.—ಕರ್ಜಗಿಯ ಪಶ್ಚಿಮಕ್ಕೆ ಮೂರು ಮೈಲಿನ ಮೇಲೆ. ಬಸವಣ್ಣನ ಗುಡಿಯಲ್ಲಿ ಯೆರಡು ಲಿಪಿಗಳಿರುತ್ತವೆ.

ಕೊಣ್ಣೂರು.—ಮಲಾಪಹಾರಿಯ ದಂಡೆಯಲ್ಲಿ, ಜ. ಸ. (೮೧) ೨೦೨೬. ರಾಮೇಶ್ವರನ ಗುಡಿಯು ದೊಡ್ಡದಿರುತ್ತದೆ; ಪರಮೇಶ್ವರನ ಗುಡಿಯಾದರೂ ಬುನಾದಿಯ ಕಾಲದ್ದು.

ಕೊರ್ಲಹಳ್ಳಿ.—ಮುಂಡರಗಿಯ ದಕ್ಷಿಣಕ್ಕೆ ೬ ಮೈಲಿನ ಮೇಲೆ, ತುಂಗಭದ್ರೆಯ ಯೆಡ ದಂಡೆಯಲ್ಲಿ—ದೊಡ್ಡ ಹಳ್ಳಿಯು. ಈ ಗ್ರಾಮದ ಬಳಿಯಲ್ಲಿ ತುಂಗಭದ್ರೆಯ ನೀರು ಯೇರಿಸುವದಕ್ಕಾಗಿ ಬಹು ಭವ್ಯವಾದದ್ದೊಂದು ಕಲ್ಲಿನ ವೊಡ್ಡು ವಿಜಯನಗರದ ಅರಸರು ಹಾಕಿದ್ದಿರುತ್ತದೆ. ಇದು ಈಗ ವೊಡಿದಿರುತ್ತದೆ.

ಕೋಟುಮಂಚಗಿ.—ಗದಗಿನ ಈಶಾನ್ಯಕ್ಕೆ ೧೫ ಮೈಲಿನ ಮೇಲೆ, ಜ. ಸ. ೧೯೩೭. ಹಾಳು ಕೋಟೆಯುಂಟು, ಸೋಮಪ್ಪನ ಗುಡಿಯಲ್ಲಿ ಯೆರಡು ಲಿಪಿಗಳಿವೆ.

ಕೂಡ್ಲ.—ಹಾನಗಲ್ಲಿನ ಈಶಾನ್ಯಕ್ಕೆ ೧೨ ಮೈಲಿನ ಮೇಲೆ ಧರ್ಮಾ, ವರದಾ ಹೊಳೆಗಳ ಸಂಗಮದ ಸ್ಥಳಗಳಲ್ಲಿ. ಇಲ್ಲಿ ವೊಂದು ಲಿಪಿಯುಂಟು, ಪ್ರತಿ ವರ್ಷ ದೊಡ್ಡ ಜಾತ್ರೆಯಾಗುತ್ತದೆ.

ಕುರ್ತಕೋಟಿ.—ಗದಗಿನ ನೈರುತ್ಯಕ್ಕೆ ೮ ಮೈಲಿನ ಮೇಲೆ, ಜ. ಸ. (೮೧) ೪೫೧೬. ನಾಲ್ಕು ಬುನಾದಿಯ ಗುಡಿಗಳೂ ೫ ಲಿಪಿಗಳೂ ಇರುತ್ತವೆ. ಅವೆಲ್ಲ ೧೦ನೇ ಶತಕದ ಈಚೆಯವು.

ಕುಸೂಗಲ್ಲು.—ಹುಬ್ಬಳ್ಳಿಯ ಈಶಾನ್ಯಕ್ಕೆ ೬ ಮೈಲಿನ ಮೇಲೆ, ಜ. ಸ. (೮೧) ೨೦೭೧. ಈ ವೂರಿಗೆ ಭದ್ರವಾಗಿಯೂ ಸುಂದರವಾಗಿಯೂ ಕಟ್ಟಿದ್ದೊಂದು ಕೋಟೆಯುಂಟು. ಅದನ್ನು ಟೀಪುನ ಸರದಾರನೊಬ್ಬನು ಕಟ್ಟಿದನೆಂದು ಹೇಳುತ್ತಾರೆ. ಕೋಟೆಯ ಸುತ್ತಳತೆ ಸುಮಾರು ವೊಂದುವರೆ ಮೈಲು ಇರುತ್ತದೆ. ಈ ಕೋಟೆಯ ವೊಂದು ಭಾಗದಲ್ಲಿ ಸರಕಾರೀ ಬಂಗಲೆಯುಂಟು; ಉಳಿದ ಕಡೆಯಲ್ಲಿ ಕೋಟೆಯು ಹಾಳಾಗಿದೆ.

ಲಕ್ಕುಂಡಿ.—ಗದಗಿನ ಆಗ್ನೇಯಕ್ಕೆ ೭ ಮೈಲಿನ ಮೇಲೆ, ಜ. ಸ. ೩೨೬೩. ಇದು ಪುರಾತನ ಕಾಲದಿಂದ ಹೆಸರಾದದ್ದಿರುತ್ತದೆ. ಇಲ್ಲಿ ೫೦ ದೇವಾಲಯಗಳೂ ೩೫

ಶಿಲಾಲಿಪಿಗಳೂ ಇರುತ್ತವೆ. ಕೆಲವು ದೊಡ್ಡ ಗುಡಿಗಳಲ್ಲಿಯ ಕೆತ್ತಿಕೆಯ ಕೆಲಸವು ಬಹು ಮನೋಹರವಾದದ್ದಿರುತ್ತದೆ. ಚಂದ್ರಮೌಳೀಶ್ವರನ ಗುಡಿಯಲ್ಲಿ ಮೂರು ಲಿಪಿಗಳಿರುತ್ತವೆ. ಕಾಶೀ ವಿಶ್ವೇಶ್ವರನ ಗುಡಿಯು ಯೆಲ್ಲಕ್ಕೂ ದೊಡ್ಡದೂ ಯೆಲ್ಲಕ್ಕೂ ಸುಂದರವಾದದ್ದೂ ಇರುತ್ತದೆ. ಇದರಲ್ಲಿ ಯೆರಡು ಗುಡಿಗಳು ಪೂರ್ವ ಪಶ್ಚಿಮ ಯೆದುರು ಬದರಾಗಿ ಇರುತ್ತವೆ. ಈ ಯೆರಡೂ ಗುಡಿಗಳ ಬಾಗಿಲುಗಳ ಸುತ್ತು ಮುತ್ತಲೂ ಕಂಬಗಳ ಮೇಲೆಯೂ ಅತಿ ಮನೋಹರವಾದ ದೇವಾದಿಗಳ ಚಿತ್ರಗಳನ್ನೂ ಬಳ್ಳಿ ಹೂಗಳನ್ನೂ ನುಣುಪಾದ ಕಲ್ಲಿನೊಳಗೆ ಕೊರಿದಿದ್ದಾರೆ. ಈ ಗುಡಿಯಲ್ಲಿ ಸಮಾಧಿ ಕಲ್ಲು ಯೆಂಬ ಹೆಸರಿನ ಕಲ್ಲಿನ ಮೇಲೇ ಸನ್ ೧೧೯೮ನೇ ವರ್ಷ ಬರಿದದ್ದೊಂದು ಲಿಪಿಯುಂಟು. ಇದರಂತೆ ಕುಂಬಾರಗಿರೀಶ್ವರ, ಲಕ್ಷ್ಮೀನಾರಾಯಣ, ಮಾಣಿಕೇಶ್ವರ, ನಗರದೇವ, ನನ್ನೇಶ್ವರ, ನೀಲಕಂಠೇಶ್ವರ, ಸೋಮೇಶ್ವರ, ವಿರೂಪಾಕ್ಷ, ವಿಶ್ವನಾಥ, ಮುಂತಾದ ಗುಡಿಗಳೂ ಯೆರಡು ಬಸ್ತಿಗಳೂ ನೋಡ ತಕ್ಕಂಥವಿರುತ್ತವೆ. ಬಹುತರ ಈ ಯಾವತ್ತು ಗುಡಿಗಳಲ್ಲಿ ಶಿಲಾಲಿಪಿಗಳಿವೆ. ಯೆಲ್ಲಕ್ಕೂ ಹಳೆಯ ಲಿಪಿಯು ಸನ್ ೮೬೮ನೇ ವರ್ಷದ್ದಿರುತ್ತದೆ. ಆದರೆ ಕೆಲವು ಲಿಪಿಗಳನ್ನು ಇನ್ನೂ ಯಾರೂ ಓದಿಲ್ಲ. ಲಕ್ಕುಂಡಿಯಲ್ಲಿ ಗುಡಿಗಳಂತೆ ಹಲವು ದೊಡ್ಡ ದೊಡ್ಡ ಹೊಕ್ಕು ತುಂಬುವ ಬಾವಿಗಳಿರುತ್ತವೆ. ಅವುಗಳಲ್ಲಿ ಛಬ್ಬೀರ ಬಾವಿ, ಕನ್ನೇರ ಬಾವಿ, ಮುಸುಕಿನ ಬಾವಿ, ಪ್ರಸಿದ್ಧ. ಮುಸುಕಿನ ಬಾವಿಯು ನೋಡ ತಕ್ಕಂಥಾದಿರುತ್ತದೆ. ಊರ ಹೊರಗೆ ಹಾಳು ಕೋಟೆ ಯೆಂದು ಇರುತ್ತದೆ. ಅದರೊಳಗೂ ಹೊರಗೂ ಶಿಲಾಲಿಪಿಗಳಿವೆ.

ಮದನ ಬಾವಿ.—ಧಾರವಾಡದ ವಾಯುವ್ಯಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೧೩೩೭. ರಾಮ ಲಿಂಗನ ಗುಡಿಯಲ್ಲಿಯೂ ಕಲ್ಲಪ್ಪನ ಗುಡಿಯಲ್ಲಿಯೂ ಲಿಪಿಗಳಿವೆ.

ಮನಗುಂಡಿ.—ಧಾರವಾಡದ ದಕ್ಷಿಣಕ್ಕೆ ೭ ಮೈಲಿನ ಮೇಲೆ, ಜ. ಸ. (೮೧) ೧೭೮೯. ಸಿದ್ಧ ಲಿಂಗನ ಗುಡಿಯಲ್ಲಿಯೂ ಕಲಮೇಶ್ವರನ ಗುಡಿಯಲ್ಲಿಯೂ ಲಿಪಿಗಳಿವೆ.

ಮಂತ್ರವಾಡಿ.—ಶಿಗ್ಗಾವಿಯ ಪೂರ್ವಕ್ಕೆ ೪ ಮೈಲಿನ ಮೇಲೆ, ಇಲ್ಲಿ ಮೂರು ದೊಡ್ಡ ಲಿಪಿಗಳಿವೆ. ಒಂದನ್ನು ಮಾತ್ರ ಓದಿದ್ದಾರೆ; ಅದು ಸನ್ ೮೭೫ರಲ್ಲಿ ಬರಿದದ್ದಿರುತ್ತದೆ.

ಮಾಸೂರು.—ಹಿರೇ ಕೆರೂರಿನ ಆಗ್ನೇಯಕ್ಕೆ ೭ ಮೈಲಿನ ಮೇಲೆ, ಜ. ಸ. (೮೧) ೨೭೪೭. ರವಿವಾರ ಸಂತೆಯಾಗುತ್ತದೆ. ಈ ವೂರಿಗೆ ವೊಂದು ಹಾಳು ಕೋಟೆಯುಂಟು. ಅದನ್ನು ವಿಜಾಪುರದ ಬಾದಶಹನ ನೌಕರನಾದ ಮಹಮ್ಮದಖಾನ ಬಿನ್ನ ರಾಜಾ ಫರೀದನೆಂಬವನು ಸನ್ ೧೭೩೫ರಲ್ಲಿ ಕಟ್ಟಿಸಿದನೆಂದು ಹೇಳುವದೊಂದು ಫಾರ್ಸೀ ಶಿಲಾಲಿಪಿಯು ಕೆರೆಯ ಕಾವಲಿಯಲ್ಲಿ ಇರುತ್ತದೆ. ಮಾಸೂರಿನ ಕೆರೆಯು ಮುಂಬಯಿ ಇಲಾಖೆಯಲ್ಲಿ ಹೆಸರಾದದ್ದಿರುತ್ತದೆ. ಇದನ್ನು ವಿಜಯನಗರದ ಅರಸನು ಕಟ್ಟಿಸಿದನೆಂದು ಹೇಳುತ್ತಾರೆ. ಈ ಕೆರೆಯು ಊರಿನ ನೈರುತ್ಯಕ್ಕೆ ಮೂರು ಮೈಲಿನ ಮೇಲೆ ಮೈಸೂರ

ಇಲಾಖೆಯ ಹದ್ದಿನೊಳಗೆ ಇರುತ್ತದೆ. ಈ ಕೆರೆಯ ವರ್ಣನೆಯನ್ನು ೪ನೇ ಭಾಗದಲ್ಲಿ ನೋಡು.

ಮೆಡಲೇರಿ.—ರಾಣೀಬಿನ್ನೂರಿನ ಈಶಾನ್ಯಕ್ಕೆ ೮ ಮೈಲಿನ ಮೇಲೆ. ತುಂಗಭದ್ರೆಯ ದಂಡೆಯಲ್ಲಿ, ಜ. ಸ. (೮೧) ೨೦೮೫. ಇಲ್ಲಿಯ ಖರ್ಬೂಜಿಯ ಹಣ್ಣು ಪ್ರಸಿದ್ಧ; ಮೇಲಾದ ಕಂಬಳಿಗಳಾಗುತ್ತವೆ. ಇಲ್ಲಿ ಸರಕಾರದವರು ಭೂಮಿಗಳಿಗೆ ನೀರು ಪೂರೈಸುವದಕ್ಕಾಗಿ ದೊಡ್ಡದೊಂದು ಕೆರೆಯನ್ನು ಕಟ್ಟಿಸಿದ್ದಾರೆ.

ಮೆಡೂರು.—ಕೋಡದ ದಕ್ಷಿಣಕ್ಕೆ ೧೧ ಮೈಲಿನ ಮೇಲೆ, ಜ. ಸ. (೮೧) ೧೧೨೦. ನೀಲವ್ವ, ಬಿಲ್ಲೇಶ್ವರ, ಬಸಪ್ಪ, ಯೆಂಬ ಗುಡಿಗಳಿವೆ; ಎರಡನೇ ಗುಡಿಯಲ್ಲಿ ಯೆರಡು ಶಿಲಾಲಿಪಿಗಳೂ ಮೂರನೇದರಲ್ಲಿ ವೊಂದು ವೀರಗಲ್ಲೂ ಉಂಟು.

ಮಿಶ್ರೀ ಕೋಟೆ.—ಕಲಘಟಗಿಯ ಈಶಾನ್ಯಕ್ಕೆ ೪ ಮೈಲಿನ ಮೇಲೆ, ಜ. ಸ. (೮೧) ೩೨೦೬. ಶುಕ್ರವಾರ ಸಂತೆಯಾಗುತ್ತದೆ. ಇಲ್ಲಿ ದೊಡ್ಡದೊಂದು ಕೋಟೆಯೂ ರಾಮೇಶ್ವರನ ಬುನಾದಿಯ ಗುಡಿಯೂ ಉಂಟು.

ಮೋಟೆಬಿನ್ನೂರು.—ರಾಣೆಬಿನ್ನೂರಿನ ಈಶಾನ್ಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೨೬೦೧. ಇಲ್ಲಿ ಪೂರ್ವದಲ್ಲಿ ಶ್ರೀಗಂಧದ ವ್ಯಾಪಾರವು ಬಹಳ ಆಗುತ್ತಿತ್ತು. ಊರ ಹೊರಗೆ ಬಹು ಪುರಾತನ ಕಾಲದ್ದೊಂದು ಇಮಾರತಿನ ಶೇಷವು ಇರುತ್ತದೆ. ಇಲ್ಲಿ ಅಂಡಕ ಕಲ್ಲುಗಳನ್ನು ಉದ್ದಕ್ಕೆ ನಿಲ್ಲಿಸಿ ಅವುಗಳ ಮೇಲೆ ದೊಡ್ಡ ದೊಡ್ಡ ಬಂಡೆಗಳನ್ನು ಅಡ್ಡ ಇಟ್ಟಿದ್ದಾರೆ.

ಮೂಡೂರು.—ಹಾನಗಲ್ಲಿನ ದಕ್ಷಿಣಕ್ಕೆ ೮ ಮೈಲಿನ ಮೇಲೆ, ಜ. ಸ. (೮೧) ೯೪೭. ಬ್ರಹ್ಮನ ಗುಡಿಯಲ್ಲಿ ವೊಂದು ವೀರಗಲ್ಲೂ, ಮಲ್ಲಿಕಾರ್ಜುನನ ಗುಡಿಯಲ್ಲಿ ವೊಂದು ಶಿಲಾಲಿಪಿಯೂ ಉಂಟು.

ಮುಗದ.—ಧಾರವಾಡದ ಪಶ್ಚಿಮಕ್ಕೆ ೭ ಮೈಲಿನ ಮೇಲೆ, ಜ. ಸ. (೮೧) ೧೫೧೦. ಊರ ಹೊರಗೆ ದೊಡ್ಡದೊಂದು ಕೆರೆಯುಂಟು.

ಮುಳಗುಂದ.—ಗದಗದ ವಾಯವ್ಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೫೪೮೬. ಸನ್ ೧೮೪೮ರಲ್ಲಿ ತಾಸಗಾವಿಯ ಸಂಸ್ಥಾನವು ಖಾಲಸತಿಗೆ ಬಂದಾಗ ಈ ವೂರು ಧಾರವಾಡ ಜಿಲ್ಲೆಗೆ ಶೇರಿತು. ಇಲ್ಲಿ ಬುನಾದಿಯ ಐದು ಗುಡಿಗಳೂ ನಾಲ್ಕು ಬಸ್ತಿಗಳೂ ಇರುತ್ತವೆ. ಈ ದೇವಸ್ಥಾನಗಳಲ್ಲಿಯೂ ಬೇರೆ ಕಡೆಯಲ್ಲಿಯೂ ಕೂಡಿ ೧೬ ಶಿಲಾಲಿಪಿಗಳಿವೆ. ಅವುಗಳಲ್ಲಿ ಯೆಲ್ಲಕ್ಕೂ ಹಳೇದು ಸನ್ ೯೦೨ನೇ ವರ್ಷದ್ದಿರುತ್ತದೆ. ಊರ ಪೂರ್ವಕ್ಕೆ ವೊಂದು ಸಣ್ಣ ಗುಡ್ಡದ ಮೇಲೆ ವೊಂದು ಗುಡಿಯುಂಟು. ಆ ದೇವರ ಜಾತ್ರೆಯು ಕಾರ್ತಿಕ ಮಾಸದಲ್ಲಿ ಆಗುತ್ತದೆ.

ಮುಂಡರಗಿ.—ಗದಗಿನ ಆಗ್ನೇಯಕ್ಕೆ ೨೮ ಮೈಲಿನ ಮೇಲೆ, ಜ. ಸ. (೮೧) ೪೮೨೬. ಊರ ಬಳಿಯಲ್ಲಿ ಸಣ್ಣದೊಂದು ಗುಡ್ಡದ ಮೇಲೆ ಹಾಳು ಕೋಟೆಯುಂಟು. ಇದು ನಿಜಾಮನ ಸರಹದ್ದಿನ ಸಮೀಪಕ್ಕಿರುವ ಕಾರಣ ಇಲ್ಲಿ ವ್ಯಾಪಾರವು ವೊಳಿತಾಗಿ

ನಡಿಯುತ್ತದೆ. ಪೇಟೆಯು ತಕ್ಕಮಟ್ಟಿಗೆ ದೊಡ್ಡದಿದೆ. ಮೆಣಸಿನ ಕಾಯಿ, ಬೆಲ್ಲ, ಹುಣಚೀ ಹಣ್ಣು, ಅರಿಶಿಣ, ಮುಂತಾದ ಸರಕುಗಳ ವ್ಯಾಪಾರವಾಗುತ್ತದೆ. ಈ ವೂರೂ ಕೆಲವು ಹಳ್ಳಿಗಳೂ ಭೀಮರಾವ ಮುಂಡರಗಿ ಯೆಂಬವನಿಗೆ ಜಹಾಗಾಗಿ ನಡಿಯುತ್ತಿದ್ದವು. ಭೀಮರಾಯನು ಸನ್ ೧೮೫೭ರಲ್ಲಿ ಬಂಡಾಯ ಮಾಡಿ ಕೊಪ್ಪಳದ ಕೋಟೆಯಲ್ಲಿ ಯುದ್ಧಕ್ಕೆ ನಿಂತು ಮಡಿದದ್ದರಿಂದ ಸರಕಾರದವರು ಅವನ ಜಹಾಗೀರು ಕಸಕೊಂಡರು. ಈಗ ಮುಂಡರಿಗೆಯು ಮಹಾಲಿನ ಮುಖ್ಯ ಗ್ರಾಮವಾಗಿದೆ.

ಮುತ್ತೂರು. — ಕೋಡದ ವಾಯವ್ಯಕ್ಕೆ ೯ ಮೈಲಿನ ಮೇಲೆ. ಇಲ್ಲಿ ಬುನಾದಿಯ ಈಶ್ವರನ ಗುಡಿಯು ತಕ್ಕಮಟ್ಟಿಗೆ ದೊಡ್ಡದು ಚಿತ್ರಗಳುಳ್ಳದ್ದು ಇರುತ್ತದೆ. ಈ ಗುಡಿಗೆ ಇನಾಮು ನಡಿಯುತ್ತದೆ. ಗುಡಿಯ ಯೆದುರಿಗೆ ೧೧ ಕಲ್ಲುಗಳನ್ನು ನಿಲ್ಲಿಸಿದ್ದಾರೆ. ಅವುಗಳಲ್ಲಿ ವೊಂದು ವೀರಗಲ್ಲಿನ ಮೇಲೆ ಲಿಪಿಯುಂಟು.

ನಾಗಾಂವಿ. — ಗದಗಿನ ಆಗ್ನೇಯಕ್ಕೆ ೫ ಮೈಲಿನ ಮೇಲೆ. ಇಲ್ಲಿ ದ್ವಾರ ಸಮುದ್ರದ ಬಲ್ಲಾಳರೂ, ದೇವಗಿರಿಯ ಯಾದವರೂ ಬರಿಸಿದ ೪ ಲಿಪಿಗಳಿವೆ. ಅವೆಲ್ಲ ೧೩ನೇ ಶತಕದಲ್ಲಿ ಆದಂಥವು.

ನರೇಗಲ್ಲು. — ಹಾನಗಲ್ಲಿನ ಈಶಾನ್ಯಕ್ಕೆ ೧೪ ಮೈಲಿನ ಮೇಲೆ, ಜ. ಸ. (೮೧) ೧೩೪೦. ಇಲ್ಲಿಯ ಸರ್ವೇಶ್ವರನ ಗುಡಿಯು ಬಹು ಪುರಾತನದ್ದೆಂದು ಹೇಳುತ್ತಾರೆ; ೮ ಲಿಪಿಗಳಿವೆ. ಈ ವೂರ ಕೆರೆಯು ದೊಡ್ಡದಿರುತ್ತದೆ. ಪೂರ್ವದಲ್ಲಿ ಇದು ಪರಗಣೆಯ ಮುಖ್ಯ ಗ್ರಾಮವಿತ್ತು.

ನರೇಗಲ್ಲು. — ರೋಣದ ಆಗ್ನೇಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೭೦೭೧. ಇದು ಬುನಾದಿಯಿಂದ ಹೆಸರಾದ ಗ್ರಾಮವು. ಒಂದು ಹಾಳು ಕೋಟೆಯುಂಟು, ಸೋಮವಾರ ಸಂತೆಯಾಗುತ್ತದೆ. ಇಲ್ಲಿ ಐದು ಬುನಾದಿಯ ಗುಡಿಗಳುಂಟು. ಅವುಗಳಲ್ಲಿ ಸೋಮೇಶ್ವರನ ಗುಡಿಯು ಭವ್ಯವಾದದ್ದೂ ಚಲುವಾದದ್ದೂ ಇರುತ್ತದೆ. ಇದಕ್ಕೆ ಯೆರಡು ಸಭಾಮಂಟಪಗಳೂ ಮೂರು ದಿಕ್ಕುಗಳಲ್ಲಿ ಮೂರು ಗರ್ಭಾಗಾರಗಳೂ ಇರುತ್ತವೆ. ಈ ಯಾವತ್ತು ಗುಡಿಗಳಲ್ಲಿ ಕೂಡಿ ವೊಂಬತ್ತು ಲಿಪಿಗಳಿರುತ್ತವೆ. ಅವುಗಳಲ್ಲಿ ಯೆಲ್ಲಕ್ಕೂ ಹಳೇದು ೯೫೦ರಲ್ಲಿ ಬರದದ್ದಿರುತ್ತವೆ.

ನರೇಂದ್ರ. — ಧಾರವಾಡದ ಈಶಾನ್ಯಕ್ಕೆ ೫ ಮೈಲಿನ ಮೇಲೆ, ಜ. ಸ. (೮೧) ೨೧೧೪. ಶಂಕರ ಲಿಂಗನ ಗುಡಿಯ ಹತ್ತರ ವೊಂದು ಲಿಪಿಯುಂಟು. ಪೂರ್ವದಲ್ಲಿ ಪರಗಣೆಯ ಮುಖ್ಯ ಗ್ರಾಮವಿತ್ತು.

ನರಗುಂದ. — ನವಲಗುಂದದ ಉತ್ತರಕ್ಕೆ ೧೭ ಮೈಲಿನ ಮೇಲೆ, ಜ. ಸ. (೮೧) ೭೮೭೪. ಈ ವೂರು ಸುಮಾರು ೮೦೦ ಫೂಟು ಯೆತ್ತರವಾದದ್ದೊಂದು ಗುಡ್ಡದ ಬುಡದಲ್ಲಿ ಇರುತ್ತದೆ. ಇಲ್ಲಿ ಮಹಾಲ ಕಚೇರಿ, ಟಪಾಲ ಕಚೇರಿ, ಮ್ಯುನಿಸಿಪಾಲಿಟಿ ಉಂಟು. ಇದು ಪಡ ಮೂಲೆಯ ಪೇಟೆ; ವ್ಯಾಪಾರವು ವೊಳಿತಾಗಿ ನಡಿಯುತ್ತದೆ. ಈ ವೂರಿಗೆ ಮೂರು ಕೆರೆಗಳುಂಟು. ಆದರೂ ನೀರಿನ ದುರ್ಭಿಕ್ಷವು ಆಗಾಗ್ಗೆ ಬರುತ್ತದೆ. ನರ

ಗುಂದದ ಕೋಟೆಯು ತಕ್ಕಮಟ್ಟಿಗೆ ಹೆಸರಾದದ್ದು. ಇದು ಮೇಲೆ ಹೇಳಿದ ಗುಡ್ಡದ ಮೇಲೆ ೩೮೮ ಯೆಕರಿನ ಕ್ಷೇತ್ರವುಳ್ಳದ್ದಿರುತ್ತದೆ. ಇದು ಪೂರ್ವದಲ್ಲಿ ಗೆಲ್ಲಲಿಕ್ಕೆ ಅಸಾಧ್ಯವಾದ ದ್ದೆಂದು ಯೆಣಿಸಲ್ಪಡುತ್ತಿತ್ತು. ಪೇಟೆಯಲ್ಲಿ ಶಂಕರಲಿಂಗ, ಮಹಾಬಳೇಶ್ವರ, ಜೋಡ ಹನುಮಂತ, ಯೆಂಬ ಗುಡಿಗಳೂ, ಕೋಟೆಯಲ್ಲಿ ವೆಂಕಟರಮಣನ ಗುಡಿಯೂ ಉಂಟು. ವೆಂಕಟರಮಣನ ಗುಡಿಯನ್ನು ಇಲ್ಲಿಯ ಮೊದಲನೇ ಸಂಸ್ಥಾನಿಕನಾದ ರಾಮರಾಯನೆಂಬ ವನು ಸನ್ ೧೭೦೦ರಲ್ಲಿ ಕಟ್ಟಿಸಿದನು. ಈ ಗುಡಿಗೆ ವೊಂದು ಲಕ್ಷ ರೂಪಾಯಿ ವೆಚ್ಚಾ ಗಿದೆ ಯೆಂದು ಹೇಳುತ್ತಾರೆ. ದೇವರಿಗೆ ೨೦೧೦ ರೂಪಾಯಿಯ ಭೂಮಿಯೂ, ೧೩೭೦ ರೂಪಾಯಿಯ ವರ್ಷಾಶನವೂ ನಡಿಯುತ್ತದೆ. ಸನ್ ೧೮೫೮ನೇ ವರ್ಷದ ಬಂಡಾಯದ ಕಡೆಯಲ್ಲಿ ಸರಕಾರೀ ದಂಡಿನವರು ವೆಂಕಟರಮಣನ ಮೂರ್ತಿಯನ್ನು ವೊಡಿದು ಗುಡಿ ಯನ್ನು ಕೆಡಿಸಿದ್ದರು. ಆದರೆ ಈಚೆಯಲ್ಲಿ ರಾಮದುರ್ಗದ ಸಂಸ್ಥಾನಿಕನು ಗುಡಿಯನ್ನು ಮರಸ್ತು ಮಾಡಿ ಮೂರ್ತಿಯನ್ನು ಸ್ಥಾಪಿಸಿ, ಭಕ್ತಿಯಿಂದ ನಡಕೊಳ್ಳುತ್ತಿದ್ದದರಿಂದ ಸರಕಾ ರದವರು ಗುಡಿಯನ್ನು ಅದಕ್ಕೆ ನಡಿಯುತ್ತಿದ್ದ ಇನಾಮು ಸಹಿತವಾಗಿ ಅವನ ವಶಕ್ಕೆ ಕೊಟ್ಟರು. ನವರಾತ್ರಿಯ ಉತ್ಸವದಲ್ಲಿ ಸುಮಾರು ೧೦೦೦೦ ಜಾತ್ರೆ ಕೂಡುತ್ತದೆ. ಅದರಲ್ಲಿ ಸುಮಾರು ೨೦೦೦೦ ರೂಪಾಯಿಯ ವ್ಯಾಪಾರವಾಗುತ್ತದೆ. ಈ ವೂರಲ್ಲಿ ೪ ಸರಕಾರೀ ಶಾಲೆಗಳಿವೆ.

ನರಗುಂದದ ಕೋಟೆಯನ್ನು ಸನ್ ೧೭೭೪ರಲ್ಲಿ ಶಿವಾಜಿಯು ಕಟ್ಟಿಸಿದನೆಂದು ಹೇ ಳುತ್ತಾರೆ. ಸನ್ ೧೭೮೫ರಲ್ಲಿ ಟೀಪೂನು ನರಗುಂದವನ್ನು ತಕ್ಕೊಂಡಿದ್ದನು; ಆದರೆ ಮುಂದೆ ಯೆರಡು ವರ್ಷಕ್ಕೆ ಆದ ವೊಪ್ಪಂದದಲ್ಲಿ ಅದನ್ನು ಪೇಶವನಿಗೆ ಕೊಟ್ಟನು. ಪೇಶವನ ರಾಜ್ಯವನ್ನು ಇಂಗ್ಲಿಷ ಸರಕಾರದವರು ತಕ್ಕೊಂಡ ಬಳಿಕ ಆ ಸರಕಾರದವರು ನರಗುಂದದ ಸಂಸ್ಥಾನವನ್ನು ಅದರ ಮೊದಲಿನ ವೊಡಿಯನಾದ ದಾದಾಜೀ ರಾಯನಿಗೆ ಕೊಟ್ಟರು. ಸನ್ ೧೮೫೭ರಲ್ಲಿ ಈ ಸಂಸ್ಥಾನದ ವೊಡಿಯನಾದ ಭಾಸ್ಕರ ರಾವ ಬಾಬಾ ಸಾಹೇಬನಿಗೆ ಸರಕಾರದವರು ದತ್ತ ಪುತ್ರನನ್ನು ತಕ್ಕೊಳ್ಳಲಿಕ್ಕೆ ಅಪ್ಪಣೆ ಕೊಡದಿದ್ದ ಕಾರಣ ಅವನು ಬಂಡಾಯ ಮಾಡಿದನು. ಆರಂಭಕ್ಕೆ ಸರಕಾರದವರು ಕೋಟೆಯ ಮೇ ಲಿನ ತೋಫಗಳನ್ನೂ ಮದ್ದು ಗುಂಡನ್ನೂ ಧಾರವಾಡಕ್ಕೆ ಕಳಿಸೆಂದು ಭಾಸ್ಕರ ರಾಯನಿಗೆ ಅಪ್ಪಣೇ ಮಾಡಿದರು. ಆ ಪ್ರಕಾರ ಅವನು ಕೆಲವು ತೋಫುಗಳನ್ನೂ ಮದ್ದು ಗುಂಡನ್ನೂ ಧಾರವಾಡಕ್ಕೆ ಕಳಿಸಿದ ಬಳಿಕ ಮುಂಡರಿಗೆಯ ಭೀಮರಾಯನು ಬಂಡಾಯ ಮಾಡಿದ ಸುದ್ದೀ ಕೇಳಿ, ಉಳಿದ ತೋಫುಗಳನ್ನು ಕೋಟೆಯ ಮೇಲೆ ಸಜ್ಜ ಮಾಡಿ ನಿಲ್ಲಿಸಿ ಭಾಸ್ಕರ ರಾಯನು ಬಂಡಾಯ ಹೂಡಿದನು. ಅಷ್ಟರೊಳಗೆ ಪೋಲಿಟಿಕಲ್ ಏಜಂಟನಾದ ಮ್ಯಾನ್ಸನ್ ಸಾಹೇಬನು ಭಾಸ್ಕರ ರಾಯನಿಗೆ ಬರಿದದ್ದೊಂದು ಪತ್ರದಿಂದ ಭಾಸ್ಕರ ರಾಯನು ಸಿಟ್ಟಾಗಿ, ಕೆಲವು ದಂಡು ತಕ್ಕೊಂಡು ಸಾಹೇಬನು ಆಗ ಇದ್ದ ಸೋರೀಬಾನ ವೆಂಬ ಗ್ರಾಮಕ್ಕೆ ಹೋಗಿ ಅದನ್ನು ಸುತ್ತುಗಟ್ಟಿ, ಮ್ಯಾನ್ಸನ್ನನ ಕುತ್ತಿಗೇ ಕೊಯಿದು, ಅವನ ರುಂಡವನ್ನು ನರಗುಂದದ ಅಗಸೇ ಬಾಗಿಲಿಗೆ ನೈದು ಕಟ್ಟಿದನು. ಆದ್ದರಿಂದ

ಸರಜಾರ್ಜ ಮಾಲಕಂ ಸಾಹೇಬನು ದಂಡು ತಕ್ಕೊಂಡು ನರಗುಂದಕ್ಕೆ ಹೋಗಿ ಯೆರಡು ದಿವಸದೊಳಗೇ ಕೋಟೆಯನ್ನು ತಕ್ಕೊಂಡನು. ಆದರೆ ಭಾಸ್ಕರ ರಾಯನು ಓಡಿ ಹೋದನು. ಬೆಳಗಾವಿಯ ಪೋಲೀಸ ಸುಪರಿಂಟೆಂಡೆಂಟನಾದ ಸೂಟರ ಸಾಹೇಬನು ಸ್ವಲ್ಪ ದಿವಸದೊಳಗೆ ಭಾಸ್ಕರ ರಾಯನನ್ನು ತೊರಗಲ್ಲಿನ ಬಳಿಯಲ್ಲಿ ಹಿಡಿದನು; ಆಗ ಅವನ ಸಂಗಡ ಬೇರೆ ಆರು ಜನರಿದ್ದರು. ಭಾಸ್ಕರ ರಾಯನನ್ನು ಬೆಳಗಾವಿಗೆ ತಂದು ಜೂನ ೧೨ನೇ ತಾರೀಖಿನಲ್ಲಿ ಗಲ್ಲಿಗೇರಿಸಿದರು, ೧೮೫೮. ಆದ್ದರಿಂದ ನರಗುಂದದ ಸಂಸ್ಥಾನವು ಸರಕಾರಕ್ಕೆ ಶೇರಿತು. ಕೋಟೆಯನ್ನು ಸರಕಾರದವರು ಹಾಳು ಮಾಡಿ, ವೊಳಗಿನ ಹೊಂಡಗಳನ್ನು ವೊಡಿದು ಕೆಡಿಸಿ ಬಿಟ್ಟರು.

ನರಸಾಪುರ.—ಗದಗಿನ ಈಶಾನ್ಯಕ್ಕೆ ಯೆರಡು ಮೈಲಿನ ಮೇಲೆ. ಈ ಹಳ್ಳಿಯು ಗದಗಿನ ತ್ರಿಕೂಟೇಶ್ವರ, ವೀರ ನಾರಾಯಣ, ಈ ಯೆರಡೂ ದೇವಸ್ಥಾನಗಳಿಗೆ ಕೂಡಿ ಇನಾಮು ನಡಿಯುತ್ತದೆ. ಈ ಹಳ್ಳಿಯಲ್ಲಿಯೂ ವೊಂದು ಬುನಾದಿಯ ಗುಡಿಯುಂಟು; ಅದರಲ್ಲಿ ಸನ್ ೧೧೭೩ರಲ್ಲಿ ಬರಿದ ಲಿಪಿ ಇರುತ್ತದೆ. ಈ ಗುಡಿಯಲ್ಲಿ ಪುರಾತನದ ಭಾರತ ರಾಮಾಯಣಗಳ ಕಥೆಗಳಿಗೆ ಸಂಬಂಧಿಸಿದಂಥ ಬಹು ಮನೋಹರವಾದ ಚಿತ್ರಗಳಿರುತ್ತವೆ.

ನವಲಗುಂದ.—ಉತ್ತರ ಅಕ್ಷಾಂಶ ೧೫°, ೩೩′, ಪೂರ್ವ ರೇಖಾಂಶ ೭೫°, ೨೫′, ಧಾರವಾಡದ ಪೂರ್ವಕ್ಕೆ ೨೫ ಮೈಲಿನ ಮೇಲೆ, ಜ. ಸ. (೮೧) ೭೮೧೦. ಇದು ತಾಲೂಕಿನ ಮುಖ್ಯ ಗ್ರಾಮವಿರುತ್ತದೆ. ಇಲ್ಲಿ ತಾಲೂಕ ಕಚೇರಿ, ಪೋಲೀಸ ಕಚೇರಿ, ಟಪಾಲ ಕಚೇರಿ, ಆಸಪತ್ರಿ, ಮ್ಯುನಿಸಿಪಾಲಿಟಿ, ೫ ಶಾಲೆಗಳು, ಇರುತ್ತವೆ. ಮ್ಯುನಿಸಿಪಾಲಿಟಿಯ ಆದಾಯವು ಸನ್ ೧೮೮೦-೮೩ರಲ್ಲಿ ೪೬೦೦ ರೂಪಾಯಿ ಇತ್ತು. ಈ ವೂರಿಗೆ ವೊಂದು ದೊಡ್ಡ ಕೆರೆಯೂ, ವೊಂದು ಶೀ ನೀರಿನ ಬಾವಿಯೂ, ೫೧ ಸೌಳು ನೀರಿನ ಬಾವಿಗಳೂ ಉಂಟು. ಆದರೂ ನವಲಗುಂದಕ್ಕೆ ನೀರಿನ ಬರವು ಆಗಾಗ್ಗೆ ಬರುತ್ತದೆ. ಮಂಗಳವಾರ ಸಂತೆಯಾಗುತ್ತದೆ; ಅದರಲ್ಲಿ ದನಗಳ ಮಾರಾಟ ಬಹಳವಾಗುತ್ತದೆ. ಇಲ್ಲಿ ಮೇಲಾದ ಜಮ್ಮಖಾನೆಗಳು ಹುಟ್ಟುತ್ತವೆ. ಹಾಳು ಕೋಟೆಯೊಂದುಂಟು.

ಈ ವೂರಲ್ಲಿ ಪುರಾತನ ಕಾಲದ ಗುಡಿಗಳೂ ಲಿಪಿಗಳೂ ಯೇನು ಇಲ್ಲ. ಆದ್ದರಿಂದ ಇದು ಅರ್ವಾಚೀನ ಕಾಲದ ಗ್ರಾಮವೆಂದು ತೋರುತ್ತದೆ. ಆದರೂ ಸನ್ ೧೪೫೪ರಲ್ಲಿ ಬಾಮನೀ ೨ನೇ ಅಲ್ಲಾ ಉದ್ದೀನನ ಆಳಿಕೆಯಲ್ಲಿ ಅವನ ಸರದಾರನಾದ ಜಲಾಲಖಾನನ ವಶದಲ್ಲಿ ನವಲಗುಂದವಿತ್ತೆಂದು ಇತಿಹಾಸದಿಂದ ತಿಳಿಯುತ್ತದೆ. ಮುಂದಿನ ಬಾದಶಹನಾದ ಹುಮಾಯೂನನಿಗೂ ಜಲಾಲಖಾನನ ಮಗನಾದ ಶಿಕಂದರನಿಗೂ ನವಲಗುಂದದ ಬಳಿಯಲ್ಲಿ ಯುದ್ಧವಾಗಿ ಶಿಕಂದರನು ಮಡಿದನು. ಸವಣೂರಿನ ನಬಾಬನನ್ನು ಔರಂಗಜೇಬನು ನೇಮಿಸಿದಾಗ ನವಲಗುಂದದ (ಈಗಿನ ಶಿರಸಂಗಿಯ) ದೇಸಾಯಿಯು ಆ ನಬಾಬನ ಹಸ್ತಕನಾಗಿದ್ದನು. ಹೈದರ ಅಲ್ಲಿಯು ಕೃಷ್ಣೆಯ ದಕ್ಷಿಣದ ಶೀಮೆಯನ್ನು ಆಕ್ರಮಿಸಿದಾಗ ಈ ದೇಸಾಯಿಯು ಅವನಿಗೆ ಕಪ್ಪ ಕೊಡುತ್ತಿದ್ದನು. ಸನ್ ೧೮೧೭ರಲ್ಲಿ

ನವಲಗುಂದದ ಶೀಮೆಯು ಇಂಗ್ಲಿಷರ ವಶಕ್ಕೆ ಬಂದ ಬಳಿಕ ಜನರಲ್ ಮನ್ರೋನು ರಾಮರಾಯನೆಂಬ ಸರದಾರನನ್ನು ನವಲಗುಂದವನ್ನು ತಕ್ಕೊಳ್ಳಲಿಕ್ಕೆ ಕಳಿಸಿದನು. ಆಗ ಬಾಪೂಗೋಖಲನು ನವಲಗುಂದದಲ್ಲಿದ್ದನು. ಅವನಿಗೂ ರಾಮರಾಯನಿಗೂ ಯುದ್ಧವಾಗಿ ರಾಮರಾಯನು ಬಹು ಶೌರ್ಯದಿಂದ ನವಲಗುಂದವನ್ನು ತಕ್ಕೊಂಡನು.

ನೀಲಗುಂದ.—ಗದಗಿನ ನೈರುತ್ಯಕ್ಕೆ ೧೨ ಮೈಲಿನ ಮೇಲೆ. ನಾರಾಯಣನ ಗುಡಿಯು ಬಹು ಸುಂದರವಾದ ಚಿತ್ರಗಳುಳ್ಳದ್ದಿರುತ್ತದೆ; ಅದರಲ್ಲಿ ವೊಂದು ಲಿಪಿಯುಂಟು.

ನಿಡಗುಂದಿ.—ಬಂಕಾಪುರದ ಪಶ್ಚಿಮಕ್ಕೆ ೫ ಮೈಲಿನ ಮೇಲೆ. ಇಲ್ಲಿ ೫ ಲಿಪಿಗಳಿರುತ್ತವೆ; ಎಲ್ಲಕ್ಕೂ ಹಳೇದು ೯ನೇ ಶತಕದಲ್ಲಿ ಬರಿದದ್ದಿರುತ್ತದೆ.

ರಾಣೀಬಿನ್ನೂರು.—ಉತ್ತರ ಅಕ್ಷಾಂಶ ೧೪°, ೩೭′, ಪೂರ್ವ ರೇಖಾಂಶ ೭೫°, ೪೧′, ಧಾರವಾಡದ ದಕ್ಷಿಣಕ್ಕೆ ೮೦ ಮೈಲಿನ ಮೇಲೆ, ಜನಸಂಖ್ಯೆ (೮೧) ೧೦೨೦೮. ತಾಲೂಕಿನ ಮುಖ್ಯ ಗ್ರಾಮವು; ತಾಲೂಕಿನಲ್ಲಿ ಇರತಕ್ಕ ಕಚೇರಿಗಳೆಲ್ಲ ಇರುತ್ತವೆ; ೫ ಶಾಲೆಗಳುಂಟು. ಮ್ಯುನಿಸಿಪಾಲಿಟಿಯ ಆದಾಯವು ಸನ್ ೧೮೮೨-೮೩ರಲ್ಲಿ ೪೨೯೦ ರೂಪಾಯಿ ಇತ್ತು. ಈ ವೂರಲ್ಲಿ ಮೇಲಾದ ನೂಲಿನ ವಸ್ತ್ರಗಳೂ ರೇಶಿಮೆಯ ವಸ್ತ್ರಗಳೂ ಹುಟ್ಟುತ್ತವೆ; ಆದಿತ್ಯವಾರ ಸಂತೆಯಲ್ಲಿ ಅರಳೆಯ ವ್ಯಾಪಾರವು ವೊಳಿತಾಗಿ ಆಗುತ್ತದೆ. ಸಿದ್ಧೇಶ್ವರನ ಗುಡಿಯಲ್ಲಿ ವೊಂದು ಲಿಪಿಯುಂಟು. ಈ ಊರಲ್ಲಿ ಹಜರತ ಜಮಾಲ ಶಹಾವಾಲೋ ಯೆಂಬ ಸತ್ಪುರುಷನ ಕಬರಸ್ಥಾನವಿರುತ್ತದೆ. ಅಲ್ಲಿ ಮೊಹರಮ್ ತಿಂಗಳಲ್ಲಿ ಜಾತ್ರೆಯಾಗುತ್ತದೆ. ಹಜರತ ಜಮಾಲ ಶಹನು ವೊಂದೇ ಹಗ್ಗಕ್ಕೆ ಇಲಿ, ಬೆಕ್ಕು, ನಾಯಿ, ಯೆರಳೆ, ಹಾವು, ಮುಂಗಲಿ, ಇವುಗಳನ್ನು ಕಟ್ಟಿ ಸಾಕಿದ್ದನೆಂದು ಹೇಳುತ್ತಾರೆ. ಈ ಊರಿನ ಸುತ್ತು ಮುತ್ತು ತೋಟಗಳು ಬಹಳ ಇರುತ್ತವೆ.

ರಟ್ಟೀಹಳ್ಳಿ.—ಕೋಡದ ಆಗ್ನೇಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೨೩೩೨. ಹಾಳು ಕೋಟೆಯುಂಟು. ಕದಂಬೇಶ್ವರನ ಗುಡಿಯು ದೊಡ್ಡದಿರುತ್ತದೆ. ಆ ಗುಡಿಯಲ್ಲಿ ನಾಲ್ಕು, ಬೇರೆ ಕಡೆಯಲ್ಲಿ ಮೂರು ಶಿಲಾಲಿಪಿಗಳಿವೆ. ಅವೆಲ್ಲ ೧೧ನೇ ಶತಕದ ಈಚೆಯಲ್ಲಿ ಆದಂಥವು. ಇಲ್ಲಿಯ ಕೋಟೆಯನ್ನು ವಿಜಯನಗರದ ಅರಸು ಕಟ್ಟಿಸಿದನೆಂದು ಅದರ ಅಗಸೆಯ ಮೇಲಿನ ಲಿಪಿಯಿಂದ ತಿಳಿಯುತ್ತದೆ. ರಟ್ಟೀಹಳ್ಳಿಯಲ್ಲಿ ಹೈದರನಿಗೂ ಪೇಶವೆ ಮಾಧವ ರಾಯನಿಗೂ ಸನ್ ೧೭೬೪ರಲ್ಲಿ ದೊಡ್ಡ ಯುದ್ಧವಾಗಿ ಅದರಲ್ಲಿ ಹೈದರನು ಸೋತನು.

ರೋಣ.—ಉತ್ತರ ಅಕ್ಷಾಂಶ ೧೫°, ೪೮′, ಪೂರ್ವ ರೇಖಾಂಶ ೭೫°, ೪೮′, ಧಾರವಾಡದ ಈಶಾನ್ಯಕ್ಕೆ ೫೫ ಮೈಲಿನ ಮೇಲೆ, ಜ. ಸ. (೮೧) ೫೨೨೯. ಇದು ತಾಲೂಕಿನ ಮುಖ್ಯ ಗ್ರಾಮವು; ತಾಲೂಕಿನಲ್ಲಿ ಇರತಕ್ಕ ಕಚೇರಿಗಳೆಲ್ಲ ಇರುವದಲ್ಲದೆ, ಸಬ್‌ಜಡಜನ ಕೋರ್ಟು ಇರುತ್ತದೆ. ರೋಣ ತಾಲೂಕಿನಷ್ಟು ಉತ್ಪನ್ನವು ದಕ್ಷಿಣ ಮಹಾರಾಷ್ಟ್ರದಲ್ಲಿ ಯಾವ ತಾಲೂಕಿಗೂ ಇಲ್ಲ. ರೋಣದಲ್ಲಿ ೭ ಕರೆಕಲ್ಲಿನ ಗುಡಿಗಳಿವೆ. ಒಂದರಲ್ಲಿ ಸನ್ ೧೧೮೦ನೇ ವರ್ಷದ ಲಿಪಿಯುಂಟು.

ಸಂಗೂರು. — ಕರ್ಜಗಿಯ ನೈರುತ್ಯಕ್ಕೆ ೧೦ ಮೈಲಿನ ಮೇಲೆ ವರದಾ ನದಿಯ ದಂಡೆಯಲ್ಲಿ. ಒಂದು ಹಾಳು ಕೋಟೆ, ಯೆರಡು ಹಳೆ ಗುಡಿಗಳುಂಟು. ಇಲ್ಲಿ ೫ ಶಿಲಾ ಲಿಪಿಗಳಿರುತ್ತವೆ.

ಸಾತೆನ ಹಳ್ಳಿ. — ಕೋಡದ ವಾಯವ್ಯಕ್ಕೆ ೧೦ ಮೈಲಿನ ಮೇಲೆ. ಇಲ್ಲಿ ೫ ಗುಡಿ ಗಳಿವೆ; ಅವುಗಳಲ್ಲಿ ರಾಮಲಿಂಗನ ಗುಡಿಯು ಯೆಲ್ಲಕ್ಕೂ ದೊಡ್ಡದು. ಈ ವೂರಲ್ಲಿ ವೊಟ್ಟಿಗೆ ೮ ಲಿಪಿಗಳಿವೆ; ಅವೆಲ್ಲ ೧೧ನೇ ಶತಕದ ಈಚೆಯಲ್ಲಿ ಆದಂಥವು.

ಸವದಿ. — ರೋಣದ ಆಗ್ನೇಯಕ್ಕೆ ೫ ಮೈಲಿನ ಮೇಲೆ. ಬ್ರಹ್ಮದೇವ, ನಾರಾ ಯಣ, ಯೆಂಬ ಬುನಾದಿಯ ಗುಡಿಗಳಲ್ಲಿ ವೊಂದೊಂದು ಲಿಪಿಯುಂಟು. ಬ್ರಹ್ಮದೇವನ ಗುಡಿಯು ನೋಡ ತಕ್ಕಂಥಾದಿದೆ.

ಶಿಗ್ಗಾವಿ. — ಧಾರವಾಡದ ಆಗ್ನೇಯಕ್ಕೆ ೪೦ ಮೈಲಿನ ಮೇಲೆ, ಜ. ಸ. (೮೧) ೪೮೯೪. ಇಲ್ಲಿ ಬಂಕಾಪುರದ ತಾಲೂಕ ಕಚೇರಿ ಇರುತ್ತದೆ. ಊರ ಸುತ್ತು ಮುತ್ತು ತೋಟಗಳಿವೆ; ವ್ಯಾಪಾರವು ವೊಳಿತಾಗಿ ಆಗುತ್ತದೆ. ಇಲ್ಲಿ ಎರಡು ಬುನಾದಿಯ ಗುಡಿ ಗಳೂ ೧೦ ಶಿಲಾಲಿಪಿಗಳೂ ಇರುತ್ತವೆ. ಅವುಗಳಲ್ಲಿ ಕೆಲವುಗಳನ್ನು ಇನ್ನೂ ಯಾರು ಓದಿಲ್ಲ.

ಶೃಂಗೇರಿ. — ಹಾನಗಲ್ಲಿನ ನೈರುತ್ಯಕ್ಕೆ ೬ ಮೈಲಿನ ಮೇಲೆ. ಇದರ ಬಳಿಯಲ್ಲಿ ಧರ್ಮಾ ನದಿಗೆ ವೊಂದು ಬಹು ಭದ್ರವಾದ ವೊಡ್ಡು ಪುರಾತನದಲ್ಲಿ ಹಾಕಿದ್ದಾರೆ. ಅದು ಬುಡದಿಂದ ೧೭ ಫೂಟು ಯೆತ್ತರ, ತಲೆಯ ಮೇಲೆ ೪೦ ಫೂಟು ಅಗಲು, ೧೦ ಫೂಟು ಉದ್ದ ಇರುತ್ತದೆ. ಈ ವೊಡ್ಡಿಗೆ ಹಾಕಿದ ಕಲ್ಲುಗಳು ಹಾಳು ಬಿದ್ದ ಗುಡಿಗಳಿಂದ ತಂ ದಂತೆ ಕಾಣುತ್ತವೆ. ಕೆಲವು ಕಲ್ಲುಗಳ ಮೇಲೆ ಲಿಪಿಗಳು ಸಹ ಇರುತ್ತವೆ. ಆದ್ದರಿಂದ ಈ ವೊಡ್ಡನ್ನು ವಿಜಯನಗರದ ಅರಸರು ಹಾಕಿಸಿದರೆಂದು ತೋರುತ್ತದೆ. ಈ ಅರಸರು ಮಾಡಿಸಿದ ಜಲಾಶಯಗಳು ಯೆಲ್ಲ ಕಡೆಯಲ್ಲಿ ಹೆಸರಾಗಿರುತ್ತವೆ. ಈ ವೊಡ್ಡಿನ ಮೇಲ್ಗ ಡೆಯಿಂದ ದೊಡ್ಡದೊಂದು ಕಾವಲಿಯನ್ನು ತೆಗದು ೧೭ ಮೈಲು ದೂರ ವೊಯಿದಿದ್ದಾರೆ. ಈ ಕಾವಲಿಯಿಂದ ೭೦೦೦ ಯೆಕರು ತೋಟದ ಭೂಮಿಗೆ ನೀರು ಮೊರಿಯುವದಲ್ಲದೆ, ೪೯ ಕೆರೆಗಳು ತುಂಬುತ್ತವೆ.

ಸಿರಗೋಡ. — ಗದಗಿನ ಆಗ್ನೇಯಕ್ಕೆ ೪ ಮೈಲಿನ ಮೇಲೆ, ಜ. ಸ. (೮೧) ೧೧೫೮. ಕಲ್ಲೇಶ್ವರನ ಗುಡಿಯಲ್ಲಿಯೂ ಈಶ್ವರನ ಗುಡಿಯಲ್ಲಿಯೂ ವೊಂದೊಂದು ಲಿಪಿಯುಂಟು.

ಸಿರೂರು. — ಗದಗಿನ ಆಗ್ನೇಯಕ್ಕೆ ೪ ಮೈಲಿನ ಮೇಲೆ. ಮಳಗೀ ಈಶ್ವರ, ಓರಂಗಲ್ಲ ಬ್ರಹ್ಮದೇವ, ಯೆಂಬ ಗುಡಿಗಳೂ, ನಾಲ್ಕು ಲಿಪಿಗಳೂ ಇರುತ್ತವೆ. ಅವೆಲ್ಲ ೧೦ನೇ ಶತಕದ ಈಚೆಯಲ್ಲಿ ಆದಂಥವು.

ಸೊರಟೂರು. — ಗದಗಿನ ದಕ್ಷಿಣಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧)

೨೩೬೫. ಮೂರು ಗುಡಿಗಳೂ, ವೊಂದು ಜೈನರ ದೇವಸ್ಥಾನವೂ, ೫ ಲಿಪಿಗಳೂ ಇರುತ್ತವೆ. ಎಲ್ಲಕ್ಕೂ ಹಳೆಯ ಲಿಪಿಯು ೮೬೬ನೇ ವರ್ಷದ್ದಿರುತ್ತದೆ.

ಸೂಡಿ.—ರೋಣದ ಈಶಾನ್ಯಕ್ಕೆ ೯ ಮೈಲಿನ ಮೇಲೆ, ಜ. ಸ. (೪೧) ೧೯೯೩. ಇಲ್ಲಿ ನೂಲಿನ ಮಾರಾಟವು ನಡಿಯುತ್ತದೆ. ಹಳೇದೊಂದು ಕೋಟೆಯೂ, ಮೂರು ಗುಡಿಗಳೂ, ೮ ಲಿಪಿಗಳೂ ಇರುತ್ತವೆ. ಲಿಪಿಗಳೆಲ್ಲ ೧೦ನೇ ಶತಕದ ಈಚೆಯಲ್ಲಿ ಆದಂಥವು.

ಸುಳ್ಳ.—ಧಾರವಾಡದಿಂದ ಗದಗಿನ ಮಾರ್ಗದ ಮೇಲೆ, ಜ. ಸ. (೪೧) ೧೭೪೯. ಕಲಮೇಶ್ವರನ ದೊಡ್ಡ ಗುಡಿಯೂ ೪ ಲಿಪಿಗಳೂ ಇರುತ್ತವೆ. ಇವುಗಳ ಮಿತಿಗಳು ತಿಳಿದಿಲ್ಲ.

ತಡಸ.—ಶಿಗ್ಗಾವಿಯ ವಾಯವ್ಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೪೧) ೨೭೦೧. ಇಲ್ಲಿ ಕಲೆಕ್ಟರನ ಬಂಗಲೆಯುಂಟು.

ತೇಗೂರು.—ಧಾರವಾಡದ ಉತ್ತರಕ್ಕೆ ೧೫ ಮೈಲಿನ ಮೇಲೆ, ಜ. ಸ. (೪೧) ೧೭೭೧. ಇಲ್ಲಿ ಕಬ್ಬಿಣದ ಕಲ್ಲು ಹೇರಳವಾಗಿ ದೊರಿಯುತ್ತವೆ; ಕಬ್ಬಿಣ ಮಾಡುವ ಕಾರಖಾನೆಯೂ ವೊಂದುಂಟು. (೨ನೇ ಭಾಗ ನೋಡು). ಇಲ್ಲಿಯ ಕರೆವ್ವನ ಗುಡಿಯು ಹೆಸರಾದದ್ದಿರುತ್ತದೆ. ಊರ ಹೊರಗೆ ಕರೆವ್ವನ ಗವಿಯೊಂದುಂಟು.

ತುಮ್ಮಿನ ಕಟ್ಟಿ.—ರಾಣೇಬಿನ್ನೂರಿನ ದಕ್ಷಿಣಕ್ಕೆ ೧೫ ಮೈಲಿನ ಮೇಲೆ, ತುಂಗಭದ್ರೆಯ ದಂಡೆಯಲ್ಲಿ, ಜ. ಸ. (೪೧) ೪೬೦೨. ಬುಧವಾರ ಸಂತೆಯಾಗುತ್ತದೆ; ಸರಕಾರೀ ಶಾಲೆಯುಂಟು; ಮುಶಾಫರೀ ಬಂಗಲೆ ಇರುತ್ತದೆ.

ಉಣಕಲ್ಲು.—ಹುಬ್ಬಳ್ಳಿಯ ಉತ್ತರಕ್ಕೆ ೩ ಮೈಲಿನ ಮೇಲೆ, ಜ. ಸ. (೪೧) ೯೯೭೭. ಮೂರು ಹಳೆ ಗುಡಿಗಳೂ ಮೂರು ಲಿಪಿಗಳೂ ಇರುತ್ತವೆ. ಊರ ಹೊರಗೆ ಜರ್ಮನ್ ಮಿಶನರಿಗಳ ಬಂಗಲೆಯುಂಟು. ಈ ಹಳ್ಳಿಯ ಬಳಿಯಲ್ಲಿ ದೊಡ್ಡದೊಂದು ಕೆರೆ ಕಟ್ಟಿ ಹುಬ್ಬಳ್ಳಿಗೆ ನೀರು ತರುವ ಕಾರಖಾನೆಯು ಸದ್ಯಕ್ಕೆ (೧೪೯೨) ನಡಿದದೆ.

ವಡೆನಪುರ.—ಕೋಡದ ಉತ್ತರಕ್ಕೆ ೫ ಮೈಲಿನ ಮೇಲೆ, ಸಣ್ಣ ಹಳ್ಳಿ. ಇಲ್ಲಿ ಶಕೆ ೧೪೨೨ನೇ ದುಂದುಭಿ ಸಂವತ್ಸರದ ಕಾರ್ತಿಕ ಶುಧ್ಧ ದ್ವಾದಶೀ ಸೋಮವಾರ ದಿವಸ ಲಿಂಗ ಕುಂಟೆಯ ನಾಯಕನೆಂಬವನು ಕಪಿತೆ ಯೆಂಬ ಹೆಂಗಸನ್ನು ಕೊಂದ ಪಾಪದ ಪ್ರಾಯಶ್ಚಿತ್ತಕ್ಕಾಗಿ ಮೇಪುರವೆಂಬ ಹಳ್ಳಿಯನ್ನು ಜಂಗಮರಿಗೆ ದಾನ ಮಾಡಿದ ಲೇಖವು ವೊಂದು ಕಲ್ಲಿನ ಮೇಲೆ ಇರುತ್ತದೆ.

ವರಾಹ.—ಕೋಡದ ವಾಯವ್ಯಕ್ಕೆ ೧೦ ಮೈಲಿನ ಮೇಲೆ. ಕಲ್ಲೇಶ್ವರನ ಗುಡಿಯಲ್ಲಿ ವೊಂದು ವೀರಗಲ್ಲು, ವೊಂದು ಹೊಲದೊಳಗೆ ವೊಂದು ಮಹಾಸತೀ ಕಲ್ಲು ಇರುತ್ತವೆ. ಈ ಯೆರಡುಗಳ ಮೇಲೆಯೂ ಲಿಪಿಗಳುಂಟು.

ಯಲೀಶಿರೂರು.—ಗದಗಿನ ದಕ್ಷಿಣಕ್ಕೆ ೧೩ ಮೈಲಿನ ಮೇಲೆ. ಈಶ್ವರನ ಗುಡಿಯಲ್ಲಿ ೩, ಹನುಮಂತನ ಗುಡಿಯಲ್ಲಿ ೧, ಲಿಪಿಗಳಿವೆ. ಇವೆಲ್ಲ ೧೧ನೇ ಶತಕದ ಈಚೆಯಲ್ಲಿ ಆದಂಥವು.

ಯಾವಗಲ್ಲು.—ರೋಣದ ಪಶ್ಚಿಮಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೧೭೭೯. ಇದು ಸನ್ ೧೪೬೦ರ ವರೆಗೆ ಮಹಾಲಿನ ಮುಖ್ಯ ಗ್ರಾಮವಿತ್ತು.

ಯಮನೂರು.—ನವಲಗುಂದದ ನೈರುತ್ಯಕ್ಕೆ ೩ ಮೈಲಿನ ಮೇಲೆ, ಜ. ಸ. (೮೧) ೮೫೦. ಇಲ್ಲಿ ಪ್ರತಿ ವರ್ಷ ಫಾಲ್ಗುನ ವದ್ಯ ಪಂಚಮಿಯಿಂದ ೪ ದಿವಸ ಪೀರನ ದೊಡ್ಡ ಜಾತ್ರೆಯಾಗುತ್ತದೆ. ಈ ಜಾತ್ರೆಯಲ್ಲಿ ೨೦೦೦೦ದಿಂದ ೧೦೦೦೦೦ದ ವರೆಗೆ ಜನ ಕೂಡಿ, ಸುಮಾರು ೨೫೦೦೦ ರೂಪಾಯಿಯ ನಾನಾ ಪ್ರಕಾರದ ಸರಕುಗಳ ಮಾರಾಟವಾಗುತ್ತದೆ. ಕಾಳು, ಕಿರಾಣಿ, ಫಲಗಳು, ಮಿಠಾಯಿ, ಚಿತ್ರಗಳು, ಹೂ, ಕುರಿ, ಕೋಳಿ, ಮುಂತಾದವುಗಳೇ ಮಾರಾಟದ ಸರಕುಗಳು. ಈ ಜಾತ್ರೆಗೆ ಬೆಳಗಾವಿ, ಧಾರವಾಡ, ಕಾನಡಾ, ವಿಜಾಪುರ, ನಿಜಾಮನ ರಾಜ್ಯ, ಮುಂತಾದ ಕಡೆಯಿಂದ ಜನರು ಬರುತ್ತಾರೆ. ಹುಚ್ಚು ಹಚ್ಚಿಕೊಂಡ ಜನರು ಮುಖ್ಯವಾಗಿ ಯಮನೂರಿನ ಪೀರನಿಗೆ ಬೇಡಿಕೊಂಡು, ರೋಗವು ಹೋದ ಬಳಿಕ ಪೀರನ ದರ್ಶನಕ್ಕೆ ಬಂದು, ಕುರಿ ಕೋಳಿಗಳನ್ನು ಕೊಟ್ಟು ಕಂದೂರಿಯ ಮಾಡಿಸುವರು. ಹುಚ್ಚು ಹಚ್ಚಿಕೊಂಡ ಗಂಡಸರಂತೆ ಅಂಥಾ ಕಸಬಿಣಿಗಳೂ ಪಾತರದವರೂ ಬಹು ಜನರು ಈ ಜಾತ್ರೆಯಲ್ಲಿ ಕೂಡುವರು. ಯಮನೂರಿನ ಪೀರನೆಂದರೆ ಹುಚ್ಚು ಹಚ್ಚಿಕೊಂಡವರ ಕುಲ ದೇವತೆಯೆಂದು ಧಾರವಾಡದ ಶೀಮೆಯಲ್ಲಿ ಪ್ರಸಿದ್ಧಿಯುಂಟು.

ಈ ಪೀರನ ಕಥೆ ಹ್ಯಾಗಂದರೆ—ವಿಜಾಪುರದ ಆದಿಲ್‌ಶಾಹಿಯು ಹಾಳಾದ ಸುಮಾರಿನಲ್ಲಿ (೧೬೯೦) ಖಾಜಾಬಂದ ನವಾಝನೆಂಬ ವಲ್ಲಿಯು ವಿಜಾಪುರದಲ್ಲಿ, ಶಹಾಮಿರಝಾ ಅಬದುಲ್ ರಾಜಾಕಾದ್ರಿ ಯೆಂಬ ವಲ್ಲಿಯು ಕಳಬುರ್ಗೆಯಲ್ಲಿ ಇರುತ್ತಿದ್ದನು. ಮಿರಝಾ ಅಬದುಲ್ಲನು ಕೈಯೊಳಗೆ ಹಾವಿನ ಬಾರಕೋಲು ತಕ್ಕೊಂಡು, ಚೇಳಿನ ಲಗಾಮು ಹಾಕಿದ ಹುಲಿಯ ಮೇಲೆ ಕೂತು ಕೊಂಡು ಸಂಚಾರ ಮಾಡುವನಂತೆ. ಆದರಿಂದ ಅವನಿಗೆ "ರಾಜಾಬಾಗ ಸವಾರ"ನೆಂಬ ಹೆಸರು ಬಂದಿತ್ತು. ಒಂದಾನೊಂದು ದಿವಸ ಈ ವಲ್ಲಿಯು ತನ್ನ ಹುಲಿಯ ಮೇಲೆ ಕೂತುಕೊಂಡು ವಿಜಾಪುರದ ವಲ್ಲಿಯ ಭೇಟಿಗೆ ಹೊರಟನು. ಅವನು ವಿಜಾಪುರದ ಸಮೀಪಕ್ಕೆ ಬರಲಾಗಿ, ಖಾಜಾಬಂದ ನವಾಝನ ಮೊಮ್ಮಗನಾದ ೭ ವರ್ಷದ ಹುಡುಗನು, ಕಾದ್ರಿಯು ಹುಲಿಯ ಮೇಲೆ ಕೂತುಕೊಂಡು ಬರುತ್ತಾನೆಂದರಿತು, ತಾನು ವೊಂದು ಗೋಡೆಯ ಮೇಲೆ ಯೇರಿ ಕೂತು, ಅದನ್ನು ನಡಿಸುತ್ತ ಕಾದ್ರಿಯ ಯೆದುರಿಗೆ ಹೋದನು. ಕಾದ್ರಿಯು ಆ ಹುಡುಗನು ಗೋಡೆಯನ್ನು ನಡಿಸಿಕೊಂಡು ಬರುವದನ್ನು ನೋಡಿ ನಾಚಿ, ಮುಂದಕ್ಕೆ ಹೋಗದೆ, ಕಲಬುರ್ಗೆಗೆ ಹಿಂದಿರುಗಿ ಹೋಗಿ ದುಃಖದಿಂದ ಮರಣ ಹೊಂದಿದನು. ಖಾಜಾನವಾಝನು, ಅಂದರೆ ವಿಜಾಪುರದ ವಲ್ಲಿಯು, ಈ ಸಂಗತಿಯನ್ನು ಅಂತರ್ಜ್ಞಾನದಿಂದ ಅರಿತು, ತನ್ನ ಮೊಮ್ಮಗನಿಗೆ ಶಾಪ

ಕೊಟ್ಟು ಅವನನ್ನು ಭಸ್ಮ ಮಾಡಿದನು. ಮುಂದೆ ಆ ರಾಜಾಬಾಗ ಸವಾರನೆಂಬ ಕಲಬುರ್ಗೆಯ ವಲ್ಲಿಯ ದರ್ಗೆಗಳನ್ನು ಬಹಳ ಕಡೆಯಲ್ಲಿ ಕಟ್ಟಿ ಜನರು ಅವನಿಗೆ ನಡಕೊಳ್ಳ ಹತ್ತಿದರು. ಅದರಂತೆ ಸಾತಾರೆಯ ಜಿಲ್ಲೆಯಲ್ಲಿ ಕೋರೆಗಾವಯೆಂಬ ಗ್ರಾಮದ ಪಾಟೀಲನಾದ ಚಿತ್ರೋಜಿ ಯೆಂಬವನು ಆ ರಾಜಾಬಾಗ ಸವಾರನಿಗೆ ನಡಕೊಳ್ಳುತ್ತಿದ್ದನು. ಒಂದಾನೊಂದು ರಾತ್ರಿಯಲ್ಲಿ ಆ ವಲ್ಲಿಯು ಚಿತ್ರೋಜಿಯ ಸ್ವಪ್ನದಲ್ಲಿ ಬಂದು ನಿನಗೆ ಯೇನು ಬೇಕೆಂದು ಕೇಳಲಾಗಿ, ನೀನೇ ನನ್ನ ಬಳಿಯಲ್ಲಿ ಇರೆಂದು ಬೇಡಿಕೊಂಡನು. ಅದಕ್ಕೆ ವಲ್ಲಿ ನಿನ್ನ ತಲೆಗಿಂಬಿನ ಬಳಿಯಲ್ಲಿ ನನ್ನ ಕೈಯಂತೆ ಮಾಡಿಸಿದ ಪಂಜಾ ಇರುತ್ತದೆ; ಅದನ್ನು ತಕ್ಕೊಂಡು ಯಮನೂರಿಗೆ ಹೋಗಿ ಅಲ್ಲಿ ಅದರ ಪೂಜೆ ಮಾಡೆಂದು ಹೇಳಿದನು. ಆ ಪ್ರಕಾರ ಚಿತ್ರೋಜಿಯು ಯೆಚ್ಚತ್ತ ಬಳಿಕ ಅವನ ತಲೆಗಿಂಬಿನ ಬಳಿಯಲ್ಲಿ ಯೆರಡು ಬೆತ್ತಗಳು ಸಹಿತ ಬೆಳ್ಳಿಯ ಹುಲಿಯ ಮೇಲೆ ಯೇರಿದ್ದೊಂದು ಪಂಜಾವನ್ನು ಕಂಡನು. ಅವನು ಅವನ್ನು ತಕ್ಕೊಂಡು ಯಮನೂರಿಗೆ ಬಂದು ಪೂಜೆ ಮಾಡುತ್ತಿದ್ದನು. ಮುಂದೆ ಅವನ ವಂಶದವನೊಬ್ಬನು ಸನ್ ೧೭೦೦ರಲ್ಲಿ ಮಣ್ಣಿನ ಗೋಡೆಗಳನ್ನು ಹಾಕಿಸಿ ಈಗಿನ ದರಗೆಯನ್ನು ಕಟ್ಟಿಸಿದನು. ಆ ದರಗೆಯಲ್ಲಿ ಹಿತ್ತಾಳಿಯ ಯೆರಡು ಕುದುರೆಗಳ ಮೇಲೆ ಕೂತಂಥ ಯೆರಡು ಪಂಜಾಗಳನ್ನು ಈಗ ಪೂಜಿಸುತ್ತಾರೆ. ಚಿತ್ರೋಜಿಯ ವಂಶದವರೇ ಈ ಪಂಜಾಗಳ ಪೂಜಾರಿಗಳಾಗಿದ್ದಾರೆ. ಅವರಿಗೆ ಜಾತ್ರೆಯಲ್ಲಿ ಸುಮಾರು ೧೦೦೦ ರೂಪಾಯಿಯ ಪ್ರಾಪ್ತಿಯಾಗುತ್ತದೆ.

# ಬೆಳಗಾವಿಯ ಜಿಲ್ಲೆ.

ಐನಾಪುರ.—ಅಥಣಿಯ ನೈರುತ್ಯಕ್ಕೆ ೧೩ ಮೈಲಿನ ಮೇಲೆ ಕೃಷ್ಣೆಯ ದಂಡೆಯಲ್ಲಿ, ಜ. ಸ. (೮೧) ೪೩೫೭. ಇಲ್ಲಿ ಟಪಾಲ ಆಫೀಸು ಇರುತ್ತದೆ. ಊರ ಹೊರಗೆ ಪೀರ ಕಾಜೀ ಯೆಂಬ ಸತ್ಪುರುಷನ ಗೋರಿಯುಂಟು. ನಿವಾಸಿಗಳು ಮುಸಲ್ಮಾನರು ಬಹಳ; ಆರೋಗ್ಯದ ಗ್ರಾಮವು. ಮಿರ್ಜಿಯ ಗೋಪಾಳರಾಯನೆಂಬ ಪಟವರ್ಧನನು ನಷ್ಟಾಂಶನಾದದ್ದರಿಂದ ಸನ್ ೧೮೪೦ರಲ್ಲಿ ಐನಾಪುರವು ಖಾಲಸತಿಗೆ ಬಂತು.

ಅಕ್ಕೀವತ.—ಚಿಕ್ಕೋಡಿಯ ನೈರುತ್ಯಕ್ಕೆ ೧೦ ಮೈಲಿನ ಮೇಲೆ. ತಾಸಗಾವಿಯ ಪರಶುರಾಮ ಭಾವೂನು ಸನ್ ೧೭೭೭ರಲ್ಲಿ ಕಾದಿ ಈ ಕೋಟೆಯನ್ನು ತಕ್ಕೊಂಡನು. ಸನ್ ೧೮೦೭ರಲ್ಲಿ ಕೊಲ್ಲಾಪುರದವರ ಕಡೆಯಿಂದ ಸರಕಾರದವರು ತಕ್ಕೊಂಡರು. ಈ ಕೋಟೆಯು ಸುಮಾರು ೮೦೦ ಫೂಟು ಚಚ್ಚೌಕಾಗಿದೆ. ಕಂದಕವು ಪೂರಾ ಮುಗಿದಿಲ್ಲ.

ಅಂಕಲಗಿ.—ಗೋಕಾವಿಯ ನೈರುತ್ಯಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೨೦೦೦. ಲಕ್ಷ್ಮಿಯ ಗುಡಿಯು ಪೂರ್ವ ಕಾಲದ್ದಿರುತ್ತದೆ. ಅಂಕಲಿಗೆಯ ಸ್ವಾಮಿಯು ದಕ್ಷಿಣ ಮಹಾರಾಷ್ಟ್ರದಲ್ಲಿ ಪ್ರಸಿದ್ಧನಿದ್ದಾನೆ. ಇವನು ವಿರಕ್ತನಾದ ಅಯ್ಯನು. ಈ

ಅಯ್ಯನ ದರ್ಶನಕ್ಕೆ ಬಹು ಜನ ಲಿಂಗವಂತರು ಹೋಗುತ್ತಿರುತ್ತಾರೆ. ಇವನು ಮಹಿಮೆಯುಳ್ಳವನೆಂದು ಲಿಂಗವಂತರ ನಂಬಿಗೆಯುಂಟು.

ಅಥಣಿ.— ಉತ್ತರ ಅಕ್ಷಾಂಶ ೧೬°, ೪೦′, ಪೂರ್ವ ರೇಖಾಂಶ ೭೫°, ೭′, ಬೆಳಗಾವಿಯ ಈಶಾನ್ಯಕ್ಕೆ ೭೦ ಮೈಲಿನ ಮೇಲೆ, ಜನಸಂಖ್ಯ (೮೧) ೧೧೧೮೬. ಹಳೆವಸ್ತಿಯು ಹಾಳು ಬಿದ್ದರೆ, ಅದರ ಸುತ್ತು ಮುತ್ತಲಿನ ಕಂದಕವು ತುಂಬಿ ಹೋಗಿದೆ. ಈಗಿನ ವಸ್ತಿಗೆ ಯೆರಡು ಅಗಸೆಗಳಿರುತ್ತವೆ; ಆದಿತ್ಯವಾರ ಸಂತೆಯಾಗುತ್ತದೆ. ಅಡಿಕೆ, ಉತ್ತತ್ತಿ, ಅಕ್ಕಿ, ಉಪ್ಪು, ಅರಳೆ, ತುಪ್ಪ, ಗೋಧಿ, ಮುಂತಾದ ಸರಕುಗಳ ವ್ಯಾಪಾರವು ಬಹಳ ನಡಿಯುತ್ತದೆ; ಸಂತೆಯಲ್ಲಿ ದನಗಳ ವ್ಯಾಪಾರವೂ ವೊಳಿತಾಗಿ ಆಗುತ್ತದೆ. ಈ ವೂರಲ್ಲಿ ಗಾಲಿಯ ಹಳಿಗಳೂ ಸೋರುಪ್ಪೂ ಹುಟ್ಟುತ್ತವೆ. ತಾಲೂಕಿನ ಕಚೇರಿಗಳಲ್ಲದೆ, ಟಪಾಲ ಆಫೀಸು, ಆಸಪತ್ರಿ, ಮ್ಯುನಿಸಿಪಾಲಿಟಿ, ಸಬಜಡಜ ಕೋರ್ಟು, ಆರು ಶಾಲೆಗಳು ಇರುತ್ತವೆ. ಮ್ಯುನಿಸಿಪಾಲಿಟಿಯ ಆದಾಯವು ಸನ್ ೧೮೮೨-೮೩ರಲ್ಲಿ ೧೨೫೩೦ ರೂಪಾಯಿ ಇತ್ತು. ಊರಿಗೆ ಯೆರಡು ಶೀ ನೀರಿನ ಕೆರೆಗಳೂ ೧೧೧ ಬಾವಿಗಳೂ ಇರುತ್ತವೆ; ೧೪ ಬಾವಿಗಳ ನೀರು ಕುಡಿಯಲಿಕ್ಕೆ ಬರುತ್ತದೆ, ಉಳಿದ ಬಾವಿಗಳಿಲ್ಲ ಸೌಳು; ೪೫ ಬಾವಿಗಳಿಗೆ ಪಾವಟಗಳುಂಟು. ಮೊದಲ ಬಾವಿಯು ಯೆಲ್ಲಕ್ಕೂ ದೊಡ್ಡದು, ಸುತ್ತಳತೆ ಸುಮಾರು ೧೦೦ ಫೂಟು. ಇದರಲ್ಲಿ ನೀರು ೨೦ ಫೂಟಗಿಂತ ಕಿರಿದು ಯೆಂದೂ ಇರುವದಿಲ್ಲ. ಈ ಬಾವಿಯನ್ನು ಮ್ಯುನಿಸಿಪಾಲಿಟಿಯವರು ಸನ್ ೧೮೭೫ರಲ್ಲಿ ೩೬೫೦ ರೂಪಾಯಿ ವೆಚ್ಚ ಮಾಡಿ ಕಟ್ಟಿಸಿದರು. ಆದರೆ ಈ ಬಾವಿಯ ನೀರು ದನಕ್ಕೆ ಮಾತ್ರ ಕುಡಿಯಲಿಕ್ಕೆ ಬರುತ್ತದೆ. ಕುಂಬಾರ ಬಾವಿಯೂ ದೊಡ್ಡದಿರುತ್ತದೆ; ಅದರ ನೀರು ಮನುಷ್ಯರಿಗೆ ಕುಡಿಯಲಿಕ್ಕೆ ಬರುತ್ತದೆ. ಮ್ಯುನಿಸಿಪಾಲಿಟಿಯವರು ೪೦೦೦ ರೂಪಾಯಿ ವೆಚ್ಚ ಮಾಡಿ ಈ ಬಾವಿಯನ್ನು ದುರಸ್ತು ಮಾಡಿದ್ದಾರೆ. ಮ್ಯುನಿಸಿಪಾಲಿಟಿಯವರು ೭೦೦೦ ರೂಪಾಯಿ ವೆಚ್ಚ ಮಾಡಿ ಹೊಸ ಮಾರ್ಕೇಟು ಕಟ್ಟಿಸಿದ್ದಾರೆ; ಮಾರ್ಕೇಟನಲ್ಲಿಯ ಅಂಗಡಿಗಳಲ್ಲದೆ ಹಳೆ ಬಾಜಾರಿನಲ್ಲಿ ೨೭೫ ಅಂಗಡಿಗಳಿರುತ್ತವೆ. ಊರವರು ೧೫೦೦ ರೂಪಾಯಿ ವೆಚ್ಚ ಮಾಡಿ ಪುಸ್ತಕಾಲಯವನ್ನು ಕಟ್ಟಿಸಿದ್ದಾರೆ. ಈ ಊರಿಗೆ ಹಳೆದೊಂದು ಮಣ್ಣಿನ ಕೋಟೆಯುಂಟು. ಮಾಮಲೇದಾರ ಕಚೇರಿಯು ಮೊದಲು ಕೋಟೆಯೊಳಗಿನ ವೊಂದು ಹಳೆ ಮನೆಯಲ್ಲಿ ಇತ್ತು. ಈ ಊರಲ್ಲಿ ವೊಂದೇ ಅವಾರದೊಳಗೆ ಸಿದ್ದೇಶ್ವರನ ಗುಡಿ, ಅಮೃತೇಶ್ವರನ ಗುಡಿ, ವೊಂದು ಮಶೀದಿ ಇರುತ್ತವೆ. ಸಿದ್ಧೇಶ್ವರನಿಗೆ ಮುಸಲ್ಮಾನರು ಸಹ ನಡಕೊಳ್ಳುತ್ತಾರೆ, ಅದರ ಮೇಲೆ ಮಶೀದಿಯಂತೆ ಗುಮುಟವದೆ.

ಸನ್ ೧೬೩೯ರಲ್ಲಿ ಅಥಣಿಯು ವ್ಯಾಪಾರದ ದೊಡ್ಡ ಪಟ್ಟಣವಿತ್ತೆಂದು ವೊಬ್ಬ ಫ್ರೆಂಚ ಪ್ರವಾಸಿಯು ಬರಿದು ಇಟ್ಟಿದ್ದಾನೆ. ಅಥಣಿಯು ಸನ್ ೧೬೭೯ರಲ್ಲಿ ಮೊಗಲರ ಕೈ ಶೇರಿತು. ದಿಲಾವರಖಾನನೆಂಬ ಮೊಗಲ ಸರದಾರನು ಅಥಣಿಯ ನಿವಾಸಿಗಳನ್ನು ಗುಲಾಮರನ್ನು ಮಾಡಿ ಮಾರುವ ಪ್ರಯತ್ನ ಮಾಡಿದನು. ಆದರೆ ಶಿವಾಜಿಯ ಮಗ ಸಂಭಾಜಿಯು

ಅದನ್ನು ನಡಿಯಗೊಡಲಿಲ್ಲ. ನಿಜಾಮ ಉಲ್ಮುಲ್ಕನು ಸನ್ ೧೭೨೦ರಲ್ಲಿ ಅಥಣಿಯನ್ನು ತಕ್ಕೊಂಡು ಸ್ವಲ್ಪ ದಿವಸದೊಳಗೆ ಕೊಲ್ಲಾಪುರದ ಅರಸನಿಗೆ ಕೊಟ್ಟನು; ಅವನು ಅದನ್ನು ಸಾತಾರೆಯ ಶಾಹೂ ರಾಜನಿಗೆ ಕೊಟ್ಟನು. ಸನ್ ೧೮೩೯ರಲ್ಲಿ ನಿಪಾಣಕರನು ಸಂತತಿ ಇಲ್ಲದೆ ಮರಣ ಹೊಂದಿದ್ದರಿಂದ ಅಥಣಿಯು ಖಾಲಸಾತಿಗೆ ಬಂತು.

ಬಾಗೇವಾಡಿ.— ಬೆಳಗಾವಿಯ ದಕ್ಷಿಣಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೪೫೩೪. ಈ ಹಳ್ಳಿಯಿಂದ ವೊಂದು ಮೈಲಿನ ಮೇಲೆ ಚಿಕ್ಕ ಬಾಗೇವಾಡಿ ಯೆಂಬ ಸಣ್ಣ ಹಳ್ಳಿಯುಂಟು. ಅಲ್ಲಿ ವೊಂದು ತಾಮ್ರ ಶಾಸನವು ವೊಬ್ಬ ಜೇಡನ ಬಳಿಯಲ್ಲಿ ಸಿಕ್ಕದೆ. ಅದರಲ್ಲಿ ದೇವಗಿರಿಯ ಕೃಷ್ಣರಾಜನ (ಕಹ್ನರನ) ಅಪ್ಪಣೆಯಿಂದ ಶಕೆ ೧೧೭೧ರಲ್ಲಿ ೩೬ ಬ್ರಾಹ್ಮಣರಿಗೆ ಸಂತೆಯ ಬಾಗೇವಾಡಿಯಲ್ಲಿ ಕೆಲವು ಭೂಮಿಗಳನ್ನು ಇನಾಮು ಕೊಟ್ಟ ಬಗ್ಗೆ ಲೇಖವಿರುತ್ತದೆ. ಈ ಬ್ರಾಹ್ಮಣರಲ್ಲಿ ಕೆಲವರು ಕೊಂಕಣಸ್ಥರಿದ್ದರೆಂದು ಅವರ ಉಪನಾಮಗಳಿಂದ ತಿಳಿಯುತ್ತದೆ.

ಬೈಲಹೊಂಗಲ.— ಸಂಪಗಾವಿಯ ಪೂರ್ವಕ್ಕೆ ೬ ಮೈಲಿನ ಮೇಲೆ ದೊಡ್ಡ ಗ್ರಾಮವು, ಜ. ಸ. (೮೧) ೭೮೦೬. ಇದರ ಸುತ್ತು ಮುತ್ತು ವಿಸ್ತಾರವಾದ ಬೈಲು ಇರುವ ಕಾರಣ ಈ ಹೆಸರು ಬಂದದೆ. ನಿವಾಸಿಗಳು ಮುಖ್ಯವಾಗಿ ಲಿಂಗವಂತರು. ವ್ಯಾಪಾರವು ವೊಳಿತಾಗಿ ನಡಿಯುತ್ತದೆ. ಶುಕ್ರವಾರ ಸಂತೆಯಲ್ಲಿ ದನಗಳ ಮಾರಾಟ ಬಹಳ ಆಗುತ್ತದೆ. ಮೇಲಾದ ಧಡೋತಿಯ ವಸ್ತ್ರಗಳು ಹುಟ್ಟುತ್ತವೆ. ಇಲ್ಲಿ ಲಕ್ಷಾಧೀಶರಾದ ಸಾವಕಾರರು ಕೆಲವರಿರುತ್ತಾರೆ. ಬಟ್ಟೆಗಳು, ಅಡಿಕೆ, ಬೆಲ್ಲ, ನೀಲಿ, ಅರಳೆ, ಮುಂತಾದವುಗಳ ವ್ಯಾಪಾರವು ವೊಳಿತಾಗಿ ನಡಿಯುತ್ತದೆ. ಇಲ್ಲಿ ಸರಕಾರೀ ಶಾಲೆಗಳು, ಟಪಾಲ ಕಚೇರಿ, ಮಿಶನರಿಗಳ ಬಂಗಲೆ, ಇರುತ್ತವೆ. ಊರ ಹೊರಗೆ ಉತ್ತರಕ್ಕೆ ಪುರಾತನದ್ದೊಂದು ಗುಡಿಯುಂಟು. ಅದರಲ್ಲಿ ಈಗ ಲಿಂಗವನ್ನು ಸ್ಥಾಪಿಸಿದ್ದಾರೆ. ಆದರೆ ಅದು ಮೊದಲು ಜೈನ ಬಸ್ತಿ ಇತ್ತೆಂದು ತೋರುತ್ತದೆ. ಕಾರ್ತಿಕ ಮಾಸದಲ್ಲಿ ಈ ದೇವರ ಜಾತ್ರೆಯಲ್ಲಿ ಸುಮಾರು ೧೨೦೦೦ ಜನ ಕೂಡುತ್ತದೆ. ಈ ಗುಡಿಯಲ್ಲಿ ಸವದತ್ತಿಯ ರಟ್ಟರಾಜರು ಬರಿಸಿದ ಯೆರಡು ಲಿಪಿಗಳಿವೆ. ಒಂದು ಬಹಳ ಸವಿದದ್ದರಿಂದ ಓದಲಿಕ್ಕೆ ಬರುವ ಹಾಗಿಲ್ಲ; ಎರಡನೇದು ಸನ್ ೧೧೬೪ರಲ್ಲಿ ಬರಿದದ್ದಿರುತ್ತದೆ.

ಬೆಳವಡಿ.— ಸಂಪಗಾವಿಯ ಆಗ್ನೇಯಕ್ಕೆ ೧೨ ಮೈಲಿನ ಮೇಲೆ, ಜ. ಸ. (೮೧) ೩೧೬೦. ಮಂಗಳವಾರ ಸಂತೆಯಾಗುತ್ತವೆ. ವೀರಭದ್ರನ ಗುಡಿಯು ಪುರಾತನದ್ದಿರುತ್ತದೆ. ಅದರಲ್ಲಿ ವೊಡಿದದ್ದೊಂದು ಲಿಪಿಯು (೧೦೭೦) ಇರುತ್ತದೆ. ಚೈತ್ರ ಮಾಸದಲ್ಲಿ ವೀರಭದ್ರನ ಜಾತ್ರೆಯಲ್ಲಿ ಸುಮಾರು ೧೫೦೦ ಜನ ಕೂಡುತ್ತದೆ.

ಬೆಳಗಾವಿ.— ಉತ್ತರ ಅಕ್ಷಾಂಶ ೧೫°, ೫೨', ಪೂರ್ವ ರೇಖಾಂಶ ೭೪°, ೪೨', ಧಾರವಾಡದ ಉತ್ತರದಲ್ಲಿ ೪೫ ಮೈಲಿನ ಮೇಲೆ. ಊರಿನ ಕ್ಷೇತ್ರವು ೨೮೯ ಯೆಕರು, ಜನಸಂಖ್ಯೆ (೮೧) ೨೩೦೦೦, ಅಂದರೆ ಯೆಕರಿಗೆ ೭೯ ಜನವಾಯಿತು. ಇದರ ಹೊರ್ತು ಯುರೋಪಿಯನ ವಸ್ತಿಯ ಜನಸಂಖ್ಯೆ ೯೫೮೨ ಬೇರೆ. ಬೆಳಗಾವಿಯು ಸಮುದ್ರ ತೀರ

ದಿಂದ ಸರಳ ರೇಖೆಯಿಂದ ೫೦ ಮೈಲು ದೂರ ಇರುತ್ತದೆ; ಸಮುದ್ರದ ಪೃಷ್ಠ ಭಾಗ ದಿಂದ ಸುಮಾರು ೨೫೦೦ ಪೂಟು ಯೆತ್ತರ ಉಂಟು.

ಸ್ವರೂಪ.—ಬೆಳಗಾವಿಯ ಪಶ್ಚಿಮಕ್ಕೆ ಸಹ್ಯಾದ್ರಿಯ ನೆತ್ತಿಯು ೨೫ ಮೈಲು ದೂರ ಇರುತ್ತದೆ; ನಡುವೆ ಬಹುತರ ಗುಡ್ಡಗಾಡು ಭೂಮಿಯೇ ಉಂಟು. ಯೆಳ್ಳೂರಗಡ, ಬೆಳಗುಂದೀ ಗುಡ್ಡ, ವೈಜನಾಥನ ಗುಡ್ಡ, ಮುಂತಾದ ಗುಡ್ಡಗಳು ಬೆಳಗಾವಿಯ ನೆರೆ ಯಲ್ಲಿ ಇರುತ್ತವೆ. ಊರ ದಕ್ಷಿಣಕ್ಕೆ ಅರ್ಧ ಮೈಲಿನ ಮೇಲೆ ಶಹಾಪುರ, ಹೊಸೂರು, ಹೊಸಗಟ್ಟಿ, ಯೆಂಬ ಸಾಂಗಲೀ ಸಂಸ್ಥಾನದ ಗ್ರಾಮಗಳಿರುತ್ತವೆ. ಊರ ಸುತ್ತು ಮುತ್ತು ನಾನಾ ಪ್ರಕಾರದ ಬನಗಳು ನಿಬಿಡವಾಗಿ ಬೆಳಿದದ್ದರಿಂದ ದೂರಿಂದ ಬೆಳಗಾವಿಯು ನಿಬಿಡ ವಾದ ಅಡವಿಯ ಹಾಗೆ ಕಾಣುತ್ತದೆ.

ಭೂರಚನೆ.—ಬೆಳಗಾವಿಯ ನೆಲದೊಳಗೆ ಜಂಬೂರಿ ಇಟ್ಟಂಗಿ ಯೆಂಬ ಮಿದು ವಾದ ಕಲ್ಲಿನಂಥ ಥರವಿರುತ್ತದೆ. ಈ ಇಟ್ಟಂಗಿಗಳನ್ನು ಕೊರಿದು ತೆಗಿದು ಅವುಗಳಿಂದ ಮನೆಗಳನ್ನು ಕಟ್ಟುವರು. ಕೆಲವು ಕಡೆಯಲ್ಲಿ ನೆಲದೊಳಗೆ ಕರೆಕಲ್ಲುಗಳೂ ದೊರಿ ಯುತ್ತವೆ.

ನೀರು.—ಬಹುತರ ಮನೆ ಮನೆಗೆ ಬಾವಿಗಳಿರುವದಲ್ಲದೆ, ಮ್ಯುನಿಸಿಪಾಲಿಟಿಯ ವರು ನಾಲ್ಕೈದು ದೊಡ್ಡ ದೊಡ್ಡ ಸೇದುವ ಬಾವಿಗಳನ್ನು ಬೇರೆ ಬೇರೆ ಭಾಗಗಳಲ್ಲಿ ಕಡಿಸಿ ಕಟ್ಟಿದ್ದಾರೆ. ಈ ಬಾವಿಗಳ ನೀರು ತೀ ಇರುತ್ತದೆ. ನೈರುತ್ಯ ಮೂಲೆಯಲ್ಲಿ ನೀರು ಹೆಚ್ಚು ಸೌಳು ಇರುತ್ತದೆ. ಇವಲ್ಲದೆ ಊರ ಸುತ್ತು ಮುತ್ತು ೫ ಕೆರೆಗಳಿರುತ್ತವೆ. ಕಿಲ್ಲೆಯ ಕೆರೆಯು ಕೋಟೆಯ ಬಳಿಯಲ್ಲಿ ಇರುತ್ತದೆ. ಇದು ಯೆಲ್ಲಕ್ಕೂ ದೊಡ್ಡದು, ಕ್ಷೇತ್ರವು ಸುಮಾರು ೬೦ ಯೆಕರು ಇರುತ್ತದೆ. ಕಪಿಲೇಶ್ವರನ ಯೆರಡು ಸಣ್ಣ ಹೊಂಡ ಗಳು ಅದೇ ಗುಡಿಯ ಬಳಿಯಲ್ಲಿ ಶಹಾಪುರಕ್ಕೆ ಹೋಗುವ ಮಾರ್ಗದ ಯೆಡ ಬಲಗ ಳಲ್ಲಿ ಇರುತ್ತವೆ. ಅರಗನ ಕೆರೆಯು ವೆಂಗುರ್ಲೆಯ ಮಾರ್ಗದ ಮೇಲೆ ಇರುತ್ತದೆ. ಜಕೀರ ಹೊಂಡವು ಖಾನಾಪುರದ ಮಾರ್ಗದ ಮೇಲೆ ಇರುತ್ತದೆ. ಈ ಕೆರೆಗಳು ಬೇಸಿ ಗೆಯಲ್ಲಿ ಬತ್ತುತ್ತವೆ. ಇವುಗಳ ನೀರು ಯಾರು ಕುಡಿಯುವದಿಲ್ಲ; ದನಗಳಿಗೂ ಭೂಮಿಗೂ ಮಾತ್ರ ಕೆಲಸಕ್ಕೆ ಬರುತ್ತದೆ. ಕೋಟೆಯ ಕಂದಕದಲ್ಲಿಯೂ ನೀರು ಬೇಸಿ ಗೆಯ ವರೆಗೆ ಇರುತ್ತದೆ.

ಯುರೋಪಿಯನ್ ವಸ್ತಿಯ ದಕ್ಷಿಣಕ್ಕೆ ನಾಗಝರಿ ಯೆಂಬದೊಂದು ಸಣ್ಣ ಜರಿಯು ಹರಿಯುತ್ತದೆ. ಈ ಜರಿಯು ಚೌಕೋನಾಕೃತಿಯಾಗಿ ಕಟ್ಟಿದ್ದೊಂದು ಸಣ್ಣ ಹೊಂಡದೊ ಳಗಿಂದ ಹನ್ನೆರಡು ತಿಂಗಳೂ ಹರಿಯುತ್ತದೆ. ಇದರ ನೀರು ಅತಿ ನಿರ್ಮಲವೂ ಆರೋ ಗ್ಯಕರವೂ ಇರುತ್ತದೆ. ತುಡಿಯೆ ಯೆಂಬ ನೆರೆ ಹಳ್ಳಿಯಿಂದ ಬೆಳಗಾವಿಗೆ ನೀರು ತರುವ ಆಲೋಚನೆಯುಂಟು.

ಹವೆ, ಮಳೆ.—ಊರಿನ ಸುತ್ತು ಮುತ್ತು ಗುಡ್ಡಗಳಿರುವದರಿಂದ ಮಳೆಯು ಬಹಳ ಆಗುತ್ತದೆ; ಸರಾಸರೀ ಮಾನದಿಂದ ವರ್ಷದೊಳಗೆ ೫೦ ಇಂಚು ಮಳೆ ಬೀಳುತ್ತದೆಂದು

ಹೇಳ ಬಹುದು. ಬೇಸಿಗೆಯಲ್ಲಿ ಹವೆಯು ಆರೋಗ್ಯದ್ದಿರುತ್ತದೆ. ಮಳೆಗಾಲದ ಆರಂಭ ದಲ್ಲಿ ಚಳಿ ಜ್ವರದ ಉಪದ್ರವ ಬಹಳ. ಚಳಿಗಾಲದಲ್ಲಿ ಬೆಳಿಗ್ಯೂ ಸಂಜೆಗೂ ಮಂಜು ಬೀಳುತ್ತದೆ. ಹೊರಗಿಂದ ಬಂದವರಿಗೆ ಹವೆಯು ಮಾನಿಸುವದಿಲ್ಲ. ಪಟಕಿಯ ಉಪ ದ್ರವವು ಬಹು ಕಡಿಮೆ.

ಕೋಟೆಯು.—ಊರಿನ ಪೂರ್ವಕ್ಕೆ ವೊಂದು ಗುಂಡಿನ ಅಳತಿಯೊಳಗೆ ಇರು ತ್ತದೆ. ಈ ಕೋಟೆಯನ್ನು ಸರಕಾರದವರು ದುರಸ್ತು ಇಟ್ಟಿದ್ದಾರೆ. ಇದು ವರ್ತುಳಾಕೃ ತಿಯಾಗಿರುತ್ತದೆ; ಪರಮಾವಧಿ ಉದ್ದಳತೆ ೧೦೦೦ ಯಾರ್ಡು ಅಗಲು ೮೦೦ ಯಾರ್ಡು, ಕ್ಷೇತ್ರ ೧೦೦ ಯೆಕರು. ಇದರ ಸುತ್ತು ಮುತ್ತು ನೀರು ತುಂಬಿದ ಕಂದಕವೂ ಯೆತ್ತರ ವಾದ ಗೋಡೆಗಳೂ ಭದ್ರವಾಗಿರುತ್ತವೆ; ಅಗಸೆಗಳು ಯೆರಡುಂಟು. ಕೋಟೆಯ ಗೋ ಡೆಯೊಳಗೆ ಹಾಳಾದ ಗುಡಿಗಳಿಂದ ತಂದಂಥ ಚಿತ್ರಗಳುಳ್ಳ ಕಲ್ಲುಗಳೂ, ಶಿಲಾಲಿಪಿಗಳೂ, ವೀರಗಲ್ಲುಗಳೂ, ಮಹಾಸತೀ ಕಲ್ಲುಗಳೂ ಕಾಣುತ್ತವೆ. ಕೋಟೆಯ ಗೋಡೆಯಲ್ಲಿ ಮೂರು, ಕಡೆಯಲ್ಲಿ ಫಾರ್ಶೀ ಲಿಪಿಗಳಿವೆ. ಈಶಾನ್ಯ ದಿಕ್ಕಿನ ಗೋಡೆಯ ಮೇಲೆ ಸನ್ ೧೫೪೦ರಲ್ಲಿ ಯಾಕೂಬ ಅಲ್ಲೀಖಾನನೆಂಬವನು ಈ ಗೋಡೆಯನ್ನು ಕಟ್ಟಿಸಿದನೆಂದು ಲೇಖವದೆ. ಆಗ್ನೇಯ ದಿಕ್ಕಿನ ಗೋಡೆಯ ಮೇಲೆ ಇಂಥಾದೇ ವೊಂದು ಲಿಪಿಯು ಸನ್ ೧೬೩೦ರಲ್ಲಿ ಅಬದುಲ್ ಹುಸೇನನ ಕಾಲದಲ್ಲಿ ಈ ಕೋಟೆಯನ್ನು ದುರಸ್ತು ಮಾಡಿ ಯಾವತ್ತು ಬಹುತರ ಹೊಸದಾಗಿ ಕಟ್ಟಿಸಿದಂತೆ ಭದ್ರ ಮಾಡಲ್ಪಟ್ಟಿತೆಂದು ಹೇಳು ತ್ತದೆ. ಕೋಟೆಯ ಅಗಸೆಯನ್ನು ಇದೇ ಕಾಲಕ್ಕೆ ಬಾಂದೇ ಅಲ್ಲೀ ಯೆಂಬವನು ಕಟ್ಟಿಸಿ ದನೆಂದು ಲೇಖವದೆ. ಅಗಸೆಯ ವೊಳ ಮೈಯಲ್ಲಿ ದುರ್ಗೆಯ ಗುಡಿಯುಂಟು. ಈ ಕೋಟೆಗೂ ಯೆಳ್ಳೂರಗಡಕ್ಕೂ ನೆಲದೊಳಗಿಂದ ಮಾರ್ಗವನ್ನು ಕಟ್ಟಿದ್ದಾರೆಂದು ಹೇಳುತ್ತಾರೆ.

ಕೋಟೆಯೊಳಗೆ ಅಸದಖಾನನು ಕಟ್ಟಿಸಿದೊಂದು ಬಹು ಸುಂದರವಾದ ದೊಡ್ಡ ಮಶೀದಿಯುಂಟು; ಅದಕ್ಕೆ ಸೋಫಾ ಮಶೀದಿಯನ್ನುವರು. ಈ ಮಶೀದಿಯೊಳಗೆ ಅಸದ ಖಾನನ ಚಿಲಕತ್ತು, ಕಬ್ಬಿಣ ಸೀಸುಗಳಿಂದ ಮಾಡಿದ ಕಾಲು ಜೋಡುಗಳು, ಅವನು ಓದುತ್ತಿದ್ದ ಕುರಾಣದ ಪುಸ್ತಕ, ಇರುತ್ತವೆ. ಅವನ ಕತ್ತಿಯೂ ವೊಂದು ಇತ್ತು. ಆದರೆ ಅದನ್ನು ಸನ್ ೧೮೫೭ರಲ್ಲಿ ವೊಬ್ಬ ಸೋಜಿರನು ಕದ್ದನು. ಸನ್ ೧೮೫೭ರ ಬಂಡಾಯದ ವರೆಗೆ ಮುಸಲ್ಮಾನರು ಈ ಮಶೀದಿಗೆ ಪ್ರಾರ್ಥನೆಗೆ ಹೋಗುತ್ತಿದ್ದರು; ಆ ವರ್ಷ ಸರ ಕಾರದ ಹುಕುಮಿನಿಂದ ಮಶೀದಿಯ ಬಾಗಿಲು ಇಕ್ಕಿಸಿದರು.

ಕೋಟೆಯೊಳಗೆ ಮೂರು ಜೈನರ ಗುಡಿಗಳಿವೆ. ಕಮಿಸರೀ ಅವಾರಿನ ಬಳಿಯಲ್ಲಿ ಇರುವ ಗುಡಿಯ ಗರ್ಭಾಗಾರವು ಪೂರಾ ಹೋಗಿರುತ್ತದೆ. ಅದರ ಮಂಟಪದಲ್ಲಿ ಚಲು ವಾದ ಚಿತ್ರಗಳನ್ನು ಕಲ್ಲಿನೊಳಗೆ ಕೊರಿದಿದ್ದಾರೆ. ಎರಡನೇ ಗುಡಿಯು ಕಮಿಸರೀ ಅವಾರಿನೊಳಗೆ ತಕ್ಕಮಟ್ಟಿಗೆ ದೊಡ್ಡದಿರುತ್ತದೆ. ಇದರಲ್ಲಿಯೂ ಮನೋಹರವಾದ ದೇವಾದಿಗಳ ಚಿತ್ರಗಳನ್ನು ಕೊರಿದಿದ್ದಾರೆ. ಮೂರನೇ ಗುಡಿಯಲ್ಲಿ ಸೋಜಿರರು ಇರು

ತ್ತಾರೆ; ಅದರ ಗುರ್ತು ಹತ್ತುವ ಹಾಗಿಲ್ಲ. ಈ ಗುಡಿಗಳಲ್ಲಿ ಸವದತ್ತಿಯ ರಟ್ಟ ಅರಸರು ೧೧ನೇ ೧೨ನೇ ಶತಕಗಳಲ್ಲಿ ಬರಿಸಿದ ಲಿಪಿಗಳಿದ್ದವು; ಅವನ್ನು ಈಗ ಮುಂಬಯಿಗೆ ವೈದಿದ್ದಾರೆ.

ಊರು. — ಕೋಟೆಯ ಪಶ್ಚಿಮಕ್ಕೆ ಸುಮಾರು ಅರ್ಧ ಮೈಲಿನ ಮೇಲೆ ಬೆಳಗಾವಿಯ ಊರಿನ ವಸ್ತಿ ಇರುತ್ತದೆ. ಊರೊಳಗೆ ಮಾರುತಿಗಲ್ಲಿ, ಅನಂತಶಯನಗಲ್ಲಿ, ಇವೆರಡು ಮುಖ್ಯ ಓಣಿಗಳಿರುತ್ತವೆ. ಈ ಓಣಿಗಳಲ್ಲಿ ಬ್ರಾಹ್ಮಣರೇ ಮುಖ್ಯವಾಗಿ ವಾಸಿಸುತ್ತಾರೆ. ಮಾರುತಿಯ ಗಲ್ಲಿಯಲ್ಲಿ ಹನುಮಂತ ದೇವರ ಗುಡಿಯು ವಿಸ್ತಾರವಾದದ್ದಿರುತ್ತದೆ. ಅದರಲ್ಲಿ ಮಾರ್ಗಸ್ಥರಿಗೆ ಇಳಿಯಲಿಕ್ಕೆ ಸರಸಾದ ಧರ್ಮಶಾಲೆಗಳಿವೆ. ಊರು ಬೆಳಿಗೆಯ ಸ್ಥಿತಿಯಲ್ಲಿದೆ. ಪ್ರತಿ ವರ್ಷ ನೂರಾರು ಹೊಸ ಹೊಸ ಮನೆಗಳಾಗುತ್ತವೆ. ಪೂರ್ವದ ಹಳೆ ಮನೆಗಳಿಗಿಂತ ಈಗಾಗುವ ಮನೆಗಳು ಹೆಚ್ಚು ಚಂದವಾಗಿಯೂ ಆರೋಗ್ಯಕರವಾಗಿಯೂ ಇರುತ್ತವೆ. ಹೊಗೆಬಂಡಿ ಬಂದಾಗಿನಿಂದ ಊರಿನ ವಸ್ತಿಯು ವೊಳಿತಾಗಿ ಬೆಳಿದದೆ.

ಯುರೋಪಿಯನ್ ವಸ್ತಿಯು. — ಇದು ಊರಿನ ಉತ್ತರಕ್ಕೆ ಬಹುತರ ಊರಿಗೆ ಹೊಂದಿದ ಹಾಗೇ ಇರುತ್ತದೆ. ಈ ವಸ್ತಿಯ ಪ್ರದೇಶವು ಊರಿಗಿಂತ ಹೆಚ್ಚಾಗ ಬಹುದು. ಆದರೆ ಜನಸಂಖ್ಯವು ೧೮೮೧ರಲ್ಲಿ ೯೫೮೨ ಇತ್ತು. ಬೆಳಗಾವಿಯ ಹವೆಯು ಯುರೋಪಿಯನ್ ಜನರಿಗೆ ವೊಳಿತಾಗಿ ಮಾನಿಸುವದರಿಂದ ಪೆನಶನರರು ಮುಂತಾದ ಬಹು ಜನ ಯುರೋಪಿಯನ್ ಸುಖ ವಸ್ತುಗಳು ಇಲ್ಲಿ ಮನೆ ಮಾಡಿದ್ದಾರೆ. ಪುಣೆಯಿಂದ ಬೆಂಗಳೂರಿನ ವರೆಗೆ ಬೆಳಗಾವಿಯಷ್ಟು ಯುರೋಪಿಯನ ಜನರ ವಸ್ತಿಯು ಯೆಲ್ಲಿಯೂ ಇಲ್ಲ. ಈ ವಸ್ತಿಯಲ್ಲಿ ಸೇಂಟ ಮೇರೀ ಚರ್ಚ ಯೆಂಬ ಪ್ರಾಟೆಸ್ಟಂಟ ಪ್ರಾರ್ಥನಾಲಯವು ಬಹು ಭವ್ಯವಾಗಿಯೂ ಯೆತ್ತರವಾಗಿಯೂ ಇರುತ್ತದೆ. ದೂರಿಂದ ಊರ ಸುತ್ತು ಮುತ್ತಲಿನ ಬನಗಳೊಳಗಿಂದ ಈ ಚರ್ಚ ವೊಂದೇ ಮಾತ್ರ ಕಾಣಿಸುತ್ತದೆ. ಈ ವಸ್ತಿಯಲ್ಲಿ ಸದರ ಬಾಜಾರೆಂಬ ಭಾಗವು ಹೆಚ್ಚು ದಟ್ಟಾದ ವಸ್ತಿಯುಳ್ಳದ್ದಿರುತ್ತದೆ.

ಲಷ್ಕರವು. — ಊರಿನ ಪಶ್ಚಿಮಕ್ಕೆ ಸುಮಾರು ಅರ್ಧ ಮೈಲಿನ ಮೇಲೆ ಯುರೋಪಿಯನ್ ವಸ್ತಿಗೆ ಸಮೀಪವಾಗಿ ಇರುತ್ತದೆ. ಲಷ್ಕರದೊಳಗೆ ವೊಂದು ಯುರೋಪಿಯನ್ ರೆಜಿಮೆಂಟು, ಯೆರಡು ನೇಟೀವ ರೆಜಿಮೆಂಟಗಳು, ವೊಂದು ತೋಪಖಾನೆಯ ಬ್ಯಾಟರಿ, ಕೆಲವರು ರಾಹುತರು ಇರುತ್ತಾರೆ. ಸೋಲ್ಜರರ ಬರಾಕುಗಳನ್ನು ಬಹಳ ಹಣ ವೆಚ್ಚ ಮಾಡಿ ಕಟ್ಟಿದ್ದಾರೆ.

ಶಾಲೆಗಳು. — ಸರದಾರರ ಹಾಯಸ್ಕೂಲೆಂಬ ಇಂಗ್ಲಿಷ ಶಾಲೆಯು ದೊಡ್ಡದಿರುತ್ತದೆ. ಇದನ್ನು ಕುರಿತು ೧೧ನೇ ಭಾಗದಲ್ಲಿ ಬರಿದಿದ್ದೇವೆ. ಊರವರು ಸ್ಥಾಪಿಸಿದ್ದೊಂದು ಹೆಣ್ಣು ಮಕ್ಕಳ ಶಾಲೆಯು ಮಾರುತಿಯ ಗಲ್ಲಿಯಲ್ಲಿ ಇರುತ್ತದೆ. ಈ ಶಾಲೆಯು ವೊಳಿತಾಗಿ ನಡಿಯುತ್ತದೆ. ಇವಲ್ಲದೆ ವೊಂದು ಮರಾಠೀ ಶಾಲೆಯೂ, ೭ ಕನ್ನಡ ಶಾಲೆಗಳೂ ಇರುತ್ತವೆ. (ಹೆಚ್ಚಿನ ವಿವರವನ್ನು ೧೧ನೇ ಭಾಗದಲ್ಲಿ ನೋಡು.)

ಪುಸ್ತಕಾಲಯಗಳು.— ಒಂದು ಪುಸ್ತಕಾಲಯವು ಈ ಜಿಲ್ಲೆಯಲ್ಲಿ ಯೆಲ್ಲಕ್ಕೂ ಹಳೇದಿರುತ್ತದೆ. ಮ್ಯುನಿಸಿಪಾಲಿಟಿಯಿಂದ ಇದಕ್ಕೆ ಆಗಾಗ್ಗೆ ಸಹಾಯ ದೊರಿಯುವ ಕಾರಣ ಇದು ವೊಳಿತಾಗಿ ನಡಿಯುತ್ತದೆ. (೧೧ನೇ ಭಾಗ ನೋಡು).

ಕೈಗಾರಿಕೆಗಳು.— ಮುಖ್ಯ ಕೈಗಾರಿಕೆಯ ಹೋರೆಯು ಬಟ್ಟೆಗಳನ್ನು ನೆಯ್ಯುವದಿರುತ್ತದೆ. ಥಡೋತಿಯ ಶೀರೆಗಳೂ, ಧೋತ್ರಗಳೂ, ಬೆಲೆಯುಳ್ಳ ರೇಶಿಮೆಯ ಶೀರೆಗಳೂ ಮುಂತಾದ ವಸ್ತ್ರಗಳು ವೊಳಿತಾಗಿ ಹುಟ್ಟುತ್ತವೆ. ಪ್ರತಿ ವರ್ಷ ಸುಮಾರು ೧ ಲಕ್ಷ ೧೫ ಸಾವಿರ ರೂಪಾಯಿಯ ವಸ್ತ್ರಗಳ ಮಾರಾಟವಾಗುತ್ತದೆ. ಗಾಣಿಗರ ಹೋರೆಯಾದರೂ ವೊಳಿತಾಗಿ ನಡಿಯುತ್ತದೆ. ಇಲ್ಲಿಯ ಗಾಣಿಗರಷ್ಟು ಸುಖಿಯಾದವರು ಬೇರೆ ಕಡೆಯಲ್ಲಿ ದೊರಿಯುವದು ಅಪರೂಪವು. ನೀಲಗಾರರೂ ಕುಸಂಬಿಯ ಬಣ್ಣ ಕೊಡುವ ರಂಗಾರಿಗಳೂ ಹಲ ಕೆಲವರುಂಟು. ಚರ್ಮಕ್ಕೆ ಕರಿ ಹಾಸುವ ಹೋರೆಯು ಢೋರರೊಳಗೆ ವೊಳಿತಾಗಿ ನಡಿಯುತ್ತದೆ.

ವ್ಯಾಪಾರ.— ಬೆಳಗಾವಿಯಲ್ಲಿ ವೊಟ್ಟಿಗೆ ೨೫೦ ಜನ ವ್ಯಾಪಾರಸ್ಥರಿರುತ್ತಾರೆ; ಇವರ ಬಂಡವಲು ೫೦೦೦ದಿಂಧ ೨೦೦೦೦೦ದ ವರೆಗೆ. ಇವರು ವಸ್ತ್ರ, ತೊಲೆ, ಕಬ್ಬಿಣದ ಸಾಮಾನು, ಕಾಜಿನ ಪಾತ್ರೆಗಳು, ತಾಮ್ರ ಹಿತ್ತಾಳಿಗಳ ಪಾತ್ರೆಗಳು, ಕಾಳು, ಕಿರಾಣಿ, ತೆಂಗಿನ ಕಾಯಿ, ಉಪ್ಪು, ಮುಂತಾದ ಸರಕುಗಳ ಕೊಡಕೊಳ್ಳುವ ವ್ಯವಹಾರ ಮಾಡುತ್ತಾರೆ. ಮ್ಯುನಿಸಿಪಾಲಿಟಿಯುವರು ೭೬೦೦ ರೂಪಾಯಿ ವೆಚ್ಚ ಮಾಡಿ ಸನ್ ೧೮೭೭ರಲ್ಲಿ ಊರಿನ ನಡುವೆ ಮಾರ್ಕೇಟು ಕಟ್ಟಿಸಿದ್ದಾರೆ. ಅಲ್ಲಿ ಪಲ್ಲೆಗಳು, ಫಲಗಳು, ಕಾಳು, ಮಣ್ಣಿನ ಪಾತ್ರೆಗಳು, ಹುಲ್ಲು, ಉರುವಲು, ಮುಂತಾದವುಗಳ ಮಾರಾಟವು ಶನಿವಾರದ ಸಂತೆಯಲ್ಲಿಯೂ, ಪ್ರತಿ ದಿವಸ ಬೆಳಿಗ್ಗೂ ಸಂಜೆಗೂ ಬಹಳ ನಡಿಯುತ್ತದೆ. ಸಂತೆಯಲ್ಲಿ ದನಗಳ ಮಾರಾಟವಾದರೂ ವೊಳಿತಾಗಿ ಆಗುತ್ತದೆ. ಈ ಮಾರ್ಕೇಟಲ್ಲದೆ ಮ್ಯುನಿಸಿಪಾಲಿಟಿಯುವರು ಕಟ್ಟಿಸಿದ ಮಾಂಸದ ಮಾರ್ಕೇಟು, ಮೀನುಗಳ ಮಾರ್ಕೇಟು, ಪಶು ವಧಗೃಹ, ಮುಂತಾದವುಗಳು ಬೇರೆಯುಂಟು. ಊರಿಗೆ ಭೆಂಡೀ ಬಾಜಾರ, ಖಡೇ ಬಾಜಾರ, ಆದಿತ್ಯವಾರ ಪೇಟೆ, ಯೆಂಬ ಮೂರು ಪೇಟೆಗಳುಂಟು. ವೊದಲಿನ ಯೆರಡು ಬಾಜಾರುಗಳಲ್ಲಿ ಮುಖ್ಯವಾಗಿ ವಸ್ತ್ರದ ವ್ಯಾಪಾರವಾಗುತ್ತದೆ; ಆದಿತ್ಯವಾರ ಪೇಟೆಯಲ್ಲಿ ಕಾಳಿನ ವ್ಯಾಪಾರವಾಗುತ್ತದೆ.

ಮ್ಯುನಿಸಿಪಾಲಿಟಿ.— ಬೆಳಗಾವಿಯ ಮ್ಯುನಿಸಿಪಾಲಿಟಿಯನ್ನು ಸನ್ ೧೮೫೧ರಲ್ಲಿ ಸ್ಥಾಪಿಸಿದರು. ಸನ್ ೧೮೮೨-೮೩ರಲ್ಲಿ ಮ್ಯುನಿಸಿಪಾಲಿಟಿಯ ಆದಾಯವು ೩೭೧೧೦ ರೂಪಾಯಿ ಇತ್ತು. ಜಕಾತಿ, ಭಂಗೀ ಪಟ್ಟಿ, ಮಾರ್ಕೇಟ ಫೀ, ಛಕಡೀ ಪಟ್ಟಿ, ಇವೇ ಆದಾಯದ ಮುಖ್ಯ ಬಾಬುಗಳು.

ಹೊಗೆಬಂಡಿಯ ಸ್ಟೇಶನು.— ಇದು ಊರ ದಕ್ಷಿಣಕ್ಕೆ ಅತಿ ಸಮೀಪದಲ್ಲಿ ಇರುತ್ತದೆ. ಹೊಗೆಬಂಡಿಯ ಮಾರ್ಗವು ಶಹಾಪುರಕ್ಕೆ ಹೋಗುವ ಮಾರ್ಗದ ಮೇಲೆ ಅಡ್ಡ ಹಾಯುತ್ತದೆ.

ಅಸದ ಖಾನನ ದಗಾರ್.—ಇದು ಯುರೋಪಿಯ ವಸ್ತಿಗೆ ಹೊಂದಿ ಇರುತ್ತದೆ. ಪೂರ್ವದಲ್ಲಿ ಬಹು ಪರಾಕ್ರಮಿಯೆಂತಲೂ ಕಸುವುಳ್ಳವನೆಂತಲೂ ಧಾರ್ಮಿಕನೆಂತಲೂ ವಿದ್ವಾಂಸನೆಂತಲೂ ಕೀರ್ತಿಯನ್ನು ಪಡಿದ ಬೆಳಗಾವಿಯ ಕಿಲ್ಲೇದಾರನಾಗಿದ್ದ ಅಸದ ಖಾನನ ಗೋರಿಯು ಈ ದರ್ಗಾದಲ್ಲಿ ಇರುತ್ತದೆ. ಈ ದರ್ಗಾದ ಮುಂದೆ ನಿಬಿಡವಾದ ವೃಕ್ಷಗಳ ಬನವಿರುವದರಿಂದ ಸುತ್ತಲಿನ ಸ್ಥಳವು ರಮಣೀಯವಾಗಿ ತೋರುತ್ತದೆ. ಈ ದರ್ಗಾಕ್ಕೆ ಬೆಳಗಾವಿಯ ಮುಸಲ್ಮಾನರೂ ಹಿಂದೂ ಜನರೂ ಬಹಳ ಮಾನ ಕೊಡುತ್ತಾರೆ.

ಇತಿಹಾಸವು.—ಕ್ರಿಸ್ತೀ ಶಕದ ೧೨ನೇ ಶತಕದಲ್ಲಿ ಗೋವೆಯ ಕದಂಬ ಅರಸರು ಬರಿಸಿದ್ದೊಂದು ಲಿಪಿಯಲ್ಲಿ "ವೇಳು ಗ್ರಾಮ"ವೆಂಬ ಹೆಸರಿನಿಂದ ಬೆಳಗಾವಿಯ ಉಲ್ಲೇಖವಿರುತ್ತದೆ. ಆದರೆ ಆ ಕಾಲದ ಊರು ಈಗಿನ ಊರಿನ ಆಗ್ನೇಯಕ್ಕೆ ಇತ್ತು. ಅದರ ಕುರುಹು ಈಗ ಬಹು ಸ್ವಲ್ಪ ಮಾತ್ರ ಕಾಣ ಬಹುದು. ಈಗಿನ ಕೋಟೆಯನ್ನು ವೊಬ್ಬ ಜೈನ ಅರಸನು ಕಟ್ಟಿಸಿದನೆಂದು ಹೇಳುತ್ತಾರೆ; ಆದರೆ ಯಾವ ಅರಸು ಯಾವಾಗ ಕಟ್ಟಿಸಿದನೆಂಬ ಬಗ್ಗೆ ಆಧಾರವೇನು ಇದ್ದಂತೆ ತೋರುವದಿಲ್ಲ. ಸನ್ ೧೧೬೦ರಲ್ಲಿ ಬೆಳಗಾವಿಯು ೭೦ ಹಳ್ಳಿಗಳ ಮುಖ್ಯ ಗ್ರಾಮವಾಗಿ ಗೋವೆಯ ಕದಂಬರ ರಾಜ್ಯಕ್ಕೆ ಶೇರಿತ್ತು. ಮುಂದೆ ೫೦ ವರ್ಷದೊಳಗೆ ಸವದತ್ತಿಯ ರಟ್ಟ ರಾಜರು ಅದನ್ನು ತಕ್ಕೊಂಡರು. ಸನ್ ೧೨೦೮ರ ಸುಮಾರಿನಲ್ಲಿ ಬೆಳಗಾವಿಯು ಈ ರಟ್ಟ ರಾಜರ ರಾಜಧಾನಿಯಾಯಿತು. ಮುಂದೆ ೧೨೫೦ರ ಸುಮಾರಿನಲ್ಲಿ ದೇವಗಿರಿಯ ಯಾದವರು ಬೆಳಗಾವಿಯನ್ನು ತಕ್ಕೊಂಡರು. ೧೩೭೫ನೇ ವರ್ಷದಲ್ಲಿ ಈ ಊರು ವಿಜಯನಗರದ ರಾಜ್ಯಕ್ಕೆ ಶೇರಿತ್ತು. ೧೪೭೦ರಲ್ಲಿ ಬೆಳಗಾವಿಯ ಕೋಟೆಯು ವಿಕ್ರಮ ರಾಯನೆಂಬ ವಿಜಯನಗರದವರ ಕಿಲ್ಲೇದಾರನ ವಶದಲ್ಲಿ ಇತ್ತು. ಮುಂದೆ ಸ್ವಲ್ಪ ದಿವಸದೊಳಗೆ ಕಲಬುರ್ಗೆಯ ಬಾಮನೀ ಮಹಮ್ಮದ ಶಹನು ಶೌರ್ಯದಿಂದ ಕಾದಿ ಬೆಳಗಾವಿಯನ್ನು ತಕ್ಕೊಂಡನು. ಬಾಮನೀ ರಾಜ್ಯದಲ್ಲಿ ಸನ್ ೧೪೯೮ರಲ್ಲಿ ಹೊಸ ಸುಭೆಗಳಾಗಿ, ಬೆಳಗಾವಿಯು ವಿಜಾಪುರದ ಸುಭೆಗೆ ಶೇರಿತು. ೧೫೧೧ರಲ್ಲಿ ವಿಜಾಪುರದ ದರ್ಬಾರಿನಲ್ಲಿ ಹೆಸರು ಪಡಿದವನಾದ ಅಸದ ಖಾನನು ಬೆಳಗಾವಿಯ ವೊಡಿಯನಾದನು; ಮುಂದೆ ೩೮ ವರ್ಷ, ಅಸದ ಖಾನನು ೧೫೪೯ರಲ್ಲಿ ಮರಣ ಹೊಂದುವ ವರೆಗೆ ಅವನ ವಶದಲ್ಲಿಯೇ ಇತ್ತು. ೧೫೫೦ರಲ್ಲಿ ಶೀರ ಖಾನನೆಂಬ ಸರದಾರನು ಬೆಳಗಾವಿಯ ಕೋಟೆಗೆ ಹೊಸದೊಂದು ಪೇಟೆಯನ್ನು ಮಾಡುವದಕ್ಕೋಸ್ಕರ ಶಹಾಪುರವನ್ನು ಕಟ್ಟಿಸಿದನು. ಅಲ್ಲಿ ಮೊದಲು ಶಹಾಪೇಟ ಯೆಂಬ ಸಣ್ಣ ಹಳ್ಳಿ ಇತ್ತು. ೧೫೮೩ರಲ್ಲಿ ಬೆಳಗಾವಿಯ ಬಾಜಾರಿನಲ್ಲಿ ವಜ್ರ, ಮಾಣಿಕ, ನೀಲ, ಮುಂತಾದ ಹರಳುಗಳ ವ್ಯಾಪಾರವು ವೊಳಿತಾಗಿ ನಡಿಯುತ್ತಿತ್ತೆಂದು ವೊಬ್ಬ ಇಂಗ್ಲಿಷ ಪ್ರಯಾಣಸ್ಥನು ಬರಿದು ಇಟ್ಟಿದ್ದಾನೆ. ವಿಜಾಪುರದ ಬಾದಶಾಹಿಯು ನಷ್ಟವಾದ ಬಳಿಕ ಬೆಳಗಾವಿಯು ದಿಲ್ಲಿಯ ಮೊಗಲರ ರಾಜ್ಯಕ್ಕೆ ಶೇರಿದ್ದರಿಂದ, ದಕ್ಷಿಣದ ಸುಭೇದಾರನಾದ ನಿಜಾಮ ಉಲ್ಮುಲ್ಕನು ಅದನ್ನು ಸವಣೂರಿನ ನಬಾಬನ ವಶಕ್ಕೆ ಕೊಟ್ಟನು, ೧೭೩೦. ಮುಂದೆ ೧೭೫೪ರಲ್ಲಿ ಪೇಶವನ ದಂಡಿನವರು ಇದನ್ನು ತಕ್ಕೊಂಡ ಬಳಿಕ ಇದು ಕಡೆ

ತನಕ ಪೇಶವನ ರಾಜ್ಯಕ್ಕೆ ಶೇರಿತ್ತು. ಮುಂದೆ ಜನರಲ್ ಮನ್ರೋನು ಬೆಳಗಾವಿಯನ್ನು ಯುದ್ಧ ಮಾಡಿ ತಕ್ಕೊಂಡನು. ೧೮೨೦ರಲ್ಲಿ ಬೆಳಗಾವಿಯ ವಸ್ತಿಯು ೭೬೫೨ಕ್ಕಿಂತ ಹೆಚ್ಚು ಇದ್ದಿಲ್ಲ.

ಬೆಳವಣಾಕಿ.—ಅಥಣಿಯ ವಾಯುವ್ಯಕ್ಕೆ ೬ ಮೈಲಿನ ಮೇಲೆ. ಈ ಹಳ್ಳಿಯ ಬಳಿಯಲ್ಲಿ ಹಳೇ ಪನಾಳಾಗಡವೆಂಬ ಗುಡ್ಡವು ೧೦೦೦ ಫೂಟು ಯೆತ್ತರವಿರುತ್ತದೆ. ಅದರ ಮೇಲೆ ಸಿದ್ಧೇಶ್ವರನ ಗವಿ ಯೆಂಬದೊಂದು ಗವಿಯುಂಟು. ಈ ಗುಡ್ಡವು ಸಾಂಗಲೀ ಸಂಸ್ಥಾನಕ್ಕೆ ಶೇರಿರುತ್ತದೆ.

ಭೀಮಗಡ.—ಖಾನಾಪುರದ ನೈರುತ್ಯಕ್ಕೆ ೧೬ ಮೈಲಿನ ಮೇಲೆ ಇರುವ ತನಾಲಿ ಯೆಂಬ ಹಳ್ಳಿಯ ಬಳಿಯಲ್ಲಿ ಇರುತ್ತದೆ. ಈ ಕೋಟೆಯನ್ನು ಬಹು ಯೆತ್ತರವಾದ ಗುಡ್ಡದ ಮೇಲೆ ಕಟ್ಟಿದ್ದಾರೆ. ಕೋಟೆಯ ಉದ್ದಳತೆ ೧೩೮೦ ಫೂಟು, ಅಗಲು ೮೨೫ ಫೂಟು. ಮೇಲೆ ಯೇರಲಿಕ್ಕೆ ಪಾವಟಗೆಗಳನ್ನು ಕಡಿದಿದ್ದಾರೆ. ಕೋಟೆಯು ಇನ್ನೂ ಭದ್ರವಾಗಿರುತ್ತದೆ. ಇದರೊಳಗೆ ನೀರಿನ ಝುರಿಯು ಹರಿಯುತ್ತದೆ. ಈ ಕೋಟೆಯ ಪೇಟೆಯಾದರೂ ಗುಡ್ಡದ ಮೇಲೇ ಇರುತ್ತದೆ. ಅದಕ್ಕೂ ಸುತ್ತು ಗೋಡೆಯುಂಟು. ಅದು ಕೋಟೆಗಿಂತ ೪೦೦ ಫೂಟು ಕೆಳಗೆ ಇರುತ್ತದೆ. ಈಗ ಕೋಟೆಯಲ್ಲಿಯೂ ಪೇಟಿಯಲ್ಲಿಯೂ ಮನುಷ್ಯರ ವಸ್ತಿ ಇಲ್ಲ. ಹುಲಿ ಕರಡಿಗಳು ಸಂಚರಿಸುತ್ತವೆ.

ಭೋಜ.—ಚಿಕ್ಕೋಡಿಯ ವಾಯುವ್ಯಕ್ಕೆ ೧೩ ಮೈಲಿನ ಮೇಲೆ, ಜ. ಸ. (೮೧) ೪೧೫೦. ಈ ವೂರಲ್ಲಿ ಸವದತ್ತಿಯ ರಟ್ಟರದೊಂದು ತಾಮ್ರ ಶಾಸನವು ದೊರಿದದೆ.

ಬೀಡಿ.—ಖಾನಾಪುರದ ಆಗ್ನೇಯಕ್ಕೆ ೧೨ ಮೈಲಿನ ಮೇಲೆ, ಜ. ಸ. (೮೧) ೨೦೮೬. ಇದು ಪೂರ್ವದಲ್ಲಿ ಖಾನಾಪುರ ತಾಲೂಕಿನ ಮುಖ್ಯ ಗ್ರಾಮವಿತ್ತು. ತೆಂಗು, ಬಾಳೇ ಹಣ್ಣು, ಯೆಣ್ಣೆ, ಉಪ್ಪು, ಇವುಗಳ ವ್ಯಾಪಾರವು ಸ್ವಲ್ಪ ನಡಿಯುತ್ತದೆ. ಸಂಗೊಳ್ಳಿಯ ರಾಯಪ್ಪನು ತಳ್ಳಿಯ ಆರಂಭದಲ್ಲಿ ಇಲ್ಲಿಯ ಮಾಮಲೇದಾರ ಕಚೇರಿಯನ್ನು ಸುಟ್ಟನು. ಈ ವೂರು ಪೇಶವಾಯಿಯಲ್ಲಿ ಕಿತ್ತೂರ ದೇಸಾಯಿಯ ವಶದಲ್ಲಿ ಇತ್ತು.

ಚಂದಗಡ.—ಬೆಳಗಾವಿಯ ಪಶ್ಚಿಮಕ್ಕೆ ೨೨ ಮೈಲಿನ ಮೇಲೆ, ಜ. ಸ. (೮೧) ೨೫೭೪. ಪೋಲೀಸ ಕಚೇರಿ, ಟಪಾಲ ಕಚೇರಿ, ವೊಂದು ಶಾಲೆ, ಇರುತ್ತವೆ. ರವಳನಾಥನ ಗುಡಿಯು ದೊಡ್ಡದಿರುತ್ತದೆ. ಇಲ್ಲಿ ಸಣ್ಣದೊಂದು ಗಧಿ ಯೆಂಬ ಮಣ್ಣಿನ ಹಾಳು ಕೋಟೆಯುಂಟು.

ಚಿಕ್ಕೋಡಿ.—ಉತ್ತರ ಅಕ್ಷಾಂಶ ೧೬°, ೨೫′, ಪೂರ್ವ ರೇಖಾಂಶ ೭೪°, ೩೮′, ಬೆಳಗಾವಿಯ ಉತ್ತರಕ್ಕೆ ೪೦ ಮೈಲಿನ ಮೇಲೆ; ಜನಸಂಖ್ಯೆ (೮೧) ೫೬೯೯. ತಾಲೂಕಿನ ಮುಖ್ಯ ಗ್ರಾಮವು. ತಾಲೂಕ ಕಚೇರಿ, ಮುನಸಿಫ ಕಚೇರಿ, ಮುಂತಾದ ತಾಲೂಕಿನ ಕಚೇರಿಗಳೂ ಐದು ಶಾಲೆಗಳೂ ಉಂಟು. ಇಲ್ಲಿ ಅಕ್ಕಿ, ಬೆಲ್ಲ, ಮೆಣಶಿನ ಕಾಯಿ, ತಂಬಾಕ, ಕಿರಾಣಿ, ಮುಂತಾದವುಗಳ ವ್ಯಾಪಾರವು ವೊಳಿತಾಗಿ ನಡಿಯುತ್ತದೆ. ಗುರುವಾರ ಸಂತೆಯಾಗುತ್ತದೆ. ಧಡೋತಿಯ ಬಟ್ಟೆಗಳೂ, ಕಂಬಳಿಗಳೂ, ತಾಮ್ರ ಹಿತ್ತಾಳಿ

ಗಳ ಪಾತ್ರೆಗಳೂ ಹುಟ್ಟುತ್ತವೆ. ಇಲ್ಲಿಯ ದ್ರಾಕ್ಷದ ಹಣ್ಣು ಪ್ರಸಿದ್ಧ. ಊರ ಹೊರಗೆ ಸಣ್ಣದೊಂದು ಮಣ್ಣಿನ ಕೋಟೆಯುಂಟು. ಇಂಗ್ಲಿಷರ ಅಮಲಿನ ಆರಂಭದಲ್ಲಿ ಈ ವೂರು ಕೊಲ್ಲಾಪುರದ ರಾಜ್ಯಕ್ಕೆ ಶೇರಿತ್ತು. ಸನ್ ೧೬೪೦ರಲ್ಲಿ ಈ ವೂರು ತಕ್ಕಮಟ್ಟಿಗೆ ಪ್ರಸಿದ್ಧವಿತ್ತೆಂದು ವೊಬ್ಬ ಪ್ರಯಾಣಸ್ಥನು ಬರಿದಿಟ್ಟಿದ್ದಾನೆ.

ದೇಗಾವಿ.—ಕಿತ್ತೂರ ನೈರುತ್ಯಕ್ಕೆ ೩ ಮೈಲಿನ ಮೇಲೆ. ಕಮಲ ನಾರಾಯಣನ ಗುಡಿಯು ಬಹು ಸುಂದರವಾದದ್ದಿರುತ್ತದೆ. ಗೋವೆಯ ಕದಂಬ ಪೆರ್ಮಾಡಿ ಯೆಂಬ ಅರಸನ ಹೆಂಡತಿಯಾದ ಕಮಲಾ ದೇವಿಯು ಇದನ್ನು ಕಟ್ಟಿಸಿದಳು. (೧೧೭೫) ಇದರಲ್ಲಿ ನಾಲ್ಕು ಲಿಪಿಗಳಿವೆ.

ದೇಶನೂರು.—ಸಂಪಗಾವಿಯ ಉತ್ತರಕ್ಕೆ ೧೦ ಮೈಲಿನ ಮೇಲೆ. ಇಲ್ಲಿಯ ಜೀನಗಾರರು ಬಣ್ಣದ ಗೊಂಬೆಗಳನ್ನು ಸರಸಾಗಿ ಮಾಡುತ್ತಾರೆ. ಈ ವೂರಿನ ಉತ್ತರಕ್ಕೆ ಅರ್ಧ ಮೈಲಿನ ಮೇಲೆ ೧೩೦೦ ಫೂಟು ಯೆತ್ತರವಾದ ಗುಡ್ಡವಿರುತ್ತದೆ. ಅದರಲ್ಲಿ ಬಿಳಿ ಕಲ್ಲಿನ ಕಣಿಗಳಿವೆ. ಗುಡ್ಡದ ನೆತ್ತಿಯ ಮೇಲೆ ಹೊಲಗಳುಂಟು.

ಗಂಧರ್ವಗಡ.—ಬೆಳಗಾವಿಯ ಪಶ್ಚಿಮಕ್ಕೆ ೨೧ ಮೈಲಿನ ಮೇಲೆ, ೪೦೦ ಫೂಟು ಯೆತ್ತರವಾದ ಗುಡ್ಡದ ಮೇಲೆ ಮಣ್ಣಿನ ಹಾಳು ಕೋಟೆಯುಂಟು. ಇದನ್ನು ವಾಡಿಯ ಫೋಂಡ ಸಾವಂತನ ಮಗನಾದ ನಾಗ ಸಾವಂತನು ಸನ್ ೧೭೨೪ರಲ್ಲಿ ಕಟ್ಟಿಸಿದ್ದನು. ಈಗ ಜನರ ವಸ್ತಿ ಇಲ್ಲ.

ಗೋಕಾವಿ.—ಉತ್ತರ ಅಕ್ಷಾಂಶ ೧೬°, ೧೦′, ಪೂರ್ವ ರೇಖಾಂಶ ೭೪°, ೫೩′, ಬೆಳಗಾವಿಯ ಈಶಾನ್ಯಕ್ಕೆ ೩೦ ಮೈಲಿನ ಮೇಲೆ; ಜನಸಂಖ್ಯೆ (೮೧) ೧೦೨೦೫. ಇದು ತಾಲೂಕಿನ ಮುಖ್ಯ ಗ್ರಾಮವು. ತಾಲೂಕಿನಲ್ಲಿ ಇರತಕ್ಕ ಯಾವತ್ತು ಕಚೇರಿಗಳೂ, ೫ ಶಾಲೆಗಳೂ ಇರುತ್ತವೆ. ಮ್ಯುನಿಸಿಪಾಲಿಟಿಯು ೧೮೫೩ರಲ್ಲಿ ಸ್ಥಾಪಿಸಲ್ಪಟ್ಟಿತು. ಇದರ ಆದಾಯವು ೧೮೮೭-೮೩ರಲ್ಲಿ ೬೬೦೦ ರೂಪಾಯಿ ಇತ್ತು. ಇಲ್ಲಿಯ ಆಸಪತ್ರಿಯನ್ನು ಸನ್ ೧೮೬೭ರಲ್ಲಿ ಸ್ಥಾಪಿಸಿದರು. ಪಟಕಿಯ ಉಪದ್ರವವು ಬಹಳ ಆಗುತ್ತಿರುವ ಕಾರಣ ಆಸಪತ್ರಿಯ ವೆಚ್ಚವನ್ನು ಮ್ಯುನಿಸಿಪಾಲಿಟಿಯವರು ಮಾಡುತ್ತಾರೆ. ಇಲ್ಲಿ ಯೆರಡು ಖುನಾದಿಯ ಮಶೀದಿಗಳೂ ವೊಂದು ಜೈನರ ಬಸ್ತಿಯೂ ಗಂಜೀಖಾನೆ ಯೆಂಬ ಇಮಾರತೂ ಉಂಟು. ಊರಿನ ಸುತ್ತು ಮುತ್ತು ಗೋಡೆಯುಂಟು; ದಕ್ಷಿಣಕ್ಕೂ ಪಶ್ಚಿಮಕ್ಕೂ ಕಂದಕವಿರುತ್ತದೆ. ಊರಿನ ಪೂರ್ವಕ್ಕೆ ವೊಂದು ಗುಡ್ಡದ ಮೇಲೆ ಹಾಳು ಕೋಟೆ ಇರುತ್ತದೆ. ಅದರಲ್ಲಿ ಮೂರು ಗುಡಿಗಳೂ, ವೊಂದು ಗವಿಯೂ ಇರುತ್ತವೆ.

ಕೈಗಾರಿಕೆಗಳು.—ಖುನಾದಿಯಿಂದ ಈ ಶೀಮೆಯಲ್ಲಿ ಗೋಕಾವಿಯ ಕಾಗದವು ಪ್ರಸಿದ್ಧವಿರುತ್ತದೆ. ಈಗ ದೇಶೀ ಕಾಗದದ ಮಾರಾಟವು ನಷ್ಟವಾದಾಗ್ಯೂ ಈ ವೂರಲ್ಲಿ ಕಾಗದೀ ಮುಸಲ್ಮಾನರ ಹತ್ತು ಮನೆಗಳಲ್ಲಿ ಕಾಗದಗಳನ್ನು ಮಾಡುತ್ತಾರೆ. ಇವರು ಮಾಡುವ ದಿಪ್ಪನ್ನ ಹೊಗೆ ಬಣ್ಣದ ಕಾಗದವು ಲಖೋಟಗಳನ್ನು ಮಾಡಲಿಕ್ಕೂ ಅಂಗಡಿಕಾರ ವಹಿಗಳನ್ನು ಕಟ್ಟಲಿಕ್ಕೂ ಬರುತ್ತದೆ. ಗೋಕಾವಿಯಲ್ಲಿ ಹುಟ್ಟುವ ಬಣ್ಣದ ಕಟ್ಟಿ

ಗೆಯ ಫಲಗಳು ಮುಂಬಯಿ ಇಲಾಖೆಯಲ್ಲಿ ಪ್ರಸಿದ್ಧವಿರುತ್ತವೆ. ಹತ್ತು ಜನ ಜೀನಗಾರರ ಮನೆಗಳಲ್ಲಿ ಈ ಹೋರೆಯು ನಡಿಯುತ್ತದೆ. ಬೂರ್ಲ ಕಟ್ಟಿಗೆಯಿಂದ ಫಲಗಳ ಆಕಾರವನ್ನು ಮಾಡಿ, ಅವುಗಳ ಮೇಲೆ ವೊಂದು ಬಗೆಯ ಬಹು ಹಗುರಾದ ಅಲ್ಲು (ಕಿಟ್ಟ) ಮೆತ್ತಿ ಬಣ್ಣ ಕೊಡುವರು. ಗೋಕಾವಿಯ ನೀರಿನಿಂದ ಬಣ್ಣಕ್ಕೆ ಮಿಂಚು ಹುಟ್ಟಿದಷ್ಟು ಯೆಲ್ಲಿಯೂ ಹುಟ್ಟುವದಿಲ್ಲ. ಈ ಫಲಗಳನ್ನು ಯುರೋಪದ ಜನರು ಬಹಳವಾಗಿ ಕೊಳ್ಳುವರು. ಗೋಕಾವಿಯಲ್ಲಿ ಗಾಡಕ್ಕೆ ಹಚ್ಚಿದ ತಂಬಿಗೆ ಪಂಚಪಾತ್ರಿ, ಪೇಲೆ, ಮುಂತಾದ ಪಾತ್ರೆಗಳು ಹುಟ್ಟುತ್ತವೆ. ಆದರೆ ಅವು ನಾಶಿಕದ ಪಾತ್ರೆಗಳಷ್ಟು ಸರಸಾಗಿ ಇರುವದಿಲ್ಲಾದ ಕಾರಣ ಅವುಗಳ ಮಾರಾಟವು ನೆಟ್ಟಗೆ ಆಗುವದಿಲ್ಲ. ಈ ವೂರಲ್ಲಿ ವಸ್ತ್ರಗಳಾದರೂ ತಕ್ಕಮಟ್ಟಿಗೆ ಹುಟ್ಟುತ್ತವೆ. ರೇಶಿಮೆಯ ಶೀರೆಗಳನ್ನೂ ಪೀತಾಂಬರಗಳನ್ನೂ ಕೆಲವರು ನೆಯ್ಯುವರು. ಆದರೆ ಅವು ಬಹಳ ದಿಪ್ಪ ಇರುವ ಕಾರಣ ಅವುಗಳ ಮಾರಾಟವು ಬಹಳ ಆಗುವದಿಲ್ಲ.

ತಡಸಲು.—ಇದು ಗೋಕಾವಿಯ ವಾಯವ್ಯಕ್ಕೆ ಸುಮಾರು ಮೂರು ಮೈಲಿನ ಮೇಲೆ ಇರುತ್ತದೆ. ಘಟಪ್ರಭೆಯು ವೊಂದು ಉಸುಬಿನ ಕಲ್ಲಿನ ಗುಡ್ಡದ ಮೇಲಿಂದ ೧೭೦ ಫೂಟು ಕೆಳಗೆ ಬೀಳುತ್ತದೆ. ತಲೆಯ ಮೇಲೆ ಇದರ ಆಕಾರವು ಗೋಖುರದ ಹಾಗೆ ಇರುತ್ತದೆ. ಹೊಳೆ ತುಂಬಿದಾಗ ಅದರ ಪಾತ್ರೆಯು ಸುಮಾರು ೫೪೦ ಫೂಟು ಅಗಲಿರುತ್ತದೆ. ಈ ತಡಸಲಿನ ಸಾಧಾರಣ ಸ್ವರೂಪ, ಯೆತ್ತರ, ಆಕಾರ ಇವೆಲ್ಲ ಅಮೇರಿಕದ ನಯಾಗರಾ ಹೊಳೆಯ ತಡಸಲಿನಂತೆ ಇರುತ್ತವೆ. ಮಳೆಗಾಲದಲ್ಲಿ ಅಪ್ರಮಾಣವಾದ ನೀರಿನ ಧಾರೆಯು ಯೆರಡು ಮೂರು ಯೆಸಳಾಗಿ ಬೀಳುತ್ತದೆ. ಒಂದು ಯೆಸಳು ಬುಡತನಕ ಅವಿಚ್ಛಿನ್ನವಾಗಿ ಹೋಗುವದು; ಎರಡನೇದು ನಡುದಾರಿಯಲ್ಲಿ ವೊಂದು ಬಂಡೆಯ ಮೇಲೆ ಬಿದ್ದು ವೊಡಿದು ಕೆಳಗೆ ಬೀಳುವದು. ಅಗಟಂಬರಿನಿಂದ ದಿಜಂಬರಿನ ವರೆಗೆ ಈ ತಡಸಲು ನೋಡಲಿಕ್ಕೆ ಬಹು ರಮಣೀಯವಾಗಿರುತ್ತದೆ. ಕೆಳಗಿನ ಮಡುವಿನಿಂದ ಸೂಕ್ಷ್ಮವಾದ ತುಷಾರಗಳು ಗುಡ್ಡದ ನೆತ್ತಿಯ ಮೇಲೆ ನೂರಾರು ಫೂಟಿನ ವರೆಗೆ ಯೇರಿ ಮಳೆಯ ಹಾಗೆ ಕೆಳಗೆ ಬೀಳುತ್ತವೆ. ಬೆಳಿಗ್ಗೂ ಸಂಜೆಗೂ ಸೂರ್ಯನ ಕಡೆಗೆ ಬೆನ್ನು ಮಾಡಿ ನಿಂತರೆ ಆತುಷಾರಗಳೊಳಗಿಂದ ತರ ತರದ ಬಣ್ಣಗಳುಳ್ಳಂಥ ಇಂದ್ರ ಧನುಷ್ಯವು ಯೆದುರಿನ ದಿಕ್ಕಿನಲ್ಲಿ ಕಾಣುತ್ತದೆ. ನೀರಿನ ಪ್ರವಾಹ ಬೀಳುವ ಮಡುವು ೭೦೦ ಫೂಟು ಅಗಲಾಗಿ ಮಳೆಗಾಲದಲ್ಲಿ ೭೫ ಫೂಟು ಆಳವಿರುವದು, ಬೇಸಿಗೆಯಲ್ಲಿ ೪೩ ಫೂಟು ಇರುವದು. (೧ನೇ ಭಾಗದಲ್ಲಿ ಈ ತಡಸಲಿನ ವರ್ಣನೆ ನೋಡು).

ಮೇಲೆ ಹೇಳಿದ ಮಡುವಿನ ಕೆಳಗಡೆಯಲ್ಲಿ ಮಾರ್ಕಂಡೆಯಾ ಯೆಂಬ ಹೊಳೆಯು ಘಟಪ್ರಭೆಗೆ ಕೂಡುತ್ತದೆ. ಸಂಗಮದ ಸ್ಥಳದಲ್ಲಿ ಈ ಹೊಳೆಯ ಪಾತ್ರೆಯು ೪೫೦ ಫೂಟು ಅಗಲಾದ ಕಂದರದೊಳಗೆ ಇರುತ್ತದೆ. ಇದು ಗುಡ್ಡಗಳೊಳಗಿಂದ ಹರಿದು ಬರುತ್ತಿರುವ ಕಾರಣ ಸಂಗಮ ಸ್ಥಳದಲ್ಲಿ ಇದರ ವೇಗವು ಬಹಳ ಇರುತ್ತದೆ.

**ಗುಡಿಗಳು.**—ತಡಸಲಿನ ಯೆಡ ಬಲದ ದಂಡೆಗಳ ಮೇಲೆ ಬಹು ಪುರಾತನ ಕಾಲದಿಂದ ಗುಡಿಗಳನ್ನು ಕಟ್ಟುತ್ತ ಬಂದಿದ್ದಾರೆ. ಆದರೆ ೯ನೇ ಶತಕದ ಪೂರ್ವದ ಗುಡಿಗಳು ಈಗ ಬಹುತರ ಇಲ್ಲ; ೯ನೇ ಶತಕದ ಈಚೆಯ ಗುಡಿಗಳು ಸಹ ಅರ್ಧ ಮರ್ಧ ಹಾಳಾಗಿವೆ. ಮಹಾಲಿಂಗೇಶ್ವರನ ಗುಡಿಯು ಯೆಲ್ಲಕ್ಕೂ ಶ್ರೇಷ್ಠವು. ಇದು ೭೦ ಫೂಟು ಉದ್ದ, ೪೦ ಫೂಟು ಅಗಲು ಇರುತ್ತದೆ. ಚಿತ್ರ ಮುಂತಾದವುಗಳೇನು ಇರುವದಿಲ್ಲ, ಸಾದಾ ಕಲ್ಲಿನ ಇಮಾರತು ಇರುತ್ತದೆ. ಬಾಗಿಲಲ್ಲಿ ದ್ವಾರಪಾಲಕರ ಮೂರ್ತಿಗಳು ಮಾತ್ರ ಇರುತ್ತವೆ. ಈ ಗುಡಿಯಲ್ಲಿ ವೊಂದು ಲಿಪಿಯುಂಟು. ಅದು ಸವದತ್ತಿಯ ೩ನೇ ಕಾರ್ತವೀರ್ಯನೆಂಬ ರಟ್ಟ ರಾಜನು ೧೧೫೩ನೇ ವರ್ಷ ಬರಿಸಿದ್ದು. ಎರಡನೇದೊಂದು ಗುಡಿಯಲ್ಲಿ ಇನ್ನೊಂದು ಲಿಪಿಯುಂಟು. ಅದು ೨ನೇ ಕನ್ನಕೈರನೆಂಬ ಸವದತ್ತಿಯ ಅರಸು ಸನ್ ೧೦೮೭ರಲ್ಲಿ ಬರಿಸಿದ್ದಿರುತ್ತದೆ. ಮಹಾಲಿಂಗೇಶ್ವರನ ಯೆದುರಿಗೆ ಇನ್ನೊಂದು ಶಿವನ ಗುಡಿಯುಂಟು. ಅದರ ಬಾಗಿಲಿನ ಮೇಲೆ ಕೌಶಲ್ಯದ ಚಿತ್ರಗಳನ್ನು ಕೊರಿದಿದ್ದಾರೆ. ಈ ಗುಡಿಯ ಹಿಂದೆ ಅರ್ಧ ಮರ್ಧ ಹಾಳಾದ ಗುಡಿಯು ಮತ್ತೊಂದಿರುತ್ತದೆ. ಅದರ ಗರ್ಭ ಗುಡಿಯ ಬಾಗಿಲಿನ ಮೇಲೆ ಮನೋಹರವಾದ ಚಿತ್ರಗಳಿರುತ್ತವೆ. ಇವೂ ಇನ್ನೂ ಕೆಲವು ಹಾಳಾದ ಗುಡಿಗಳೂ ಮಹಾಲಿಂಗೇಶ್ವರನ ಗುಡಿಗಿಂತ ಬಹು ಪುರಾತನ ಕಾಲದವೆಂದು ತೋರುತ್ತದೆ. ಒಂದು ಗುಡಿಯನ್ನು ಗವಿಯ ಆಕಾರದ ಹಾಗೆ ಕಟ್ಟಿದ್ದಾರೆ. ಅದನ್ನು ಬೌದ್ಧ ಧರ್ಮದವರು ಕಟ್ಟಿದಂತೆ ತೋರುತ್ತದೆ. ಅರ್ವಾಚೀನ ಕಾಲದಲ್ಲಿ ಕಟ್ಟಿದಂಥ ಗುಡಿಗಳಾದರೂ ಕೆಲವುಂಟು. ಕೆಲವು ಗುಡಿಗಳು ಯಾವ ಕಾಲದಲ್ಲಿ ಆದವೆಂಬದರ ಕುರುಹು ಸಹ ಕಾಣದಂತೆ ಹಾಳಾಗಿರುತ್ತವೆ; ಕೆಲವುಗಳ ಸುತ್ತು ಮುತ್ತು ಮುಳ್ಳುಗಳ್ಳಿಯು ದಟ್ಟಾಗಿ ಬೆಳಿದದೆ.

**ಇತಿಹಾಸವು.**—ಸನ್ ೧೦೪೭ನೇ ವರ್ಷ ಬರಿಸಿದ್ದೊಂದು ಚಾಲುಕ್ಯ ಲಿಪಿಯಲ್ಲಿ "ಗೋಕಾಗೆ" ಯೆಂಬ ಹೆಸರು ಇರುತ್ತದೆ. ಸನ್ ೧೬೮೫ರಲ್ಲಿ ಮೊಗಲರ ದಂಡಿನವರು ಗೋಕಾವಿಯನ್ನು ತಕ್ಕೊಂಡರು; ಸನ್ ೧೭೯೧ರಲ್ಲಿ ಇದು ಸಾತಾರೆಯ ಶಾಹೂ ರಾಜನ ರಾಜ್ಯಕ್ಕೆ ಶೇರಿತ್ತು. ಮುಂದೆ ಇದು ಸವಣೂರಿನ ನಬಾಬನ ಕೈ ಶೇರಿದಾಗ ಅವನು ಇಲ್ಲಿ ಮಶೀದಿಯನ್ನೂ ಗಂಜಿಖಾನೆಯನ್ನೂ ಕಟ್ಟಿಸಿದನು. ಸನ್ ೧೭೫೪ರಲ್ಲಿ ಪೇಶವನು ಗೋಕಾವಿಯನ್ನು ತಕ್ಕೊಂಡನು; ಮುಂದೆ ಇದು ಕಿತ್ತೂರಿನ ದೇಸಾಯಿಯ ಕೈ ಶೇರಿತು. ಮುಂದಿನ ವರ್ಷ ಇದು ಮತ್ತೆ ಪೇಶವನ ಕೈ ಶೇರಿ, ಪಟವರ್ಧನರಿಗೆ ಸರಂಜಾಮಿನೊಳಗೆ ಕೊಡಲ್ಪಟ್ಟಿತು, ೧೭೮೩. ಸನ್ ೧೭೯೦ರಲ್ಲಿ ಗೋಕಾವಿಯಲ್ಲಿ ಮೇಲಾದ ವಸ್ತ್ರಗಳು ಹುಟ್ಟುತ್ತಿದ್ದವೆಂದು ಲೇಖವದೆ. ಇಂಗ್ಲಿಷ ಸರಕಾರದ ಅಮಲು ಆದಾಗ ಗೋಕಾವಿಯು ತಾಸಗಾವಿಯ ಪಟವರ್ಧನನ ವಶದಲ್ಲಿ ಇತ್ತು; ಅವನು ಸನ್ ೧೮೩೪ರಲ್ಲಿ ಸಂತತಿ ಇಲ್ಲದೆ ತೀರಿದ್ದರಿಂದ ಗೋಕಾವಿಯು ಖಾಲಸಾತಿಗೆ ಬಂತು.

**ಗೋಲೀ ಹಳ್ಳಿ.**—ಬೀಡಿಯ ದಕ್ಷಿಣಕ್ಕೆ ವೊಂದು ಮೈಲಿನ ಮೇಲೆ. ಕಾಮಲೇ

ಶ್ವರ, ರಾಮಲಿಂಗ, ಸಿದ್ಧಲಿಂಗ, ಯೆಂಬ ಗುಡಿಗಳು ಗೋವೆಯ ಕದಂಬರ ಕಾಲದವಿರುತ್ತವೆ. ಇವುಗಳಲ್ಲಿ ಯೆರಡು ೧೨ನೇ ಶತಕದ ಲಿಪಿಗಳಿರುತ್ತವೆ.

ಹಲಸಿಗೆ.—ಖಾನಾಪುರದ ಆಗ್ನೇಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೪೧) ೨೫೦೦. ಇಲ್ಲಿ ವ್ಯಾಪಾರ ಉದ್ಯೋಗಗಳು ಹೇಳ ತಕ್ಕಷ್ಟು ನಡಿಯುವದಿಲ್ಲ. ಆದರೆ ಈ ವೂರು ಕ್ರಿಸ್ತೀ ಶಕದ ೫ನೇ ಶತಕದಿಂದ, ಅಥವಾ ಅದಕ್ಕೂ ಪೂರ್ವ ಕಾಲದಿಂದ ಕದಂಬ ಅರಸರ ರಾಜಧಾನಿ ಇತ್ತು. ಬುನಾದಿಯ ಕದಂಬ ರಾಜರು ಜೈನ ಮತದವರಾಗಿ ಹಲಸಿಗೆಯಲ್ಲಿಯೇ ಆಳಿದರು; ಅರ್ವಾಚೀನ ಕಾಲದ ಕದಂಬರು ಶೈವ ಮತದವರಾಗಿ, ವಾಡಿಕೆಯಾಗಿ ಗೋವೆಯಲ್ಲಿ ಇರುತ್ತಿದ್ದಾಗ್ಯೂ ಹಲಸಿಗೆಯಲ್ಲಿಯೂ ಅವರ ಮನೆ ಇತ್ತು. ಹಲಸಿಗೆಯ ಊರೊಳಗೆ ವರಾಹ ನರಸಿಂಹ, ಸುವರ್ಣೇಶ್ವರ, ಯೆಂಬ ಯೆರಡು ಗುಡಿಗಳಲ್ಲದೆ ಊರ ಹೊರಗೆ ವೊಂದು ಗುಡ್ಡದ ಮೇಲೆ ರಾಮೇಶ್ವರನ ಗುಡಿ ಇರುತ್ತದೆ. ವರಾಹ ನರಸಿಂಹನಿಗೆ ಈಗ್ಯೂ ನೆರೆಹೊರೆಯ ಜನರು ನಡಕೊಳ್ಳುತ್ತಾರೆ. ಈ ದೇವರ ಜಾತ್ರೆಯು ಆಶ್ವಿನ ಪೂರ್ಣಿಮೆಯಲ್ಲಿ ಆಗುತ್ತದೆ; ೨೦೦೦ ಜನ ಕೂಡುತ್ತದೆ. ಈ ಗುಡಿಯಲ್ಲಿ ೧೦ ಫೂಟು ಯೆತ್ತರ, ೩ ಫೂಟು ಅಗಲು, ಇರುವದೊಂದು ಕಲ್ಲಿನ ಮೇಲೆ ಯೆರಡು ಲಿಪಿಗಳಿರುತ್ತವೆ. ಇವೆರಡೂ ೧೨ನೇ ಶತಕದಲ್ಲಿ ಗೋವೆಯ ಕದಂಬ ಅರಸರು ಬರಿಸಿದಂಥವು. ಇವುಗಳಲ್ಲಿ ನರಸಿಂಹ ದೇವರಿಗೆ ಕೆಲವು ಇನಾಮುಗಳನ್ನು ಕೊಟ್ಟ ಲೇಖವಿರುತ್ತದೆ. ಹಲಸಿಗೆಯಿಂದ ಮೂರು ಮೈಲಿನ ಮೇಲೆ ಇರುವ ಚಕ್ರತೀರ್ಥವೆಂಬ ಬಾವಿಯ ಬಳಿಯಲ್ಲಿ ವೊಂದು ವೊಡ್ಡಿನೊಳಗೆ ಸನ್ ೧೮೬೦ರ ಸುಮಾರಿನಲ್ಲಿ ೬ ಬೇರೆ ಬೇರೆ ತಾಮ್ರ ಶಾಸನಗಳು ದೊರಿದವು. ಇವೆಲ್ಲ ಬುನಾದಿಯ ಜೈನ ಮತದ ಕದಂಬ ಅರಸರು ಬರಿಸಿದಂಥವು. ಇವುಗಳಲ್ಲಿ ಮಿತಿಗಳನ್ನು ಹಾಕಿಲ್ಲ. ಆದರೆ ಇವು ದೇವನಗರೀ ಲಿಪಿಯ ಮೂಲ ಸ್ವರೂಪವನ್ನೇ ಹೆಚ್ಚಾಗಿ ಹೋಲುವಂಥ ಲಿಪಿಯಲ್ಲಿ ಸಂಸ್ಕೃತ ಭಾಷೆಯಿಂದ ಬರಿದಂಥವಿರುತ್ತವೆ. ಆ ಲಿಪಿಯು ಕ್ರಿಸ್ತೀ ಶಕದ ೫ನೇ ಶತಕದ್ದಿರ ಬಹುದೆಂದು ತೋರುತ್ತದೆ. ಇವುಗಳಲ್ಲಿ ಜೈನ ಗುಡಿಗಳಿಗೂ ಸಾಧುಗಳಿಗೂ ಇನಾಮುಗಳನ್ನು ಕೊಟ್ಟ ಲೇಖಗಳುಂಟು. ಈ ತಾಮ್ರ ಪಟಗಳಲ್ಲದೆ ಹಲಸಿಗೆಯಲ್ಲಿ ೭ನೇದೊಂದು ತಾಮ್ರ ಪತ್ರವು ವೊಳಗಡೆಯಲ್ಲಿ ದೊರಿದಿರುತ್ತದೆ; ಅದು ಗೋವೆಯ ವೀರಜಯಕೇಶಿ ಯೆಂಬ ಅರಸು ಸನ್ ೧೧೬೬ನೇ ವರ್ಷ ಬರಿಸಿದ್ದಿರುತ್ತದೆ. ಇದರಲ್ಲಿ ನರಸಿಂಹ ದೇವರ ಯೆದುರಿಗೆ ವರಾಹ ಮೂರ್ತಿಯನ್ನು ಆ ವರ್ಷ ಸ್ಥಾಪಿಸಿ, ಜಯಕೇಶಿ ರಾಜನು ಆ ವರಾಹನಿಗೆ ವೊಂದು ಹಳ್ಳಿಯನ್ನು ಕೊಟ್ಟನೆಂದು ಲೇಖವದೆ. ಹಲಸಿಗೆಯು ಪವಿತ್ರ ಕ್ಷೇತ್ರವೆಂದು ವೈಷ್ಣವರು ಯೆಣಿಸುತ್ತಾರೆ. ಅಡವಿಯ ಆಚಾರ್ಯರೆಂಬುವರು ಸನ್ ೧೮೭೦ರಲ್ಲಿ ಹಲಸಿಗೆಯಲ್ಲಿ ಸೋಮಯಾಗ ಮಾಡಿದರು. ಆ ಕಾಲಕ್ಕೆ ೨೦೦೦ ಜನ ಕೂಡಿತ್ತು. ಯಾಗವು ೧೦ ದಿವಸ ನಡೀತು.

ಹನ್ನಿಕೇರಿ.—ಸಂಪಗಾವಿಯ ವಾಯವ್ಯಕ್ಕೆ ೪ ಮೈಲಿನ ಮೇಲೆ, ಜ. ಸ. (೪೧)

೪೯೯. ಇಲ್ಲಿ ಜೈನರ ಬ್ರಹ್ಮದೇವರ ಗುಡಿಯೂ ವೊಂದು ಶಿಲಾಲಿಪಿಯೂ ಉಂಟು. ಈ ಲಿಪಿಯಲ್ಲಿ ಸವದತ್ತಿಯ ರಟ್ಟ ರಾಜನು ಬೆಳಗಾವಿಯಲ್ಲಿ ಹೋಗಿ ನಿಂತನೆಂದು ಲೇಖವದೆ.

ಹುಕ್ಕೇರಿ.—ಚಿಕ್ಕೋಡಿಯ ದಕ್ಷಿಣಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೫೫೦೩. ಮಹಾಲ ಕಚೇರಿಯ ಮುಖ್ಯ ಗ್ರಾಮವು. ಅಕ್ಕಿ, ಬೆಲ್ಲ, ಕಲ್ಲೆ, ಮೆಣಸಿನ ಕಾಯಿ, ಮುಂತಾದವುಗಳ ವ್ಯಾಪಾರವು ಸೋಮವಾರ ಸಂತೆಯಲ್ಲಿ ಆಗುತ್ತದೆ. ವೊಕ್ಕ ಲಿಗರ ಶೀರೆಗಳೂ ಕಂಬಳಿಗಳೂ ಹುಟ್ಟುತ್ತವೆ. ವಿಜಾಪುರದ ಬಾದಶಹನ ಸರದಾರರು ಕಟ್ಟಿಸಿದ ಚಿನೀ ಗುಮಟ, ಗಜಬರ ಸಾಹೇಬನ ಮಶೀದಿ, ಯೆಂಬ ಯೆರಡು ಮಶೀದಿಗಳಿ ರುತ್ತವೆ. ಹುಕ್ಕೇರಿಯ ನಳವು ಈ ಶೀಮೆಯಲ್ಲಿ ಪ್ರಸಿದ್ಧವಾದದ್ದು. ಹುಕ್ಕೇರಿಯನ್ನು ಗಿಲಾನೀ ಯೆಂಬ ಮನೆತನದ ಸರದಾರರಿಗೆ ವಿಜಾಪುರದ ಬಾದಶಹನು ಜಹಾಗೀರು ಕೊಟ್ಟಿದ್ದನು. ಬೆಳಗಾವಿಯ ಅಸದಖಾನನಂತೆ ಐನ ಉಲ್ಮುಲ್ಕ ಗಿಲಾನೀ ಯೆಂಬ ಸರ ದಾರನು ಹುಕ್ಕೇರಿಯಲ್ಲಿ ೧೫೦೩ರಿಂದ ೪೩ ವರ್ಷ ಆಳಿದನು. ಅವನೇ ಹುಕ್ಕೇರಿಯ ನಳವನ್ನೂ ಕೋಟೆಯನ್ನೂ ಯೆರಡು ಗೋರಿಗಳನ್ನೂ ಕಟ್ಟಿಸಿದನು. ಶಿವಾಜಿಯ ದಂಗೆ ಯಲ್ಲಿ ಹುಕ್ಕೇರಿಯ ದೇಸಾಯಿಯು ಪ್ರಬಲನಾಗಿ ಸ್ವತಂತ್ರನಾಗಿದ್ದನು. ಆದರೆ ಮುಂದೆ ಪೇಶವನು ಅವನ ಸ್ವಾತಂತ್ರ್ಯವನ್ನು ಮುರಿದನು. ಈ ದೇಸಾಯಿಯ ವಂಶದವರು ಈಗ ವಂಟಮುರಿಯಲ್ಲಿ ಇರುತ್ತಾರೆ. ಇಂಗ್ಲಿಷ ಸರಕಾರದ ಅಮಲಿನ ಆರಂಭದಲ್ಲಿ ಹುಕ್ಕೇ ರಿಯು ಕೊಲ್ಲಾಪುರದವರ ರಾಜ್ಯಕ್ಕೆ ಶೇರಿತ್ತು.

ಹೂಲಿ.—ಸವದತ್ತಿಯ ಪೂರ್ವಕ್ಕೆ ೫ ಮೈಲಿನ ಮೇಲೆ, ಜ. ಸ. (೮೧) ೧೪೯೯. ಇಲ್ಲಿ ಪೂರ್ವ ಕಾಲದ ಲಿಪಿಗಳೂ ಗುಡಿಗಳೂ ಹಲವುಂಟು. ಪಂಚಲಿಂಗನ ಗುಡಿಯು ಯೆಲ್ಲಕ್ಕೂ ಸುಂದರವಾದದ್ದು. ಈ ಗುಡಿಗೆ ಯೆರಡು ಸಭಾಮಂಟಪಗಳಿರು ತ್ತವೆ. ಹೊರಗಿನ ದೊಡ್ಡ ಮಂಟಪವು ೫೧ ಫೂಟು ಉದ್ದ, ೪೫ ಫೂಟು ಅಗಲು ಇರು ತ್ತದೆ; ಒಳಗಿನ ಮಂಟಪವು ಇದಕ್ಕೂ ಸ್ವಲ್ಪ ಸಣ್ಣದಿರುತ್ತದೆ. ಆ ಮಂಟಪದ ಮೂರು ದಿಕ್ಕುಗಳಲ್ಲಿ ಮೂರು ಗರ್ಭಾಗಾರಗಳಿರುತ್ತವೆ. ದಕ್ಷಿಣದ ಗರ್ಭಾಗಾರದ ಬಾಗಿಲು ಬಹು ಮನೋಹರವಾಗಿ ಕೋರಿದ ಚಿತ್ರಗಳುಳ್ಳದ್ದಿರುತ್ತದೆ. ಇದು ಪೂರ್ವಕಾಲದ ಜೈನರು ಕಟ್ಟಿಸಿದ ಬಸ್ತಿಯೆಂಬದರ ಕುರುಹುಗಳು ಈಗ್ಯೂ ಕಾಣುತ್ತವೆ. ಊರಿನ ಉತ್ತರಕ್ಕೆ ವೊಂದು ಗುಡ್ಡದ ಬುಡದಲ್ಲಿ ಹಲವು ಹಾಳು ಬಿದ್ದ ಗುಡಿಗಳಿರುತ್ತವೆ. ಇವುಗಳಲ್ಲಿ ಯೆಷ್ಟೋ ಬಾಗಿಲುಗಳೂ ಕಂಬಗಳೂ ಬಹು ಸರಸಾಗಿ ಕೊರಿಯಲ್ಪ ಟ್ಟಿರುತ್ತವೆ; ಕೆಲವು ಕಡೆಯಲ್ಲಿ ಅರ್ಧ ಮರ್ಧ ವೊಡಿದಂಥ ಶಿಲಾಲಿಪಿಗಳು ಕಾಣಿಸುತ್ತವೆ. ಹೂಲಿಯಲ್ಲಿ ಮುಖ್ಯವಾಗಿ ಮೂರು ಲಿಪಿಗಳಿವೆ; ಎರಡು ೫ನೇ ಚಾಲುಕ್ಯ ವಿಕ್ರಮನ ಆಳಿಕೆಯಲ್ಲಿ (೧೦೧೮-೧೦೪೨) ಆದಂಥವು; ಮೂರನೇದು ಬಿಜ್ಜಳನ ಕಾಲದ್ದು. ಊರ ಹೊರಗೆ ಉತ್ತರಕ್ಕೆ ಸಣ್ಣದೊಂದು (೧೫೦×೧೦೦ ಫೂಟು) ಕಲ್ಲಿನ ಕೋಟೆಯುಂಟು.

ಅದರ ಉತ್ತರದ ಗೋಡೆ ಮಾತ್ರ ಹೊರ್ತಾಗಿ ಕೋಟೆಯು ಭದ್ರವಾಗಿರುತ್ತದೆ. ಇದನ್ನು ಶಿವಾಜಿಯು ಸನ್ ೧೬೭೪ರಲ್ಲಿ ಕಟ್ಟಿಸಿದನೆಂದು ಹೇಳುತ್ತಾರೆ.

ಪವಿತ್ರಗಡ.—ಚಿಕ್ಕೋಡಿಯ ದಕ್ಷಿಣಕ್ಕೆ ೨೦ ಮೈಲಿನ ಮೇಲೆ ಹೂನೂರಿನ ಬಳಿಯಲ್ಲಿ ಹಾಳು ಕೋಟೆ.

ಜಾಂಬೋಟ.—ಬೆಳಗಾವಿಯ ನೈರುತ್ಯಕ್ಕೆ ೧೪ ಮೈಲಿನ ಮೇಲೆ. ಕಸಬೆ, ಪೇಟೆ, ಯೆಂಬ ಯೆರಡು ಭಾಗಗಳಿವೆ. ಇದು ವೊಬ್ಬ ದೇಸಾಯಿಯ ಊರು. ಅವನು ಕಸಬೆಯಲ್ಲಿ ಇರುತ್ತಾನೆ. ಆದರೆ ಅದು ಅರ್ಧ ಮರ್ಧ ಹಾಳಾಗಿದೆ. ಜಾಂಬೋಟೆಯ ದೇಸಾಯಿಗೆ ವೊದಲು ಬಹಳ ಹಳ್ಳಿಗಳಿದ್ದವು. ಆದರೆ ಸರಕಾರದವರು ಅವನ ಹಕ್ಕಿನ ಚೌಕಸಿಯ ಮಾಡಿ, ಕೆಲವು ನಗದು ಪೆನಶನ್ ಸಹಿತವಾಗಿ ಯೆರಡು ಹಳ್ಳಿಗಳನ್ನು ಮಾತ್ರ ಅವನಿಗೆ ಕೊಟ್ಟು ಉಳಿದ ಗ್ರಾಮಗಳನ್ನೆಲ್ಲ ಕಸುಕೊಂಡರು. ಈಗಿನ ದೇಸಾಯಿಗೆ ಆ ಯೆರಡು ಹಳ್ಳಿಗಳಲ್ಲದೆ ೬೪೦ ರೂಪಾಯಿ ನಗದು ದೊರಿಯುತ್ತದೆ. ಜಾಂಬೋಟಿಯ ನೆರೆಯ ಅಡವಿಯಲ್ಲಿ ಹುಲಿ ಕರಡಿಗಳು ಸಂಚರಿಸುತ್ತವೆ.

ಜುಗುಳ.—ಚಿಕ್ಕೋಡಿಯ ಈಶಾನ್ಯಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೨೮೯೧. ಇಲ್ಲಿ ಮಸಬತಿಯೆಂಬ ಮುಸಲ್ಮಾನ ವಲ್ಲಿಯ ಗೋರಿಯುಂಟು. ರಜ್ಜಬ ತಿಂಗಳಿನಲ್ಲಿ ಜಾತ್ರೆಯಾಗುತ್ತದೆ; ಸುಮಾರು ೨, ೩ ಸಾವಿರ ಜನ ಕೂಡುತ್ತದೆ.

ಕಾಬೂರು.—ಚಿಕ್ಕೋಡಿಯ ದಕ್ಷಿಣಕ್ಕೆ ೧೨ ಮೈಲಿನ ಮೇಲೆ, ಜ. ಸ. (೮೧) ೨೮೮೩. ಒಂದು ಹಳ್ಳದ ನೀರಿನಿಂದ ಊರಿನ ಸುತ್ತು ಮುತ್ತು ಸುಮಾರು ೫೦ ತೋಟಗಳಾಗಿವೆ. ಅವುಗಳಲ್ಲಿ ಅಕ್ಕಿ ಹೊರ್ತಾಗಿ ಯೆಲ್ಲ ಬಗೆಯ ಧಾನ್ಯಗಳು, ಬಾಳಿ, ಪಲ್ಲೆಗಳು ಬೆಳಿಯುತ್ತವೆ. ಈಶ್ವರನ ಗುಡಿಯಲ್ಲಿ ವೊಂದು ಲಿಪಿಯುಂಟು. ಅದನ್ನು ಇನ್ನೂ ಯಾರು ಓದಿಲ್ಲ. ಈ ಊರಿನ ಬಳಿಯಲ್ಲಿ ಚಿಕ್ಕೋಡೀ ರೋಡ್ ಯೆಂಬ ಹೊಗೆ ಬಂಡಿಯ ಸ್ಟೇಶನ್ನು ಇರುತ್ತದೆ.

ಕಾದರೊಳ್ಳಿ.—ಸಂಪಗಾವಿಯ ದಕ್ಷಿಣಕ್ಕೆ ೬ ಮೈಲಿನ ಮೇಲೆ, ಜ. ಸ. (೮೧) ೧೬೦೦. ಈ ವೂರ ಬಳಿಯಲ್ಲಿ ಮಲಾಪಹಾರಿಯ ಪಾತ್ರೆಯೊಳಗೆ ಶಂಕರ ಲಿಂಗನ ಗುಡಿಯು ಪುರಾತನದ್ದು ಇರುತ್ತದೆ. ಆ ಗುಡಿಯ ಸಭಾಮಂಟಪವೂ ಗರ್ಭ ಗುಡಿಯೂ ಮಾತ್ರ ಉಳಿದಿರುತ್ತವೆ. ಈ ಗುಡಿಯಲ್ಲಿದ್ದಪ್ಪೊಂದು ಲಿಪಿಯ ಕಲ್ಲನ್ನು ಊರೊಳಗೆ ಬೇರೊಂದು ಗುಡಿಯ ಗೋಡೆಯೊಳಗೆ ಹಾಕಿದ್ದಾರೆ. ಆ ಲಿಪಿಯಲ್ಲಿ ಚಾಲುಕ್ಯರ ೨ನೇ ಸೋಮೇಶ್ವರನ ಆಳಿಕೆಯಲ್ಲಿ ಸನ್ ೧೦೭೫ನೇ ವರ್ಷ ಶಂಕರಲಿಂಗನಿಗೆ ಕೆಲವು ಇನಾಮುಗಳನ್ನು ಕೊಟ್ಟ ಲೇಖವಿರುತ್ತದೆ.

ಕಾಗವಾಡ.—ಅಥಣಿಯ ಪಶ್ಚಿಮಕ್ಕೆ ೨೨ ಮೈಲಿನ ಮೇಲೆ, ಜ. ಸ. (೮೧) ೪೮೦೬. ಟಪಾಲ ಕಚೇರಿ ಇರುತ್ತದೆ; ಅರಳೆಯ ವ್ಯಾಪಾರವು ಸ್ವಲ್ಪ ನಡಿಯುತ್ತದೆ. ಬ್ರಹ್ಮನಾಥ, ಸಟವಾಯಿ, ಯೆಂಬೆರಡು ಗುಡಿಗಳುಂಟು. ಬ್ರಹ್ಮನಾಥನ ಮೂರ್ತಿಯನ್ನು ನೆಲಮನೆಯಲ್ಲಿ ಇಟ್ಟಿದ್ದಾರೆ. ಆದರ ಬಳಿಯಲ್ಲಿ ವೊಂದು ಲಿಪಿಯುಂಟು. ಅದನ್ನು

ಯಾರು ಓದಿದಂತೆ ತೋರುವದಿಲ್ಲ. ಸಟವಾಯಿಯನ್ನು ಮಕ್ಕಳು ಹುಟ್ಟಿದ ಬಳಿಕ ಮೂರು ತಿಂಗಳಿನ ವರೆಗೆ ಪೂಜಿಸುವರು. ದಕ್ಷಿಣ ಮಹಾರಾಷ್ಟ್ರದಲ್ಲಿ ಈ ದೇವಿಯ ಪ್ರಸಿದ್ಧಿಯುಂಟು. ಮಾಘ ಮಾಸದಲ್ಲಿ ಜಾತ್ರೆಯಾಗುತ್ತದೆ. ಕಾಗವಾಡದಲ್ಲಿ ವೊಬ್ಬ ಪಟವರ್ಧನ ಸಂಸ್ಥಾನಿಕನಿರುತ್ತಿದ್ದನು. ಅವನು ಸಂತತಿಯಿಲ್ಲದೆ ತೀರಿದ್ದರಿಂದ ಅವನ ರಾಜ್ಯವು ಸರಕಾರಕ್ಕೆ ಶೇರಿತು.

ಕಾಳಾನಂದೀಗಡ.— ಬೆಳಗಾವಿಯ ಪಶ್ಚಿಮಕ್ಕೆ ೨೦ ಮೈಲಿನ ಮೇಲೆ ಹಾಳು ದುರ್ಗ ಕೋಟೆಯು. ಜನರ ವಸ್ತಿ ಇಲ್ಲ. ಈ ಕೋಟೆಯು ಯೆತ್ತರವಾದ ಗುಡ್ಡದ ಮೇಲೆ ೧೩೫೦ ಫೂಟು ಉದ್ದಾಗಿಯೂ ೮೨೫ ಫೂಟು ಅಗಲಾಗಿಯೂ ಇರುತ್ತದೆ.

ಕಲ್ಲೋಳಿ.— ಗೋಕಾವಿಯ ಈಶಾನ್ಯಕ್ಕೆ ೭ ಮೈಲಿನ ಮೇಲೆ, ಜ. ಸ. (೮೧) ೧೬೪೮. ಜೈನ ಬಸ್ತಿಯು ಪುರಾತನದ್ದು ಇರುತ್ತದೆ. ಅದರಲ್ಲಿ ಸನ್ ೧೨೦೪ ರಲ್ಲಿ ಬೆಳಗಾವಿಯ ರಟ್ಟ ರಾಜನು ಬರಿಸಿದ ಲಿಪಿಯುಂಟು. ಈ ಬಸ್ತಿಯ ಜಾತ್ರೆಯು ದಿಜಂಬರಿನಲ್ಲಿ ಆಗುತ್ತದೆ; ಸುಮಾರು ೧೫೦೦ ಜನ ಕೂಡುತ್ತದೆ.

ಕನಮಡಿ.— ಅಥಣಿಯ ಈಶಾನ್ಯಕ್ಕೆ ೨೪ ಮೈಲಿನ ಮೇಲೆ, ಜ. ಸ. (೮೧) ೨೪೨೬. ಹರಿದೇವ, ಮಲ್ಲಿಕಾರ್ಜುನ, ದರೀದೇವಿ ಯೆಂಬ ಗುಡಿಗಳಿವೆ. ಚೈತ್ರಮಾಸದಲ್ಲಿ ದರೀದೇವಿಯ ಜಾತ್ರೆಯಲ್ಲಿ ಐದಾರು ಸಾವಿರ ಜನ ಕೂಡುತ್ತದೆ.

ಖಾನಾಪುರ.— ಉತ್ತರ ಅಕ್ಷಾಂಶ ೧೫°, ೩೭′, ಪೂರ್ವ ರೇಖಾಂಶ ೭೪°, ೩೪′, ಜ. ಸ. (೮೧) ೪೦೧೬. ತಾಲೂಕಿನಲ್ಲಿ ಇರತಕ್ಕ ಕಚೇರಿಗಳಲ್ಲದೆ, ವೊಂದು ಶಾಲೆಯೂ ಪೋರ್ತುಗೀಸ ಮಿಶನರಿಗಳ ಠಾಣ್ಯವೂ ಇರುತ್ತದೆ. ಅಕ್ಕಿ, ಬಾಳೇ ಹಣ್ಣುಗಳ ಮಾರಾಟವು ಸ್ವಲ್ಪ ಆಗುತ್ತದೆ; ರೇಲ್ವೇ ಸ್ಟೇಶನ್ನು ಊರಿಗೆ ಸಮೀಪವಾಗಿ ಇರುತ್ತದೆ.

ಖರೋಶಿ.— ಚಿಕ್ಕೋಡಿಯ ದಕ್ಷಿಣಕ್ಕೆ ೪ ಮೈಲಿನ ಮೇಲೆ, ಜ. ಸ. (೮೧) ೨೦೨೪. ಘಂಟೇಬಸವಣ್ಣನ ಜಾತ್ರೆಯು ಶ್ರಾವಣದಲ್ಲಿ ಆಗುತ್ತದೆ.

ಕಿತ್ತೂರು.— ಸಂಪಗಾವಿಯ ದಕ್ಷಿಣಕ್ಕೆ ೧೪ ಮೈಲಿನ ಮೇಲೆ, ಜ. ಸ. (೮೧) ೬೩೦೦. ಆದರೆ ಸನ್ ೧೮೫೭ ರಲ್ಲಿ ಜನಸಂಖ್ಯವು ೭೫೦೦ ಇತ್ತು. ಸೋಮವಾರ ಗುರುವಾರಗಳಲ್ಲಿ ಸಂತೆಯಾಗುತ್ತದೆ; ಕಾಳು, ಅರಳೆ, ವಸ್ತ್ರ ಮುಂತಾದವುಗಳ ಮಾರಾಟವು ವೊಳಿತಾಗಿ ಆಗುತ್ತದೆ. ಇಲ್ಲಿ ಧಡೋತಿಯ ಬಟ್ಟೆಗಳೂ ಕಾಜಿನ ಬಳೆಗಳೂ ಹುಟ್ಟುತ್ತವೆ. ಟಪಾಲ ಕಚೇರಿಯೂ, ವೊಂದು ಬಸವಣ್ಣನ ಸಣ್ಣ ಹಳೆ ಗುಡಿಯೂ ಉಂಟು. ಈ ಗುಡಿಯಲ್ಲಿ ಗೋವೆಯ ಕದಂಬ ಅರಸರು ಸನ್ ೧೧೪೮ ರಲ್ಲಿ ಬರಿಸಿದ್ದೊಂದು ಲಿಪಿಯುಂಟು. ಅದರಲ್ಲಿ ವೊಂದು ಭೂಮಿಯ ಸಲುವಾಗಿ ಶಿವಶಕ್ತಿ, ಕಲ್ಯಾಣಶಕ್ತಿ, ಯೆಂಬ ಇಬ್ಬರು ಬ್ರಾಹ್ಮಣರಿಗೆ ವಾದ ಹುಟ್ಟಿದ್ದರಿಂದ ಶಿವಶಕ್ತಿಯು ದೇಗಾವಿಯ ಮಹಾಜನ ಸಭೆಯ ಸಮಕ್ಷ ಕಾದ ರಂಟೆಯ ಕುಳವನ್ನು ಕೈಯಲ್ಲಿ ಹಿಡಿದು ದೀವ್ಯ ಮಾಡಿದ ಲೇಖವಿರುತ್ತದೆ. ಶಿವಶಕ್ತಿಯ ಕೈಯು ಸುಡದಿದ್ದ ಕಾರಣ ಅವನಿಗೆ ಭೂಮಿಯು ದೊರೀತೆಂದು ಲಿಪಿಯು ಹೇಳುತ್ತದ.

ಕಿತ್ತೂರಿನ ಕೋಟೆಯು ಬೆಳಗಾವಿಯ ಕೋಟೆಯ ೭ನೇ ಪಾಲಿನಷ್ಟು ಇರುತ್ತದೆ. ಅದರ ನಡುವೆ ಬಾಲೇ ಕಿಲ್ಲೆಯು ಬಹು ಸಣ್ಣದಿರುತ್ತದೆ. ಕೋಟೆಯ ಗೋಡೆಯು ಕೆಳಗಿನ ಅರ್ಧ ಕಲ್ಲಿನಿಂದ, ಉಳಿದದ್ದು ಮಣ್ಣಿನಿಂದ ಕಟ್ಟಿದ್ದಿರುತ್ತದೆ. ಈ ಗೋಡೆಯು ಈಗ ಬಹಳ ಕಡೆಯಲ್ಲಿ ಬಿದ್ದದೆ. ಬೆಳಗಾವಿಯಲ್ಲಿ ದಂಡಿನ ಠಾಣ್ಯವಿಡುವ ಪೂರ್ವದಲ್ಲಿ ಕಿತ್ತೂರಲ್ಲಿ ಇಡುವ ಆಲೋಚನೆಯು ಹೊರಟಿತ್ತು.

ಮೇಲೆ ಉಲ್ಲೇಖಿಸಿದ ಲಿಪಿಯಲ್ಲಿ ಕಿತ್ತೂರಿನ ಹೆಸರು ಇರುವ ಕಾರಣ ಈ ವೂರು ೧೬ನೇ ಶತಕದಿಂದ ಪ್ರಸಿದ್ಧವಿರುತ್ತದೆಂದು ಸ್ಪಷ್ಟವಾಗುತ್ತದೆ. ವಿಜಾಪುರದವರ ಆಳಿಕೆಯಲ್ಲಿ ಕಿತ್ತೂರಲ್ಲಿ ಯೂಸಫಖಾನನೆಂಬ ಸರದಾರನಿರುತ್ತಿದ್ದನು. ೧೭ನೇ ಶತಕದ ಕಡೆಯಲ್ಲಿ ಮೇಡೀ ಮಲ್ಲಪ್ಪನೆಂಬ ಕಿತ್ತೂರಿನ ದೇಸಾಯಿಯು ಪ್ರಬಲನಾಗಿ ಬೀಡಿ, ಸಂಪಗಾವಿ, ಇವೆರಡು ತಾಲೂಕುಗಳನ್ನು ಆಕ್ರಮಿಸಿದ್ದನು. ಇವನ ಪೂರ್ವಜರಾದ ಹಿರೆಮಲ್ಲ, ಚಿಕ್ಕಮಲ್ಲ, ಯೆಂಬವರಿಬ್ಬರು ಅಣ್ಣ ತಮ್ಮಂದಿರು ಚಿನಿವಾರರಾಗಿ ವಿಜಾಪುರದವರ ದಂಡಿನ ಸಂಗಡ ೧೭ನೇ ಶತಕದ ಕಡೆಯಲ್ಲಿ ಕಲಬುರ್ಗೆಯ ಶೀಮೆಯಿಂದ ಬಂದು ಸಂಪಗಾವಿಯಲ್ಲಿ ಇರುತ್ತಿದ್ದರು. ಹಿರೇ ಮಲ್ಲಪ್ಪನು ದಂಡಿನಲ್ಲಿ ಶೇರಿ ಶೌರ್ಯವನ್ನು ತೋರಿಸಿದ್ದರಿಂದ ಅವನಿಗೆ ಬಾದಶಹನು “ಶಮಶೇರ ಜಂಗ ಬಹಾದೂರ” ಯೆಂಬ ಬಿರುದು ಕೊಟ್ಟು, ಹುಬ್ಬಳ್ಳಿಯ ಸರದೇಶಮುಖಿಯನ್ನು ಕೊಟ್ಟನು. ಅವನ ವಂಶದ ೫ನೇ ತಲೆಯ ದೇಸಾಯಿಯು ಕಿತ್ತೂರಲ್ಲಿ ಬಂದು ನಿಂತನು. ಈ ಊರಿಗೆ ಮೊದಲು ಗೀಜಗನ ಹಳ್ಳಿಯನ್ನುವರು. ಮುಂದೆ ಕಿತ್ತೂರಿನ ದೇಸಾಯಿಯು ಸವಣೂರಿನ ನಬಾಬನಿಗೆ, ತರುವಾಯ ಪೇಶವನಿಗೆ, ಆ ಮೇಲೆ ಹೈದರನಿಗೆ ಅಂಕಿತನಾಗಿ ಪರಸಗಡ, ಗೋಕಾವೀ ತಾಲೂಕುಗಳನ್ನು ಆಕ್ರಮಿಸಿದನು. ಆದರೆ ಪರಶುರಾಮ ಬಾವೂನು ಅವನನ್ನು ಶರೆ ಹಿಡಿದು ಈ ತಾಲೂಕುಗಳನ್ನೂ ಮೊದಲಿನ ಶೀಮೆಯನ್ನೂ ಕಸುಕೊಂಡಿದ್ದನು. ಪೇಶವನ ಕೈಯಿಂದ ಬಿಡುಗಡೆ ಹೊಂದಿದ ಬಳಿಕ ಈ ದೇಸಾಯಿಯು ಟೀಪೂನಿಗೆ ಅಂಕಿತನಾದನು. ಟೀಪೂನ ಸರದಾರನು ದೇಸಾಯಿಯ ಶೀಮೆಯನ್ನೆಲ್ಲ ಕಸುಕೊಂಡು ಅವನಿಗೆ ನೇಮಣೂಕು ಕೊಡುತ್ತಿದ್ದನು. ಮುಂದೆ ಟೀಪೂನ ತರುವಾಯ ಪೇಶವನಾದರೂ ಬಹುತರ ಅದೇ ಪ್ರಕಾರ ದೇಸಾಯಿಯನ್ನು ಇಟ್ಟಿದ್ದನು. ಧೋಂಡೀವಾಘನು ದಾಳಿಯನ್ನೆಬ್ಬಿಸಿ ಸನ್ ೧೮೦೦ರಲ್ಲಿ ಕಿತ್ತೂರು ಹಿಡುಕೊಂಡಿದ್ದನು. ಸನ್ ೧೮೦೬ರಲ್ಲಿ ಮಲಸರ್ಜನೆಂಬ ದೇಸಾಯಿಯು ಪೇಶವನಿಗೆ ೭೦೦೦೦ ರೂಪಾಯಿ ಕಪ್ಪ ಕೊಡುವ ಶರತಿನಿಂದ ಕಿತ್ತೂರಿನ ಸುತ್ತು ಮುತ್ತು ೪ ಲಕ್ಷದ ಶೀಮೆಯನ್ನು ಆಳುತ್ತಿದ್ದನು. ಇವನು ಇಂಗ್ಲಿಷರ ದಂಡಿಗೆ ಸಹಾಯ ಮಾಡಿ ಅವರ ಸ್ನೇಹವನ್ನು ಸಂಪಾದಿಸಿದನು. ಮುಂದೆ ೧೮೦೯ರಲ್ಲಿ ಪೇಶವನು ದೇಸಾಯಿಗೆ ಮತ್ತೂ ಕೆಲವು ಶೀಮೆಗಳನ್ನು ಕೊಟ್ಟು ೧೭೫೦೦೦ ರೂಪಾಯಿಯ ಕಪ್ಪ ಕೂಡ್ರಿಸಿ, ದೇಸಾಯಿಗೆ “ಪ್ರತಾಪರಾವ” ಯೆಂಬ ಬಿರುದು ಕೊಟ್ಟನು. ಆಗ ದೇಸಾಯಿಯು ನಂದಗಡದ ಬಳಿಯಲ್ಲಿ ಪ್ರತಾಪಗಡವೆಂಬ ಕೋಟೆಯನ್ನು ಕಟ್ಟಿಸಿದನು. ಸನ್ ೧೮೧೮ರಲ್ಲಿ ಇಂಗ್ಲಿಷರು ಪೇಶವನ ರಾಜ್ಯವನ್ನು ಆಕ್ರಮಿ

ಸಿದ ಬಳಿಕ ಬೆಳಗಾವಿಯಲ್ಲಿ ನಡಿದ ಯುದ್ಧದಲ್ಲಿ ಈ ದೇಸಾಯಿಯು ಇಂಗ್ಲಿಷರಿಗೆ ಬಹಳ ಸಹಾಯ ಮಾಡಿದನು. ಸನ್ ೧೮೨೪ರಲ್ಲಿ ಮಲಸರ್ಜನು ತೀರಲಾಗಿ ಅವನ ಹೆಂಡತಿ ಚನ್ನವ್ವನು ವೊಬ್ಬ ದತ್ತ ಪುತ್ರನನ್ನು ತಕ್ಕೊಂಡಳು. ಈ ಸಂಗತಿಯನ್ನು ಬೆಳಗಾವಿಯ ಪ್ರಿನ್ಸಿಪಲ್ ಕಲೆಕ್ಟರನಾದ ಥ್ಯಾಕರೀ ಸಾಹೇಬನು ಸರಕಾರಕ್ಕೆ ತಿಳಿಸಿ, ವ್ಯವಸ್ಥೆಯ ಸಲುವಾಗಿ ಇಬ್ಬರು ಅಸಿಷ್ಟಾಂಟರನ್ನು ಕರೆ ಕೊಂಡು ಕಿತ್ತೂರಿಗೆ ಹೋಗ ಲಾಗಿ ಚನ್ನವ್ವನು ದಂಡು ಕೂಡಿಸಿ, ಥ್ಯಾಕರಿಯನ್ನೂ ಅವನ ಅಸಿಷ್ಟಾಂಟರನ್ನೂ ಕೊಲ್ಲಿ ಸಿದಳು. ಆದ್ದರಿಂದ ಅದೇ ವರ್ಷದ ದಿಜಂಬರಿನಲ್ಲಿ ಸರಕಾರೀ ದಂಡಿನವರು ಹೋಗಿ ಕಿತ್ತೂರು ತಕ್ಕೊಂಡರು. ಈ ಪ್ರಕಾರ ಕಿತ್ತೂರಿನ ಸಂಸ್ಥಾನವು ಸರಕಾರಕ್ಕೆ ಶೇರಿತು. ಸನ್ ೧೮೨೯ರಲ್ಲಿ ಸಂಗೊಳ್ಳಿಯ ರಾಯಪ್ಪನೆಂಬ ಹಳಬನು ಕೆಲ ಜನರನ್ನು ಕೂಡಿಸಿ ಕೊಂಡು ಚನ್ನವ್ವನ ದತ್ತ ಪುತ್ರನನ್ನು ಕಿತ್ತೂರಿನ ಗಾದಿಯ ಮೇಲೆ ಮತ್ತೆ ಕೂಡ್ರಿಸುವೆ ನೆಂದು ಬಂಡಾಯವೆಬ್ಬಿಸಿದನು. ನಾಲ್ಕು ತಿಂಗಳಿನೊಳಗೆ ಸಂಪಗಾವಿಯ ಮಾಮಲೇದಾ ರನು ಅವನನ್ನು ಮೋಸದಿಂದ ಹಿಡಿದು ಸರಕಾರಕ್ಕೆ ವೊಪ್ಪಿಸಲಾಗಿ, ನಂದಗಡದಲ್ಲಿ ಅವ ನನ್ನು ಗಲ್ಲಿಗೇರಿಸಿದರು.

ಕಿತ್ತೂರಿನ ಬೊಕ್ಕಸದಲ್ಲಿ ೧೬ ಲಕ್ಷ ರೂಪಾಯಿ ನಗದು, ೪ ಲಕ್ಷದ ಜವಾಹಿರು ಸರಕಾರದ ಕೈಶೇರಿತು. ಇವಲ್ಲದೆ ಸಾವಿರಾರು ಕುದುರೆಗಳು, ಸಾವಿರ ವೊಂಟೆಗಳು, ಕೆಲವು ಆನೆಗಳು, ೬೦ ತೋಫುಗಳು ಕಿತ್ತೂರಲ್ಲಿ ಇದ್ದವು.

**ಕೊಂಗನೊಳ್ಳಿ.**—ಚಿಕ್ಕೋಡಿಯ ವಾಯವ್ಯಕ್ಕೆ ೨೨ ಮೈಲಿನ ಮೇಲೆ, ಜ. ಸ. (೮೧) ೫೦೬೧. ಟಪಾಲ ಕಚೇರಿ, ಇಂಗ್ಲಿಷ ಶಾಲೆ, ಹೆಣ್ಣು ಮಕ್ಕಳ ಶಾಲೆ, ಮುಶಾ ಫರೀ ಬಂಗಲೆ, ಇರುತ್ತವೆ. ಗುರವಾರದ ಸಂತೆಯಲ್ಲಿ ಅಕ್ಕಿ, ಸಕ್ಕರಿ, ಉಪ್ಪು, ಬಟ್ಟೆಗಳು, ಕಿರಾಣಿ, ಮುಂತಾದವುಗಳ ಮಾರಾಟವು ವೊಳಿತಾಗಿ ನಡಿಯುತ್ತದೆ. ಸಂತೆಯಲ್ಲಿ ದನ ಗಳ ಮಾರಾಟವು ಬಹಳವಾಗುತ್ತದೆ. ಈ ವೂರಲ್ಲಿ ಧಡೋತಿಯ ಬಟ್ಟೆಗಳೂ ಕಂಬಳಿ ಗಳೂ ಹುಟ್ಟುತ್ತವೆ. ಸನ್ ೧೮೭೭ನೇ ವರ್ಷದ ಬರಗಾಲದ ಪೂರ್ವದಲ್ಲಿ ಈ ವೂರಲ್ಲಿ ಕಾಗದ ಮಾಡುವ ಕಾರಖಾನೆಗಳಿದ್ದವು. ಈ ವೂರಿಗೆ ವೊಂದು ಹಾಳು ಕೋಟೆ ಯುಂಟು.

**ಕೋಕಟನೂರು.**—ಅಥಣಿಯ ಆಗ್ನೇಯಕ್ಕೆ ೧೨ ಮೈಲನ ಮೇಲೆ, ಜ. ಸ. (೮೧) ೨೨೫೦. ಇಲ್ಲಿ ಕುದುರೆಯ ಲಗಾಮುಗಳೂ ಅಡಕೋತಗಳೂ, ಹುಟ್ಟುತ್ತವೆ. ಇಲ್ಲಿಯ ಯೆಲ್ಲಮ್ಮನ ಜಾತ್ರೆಯಲ್ಲಿ ೪೦೦೦ ಜನ ಕೂಡುತ್ತದೆ.

**ಕೊಣ್ಣೂರು.**—ಗೋಕಾವಿಯ ವಾಯವ್ಯಕ್ಕೆ ೫ ಮೈಲಿನ ಮೇಲೆ ಘಟಪ್ರಭೆಯ ದಂಡೆಯಲ್ಲಿ, ಜ. ಸ. (೮೧) ೩೪೩೭. ಈ ವೂರಿನ ಹದ್ದಿನೊಳಗೆ ತಡಸಲಿನ ಬಳಿಯಲ್ಲಿ ಹಲವು ಹಾಳು ಗುಡಿಗಳಿರುತ್ತವೆ.

ಕೊಣ್ಣೂರಿನ ಬಳಿಯಲ್ಲಿ ಬೈಲೊಳಗೆ ಹಲಿಗೆಗಲ್ಲಿನಿಂದ ಮಾಡಿದ ಕೋಣೆಗಳಿರುತ್ತವೆ. ಇವುಗಳಲ್ಲಿ ಯೆಷ್ಟೋ ಬಿದ್ದು ಹೋಗಿರುತ್ತವೆ. ಆದರೂ ವೊತ್ತಟ್ಟಿಗೆ ೫೦ ಕೋಣೆಗಳ

ಗುಂಪು ಇರುತ್ತದೆ; ಅದರೊಳಗಿನ ಕೋಣೆಗಳು ಬಹಳವಾಗಿ ಕೆಟ್ಟಿಲ್ಲ. ೪ರಿಂದ ೬ ಫೂಟಿನ ವರೆಗೆ ಯೆತ್ತರ, ಅಷ್ಟೇ ಅಗಲು, ಆದಂಥ ಹಲಿಗೆ ಗಲ್ಲುಗಳನ್ನು ವೊಳಗೆ ಸಣ್ಣ ದೊಂದು ಕೋಣೆಯಾಗುವ ಹಾಗೆ, ಪೂರ್ವ, ಪಶ್ಚಿಮ, ಉತ್ತರ, ಈ ಮೂರು ದಿಕ್ಕುಗಳಲ್ಲಿ ನಿಲ್ಲಿಸಿ, ಮೇಲೆ ವೊಂದು ಹಲಿಗೆಯನ್ನು ಛಾವಣಿಯ ಹಾಗೆ ಹಾಕಿದ್ದಾರೆ. ದಕ್ಷಿಣಕ್ಕೆ ಬಿಟ್ಟ ಬಾಗಿಲಿನ ಯೆಡ ಬಲಗಳಲ್ಲಿಯೂ ವೊಂದೊಂದು ಹಲಿಗೆಯನ್ನು ನಿಲ್ಲಿಸಿ, ನಡುವೆ ಯೆರಡು ಫೂಟು ಅಗಲಾದ ದಾರಿಯನ್ನು ಬಿಟ್ಟಿದ್ದಾರೆ. ಕೆಲವು ಕೋಣೆಗಳ ಮುಂಭಾಗದಲ್ಲಿ ಬಾಗಿಲಿನಿಂದ ಮುಂದೆ ಐದಾರು ಫೂಟು ಉದ್ದ, ಯೆರಡು ಫೂಟು ಯೆತ್ತರ ಇರುವ ಹಲಿಗೆಗಳನ್ನು ವೊಂದು ಮೊಳದ ಅಂತರದಿಂದ ನಿಲ್ಲಿಸಿ ಮೇಲೆ ಮೂರನೇದೊಂದು ಹಲಿಗೆಯ ಛಾವಣಿಯನ್ನು ಹಾಕಿದ್ದಾರೆ. ಇದು ಕೋಣೆಯೊಳಗೆ ಹೋಗಲಿಕ್ಕೆ ಯೆರಡು ಫೂಟು ಯೆತ್ತರವಾದ ಕಿರಿ ಮಾರ್ಗವಾಗಿದೆ. ಈ ಹಲಿಗೆಗಳಿಗೆ ಉಳಿಯ ಕಚ್ಚು ಯೆಲ್ಲಿಯೂ ಇಲ್ಲ. ಆದ್ದರಿಂದ ನೆರೆಯ ಗುಡ್ಡದ ಕಣಿಗಳಲ್ಲಿ ಈ ಹಲಿಗೆಗಳನ್ನು ತೀಳಿ ತೆಗಿದು ಹಾಗೇ ಹಾಕಿದ್ದಾರೆಂದು ತೋರುತ್ತದೆ. ಕೋಣೆಗಳ ಛಾವಣಿಯ ಮೇಲೆ ಗುಮುಟದ ಹಾಗೆ ಕಲ್ಲು ಮಣ್ಣುಗಳಿಂದ ಕಟ್ಟಿದ್ದರ ಕುರುಹುಗಳು ಕೆಲವು ಕಡೆಯಲ್ಲಿ ಇನ್ನೂ ಕಾಣಿಸುತ್ತವೆ. ಕೋಣೆಯ ಸುತ್ತು ಮುತ್ತೂ ಕಲ್ಲು ಮಣ್ಣಿನ ವೊಡ್ಡುಗಳನ್ನು ಕೆಲವು ಕಡೆಯಲ್ಲಿ ಹಾಕಿದ್ದಾರೆ. ಮೇಲೆ ಹೇಳಿದ ೫೦ ಕೋಣೆಗಳಲ್ಲಿ ಬಹಳ ಕೆಡದಿದ್ದಂಥಾದೊಂದು ಕೋಣೆಯನ್ನು ವೊಬ್ಬ ಇಂಜಿನೀಯರ ಸಾಹೇಬನು ಬಿಚ್ಚಿ ನೋಡಿದನು. ಅದರೊಳಗೆ ಛಾವಣಿಯ ವರೆಗೆ ಮಣ್ಣು ತುಂಬಿತ್ತು. ಆ ಮಣ್ಣು ಕೆದರಲಾಗಿ ವೊಳಗೆ ಕೆಲವು ದವಡೆಯ ಹಲ್ಲುಗಳೂ ಬೇರೆ ಮನುಷ್ಯ ಶರೀರದ ಯೆಲುವುಗಳೂ ಹೊರಟವು. ಈ ಯೆಲುವುಗಳ ಸ್ಥಿತಿಯಿಂದ ದಕ್ಷಿಣಕ್ಕೆ ಮೋರೆ ಮಾಡಿ ಹೆಣವನ್ನು ಕೂಡ್ರಿಸಿದ್ದ ಹಾಗೆ ಕಾಣಿಸಿತು. ಅವುಗಳ ಬುಡದಲ್ಲಿ ವೊಂದು ಮಣ್ಣಿನ ಪಾತ್ರೆಯ ತುಂಡುಗಳು ಹೊರಟವು. ಆದ್ದರಿಂದ ಈ ಕೋಣೆಗಳು ಬುನಾದಿಯ ಕಾಲದ ಗೋರಿಗಳಿರುತ್ತವೆಂದು ಗೊತ್ತಾಯಿತು. ಇವು ಸಾವಿರಾರು ವರ್ಷದ ಹಿಂದಿನ ಮೂಲ ನಿವಾಸಿಗಳ ಗೋರಿಗಳಿರುತ್ತವೆ. ಇಂಥಾ ಗೋರಿಗಳು ಹೈದರಾಬಾದಿನ ನೆರೆಯಲ್ಲಿಯೂ, ಮಲಿಯಾಳ ಶೀಮೆಯಲ್ಲಿಯೂ ಇರುತ್ತವೆ. ಈ ಕೊಣ್ಣೂರಿನ ಬಳಿಯಲ್ಲಿಯ ಗೋರಿಗಳಿಗೆ ಪಾಂಡವರು ನೆರಳಿಗಾಗಿ ಕಟ್ಟಿದ ಮನೆಗಳೆಂದೆನ್ನುವರು. ಆದರೆ ಮಲಿಯಾಳದಲ್ಲಿ ಇವುಗಳಂಥ ಗೋರಿಗಳಿಗೆ "ಪಾಂಡು ಕುಳಿ" ಯೆಂದೆನ್ನುವರು. ಪಾಂಡು ಕುಳಿಯೆಂದರೆ ಗೋರಿಯೆಂಬ ಅರ್ಥವಿರುತ್ತದೆ.

ಕೂಡಚಿ.—ಅಥಣಿಯ ನೈರುತ್ಯಕ್ಕೆ ೨೦ ಮೈಲಿನ ಮೇಲೆ, ಕೃಷ್ಣೆಯ ದಂಡೆಯಲ್ಲಿ, ಜ. ಸ. (೪೧) ೫೪೪೩. ಇಲ್ಲಿ ಟಪಾಲ ಕಚೇರಿ, ಯೆರಡು ಶಾಲೆಗಳು, ಹೊಗೆಬಂಡಿಯ ಸ್ಟೇಶನು ಇರುತ್ತವೆ. ಈ ಊರಲ್ಲಿ ಜಮ್ಮಖಾನೆಗಳು ಆಗುತ್ತವೆ. ಈ ವೂರಿನ ಬಳಿಯಲ್ಲಿ ಕೃಷ್ಣೆಯ ಪಾತ್ರೆಯೊಳಗಿರುವದೊಂದು ನಡುಗಡ್ಡೆಯಲ್ಲಿ ಜಾಲಿ, ಹುಣಚೀ ಮರಗಳ ಬನದಲ್ಲಿ ಶೇಖಮಹಮೂದ ಪೀರದಾದಿಯೆಂಬ ಮುಸಲ್ಮಾನ ಸತ್ಪುರುಷನ ಗೋರಿ

ಇರುತ್ತದೆ. ಈ ಸತ್ಪುರುಷನು ಧರ್ಮೋಪದೇಶ ಮಾಡುವನು. ಬಲಖ ಪಟ್ಟಣದವಳೊಬ್ಬ ರಾಜಕನ್ನಿಕೆಯು ಇವನ ಶಿಷ್ಯಳಾಗಿ ಹಿಂದುಸ್ತಾನಕ್ಕೆ ಬಂದು ಪರೋಪಕಾರದಲ್ಲಿ ಜನ್ಮ ಕಳೆದಳೆಂದು ಹೇಳುತ್ತಾರೆ. ಆಕೆಯ ಗೋರಿಯು ಈ ನಡುಗಡ್ಡೆಯಲ್ಲಿ ಇರುತ್ತದೆ. ಮಹಮೂದ ಪೀರದಾದಿಯು ಕಲಬುರ್ಗಿಯಲ್ಲಿ ಸತ್ತದ್ದರಿಂದ ಅವನ ನಿಜವಾದ ಗೋರಿಯು ಅಲ್ಲಿ ಇರುತ್ತದೆ. ಈ ನಡುಗಡ್ಡೆಯಲ್ಲಿ ರಾಜಕನ್ನಿಕೆಯ ಸನ್ಮಾನಾರ್ಥವಾಗಿ ಆಕೆಯ ಗೋರಿಯ ಬಳಿಯಲ್ಲಿ ಆ ಗುರುವಿನ ಗೋರಿಯನ್ನು ಕಟ್ಟಿದ್ದಾರೆಂದು ಹೇಳುತ್ತಾರೆ. ಬಾಮನೀ ಬಾದಶಾಹಿಯನ್ನು ಸ್ಥಾಪಿಸಿದ ಜಾಫೀರ ಖಾನನಿಗೆ ದಿಲ್ಲಿಯ ಮಹಮ್ಮದ ತಘಲಖ ಬಾದಶಹನು ಕೂಡಚಿಯನ್ನು ಜಹಾಗೀರು ಹಾಕಿ ಕೊಟ್ಟಿದ್ದನೆಂದು ಫೆರಿಸ್ತನು ಬರೆದಿದ್ದಾನೆ.

**ಕುನಕುಂಬಿ.**— ಖಾನಾಪುರದ ವಾಯವ್ಯಕ್ಕೆ ೧೯ ಮೈಲಿನ ಮೇಲೆ. ಕುನಕುಂಭೇಶ್ವರ, ಮಾಹುಲೀದೇವಿ, ಯೆಂಬ ಗುಡಿಗಳುಂಟು. ಎರಡನೇ ಗುಡಿಯು ದೊಡ್ಡದಿರುತ್ತದೆ. ಇದು ಮಲಾಪಹಾರಿಯ ಉಗಮ ಸ್ಥಾನದಲ್ಲಿ ಇರುವ ಕಾರಣ ಆ ಹೊಳೆಯ ಗುಡಿ ಯೆಂದು ಯೆಣಿಸಲ್ಪಡುತ್ತದೆ. ಜನರು ಈ ದೇವಿಗೆ ನಡಕೊಳ್ಳುವರು. ಧನು ರಾಶಿಯಲ್ಲಿ ಗುರು ಇರುವಾಗ ಈ ಉಗಮ ಸ್ಥಾನಕ್ಕೆ ಭಾಗೀರಥಿ ಬರುತ್ತಾಳೆಂದು ತಿಳಿದು ಸುತ್ತು ಮುತ್ತಲಿನ ಜನರು ಇಲ್ಲಿ ಬಂದು ಸ್ನಾನ ಮಾಡಿ ಹೋಗುವರು.

**ಮಹೀಪಾಲಗಡ.**— ಬೆಳಗಾವಿಯ ಪಶ್ಚಿಮಕ್ಕೆ ೧೦ ಮೈಲಿನ ಮೇಲೆ ದುರ್ಗ ಕೋಟೆಯು. ಕೋಟೆಗೆ ಹೋಗುವವರು ೩೦೦ ಫೂಟು ಉದ್ದವಾದ ಇಳಕಲವನ್ನು ಯೇರಿ ಹೋಗ ಬೇಕು. ಕೋಟೆಯು ೧೪೦೦ ಫೂಟು ಉದ್ದ, ೬೦೦ ಫೂಟು ಅಗಲು ಇರುತ್ತದೆ. ಕೋಟೆಯೊಳಗಿನ ಅರ್ಧ ಭಾಗದಲ್ಲಿ ಮಾತ್ರ ಮನೆಗಳಿರುತ್ತವೆ. ಉಳಿದ ಅರ್ಧ ಭಾಗದಲ್ಲಿ ಹುಲ್ಲು ಬೆಳೆಯುತ್ತದೆ. ಕೋಟೆಯೊಳಗೆ ದೊಡ್ಡದೊಂದು ಬಾವಿಯುಂಟು.

**ಮಲಪ್ರಭಾ.**— ಕುನಕುಂಬಿ, ಸೊಗಲ ನೋಡು.

**ಮಂಗಸೂಳಿ.**— ಅಥಣಿಯ ಪಶ್ಚಿಮಕ್ಕೆ ೧೬ ಮೈಲಿನ ಮೇಲೆ, ಜ. ಸ. (೮೧) ೩೧೬೦. ಇಲ್ಲಿಯ ಮಲ್ಲಯ್ಯನ ಗುಡಿಯು ಪ್ರಸಿದ್ಧ ಉಂಟು; ಬಹು ಜನರು ಈ ದೇವರಿಗೆ ನಡಕೊಳ್ಳುವರು. ಚೈತ್ರ ಮಾಸದಲ್ಲಿ ಈ ದೇವರ ಜಾತ್ರೆಯಲ್ಲಿ ಯೇಳೆಂಟು ಸಾವಿರ ಜನ ಕೂಡುತ್ತದೆ. ದನ, ಕುದುರೆಗಳ ಮಾರಾಟವು ಬಹಳ ಆಗುತ್ತದೆ.

**ಮುನ್ನೊಳ್ಳಿ.**— ಸವದತ್ತಿಯ ಉತ್ತರಕ್ಕೆ ೬ ಮೈಲಿನ ಮೇಲೆ ಮಲಾಪಹಾರಿಯ ದಂಡೆಯಲ್ಲಿ, ಜ. ಸ. (೮೧) ೪೬೦೧. ಇಲ್ಲಿ ಕರಳೆಯ ಹಚ್ಚಡಗಳೂ, ಜಾಜೀಮುಗಳೂ ಮುಂತಾದ ಅಚ್ಚು ಹಾಕಿದ ವಸ್ತ್ರಗಳು ಹುಟ್ಟುತ್ತವೆ. ಆದರೆ ಇವುಗಳ ಮಾರಾಟವು ಮೊದಲಿನಷ್ಟು ಈಗ ಆಗುವದಿಲ್ಲ. ಇಲ್ಲಿಯ ಬಣ್ಣಗಾರರು ನೂಲಿಗೂ ಬಣ್ಣ ಕೊಡುವರು. ಇಲ್ಲಿಯ ಭದ್ರವಾದ ಕೋಟೆಯನ್ನು ಮಲಾಪಹಾರಿಯು ಮೂರು ದಿಕ್ಕುಗಳಲ್ಲಿ ಸುತ್ತುಗಟ್ಟಿರುತ್ತದೆ. ಕೊತ್ತಳಗಳೂ ಗೋಡೆಗಳೂ ಕಲ್ಲಿನವು, ಬಹಳವಾಗಿ ಕೆಟ್ಟಿಲ್ಲ;

ಕಂದಕವು ತಕ್ಕಮಟ್ಟಿಗೆ ಆಳವಾಗಿರುವದು. ಕೋಟೆಯ ಕ್ಷೇತ್ರವು ೫೦೦ ಚಚ್ಚೌಕು ಯಾರ್ಡು ಇರುವದು. ಒಳಗೆ ಈಗ ಮನೆಗಳು ಹಾಳು ಬಿದ್ದವೆ; ಜನರ ವಸ್ತಿ ಇಲ್ಲ. ಪಶ್ಚಿಮ ದಿಕ್ಕಿನಲ್ಲಿ ಯೆರಡು ಅಗಸೆಗಳು ವೊಂದರೊಳಗೊಂದು ಇರುತ್ತವೆ. ಕೋಟೆಯೊಳಗೆ ಹನುಮಂತ, ಉಡಚವ್ವ, ಯೆಂಬ ಗುಡಿಗಳು ಹಳೇವಿರುತ್ತವೆ. ಹನುಮಂತನ ಗುಡಿಯಲ್ಲಿ ಚಿತ್ರಗಳನ್ನು ಕೊರಿದಿದ್ದಾರೆ. ಉಡಚವ್ವನ ಗುಡಿಯಲ್ಲಿ ದೇವಗಿರಿಯ ಯಾದವ ಅರಸು ೧೨೫೨ರಲ್ಲಿ ಬರಿಸಿದ್ದೊಂದು ಲಿಪಿ ಇರುತ್ತದೆ. ಊರಿನ ಪಶ್ಚಿಮಕ್ಕೆ ದೊಡ್ಡದೊಂದು ಅವಾರದೊಳಗೆ ೮ ಸಣ್ಣ ಸಣ್ಣ ಗುಡಿಗಳಿವೆ. ಅವುಗಳಿಗೆ ಪಂಚಲಿಂಗನ ಗುಡಿಗಳೆನ್ನುವರು. ಈ ಗುಡಿಗಳ ಸುತ್ತು ಮುತ್ತು ಯೆತ್ತರವಾದ ಗೋಡೆಯುಂಟು. ಇವುಗಳೊಂದರಲ್ಲಿ ದೇವಗಿರಿಯ ಯಾದವ ಅರಸು ೧೨೨೩ರಲ್ಲಿ ಬರಿಸಿದ್ದೊಂದು ಲಿಪಿ ಇರುತ್ತದೆ. ಆದರೆ ಗುಡಿಗಳು ಇದಕ್ಕೂ ಹಳೆವಾಗಿ ಕಾಣುತ್ತವೆ. ಮುನ್ನೊಳ್ಳಿಯು ಪಟವರ್ಧನರ ವಶದಲ್ಲಿ ಬಹು ದಿವಸ ಇತ್ತು.

ಮನೋಳಿ.—ಚಿಕ್ಕೋಡಿಯ ದಕ್ಷಿಣಕ್ಕೆ ೧೨ ಮೈಲಿನ ಮೇಲೆ, ಜ. ಸ. (೮೧) ೨೫೪೭. ಇದಕ್ಕೆ ನಗರ ಮನೋಳಿಯನ್ನುವರು. ಈ ಮನೋಳಿ, ಚಿಕ್ಕೋಡೀ ಪರಗಣೆಗಳನ್ನು ಪೇಶವನು ಸನ್ ೧೭೭೦ರಲ್ಲಿ ಪಟವರ್ಧನರಿಗೆ ಕೊಟ್ಟದ್ದರಿಂದ ಅವರಿಗೂ ಕೊಲ್ಲಾಪುರದ ಅರಸನಿಗೂ ಕಡು ಹಗೆತನ ವುಂಟಾಯಿತು. ಮುಂದೆ ಇವೇ ಪರಗಣೆಗಳು ನಿಪಾಣಕಕಿನ ಕೈ ಶೇರಿದ ಬಳಿಕ ಅವನಿಗೂ ಕೊಲ್ಲಾಪುರದವರಿಗೂ ಆರು ವರ್ಷ ಜಗಳ ನಡಿದಿತ್ತು.

ಮುಗಟಖಾನ ಹುಬ್ಬಳ್ಳಿ.—ಬೆಳಗಾವಿಯ ದಕ್ಷಿಣಕ್ಕೆ ೧೮ ಮೈಲಿನ ಮೇಲೆ, ಮಲಾಪಹಾರಿಯ ದಂಡೆಯಲ್ಲಿ, ಜ. ಸ. (೮೧) ೪೧೯೭. ವಿಜಾಪುರದವರ ಸರದಾರನಾದ ಮುಗುಟಖಾನನೆಂಬವನ ಗೋರಿಯು ಈ ವೂರಲ್ಲಿ ಇರುವ ಕಾರಣ, ಅವನ ಹೆಸರು ಈ ವೂರಿಗೆ ಬಿದ್ದದೆ. ದೇವಗಿರಿಯ ಅರಸರ ಮಂತ್ರಿಯು ೧೨೪೯ರಲ್ಲಿ ಬರಿಸಿದ್ದೊಂದು ಲಿಪಿಯಲ್ಲಿ ಈ ಹುಬ್ಬಳ್ಳಿಯ ಉಲ್ಲೇಖವದೆ. ಇಲ್ಲಿ ನದೀ ತೀರದಲ್ಲಿ ವೊಬ್ಬ ವೈಷ್ಣವ ಸ್ವಾಮಿಯ ವೃಂದಾವನವಿರುತ್ತದೆ. ಅಲ್ಲಿ ನರಸಿಂಹನ ಸ್ಥಾಪನೇ ಮಾಡಿ ವೈಷ್ಣವರು ನಡಕೊಳ್ಳುತ್ತಾರೆ.

ಮುರಗೋಡ.—ಸವದತ್ತಿಯ ವಾಯುವ್ಯಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೪೮೯೫. ಪೋಲೀಸ ಕಚೇರಿ, ಟಪಾಲ ಕಚೇರಿಗಳಿರುತ್ತವೆ. ಇಲ್ಲಿ ಮಲ್ಲಿಕಾರ್ಜುನನ ಜಾತ್ರೆಯು ಮಾರ್ಗ ಶೀರ್ಷ ಪೂರ್ಣಿಮೆಯಲ್ಲಿ ಆಗುತ್ತದೆ. ಊರ ಹೊರಗೆ ರಮಣೀಯವಾದ ತೋಟಗಳಿರುತ್ತವೆ. ಮುರಗೋಡವು ಪಡಮೂಲೆಯ ಪೇಟೆಯೆಂದೆನಿಸುತ್ತದೆ. ಇಲ್ಲಿ ಅರಳೆ, ಕಾಳು, ಕಿರಾಣಿ, ಮುಂತಾದವುಗಳ ವ್ಯಾಪಾರವು ವೊಳಿತಾಗಿ ನಡಿಯುತ್ತದೆ. ಇಲ್ಲಿಯ ಬಣ್ಣಗಾರರು ಮುನ್ನೊಳ್ಳಿಯಂತೆ ವಸ್ತ್ರಗಳಿಗೂ ನೂಲಿಗೂ ಬಣ್ಣ ಕೊಡುವರು. ಚಿದಂಬರದೀಕ್ಷಿತರೆಂಬ ಹೆಸರಾದ ಅರ್ವಾಚೀನ ಸತ್ಪುರುಷನ

ಸಮಾಧಿಯು ಈ ವೂರಲ್ಲಿ ಇರುತ್ತದೆ. ಆ ಸಮಾಧಿಯ ಜಾತ್ರೆಯು ಪ್ರತಿ ವರ್ಷ ಆಗುತ್ತದೆ.

ನಂದಗಡ.—ಖಾನಾಪುರದ ಅಗ್ನೇಯಕ್ಕೆ ೭ ಮೈಲಿನ ಮೇಲೆ, ಜ. ಸ. (೮೧) ೭೯೧೦. ಇಲ್ಲಿ ಟಪಾಲ ಕಚೇರಿಯೂ ಮೂರು ಶಾಲೆಗಳೂ ಇರುತ್ತವೆ. ಇದು ದೊಡ್ಡ ಪಡಮೂಲೆಯ ಪೇಟೆಯು. ೫೦೦೦ದಿಂದ ೩೦೦೦೦ದ ವರೆಗೆ ಬಂಡವಲುಳ್ಳಂಥ ವ್ಯಾಪಾರಸ್ಥರು ೩೦ ಜನರಿದ್ದಾರೆ. ತೆಂಗು, ಅಡಿಕೆ, ಕೊಬ್ಬರೀ ಯೆಣ್ಣೆ, ಉತ್ತತ್ತಿ, ಯೆಣ್ಣೆ, ಉಪ್ಪು, ಮುಂತಾದ ಕೊಂಕಣದ ಸರಕುಗಳ ವ್ಯಾಪಾರವು ಬುಧವಾರದ ಸಂತೆಯಲ್ಲಿ ಬಹಳ ಆಗುತ್ತದೆ. ಈ ವೂರಿನ ಬಳಿಯಲ್ಲಿ ಕಿತ್ತೂರಿನ ಮಲಸರ್ಜನು ಪ್ರತಾಪಗಡವೆಂಬ ದುರ್ಗ ಕೋಟೆಯನ್ನು ಕಟ್ಟಿಸಿದ್ದಾನೆಂದು ಹಿಂದೆ ಹೇಳಿದ್ದೇವೆ. ಅದು ಈಗ ಬಹಳವಾಗಿ ಹಾಳಾಗಿದೆ. ಸಂಗೊಳ್ಳಿಯ ರಾಯಪ್ಪನನ್ನು ನಂದಗಡದಲ್ಲಿ ಗಲ್ಲಿಗೇರಿಸಿದರೆಂದು ಹಿಂದೆ ಹೇಳಿದ್ದೇವೆ. ಅವನು ಸಾಯುವ ಪೂರ್ವದಲ್ಲಿ ತನ್ನನ್ನು ಹುಗಿಯುವ ಸ್ಥಳವನ್ನು ತೋರಿಸಿ ಆ ಸ್ಥಳದಲ್ಲಿ ದೊಡ್ಡದೊಂದು ಮರವು ಬೆಳಿಯುವದೆಂದು ಹೇಳಿದ್ದನು. ಆ ಪ್ರಕಾರ ಅವನ ಹೆಣವನ್ನು ಅಲ್ಲಿ ಹುಗಿದ ಬಳಿಕ ಅಲ್ಲಿ ವೊಂದು ಆಲದ ಮರ ಹುಟ್ಟಿ ಈಗ ಬಹು ದೊಡ್ಡದಾಗಿ ಬೆಳಿದದೆ. ಅದರ ಕೆಳಗೆ ರಾಯಪ್ಪನ ಹೆಸರಿನ ಗುಡಿಯನ್ನು ಕಟ್ಟಿಸಿದ್ದಾರೆ. ನೆರೆಹೊರೆಯ ಜನರಲ್ಲಿ ಮಕ್ಕಳಿಲ್ಲದವರು, ರೋಗಿಗಳು, ವ್ಯಾಪಾರಸ್ಥರು ಮುಂತಾದವರು ರಾಯಪ್ಪನ ಹೆಸರಿನಿಂದ ಮಾಡಿದ ಹರಿಕೆಯು ಕೈ ಗೂಡುತ್ತದೆಂದು ಹೇಳುತ್ತಾರೆ. ಆದ್ದರಿಂದ ಪರಸ್ಥಳದವರು ಸಹ ಬಂದು ರಾಯಪ್ಪನ ಗೋರಿಗೆ ಬಲಿ ಮುಂತಾದವುಗಳನ್ನು ಕೊಡುತ್ತಾರೆ.

ನವಿಲತೀರ್ಥ.—ಸೊಗಲ ನೋಡು.

ನ್ಯಾಸರಿಗಿ.—ಸಂಪಗಾವಿಯ ಉತ್ತರಕ್ಕೆ ೭ ಮೈಲಿನ ಮೇಲೆ, ಜ. ಸ. ೨೧೧೦. ಇಲ್ಲಿ ಉರುಟು ಬಟ್ಟೆಗಳೂ ಕಾಜಿನ ಬಳೆಗಳೂ ಹುಟ್ಟುತ್ತವೆ; ಸೋಮವಾರ ಸಂತೆಯಾಗುತ್ತದೆ. ಬಸವನ ಗುಡಿಯು ಪುರಾತನದ್ದಿರುತ್ತದೆ. ಅದರಲ್ಲಿ ಸವದತ್ತಿಯ ಅರಸು ೧೨೯೯ರಲ್ಲಿ ಬರಿಸಿದ ಲಿಪಿಯುಂಟು. ಬಸವನ ಜಾತ್ರೆಯು ಹನ್ನೆರಡು ವರ್ಷಕ್ಕೊಮ್ಮೆ ಆಗುತ್ತದೆ.

ನಿಪಾಣಿ.—ಬೆಳಗಾವಿಯ ಉತ್ತರಕ್ಕೆ ೪೦ ಮೈಲಿನ ಮೇಲೆ, ಚಿಕ್ಕೋಡಿಯ ಪಶ್ಚಿಮಕ್ಕೆ ೧೩ ಮೈಲಿನ ಮೇಲೆ, ಜ. ಸ. (೮೧) ೯೭೭೭. ಇಲ್ಲಿ ಮ್ಯುನಿಸಿಪಾಲಿಟಿ, ಟಪಾಲ ಕಚೇರಿ, ಮುಶಾಫರೀ ಬಂಗಲೆ, ಧರ್ಮಶಾಲೆ, ಪುಸ್ತಕಾಲಯ, ೪ ಶಾಲೆಗಳು ಉಂಟು. ಇಲ್ಲಿ ೫೦೦೦ದಿಂದ ೨೫೦೦೦ದ ವರೆಗೆ ಬಂಡವಲುಳ್ಳಂಥ ವ್ಯಾಪಾರಸ್ಥರು ೧೦೦ ಜನರುಂಟು. ಗುರುವಾರದ ಸಂತೆಯು ದೊಡ್ಡದಾಗುತ್ತದೆ. ಅಕ್ಕಿ, ಅಡಿಕೆ, ಯಾಲಕ್ಕಿ, ಕಿರಾಣಿ, ಸಕ್ಕರೆ, ಕಾಳು, ವಸ್ತ್ರ, ಪಾತ್ರೆಗಳು, ಮುಂತಾದ ಸರಕುಗಳ ಮಾರಾಟವು ಬಹಳ ನಡಿಯುತ್ತದೆ. ದನಗಳ ಮಾರಾಟದ ಬಗ್ಗೆ ನಿಪಾಣಿಯು ಹೆಸರಾಗಿದೆ;

ಸಂತೆಯಲ್ಲಿ ೨, ೩ ಸಾವಿರದ ವರೆಗೆ ದನಗಳ ಮಾರಾಟವಾಗುತ್ತದೆ. ಈ ವೂರಲ್ಲಿ ಧಡೋತಿಯ ಬಟ್ಟೆಗಳೂ ಕಂಬಳಿಗಳೂ ಹುಟ್ಟುತ್ತವೆ. ಮ್ಯುನಿಸಿಪಾಲಿಟಿಯ ಆದಾಯವು ೧೮೮೨-೮೩ರಲ್ಲಿ ೧೦೫೭೬ ರೂಪಾಯಿ ಇತ್ತು. ನಿಪಾಣಿಯ ಅಪ್ಪಾ ಸಾಹೇಬನು ಶಿರ ಗುಪ್ಪಿಯ ಬಳಿಯಲ್ಲಿ ದೊಡ್ಡದೊಂದು ಕೆರೆ ಕಟ್ಟಿಸಿ, ನಿಪಾಣಿಯ ಊರೊಳಗೆ ನಳ ತಂದಿ ದ್ದಾನೆ. ಅದರ ನೀರು ಊರವರು ಕುಡಿಯುತ್ತಾರೆ. ಇದರ ಹೊರ್ತು ಮ್ಯುನಿಸಿಪಾಲಿಟಿ ಯವರು ಬೇರೆ ವೊಂದೆರಡು ಕೆರೆಗಳನ್ನು ಕಟ್ಟಿಸಿದ್ದಾರೆ. ಊರ ಬಳಿಯಲ್ಲಿ ವೊಂದು ಶೀ ನೀರಿನ ಹಳ್ಳವೂ ಇರುತ್ತದೆ. ನಿಪಾಣಿಯ ಕೋಟೆಯು ಭದ್ರವಾಗಿ ಕಟ್ಟಿದ್ದಿರುತ್ತದೆ. ಇದರ ಸುತ್ತಲಿನ ಕಂದಕದೊಳಗೆ ನೀರು ಇರುವದು. ಈ ಕೋಟೆಯನ್ನು ಸರಕಾರ ದವರು ಯುದ್ಧಕ್ಕೆ ಬಾರದಂತೆ ಬುದ್ಧಿ ಪೂರ್ವಕವಾಗಿ ಕೆಡಿಸಿದಾಗ್ಯೂ ಇದು ಇನ್ನೂ ಭದ್ರ ವಾಗಿರುತ್ತದೆ. ಕೋಟೆಯ ಬಾಗಿಲಿನ ಬಳಿಯಲ್ಲಿ ನಿಪಾಣಕರನ ಅರಮನೆಯುಂಟು.

ನಿಪಾಣಿಯು ನಡಿಯುವ ಶತಕದಲ್ಲಿ ಹೆಸರಿಗೆ ಬಂದ ಗ್ರಾಮವಿರುತ್ತದೆ. ಪೂರ್ವ ಕಾಲದ ಗುಡಿಗಳೂ ಲಿಪಿಗಳೂ ಈ ವೂರಲ್ಲಿ ಇಲ್ಲ. ಇಲ್ಲಿಯ ದೇಸಾಯಿ, ಸಿದೋಜೀ ರಾವ ಅಪ್ಪಾ ಸಾಹೇಬ ನಿಂಬಾಳಕರ, ಯೆಂಬವನೇ ಮೊದಲಿಗೆ ಹೆಸರಿಗೆ ಬಂದವನು. ಇವನು ಬಹು ಶೂರನಿದ್ದಾಗ್ಯೂ ಅತಿ ಕ್ರೂರನೂ ದುರಾಚಾರಿಯೂ ಇದ್ದನು. ಇವನು ಮೊದಲು ಸಿಂದ್ಯನ ದಂಡಿನಲ್ಲಿ ಸರದಾರನಾಗಿ ದಕ್ಷಿಣ ಮಹಾರಾಷ್ಟ್ರದಲ್ಲಿ ಸಿಂದ್ಯನಿಗೆ ಸಹಾಯ ಮಾಡಿದನು, ೧೮೦೧. ಜನರಲ್ ವೆಲ್ಲೆಸ್ಲಿಯು ಶ್ರೀರಂಗ ಪಟ್ಟಣದಿಂದ ಬಾಜೀರಾಯನನ್ನು ಗಾದಿಯ ಮೇಲೆ ಕೂಡ್ರಿಸಲಿಕ್ಕೆ ಪುಣೆಗೆ ಹೋಗುವಾಗ ನಿಪಾಣಕ ರನು ಅವನ ಸಂಗಡ ದಂಡಿನೊಡನೆ ಹೋಗಿ ಇಂಗ್ಲಿಷ ದಂಡಿನವರಿಗೆ ಸಹಾಯ ಮಾಡಿ ದನು, ೧೮೦೩. ಈ ಪ್ರಕಾರ ನಿಪಾಣಿಕರನು ಇಂಗ್ಲಿಷರ ಸ್ನೇಹವನ್ನೂ ಪೇಶವನ ಸ್ನೇಹವನ್ನೂ ಸಂಪಾದಿಸಿದ್ದರಿಂದ ಪೇಶವನು ಅವನಿಗೆ "ಸರಲಷ್ಕರ" ಯೆಂಬ ಬಿರುದು ಕೊಟ್ಟು ಮನೋಳಿ, ಹುಕ್ಕೇರಿ, ಈ ಯೆರಡು ಪರಗಣೆಗಳನ್ನು ಸರಂಜಾಮಿಗಾಗಿ ಕೊಟ್ಟನು. ಮನೋಳಿಯ ಪರಗಣೆಗಾಗಿ ಕೊಲ್ಲಾಪುರದ ಅರಸನಿಗೂ ನಿಪಾಣಕರನಿಗೂ ಮೊದಲಿನಿಂದ ಯುದ್ಧ ನಡಿದಿತ್ತು. ಕಡೆಯಲ್ಲಿ ಪೇಶವನ ಮಧ್ಯಸ್ಥಿಯಿಂದ ೧೮೦೯ರಲ್ಲಿ ಇಬ್ಬರ ವ್ಯಾಜ್ಯ ತೀರಿ, ಕೊಲ್ಲಾಪುರದವರ ಮಗಳನ್ನು ನಿಪಾಣಕರನು ಲಗ್ನ ಮಾಡಿ ಕೊಂಡನು. ಆದರೂ ನಿಪಾಣಕರನು ಮೊದಲಿನ ವ್ಯಾಜ್ಯವನ್ನು ಬಿಡಲಿಲ್ಲ. ಮುಂದೆ ೧೮೧೨ರಲ್ಲಿ ಪುಣೆಯ ರೆಸಿಡೆಂಟನಾಗಿದ್ದ ಎಲ್ಫಿನ್‌ಸ್ಟನ್ ಸಾಹೇಬನ ಮಧ್ಯಸ್ಥಿಯಿಂದ ಕೊಲ್ಲಾಪುರದ ಅರಸು ಮನೋಳಿ, ಚಿಕ್ಕೋಡಿ, ಇವೆರಡು ಪರಗಣೆಗಳನ್ನು ನಿಪಾಣಕರ ನಿಗೆ ನಿರಾತಂಕವಾಗಿ ಕೊಟ್ಟನು. ನಿಪಾಣಕರನು ಇಷ್ಟು ಕ್ರೂರನಾದಾಗ್ಯೂ ಇಂಗ್ಲಿಷ ಸರದಾರರ ಕೂಡ ಬಹು ಲೀನನಾಗಿ ನಡಿಯುತ್ತಿದ್ದನು. ಆದ್ದರಿಂದ ಎಲ್ಫಿನ್‌ಸ್ಟನ್, ಮಾಲಕಂ, ಮುಂತಾದ ಸರದಾರರ ಪ್ರೀತಿಯನ್ನು ಸಂಪಾದಿಸಿದ್ದನು. ಮುಂದೆ ಪೇಶ ವನಿಗೂ ನಿಪಾಣಕರನಿಗೂ ವ್ಯಾಜ್ಯ ಹುಟ್ಟಿ ಪೇಶವನು ಇಂಗ್ಲಿಷರ ಸಹಾಯದಿಂದ ನಿಪಾ ಣಕರನ ಕೆಲವು ಶೀಮೆಗಳನ್ನು ಕಸು ಕೆಸಂಡನು. ಆದರೆ ಅಂತರಂಗದಲ್ಲಿ ನಿಪಾಣಕರ

ನಿಗೆ ಪೇಶವನ ಸಹಾಯವಿತ್ತು. ಮುಂದೆ ೧೮೧೮ರಲ್ಲಿ ಪೇಶವನು ರಾಜ್ಯ ಕಳಕೊಂಡು ಓಡಿ ಹೋಗುವಾಗ ನಿಪಾಣಕರನು ಮೊದಲು ಪೇಶವನ ದಂಡಿನಲ್ಲಿ ಕೂಡಿದ್ದನು. ಆದರೆ ಪೇಶವನ ಪರಿಣಾಮ ನೋಡಿ, ಅವನು ತಾನಾಗಿ ಇಂಗ್ಲಿಷರ ಅಂಕಿತಕ್ಕೆ ಬಂದನು. ಆದರೂ ಅವನು ಪೇಶವನ ಪಕ್ಷವನ್ನು ಸ್ವೀಕರಿಸಿದ್ದಕ್ಕೆ ಇಂಗ್ಲಿಷರು ಅವನ ಮನೋಳಿ, ಚಿಕ್ಕೋಡೀ ಪರಗಣೆಗಳನ್ನು ಕಸುಕೊಂಡು ಕೊಲ್ಲಾಪುರದ ಅರಸನಿಗೆ ಕೊಟ್ಟರು. ಆದ್ದರಿಂದ ನಿಪಾಣಕರನು ಅಂತರಂಗದಲ್ಲಿ ಇಂಗ್ಲಿಷರ ಮೇಲೆ ಸಿಟ್ಟು ಹಿಡಿದನು. ಆದರೆ ಅದರಿಂದೇನು ಪ್ರಯೋಜನವಾಗಲಿಲ್ಲ. ನಿಪಾಣಕರನಿಗೆ ಸಂತತಿ ಇದ್ದಿಲ್ಲ. ಅವನು ತನ್ನ ಹೆಂಡತಿಯು ಬಸುರಿದ್ದಾಳೆಂದು ಪ್ರಕಟಿಸಿ, ವೊಬ್ಬ ವಿಧವೆಯ ಕೂಸನ್ನು ಆಕೆಯ ಮುಂದೆ ಹಾಕಿ ವಿಧವೆಯನ್ನು ಕೊಂದು, ಹೆಂಡತಿಯು ಮಗನನ್ನು ಹಡಿದಳೆಂದು ಸರಕಾರಕ್ಕೆ ತಿಳಿಸಿದನು. ಆದರೆ ಸರಕಾರಕ್ಕೆ ವೊಳಗಿನ ದುಷ್ಕರ್ಮವೆಲ್ಲ ಚನ್ನಾಗಿ ತಿಳಿದದ್ದರಿಂದ ಸರಕಾರದವರು ಆ ಮಗನನ್ನು ಮಂಜೂರ ಮಾಡದೆ, ಸರಂಜಾಮೆಲ್ಲ ಅಪ್ಪಾಸಾಹೇಬನ ತರುವಾಯ ಸರಕಾರಕ್ಕೆ ಶೇರ ತಕ್ಕದ್ದೆಂದು ಠರಾವು ಮಾಡಿದರು, ೧೮೩೧. ಮುಂದೆ ೧೮೩೯ರಲ್ಲಿ ಅಪ್ಪಾ ಸಾಹೇಬನು ಮರಣ ಹೊಂದಲಾಗಿ, ಸರಕಾರದವರು ಅವನ ವೊದಲಿನ ೧೫೦೦ಂದ ದೇಸಗತಿಯ ಶೀಮೆಯನ್ನಷ್ಟು ಬಿಟ್ಟು ಉಳಿದ ಶೀಮೆಯನ್ನು ತಕ್ಕೊಂಡರು. ನಿಪಾಣರನು ಸಾಯುವ ಪೂರ್ವದಲ್ಲಿ ವೊಬ್ಬ ದತ್ತ ಪುತ್ರನನ್ನು ದೇಸಗತಿಗೆ ವಾರಸದಾರನಾಗಿ ತಕ್ಕೊಂಡಿದ್ದನು. ಆ ಮಗನ ಸಲುವಾಗಿ ನಿಪಾಣಕರನ ೬ ಜನ ಹೆಂಡರು ತಮ್ಮ ತಮ್ಮೊಳಗೆ ಬಹಳ ದಿವಸ ಜಗಳಾಡಿದರು. ಈಗಿನ ವಾರಸದಾರನು ರಾಜ ಕುಮಾರ ಕಾಲೇಜದಲ್ಲಿ ವೊಳಿತಾಗಿ ವಿದ್ಯಾಭ್ಯಾಸ ಮಾಡಿ, ತನ್ನ ದೇಸಗತಿಯ ಕಾರಭಾರವನ್ನು ತಾನೇ ನಡಿಸುತ್ತಾನೆ.

ಅಪ್ಪಾ ಸಾಹೇಬನು ಬಹು ಜನ ಸಾವಕಾರರನ್ನು ದುಡ್ಡಿನ ಸಲುವಾಗಿ ಶೆರೆಯೊಳಗೆ ಹಾಕಿದ್ದನು; ಬಹು ಜನರನ್ನು ಕ್ರೂರತನದಿಂದ ಕೊಲ್ಲಿಸಿದ್ದನು. ಶೆರೆಯೊಳಗಿದ್ದವರನ್ನು ಇಂಗ್ಲಿಷ ಸರಕಾರದವರು ನಿಪಾಣಕರನಿರುವಾಗಲೇ ಬಲಾತ್ಕಾರದಿಂದ ಬಿಡಿಸಿದರು. ನಿಪಾಣಕರನು ಸುಂದರಿಯರಾದ ತರುಣ ಸ್ತ್ರೀಯರನ್ನು ಶಿಕ್ಕಲ್ಲಿಂದ ಯೆತ್ತಿ ಕೊಂಡು ಹೋಗಿ, ಅವರಲ್ಲಿ ಬಹು ಜನರನ್ನು ನಾನಾ ಪ್ರಕಾರದ ಯಾತನೇ ಪಡಿಸಿ ಕೊಂದ ಕಥೆಗಳು ಜನರೊಳಗೆ ಪ್ರಸಿದ್ಧವಿರುತ್ತವೆ.

ಪರಸಗಡ.—ಸವದತ್ತಿಯ ದಕ್ಷಿಣಕ್ಕೆ ೩ ಮೈಲಿನ ಮೇಲೆ. ಈ ದುರ್ಗಕ್ಕೆ ಯೇರಿ ಹೋಗುವ ದಾರಿಯು ೩೦೫ ಫೂಟು ಉದ್ದ ಇರುತ್ತದೆ. ಗುಡ್ಡದ ನೆತ್ತಿಯ ಮೇಲೆ ಕೋಟೆಯು ೧೫೦೦ ಫೂಟು ಉದ್ದ, ೧೦೦ ಫೂಟು ಅಗಲು ಇರುತ್ತದೆ. ಗೋಡೆಗಳು ಬಹಳ ಕಡೆಯಲ್ಲಿ ಬಿದ್ದಿರುತ್ತವೆ. ಕೋಟೆಯೊಳಗೆ ಜನರ ವಸ್ತಿ ಇಲ್ಲ. ಕೋಟೆಯೊಳಗೆ ನೀರಿನ ಝುರಿಯೂ ವೊಂದು ಗವಿಯೂ ಉಂಟು. ಈ ಕೋಟೆಯನ್ನು ಶಿವಾಜಿಯು ೧೬೭೪ರಲ್ಲಿ ಕಟ್ಟಿಸಿದನೆಂದು ಹೇಳುತ್ತಾರೆ.

**ಪರಸಗಡ.— ಈ ಯೆರಡನೇ ದುರ್ಗ ಕೋಟೆಯು ಬೆಳಗಾವಿಯ ಜಿಲ್ಲೆ, ಸಾವಂ**

ತವಾಡಿಯ ಸಂಸ್ಥಾನ, ಇವುಗಳ ಮೇರೆಯಲ್ಲಿ ಬೆಳಗಾವಿಯ ಪಶ್ಚಿಮಕ್ಕೆ ೩೫ ಮೈಲಿನ ಮೇಲೆ ಇರುತ್ತದೆ. ಈ ಗುಡ್ಡವು ೨೦೦೦ ಫೂಟು ಯೆತ್ತರವಿರುತ್ತದೆ; ಇದರೊಳಗಿನ ಕ್ಷೇತ್ರವು ೪೦ ಯೆಕರು ವುಂಟು. ಈ ಕೋಟೆಯಲ್ಲಿಯೂ ಈಗ ಜನರ ವಸ್ತಿ ಇಲ್ಲ; ಗೋಡೆಗಳು ಹಾಳಾಗಿವೆ. ಶಿವಾಜಿಯ ಮರಣದ ಕಾಲಕ್ಕೆ ಇದು ಅವನ ವಶದಲ್ಲಿ ಇತ್ತು.

ಸದಲಗಿ.—ಚಿಕ್ಕೋಡಿಯ ಉತ್ತರಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೭೩೪೦. ಮಂಗಳವಾರ ಸಂತೆಯಾಗುತ್ತದೆ. ಧಡೋತಿಯ ವಸ್ತ್ರಗಳೂ ಕಂಬಳಿಗಳೂ ಹುಟ್ಟುತ್ತವೆ. ಈ ವೂರಲ್ಲಿ ಸಕ್ಕರೇ ಮಾಡುವ ಹೋರೆಯು ವೊಳಿತಾಗಿ ನಡಿಯುತ್ತದೆ. ಊರ ಹೊರಗೆ ಕಬ್ಬಿನ ತೋಟಗಳು ಇರುತ್ತವೆ.

ಸಂಪಗಾವಿ.—ಉತ್ತರ ಅಕ್ಷಾಂಶ ೧೫°, ೩೬', ಪೂರ್ವ ರೇಖಾಂಶ ೭೪°, ೫೦', ಬೆಳಗಾವಿಯ ಆಗ್ನೇಯಕ್ಕೆ ೧೮ ಮೈಲಿನ ಮೇಲೆ, ಜ. ಸ. (೮೧) ೩೬೭೯. ತಾಲೂಕಿನ ಕಚೇರಿಗಳಲ್ಲದೆ, ಪುಸ್ತಕಾಲಯವೂ ಯೆರಡು ಶಾಲೆಗಳೂ ಇರುತ್ತವೆ. ರವಿವಾರ ಸಂತೆಯಲ್ಲಿ ದನ, ವಸ್ತ್ರ, ಕಾಳು, ಅರಳೆ, ಮುಂತಾದವುಗಳ ಮಾರಾಟವಾಗುತ್ತದೆ. ಈ ವೂರಲ್ಲಿ ಕೆಲವು ಮಗ್ಗಗಳಿವೆ; ಧಡೋತಿಯ ವಸ್ತ್ರಗಳು ಹುಟ್ಟುತ್ತವೆ. ಹಳೇದೊಂದು ಮಶೀದಿಯುಂಟು. ಸನ್ ೧೬೮೩ರಲ್ಲಿ ಔರಂಗಜೇಬನ ಮಗನಾದ ಮಹಮ್ಮದ ಮುವಾಝುಂ ಯೆಂಬವನು ಸಂಪಗಾವಿಯ ಕೋಟೆಯನ್ನು ಯುದ್ಧ ಮಾಡಿ ತಕ್ಕೊಂಡನೆಂದು ಇತಿಹಾಸದಲ್ಲಿ ಲೇಖವದೆ. ಇದಕ್ಕೂ ಪೂರ್ವದಲ್ಲಿ ಸಂಪಗಾವಿಯ ಉಲ್ಲೇಖವು ಯೆಲ್ಲಿಯೂ ಇದ್ದಂತೆ ತೋರುವದಿಲ್ಲ.

ಸಂಕೇಶ್ವರ.—ಹುಕ್ಕೇರಿಯ ವಾಯವ್ಯಕ್ಕೆ ೮ ಮೈಲಿನ ಮೇಲೆ, ಜ. ಸ. (೮೧) ೮೧೦೬. ಟಪಾಲ ಕಚೇರಿ, ಯೆರಡು ಶಾಲೆಗಳು ಇರುತ್ತವೆ. ಬೆಳಗಾವೀ ಜಿಲ್ಲೆಯಲ್ಲಿ ಹೆಸರಾದ ಪಡಮೂಲೆಗಳಲ್ಲಿ ಸಂಕೇಶ್ವರವನ್ನು ಯೆಣಿಸುತ್ತಾರೆ. ಇಲ್ಲಿ ಸುಮಾರು ೫೦ ಜನ ವ್ಯಾಪಾರಸ್ಥರು ೫೦೦೦ದಿಂದ ೨೫೦೦೦ದ ವರೆಗೆ ಬಂಡವಲುಳ್ಳವರು ಇರುವದಲ್ಲದೆ, ಕೈಗಡದಿಂದ ಹಣ ಕೂಡಿಸಿ ಕೊಡಕೊಳ್ಳುವ ಹೋರೆಯನ್ನು ಮಾಡುವವರು ಬಹು ಜನರುಂಟು. ಶುಕ್ರವಾರ ಸಂತೆಯಾಗುತ್ತದೆ. ಕಾಳುಗಳು, ಪಾತ್ರೆಗಳು, ವಸ್ತ್ರಗಳು, ಅರಳೆ, ನೂಲು, ಕಿರಾಣಿ, ಮುಂತಾದ ಸರಕುಗಳ ಮಾರಾಟವು ಬಹಳ ನಡಿಯುತ್ತದೆ. ಇಲ್ಲಿಯ ವ್ಯಾಪಾರಸ್ಥರು ಅರಳೆಯನ್ನು ಕೊಂಡು ಚಿಪಳೂಣಕ್ಕೂ ವೆಂಗುರ್ಲೆಗೂ ಕಳಿಸುತ್ತಾರೆ; ತೆಂಗು, ಉತ್ತತ್ತಿ, ಅಡಿಕೆ, ಮುಂತಾದ ಕಿರಾಣಿಗಳನ್ನು ಘಟ್ಟದ ಕೆಳಗಿಂದ ತಂದು ಪರಪೇಟೆಗಳಿಗೆ ಕಳಿಸುತ್ತಾರೆ.

ಸಂಕೇಶ್ವರದಲ್ಲಿ ಶಂಕರಲಿಂಗನ ಗುಡಿಯು ಪುರಾತನದ್ದಿರುತ್ತದೆ. ಇದರಲ್ಲಿ ಮೂರು ಲಿಪಿಗಳಿರುತ್ತವೆ. ಅವುಗಳಲ್ಲಿ ವೊಂದು ಕಾರ್ತಿವೀರ್ಯನೆಂಬ ರಟ್ಟ ರಾಜನು ೧೧೯೯ರಲ್ಲಿ ಬರಿಸಿದ್ದಿರುತ್ತದೆ. ಶಿವರಾತ್ರಿಯಲ್ಲಿ ಶಂಕರ ಲಿಂಗನ ಜಾತ್ರೆಯಲ್ಲಿ ೨, ೩ ಸಾವಿರ ಜನ ಕೂಡುತ್ತದೆ.

ಸಂಕೇಶ್ವರದ ಸ್ವಾಮಿಯ ಮಠವು ಸುಮಾರು ಯೆರಡು ಯೆಕರಿನಷ್ಟು ವಿಸ್ತಾರವಾಗಿರುತ್ತದೆ. ಇದರ ಹಿತ್ತಲ ಬಾಗಿಲಿನ ಬಳಿಯಲ್ಲಿ ಹರಣ ಕಾಶಿಯೆಂಬ ಸಣ್ಣ ಹೊಳೆಯು ಹರಿಯುತ್ತದೆ. ಯಜ್ಞ ಮಂಟಪವು ೧೦೦೦ ಜನರಿಗೆ ಕೂಡ್ರುಲಿಕ್ಕೆ ಬರುವಷ್ಟು ದೊಡ್ಡದಿರುತ್ತದೆ. ಮಠಕ್ಕೆ ಸುಮಾರು ೩೦೦೦ದ ಇನಾಮು ಭೂಮಿಗಳೂ ಗ್ರಾಮಗಳೂ ನಡಿಯುತ್ತವೆ. ಇದಲ್ಲದೆ ಶಿಷ್ಯ ಜನರ ಕಡೆಯಿಂದ ಬರುವ ಆದಾಯ ಬೇರೆ. ೧೬ನೇ ಶತಕದ ಕಡೆಯಲ್ಲಿ ಶಂಕರ ಭಾರತಿಯೆಂಬ ಸ್ವಾಮಿಗಳಿಗೆ ವಿಜಾಪುರದ ರಣದುಲ್ಲಾಖಾನನೆಂಬ ವಜೀರನು ಕೆಲವು ಗ್ರಾಮಗಳನ್ನು ಇನಾಮು ಕೊಟ್ಟ ಬಳಿಕ ಸಂಕೇಶ್ವರದಲ್ಲಿ ಆ ಸ್ವಾಮಿಗಳು ಮಠವನ್ನು ಸ್ಥಾಪಿಸಿದರೆಂದು ಹೇಳುತ್ತಾರೆ.

ಸಪ್ತಸಾಗರ.—ಅಥಣಿಯ ನೈರುತ್ಯಕ್ಕೆ ೧೨ ಮೈಲಿನ ಮೇಲೆ ಕೃಷ್ಣೆಯ ದಂಡೆಯಲ್ಲಿ, ಜ. ಸ. (೮೧) ೧೬೫೫. ಇದು ಕ್ಷೇತ್ರವೆಂದು ಯೆಣಿಸಲ್ಪಡುತ್ತದೆ. ಈ ವೂರ ಬಳಿಯಲ್ಲಿ ಕೃಷ್ಣೆಯಲ್ಲಿ ಸ್ನಾನ ಮಾಡಿದರೆ, ಯೇಳು ಸಮುದ್ರಗಳಲ್ಲಿ ಸ್ನಾನ ಮಾಡಿದ ಫಲ ಬರುತ್ತದೆಂದು ಜನರ ಗ್ರಹಿಕೆಯುಂಟು.

ಸವದತ್ತಿ.—ಉತ್ತರ ಅಕ್ಷಾಂಶ ೧೫°, ೪೬′, ಪೂರ್ವ ರೇಖಾಂಶ ೭೫°, ೧೧′, ಬೆಳಗಾವಿಯ ಆಗ್ನೇಯಕ್ಕೆ ೪೦ ಮೈಲಿನ ಮೇಲೆ, ಜ. ಸ. (೮೧) ೭೧೩೩. ಮಾಮಲೇದಾರ ಕಚೇರಿ, ಫೌಜದಾರ ಕಚೇರಿ, ಸಬಜಡಜ ಕಚೇರಿ, ಟಪಾಲ ಆಫೀಸು, ಆಸಪತ್ರಿ, ಮ್ಯುನಿಸಿಪಾಲಿಟಿ ಯೆರಡು ಶಾಲೆಗಳು ಇರುತ್ತವೆ. ಇಲ್ಲಿಯ ಮ್ಯುನಿಸಿಪಾಲಿಟಿಯು ೧೮೭೬ರಲ್ಲಿ ಸ್ಥಾಪನೆಯಾಯಿತು; ೧೮೮೦-೮೩ರಲ್ಲಿ ಇದ್ದರ ಆದಾಯವು ೨೬೯೦ ರೂಪಾಯಿ ಇತ್ತು. ಬುಧವಾರ ಸಂತೆಯಲ್ಲಿ ಅರಳಿ, ವಸ್ತ್ರ, ಯೆಣ್ಣೆ, ಉಪ್ಪು, ಕಿರಾಣಿ, ಕಾಳುಗಳು ಮುಂತಾದವುಗಳ ಮಾರಾಟವಾಗುತ್ತದೆ.

ಸವದತ್ತಿಯಲ್ಲಿ ಆರು ರಟ್ಟ ಅರಸರ ಲಿಪಿಗಳಿರುತ್ತವೆ; ಎಲ್ಲಕ್ಕೂ ಹಳೇದು ೮೭೫ನೇ ವರ್ಷದ್ದಿರುತ್ತದೆ, ಎಲ್ಲಕ್ಕೂ ಕಡೇದು ೧೨೨೯ನೇ ವರ್ಷದ್ದಿರುತ್ತದೆ. ಈ ಲಿಪಿಗಳಲ್ಲಿ ಸವದತ್ತಿಯ ರಟ್ಟ ರಾಜರ ವಂಶಾವಳಿ, ಅವರ ಶೌರ್ಯದ ಕೃತ್ಯಗಳು, ಅವರು ಕಟ್ಟಿಸಿದ ಜಿನಾಲಯಗಳು, ಅವುಗಳಿಗೆ ಕೊಟ್ಟ ಇನಾಮುಗಳು, ಮುಂತಾದವುಗಳ ವಿವರವಿರುತ್ತದೆ. ಸವದತ್ತಿಯಲ್ಲಿ ನಾಲ್ಕು ಬುನಾದಿಯ ದೇವಾಲಯಗಳಿರುತ್ತವೆ. ಅವೆಲ್ಲ ಮೊದಲು ಜೈನರ ಗುಡಿಗಳು. ಆದರೆ ಈಗ ಅವುಗಳಲ್ಲಿ ಬೇರೆ ಬೇರೆ ಮೂರ್ತಿಗಳನ್ನು ಕೂಡ್ರಿಸಿದ್ದಾರೆ. ಒಂದು ಮಾತ್ರ ಈಗ್ಯೂ ಬಸ್ತಿಯದೆ.

ಸವದತ್ತಿಯ ಕೋಟೆಯು ಊರಿನ ಪಶ್ಚಿಮಕ್ಕೆ ಸಮೀಪದಲ್ಲಿ ವೊಂದು ದಿನ್ನೆಯ ಮೇಲೆ ಕಟ್ಟಿರುತ್ತದೆ. ಇದು ಸುಮಾರು ೩೦೦ ಫೂಟು ವ್ಯಾಸವುಳ್ಳ ಅಷ್ಟಕೋನಾಕೃತಿಯುಂಟು; ಕೊತ್ತಳಗಳನ್ನೂ ಗೋಡೆಗಳನ್ನೂ ಕಲ್ಲಿನಿಂದ ಭದ್ರವಾಗಿ ಕಟ್ಟಿಸಿದ್ದಾರೆ; ಸುತ್ತು ಮುತ್ತು ಕಿರಿದಾದ ಕಂದಕವಿರುತ್ತದೆ. ಪೂರ್ವ ದಿಕ್ಕಿಗೆ ದೊಡ್ಡ ಅಗಸೆಯಲ್ಲದೆ ಬೇರೆ ಯೆರಡು ಸಣ್ಣ ದಿಡ್ಡಿಗಳಿರುತ್ತವೆ. ಕೋಟೆಯೊಳಗೆ ಸಹ ಯೇರಿಕೆಯ ಭೂಮಿಯುಂಟು. ಒಳಗೆ ವೊಂದು ಭದ್ರವಾದ ಹಳೆ ಇಮಾರತು ಇರುತ್ತದೆ. ಅದು ಈಗ

ಅಸಿಷ್ಟಾಂಟ ಕಲೆಕ್ಟರನ ಬಂಗಲೆಯಾಗಿದೆ. ಇದಲ್ಲದೆ ವೊಂದು ಹನುಮಂತನ ಗುಡಿಯೂ ಕಲ್ಲಿನಿಂದ ಕಟ್ಟಿದ್ದೊಂದು ಹೊಂಡವೂ ಕೋಟೆಯೊಳಗೆ ಇರುತ್ತವೆ.

ಕ್ರಿಸ್ತೀ ಶಕದ ೧೨೧೦ತ ವರೆಗೆ ಸವದತ್ತಿಯು ರಟ್ಟ ಅರಸರ ರಾಜಧಾನಿ ಇತ್ತು. ಮುಂಪೆ ಬೆಳಗಾವಿಯು ಅವರ ರಾಜಧಾನಿಯಾದಾಗ್ಯೂ ಸವದತ್ತಿಯಲ್ಲಿ ಅವರ ಮನೆ ಇತ್ತು. ಈ ಅರಸರು ವಾಡಿಕೆಯಾಗಿ ಚಾಲುಕ್ಯರ ಮಾಂಡಲೀಕರಾಗಿ ಆಳಿದರು. ಸನ್ ೧೭೩೦ರಲ್ಲಿ ಸವಣೂರಿನ ನಬಾಬನು ಸವದತ್ತಿಯನ್ನು ನವಲಗುಂದದ ದೇಸಾಯಿಗೆ ಕೊಟ್ಟಿದ್ದನು. ಆ ದೇಸಾಯಿಯು ೧೭೩೪ರಲ್ಲಿ ಕೋಟೆಯನ್ನು ಕಟ್ಟಿಸಿದನು.

ಸವದಿ.—ಅಥಣಿಯ ಆಗ್ನೇಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೨೭೩೪, ಕೃಷ್ಣೆಯ ದಂಡೆಯಲ್ಲಿ. ಇಲ್ಲಿ ಕೃಷ್ಣೆಯ ದಂಡೆಗೆ ಹುಣಚಿಯ ಬನದೊಳಗೆ ವೊಬ್ಬ ಫಕೀರನ ಗೋರಿ ಇರುತ್ತದೆ. ಅದಕ್ಕೆ ಜನರು ನಡಕೊಳ್ಳುತ್ತಾರೆ; ಚೈತ್ರ ಮಾಸದಲ್ಲಿ ಜಾತ್ರೆಯಾಗುತ್ತದೆ.

ಸೆಂಡೂರು, ಅಥವಾ ರಾಸೂಬಾಯಿಯ ಗುಡ್ಡ.—ನಿಪಾಣಿಯ ನೈರುತ್ಯಕ್ಕೆ ೫ ಮೈಲಿನ ಮೇಲೆ. ಸುಮಾರು ೬೭೦ ಫೂಟು ಯೆತ್ತರವಾದ ಗುಡ್ಡದ ಮೇಲೆ ಈ ಹೆಸರಿನ ಯೆರಡು ಹಳ್ಳಿಗಳಿರುತ್ತವೆ; ಅವುಗಳ ಜನಸಂಖ್ಯ (೮೧) ೨೫೦೦. ಈ ಗುಡ್ಡದ ಮೇಲೆ ರಾಸೂಬಾಯಿ ಯೆಂಬ ದೇವತೆಯ ಗುಡಿ ಇರುತ್ತದೆ. ಅದರ ಬಳಿಯಲ್ಲಿ ಆರೋಗ್ಯಕರವಾದ ನೀರಿನ ಝುರಿಯುಂಟು.

ಶೇಡಬಾಳ.—ಅಥಣಿಯ ಪಶ್ಚಿಮಕ್ಕೆ ೨೦ ಮೈಲಿನ ಮೇಲೆ, ಜ. ಸ. (೮೧) ೪೦೬೫. ನಿವಾಸಿಗಳು ಮುಖ್ಯವಾಗಿ ಜೈನರು. ಹೊಗೆಬಂಡಿಯ ಸ್ಟೇಶನ್ನು ಇರುತ್ತದೆ. ಬಸವನ ಗುಡಿಯಲ್ಲಿ ಕೊಲ್ಲಾಪುರದ ಶಿಲಾಹಾರ ಅರಸು ಸನ್ ೧೧೫೬ರಲ್ಲಿ ಬರಿಸಿದ್ದೊಂದು ಲಿಪಿಯುಂಟು. ಶಿವರಾತ್ರಿಯಲ್ಲಿ ಬಸವನ ಜಾತ್ರೆಯಾಗುತ್ತದೆ.

ಶೂರ್ಪಾಲಿ.—ಅಥಣಿಯ ಆಗ್ನೇಯಕ್ಕೆ ೨೦ ಮೈಲಿನ ಮೇಲೆ, ಜ. ಸ. (೮೧) ೧೪೪೮, ಕೃಷ್ಣೆಯ ದಂಡೆಯಲ್ಲಿ. ಇದು ದೊಡ್ಡ ಕ್ಷೇತ್ರವೆನಿಸುತ್ತದೆ. ಊರ ಹೊರಗೆ ಕೃಷ್ಣೆಯ ದಂಡೆಗೆ ಬಹು ಪುರಾತನ ಕಾಲದ ಆಲದ ಮರದ ಕೆಳಗೆ ನರಸಿಂಹ ದೇವರ ಗುಡಿಯುಂಟು. ಈ ದೇವರಿಗೆ ಊರೊಳಗಿನ ಬ್ರಾಹ್ಮಣರು ನಡಕೊಳ್ಳುವರು. ವೈಶಾಖ ಮಾಸದಲ್ಲಿ ದೇವರ ರಥೋತ್ಸವವಾಗುತ್ತದೆ. ಈ ವೂರು ವೊಬ್ಬ ಮುಸಲ್ಮಾನ ಸರದಾರನಿಂದ ೨೪ ಜನ ಬ್ರಾಹ್ಮಣರಿಗೆ ಅಗ್ರಹಾರವಾಗಿ ಕೊಡಲ್ಪಟ್ಟದ್ದು ಈಗ್ಯೂ ನಡಿಯುತ್ತದೆ.

ಸೊಗಲ.—ಸವದತ್ತಿಯ ವಾಯವ್ಯಕ್ಕೆ ೧೨ ಮೈಲಿನ ಮೇಲೆ. ಈ ವೂರಿನ ಬಳಿಯಲ್ಲಿ ಮಲಾಪಹಾರಿಯು ಸುಮಾರು ೬೫ ಫೂಟು ಯೆತ್ತರವಾದ ಅರ್ಧ ಚಂದ್ರಾಕಾರವಾದ ತುದಿಯಿಂದ ಕೆಳಗೆ ಬೀಳುವದರಿಂದ ರಮಣೀಯವಾದ ತಡಸಲು ಉಂಟಾಗಿದೆ. ಈ ತಡಸಲಿನ ಮೇಲ್ಗಡೆಯಲ್ಲಿ ಬೇರೆ ಯೆರಡು ಸಣ್ಣ ತಡಸಲುಗಳ ಬಳಿಯಲ್ಲಿ ಈಶ್ವರನ ಗುಡಿ ಇರುತ್ತದೆ.

ನವಿಲತೀರ್ಥ.—ಸೊಗಲದ ಆಗ್ನೇಯಕ್ಕೆ ೯ ಮೈಲಿನ ಮೇಲೆ. ಸುಮಾರು ೩೦೦ ಫೂಟು ಯೆತ್ತರವಾದದ್ದೊಂದು ಗುಡ್ಡವನ್ನು ಪೊಡಿದು ಮಲಾಪಹಾರಿಯು ಹರಿಯುತ್ತದೆ. ಒಂದು ನವಿಲು ಈ ಗುಡ್ಡದ ಮೇಲೆ ಕೂತು ಮಲಾಪಹಾರಿಯನ್ನು ಕರಿದದ್ದರಿಂದ ಆ ಹೊಳೆಯು ಬಂದು ಗುಡ್ಡವನ್ನು ಪೊಡೀತೆಂದು ಹೇಳುತ್ತಾರೆ. ಹೊಳೆಯ ಯೆರಡೂ ದಂಡೆಗಳಿಗೆ ಹೊಂದಿ ಗುಡ್ಡದ ತುದಿಗಳು ಗೋಡೆಯ ಹಾಗೆ ನೆಟ್ಟಗೆ ಮೇಲಕ್ಕೆ ಯೇರಿರುತ್ತವೆ. ಆ ಸ್ಥಳದಲ್ಲಿ ಹೊಳೆಯ ಪಾತ್ರೆಯು ೫೦ ಫೂಟಗಿಂತ ಹೆಚ್ಚು ಅಗಲು ಇಲ್ಲ. ಹೊಳೆ ತುಂಬಿದಾಗ ನೀರು ೫೦ ಫೂಟಿನ ವರೆಗೆ ಮೇಲಕ್ಕೇರುತ್ತದೆ. ಆದ್ದರಿಂದ ಗುಡ್ಡವು ಸವಿಯುತ್ತ ನಡಿದದೆಂದು ಹೇಳ ಬಹುದು. ಗುಡ್ಡವನ್ನು ಪೊಡಿದು ಪ್ರವಾಹವು ಹೊರ ಬೀಳುವ ಸ್ಥಳದಲ್ಲಿ ಆಳವಾದದ್ದೊಂದು ಮಡುವು ಇರುತ್ತದೆ. ಇದು ಬೇಸಿಗೆಯಲ್ಲಿ ೬೬ ಫೂಟು, ಮಳೆಗಾಲದಲ್ಲಿ ೭೪ ಫೂಟು ಆಳವಿರುತ್ತದೆ. ಬುನಾದಿಯಲ್ಲಿ ಗುಡ್ಡದ ಮೇಲಿಂದ ಬೀಳುತ್ತಿದ್ದ ತಡಸಲಿನಿಂದ ಈ ಮಡುವು ಆಗಿರ ಬಹುದೆಂದು ತೋರುತ್ತದೆ. ಆದ್ದರಿಂದ ಆರಂಭದಲ್ಲಿ ಹೊಳೆಯು ಪ್ರವಾಹದಿಂದ ವಿಸ್ತಾರವಾದದ್ದೊಂದು ಸರೋವರ ವುಂಟಾಗಿ, ಕಡೆಯಲ್ಲಿ ಪ್ರವಾಹದ ಕಸುವಿನಿಂದ ಗುಡ್ಡವು ಪೊಡಿದು ಮೊದಲು ಭವ್ಯವಾದದ್ದೊಂದು ತಡಸಲುಂಟಾಯಿತೆಂತಲೂ, ಗುಡ್ಡವು ಸವಿಯುತ್ತ ಹೋದ ಹಾಗೆ ಆ ತಡಸಲು ಕಿರಿದಾಗಿ ಕಡೆಯಲ್ಲಿ ಅದೃಶ್ಯವಾಯಿತೆಂತಲೂ ತೋರುತ್ತದೆ. ಮಲಾಪಹಾರಿ ಯೆಂಬ ಹೆಸರು "ಮಲೆಪೆರಿ" ಯೆಂಬ ದ್ರಾವಿಡ ಭಾಷೆಯ ಹೆಸರಿನಿಂದ ಹುಟ್ಟಿರುತ್ತದೆಂದು ಹಿಂದೆ ಹೇಳಿದ್ದೇವೆ. ಮಲೆಪೆರಿಯಂದರೆ ಗುಡ್ಡದ ಸರುವು. ಮೇಲೆ ಹೇಳಿದಂತೆ ಬುನಾದಿಯ ಸರೋವರದಿಂದ ಗುಡ್ಡವನ್ನೊಡಿದು ಸರುವು ಹೊರಟ ಕಾರಣ ಅದಕ್ಕೆ "ಮಲೆಪೆರಿ" ಯೆಂಬ ಹೆಸರು ಬಂತೆಂದು ಅನುಮಾನವಾಗುತ್ತದೆ.

ಸೋಮೇಶ್ವರನ ಗುಡ್ಡ.—ಸವದತ್ತಿಯ ವಾಯವ್ಯಕ್ಕೆ ೧೩ ಮೈಲಿನ ಮೇಲೆ ೩೫೦ ಫೂಟು ಯೆತ್ತರವಾದ ಗುಡ್ಡವಿರುತ್ತದೆ. ಅದರ ಮೇಲೆ ಸೋಮೇಶ್ವರನ ಗುಡಿಯೂ ನೀರಿನ ದೊಡ್ಡದೊಂದು ಝರಿಯೂ ಉಂಟು. ಶಿವರಾತ್ರಿಯಲ್ಲಿ ಸೋಮೇಶ್ವರನ ಜಾತ್ರೆಯಾಗುತ್ತದೆ.

ಸುತಗಟ್ಟಿ.—ಬೆಳಗಾವಿಯ ಉತ್ತರಕ್ಕೆ ೧೩ ಮೈಲಿನ ಮೇಲೆ. ಇಲ್ಲಿಯ ಬೇಡರು ಪೂರ್ವದಲ್ಲಿ ದಾರೀ ಬಡಿಯುವದರಲ್ಲಿ ಹೆಸರಾಗಿದ್ದರು. ಈಗಲೂ ದಾರಿಕಾರರಿಗೆ ಇವರ ಹೆದರಿಕೆಯು ಇರುತ್ತದೆ. ಇಲ್ಲಿ ಯೆರಡು ಬಹು ದೊಡ್ಡ ಅತ್ತೀ ಮರಗಳುಂಟು. ಒಂದರ ಶಾಖೆಗಳು ಸುಮಾರು ೧೦೦ ಫೂಟು ಸುತ್ತು ಮುತ್ತು ಹಬ್ಬಿರುತ್ತವೆ.

ತಂಗಡಿ.—ಅಥಣಿಯ ಪೂರ್ವಕ್ಕೆ ೬ ಮೈಲಿನ ಮೇಲೆ. ಇಲ್ಲಿ ಹಾವಿನ ವಿಷ ಇಳಿಸುವವನೊಬ್ಬ ಮನುಷ್ಯನಿರುತ್ತಾನೆ. ಹಾವು ಕಡಿದ ಕೂಡಲೆ ಕಡಿಸಿ ಕೊಂಡವನು "ಆಡಿ ಗುಡೀ ಇಮಾಮ ಸಾಹೇಬ" ಯೆಂಬ ಹೆಸರು ತಕ್ಕೊಂಡು ಕಣ್ಣು ಮುಚ್ಚಿ ಕೊಂಡು ಕೊರಳಿಗೆ ವೊಂದು ದಾರ ಕಟ್ಟಿಕೊಂಡು, ಆ ವಿಷ ಇಳಿಸುವವನ ಬಳಿಗೆ ಹೋಗಲಾಗಿ, ಅವನು ತತ್ಕಾಲವೇ ವಿಷ ಇಳಿಸುತ್ತಾನೆಂದು ಹೇಳುತ್ತಾರೆ. ಕೊರಳಿಗೆ ದಾರ ಕಟ್ಟಿ

ಕೊಳ್ಳುವದಕ್ಕೆ ಬದಲಾಗಿ, ಹಾವು ಕಡಿದ ಕ್ಷಣವೇ ಸದರೀ ಇನಾಮ ಸಾಹೇಬನ ಹೆಸರಿನಿಂದ ಸಿಕ್ಕಂಥಾದೊಂದು ಕಲ್ಲು ಮೈ ಮೇಲೆಯಲ್ಯಾದರೂ ಕಟ್ಟಿ ಕೊಂಡರೆ ಹಾವಿನ ವಿಷ ಬಾಧಿಸುವದಿಲ್ಲೆಂತಲೂ ಹೇಳುತ್ತಾರೆ.

ವಕ್ಕುಂದ.— ಸಂಪಗಾವಿಯ ಆಗ್ನೇಯಕ್ಕೆ ೧೨ ಮೈಲಿನ ಮೇಲೆ. ಇಲ್ಲಿ ಕೆಲವು ಪುರಾತನದ ಗುಡಿಗಳಿರುತ್ತವೆ. ಅವುಗಳಲ್ಲಿ ವೊಂದು ಸಣ್ಣ ಗುಡಿಯಲ್ಲಿ ಅಂದವಾದ ಕೆತ್ತಿಕೆಯ ಚಿತ್ರಗಳಿರುತ್ತವೆ. ಈ ವೂರಲ್ಲಿ ಸುಂದರವಾದ ಕಲ್ಲಿನ ವೊಡವೆಗಳು ಹುಟ್ಟುತ್ತವೆ.

ವಲ್ಲಭಗಡ.— ಚಿಕ್ಕೋಡಿಯ ನೈರುತ್ಯಕ್ಕೆ ೧೫ ಮೈಲಿನ ಮೇಲೆ. ಈ ದುರ್ಗ ಕೋಟೆಯನ್ನು ಕಟ್ಟಿರುವ ಗುಡ್ಡವು ೩೦೦ ಫೂಟು ಯೆತ್ತರವಿರುತ್ತದೆ. ಕೋಟೆಯು ೨೭೫ ಫೂಟು ಉದ್ದ, ೨೦೦ ಫೂಟು ಅಗಲು ಇರುತ್ತದೆ. ಈ ಗುಡ್ಡದ ಇಳಕಲಿನ ಮೇಲೆ ವೊಂದು ಸಣ್ಣ ಹಳ್ಳಿಯುಂಟು.

ಯಮಕನಮರಡಿ.— ಚಿಕ್ಕೋಡಿಯ ದಕ್ಷಿಣಕ್ಕೆ ೨೦ ಮೈಲಿನ ಮೇಲೆ, ಜ. ಸ. (೮೧) ೪೮೯೧. ಊರ ಹೊರಗೆ ವೊಂದು ಕೋಟೆಯುಂಟು; ಮ್ಯುನಿಸಿಪಾಲಿಟಿ, ಪೋಷ್ಟ ಆಫೀಸು, ಸರಕಾರೀ ಶಾಲೆ, ಇರುತ್ತವೆ. ಮ್ಯುನಿಸಿಪಾಲಿಟಿಯ ಆದಾಯವು ೧೮೮೨-೮೩ರಲ್ಲಿ ೧೫೦೫ ರೂಪಾಯಿ ಇತ್ತು. ಮಂಗಳವಾರ ಸಂತೆಯಾಗುತ್ತದೆ; ಅದರಲ್ಲಿ ಕಾಳು, ವಸ್ತ್ರ, ತೆಂಗು, ಉತ್ತತ್ತಿ, ಮುಂತಾದವುಗಳ ಮಾರಾಟವು ಆಗುತ್ತದೆ.

ಯಾದವಾಡ.— ಗೋಕಾವಿಯ ಪೂರ್ವಕ್ಕೆ ೨೫ ಮೈಲಿನ ಮೇಲೆ. ಗೋಕಾವಿಯ ತಾಲೂಕಿನಲ್ಲಿ ಇದು ಯೆರಡನೇ ದೊಡ್ಡ ವೂರೆನಿಸುತ್ತದೆ; ಜನಸಂಖ್ಯೆವು ಗೋಕಾವಿಗಿಂತ ಸ್ವಲ್ಪ ಕಡಿಮೆಯುಂಟು. ಊರಿಗೆ ಯೆರಡು ಸುತ್ತು ಕೋಟೆಯನ್ನು ಕಟ್ಟಿದ್ದಾರೆ. ಆದರೆ ಅದೆಲ್ಲ ಈಗ ಹಾಳಾಗಿದೆ. ಇಲ್ಲಿ ವ್ಯಾಪಾರವು ತಕ್ಕಮಟ್ಟಿಗೆ ನಡಿಯುತ್ತದೆ. ಯಾದವಾಡವು ಪರಗಣೆಯ ಮುಖ್ಯ ಗ್ರಾಮವು; ಇಲ್ಲಿ ಪೂರ್ವದಲ್ಲಿ ಮಹಾಲ ಕಚೇರಿ ಇತ್ತು.

ಯೆಡೂರು.— ಚಿಕ್ಕೋಡಿಯ ಈಶಾನ್ಯಕ್ಕೆ ೧೨ ಮೈಲಿನ ಮೇಲೆ, ಜ. ಸ. (೮೧) ೨೧೯೨, ಕೃಷ್ಣೆಯ ದಂಡೆಯಲ್ಲಿ. ಇಲ್ಲಿ ವೀರಭದ್ರನ ಗುಡಿಯು ೧೮೫ ಫೂಟು ಚಚ್ಚೌಕು ಇರುತ್ತದೆ. ಈ ಗುಡಿಯಲ್ಲಿ ಸನ್ ೧೮೩೦, ೧೮೩೬, ಈ ವರ್ಷಗಳಲ್ಲಿ ಬರಿಸಿದ ಲಿಪಿಗಳಿರುತ್ತವೆ. ಈ ವೂರು ಈ ವೀರಭದ್ರ ದೇವರಿಗೇ ಇನಾಮು ನಡಿಯುತ್ತದೆ. ಈ ದೇವರ ಜಾತ್ರೆಯು ಶಿವರಾತ್ರಿಯಲ್ಲಿ ವೊಂದು ತಿಂಗಳಿನ ವರೆಗೆ ನಡಿಯುತ್ತದೆ. ಜಾತ್ರೆಯಲ್ಲಿ ೧೦೦೦೦ಕ್ಕಿಂತ ಹೆಚ್ಚು ಜನ ಕೂಡಿ, ಸುಮಾರು ೫೦೦೦೦ ರೂಪಾಯಿಯ ವರೆಗೆ ಸರಕುಗಳ ಮಾರಾಟವಾಗುತ್ತದೆ. ಯೆಡೂರು ಕ್ಷೇತ್ರವೆಂದು ಯೆಣಿಸಲ್ಪಡುತ್ತದೆ.

ಯೆಲ್ಲಮ್ಮನ ಗುಡ್ಡ.— ಸವದತ್ತಿಯ ಆಗ್ನೇಯಕ್ಕೆ ೫ ಮೈಲಿನ ಮೇಲೆ. ಇದು ಮುಂಬಯಿ ಇಲಾಖೆಯಲ್ಲಿ ಹೆಸರಾದ ಬಹು ದೊಡ್ಡ ದೇವಸ್ಥಾನವು. ಯೆಲ್ಲಮ್ಮನ

ಗುಡಿಯನ್ನು ವಿಸ್ತಾರವಾದದ್ದೊಂದು ಗುಡ್ಡದ ಮೇಲೆ ಕೆಲಮಟ್ಟಿಗೆ ತಗ್ಗಾದ ಪ್ರದೇಶದಲ್ಲಿ ಸರಸ್ವತಿಯೆಂಬ ಚಿಕ್ಕ ಹೊಳೆಯ ಪಾತ್ರೆಯಲ್ಲಿ ಕಟ್ಟಿದ್ದಾರೆ. ಯೆಲ್ಲಮ್ಮನ ಗರ್ಭಗುಡಿಯ ಮುಂದೆ ದರ್ಶನ ಮಂಟಪದ ಹೊರ್ತು ಯೆರಡು ಸಭಾಮಂಟಪಗಳಿರುತ್ತವೆ. ಗುಡಿಯ ಸುತ್ತು ಮುತ್ತು ವಿಸ್ತಾರವಾದ ಪ್ರದಕ್ಷಿಣಾಂಗಣವನ್ನು ಬಿಟ್ಟು ಸುತ್ತು ಮುತ್ತು ಗಚ್ಚಿನ ಪೌಳಿಗಳನ್ನು ಕಟ್ಟಿದ್ದಾರೆ. ಒಂದು ಪೌಳಿಯ ಸ್ಥಳದಲ್ಲಿ ಗಣಪತಿಯನ್ನು ಕೂಡ್ರಿಸಿದ್ದಾರೆ. ಪೌಳಿಗಳ ಅವಾರದ ಹೊರಗೆ ಹೋಗಲಿಕ್ಕೆ ಪಶ್ಚಿಮಕ್ಕೂ ಉತ್ತರಕ್ಕೂ ಮಹಾದ್ವಾರ ಗಳಿವೆ. ಪಶ್ಚಿಮದ ಬಾಗಿಲಿನ ಮೇಲೆ ನಗಾರಖಾನೆಯನ್ನು ಕಟ್ಟಿಸಿದ್ದಾರೆ. ಈ ಯಾವತ್ತು ಇಮಾರತಿನಲ್ಲಿ ನೋಡ ತಕ್ಕಂಥ ಸೌಂದರ್ಯವೇನು ಇಲ್ಲ. ಕೆಲವು ಭಾಗಗಳು ನೂರಾರು ವರ್ಷಗಳ ಈಚೆಯಲ್ಲಿ ಕಟ್ಟಿದಂಥವಿರುತ್ತವೆ, ಬೇರೆ ಕೆಲವು ಐದಾರುನೂರು ವರ್ಷದ ಹಿಂದೆ ಕಟ್ಟಿಸಿದಂಥವಿರುತ್ತವೆ. ಇದಕ್ಕೂ ಹಳೆ ಇಮಾರತು ಗುಡಿಯಲ್ಲಿ ಯೆಲ್ಲಿಯೂ ಇಲ್ಲ. ನಗಾರಖಾನೆಯನ್ನು ವಿಜಯನಗರದ ಕೃಷ್ಣ ಮಹಾರಾಜನ ಆಳಿಕೆ ಯಲ್ಲಿ ಬಾಗೀಬೊಮ್ಮಪ್ಪ ನಾಯಕನೆಂಬವನು ಶಕೆ ೧೪೩೮ರಲ್ಲಿ ಕಟ್ಟಿಸಿದನೆಂಬದಾಗಿ ಆ ನಗಾರಖಾನೆಯಲ್ಲಿಯೇ ಇರುವದೊಂದು ಲಿಪಿಯು ಹೇಳುತ್ತದೆ. ಆ ಲಿಪಿಯಲ್ಲಿ ಯೆಲ್ಲ ಮ್ಮನಿಗೆ "ಜತ್ತಕವಮಾಹಾಮಾಯೆ" ಯೆಂಬ ಹೆಸರು ಇರುತ್ತದೆ.

ಪರಶುರಾಮನ ತಾಯಿಯಾದ ರೇಣುಕೆಯೇ ಯೆಲ್ಲಮ್ಮನೆಂತಲೂ, ಈ ದೇವಸ್ಥಾ ನವು ೨೦೦೦ ವರ್ಷಕ್ಕಿಂತ ಪುರಾತನದ್ದೆಂತಲೂ ಹೇಳುತ್ತಾರೆ. ಆದರೆ "ಯೆಲ್ಲಮ್ಮ," "ಜತ್ತಕ" ಯೆಂಬ ಹೆಸರುಗಳಿಂದ ಇದು ದ್ರವಿಡ ದೇವತೆಯೆಂದು ತೋರುತ್ತದೆ. ದೇವ ತೆಯ ಪ್ರತಿಮೆಯು ಬೇರೆ ಹಿಂದೂ ಗುಡಿಗಳಲ್ಲಿಯ ಪ್ರತಿಮೆಗಳಂತೆ ಅಚ್ಚ ಮೂರ್ತಿಯ ರೂಪವಾಗಿ ಇರುವದಿಲ್ಲ; ಒಂದು ಹಲಚಿಗಲ್ಲಿನ ಮೇಲೆ ಹೆಂಣು ಗೊಂಬೆಯ ಆಕಾರ ವನ್ನು ಹುಟ್ಟಿಸಿದ್ದಾರೆ. ಈ ದೇವತೆಯ ಕೈಗಳಲ್ಲಿ ಹಿಂದೂ ದೇವತೆಗಳ ಕೈಗಳಲ್ಲಿ ಇರುವ ಆಯುಧಗಳೂ ಇಲ್ಲ. ಮುಖ್ಯವಾಗಿ ಮೈಗೆ ಬಿಳುಪು ಹತ್ತಿದವರು ಯೆಲ್ಲಮ್ಮನಿಗೆ ನಡ ಕೊಳ್ಳುತ್ತಾರೆ; ದೇವತೆಗೆ ಹರಿಕೆ ಹೊತ್ತವರು, ಮುಖ್ಯವಾಗಿ ಹೆಂಗಸರು, ಗಂಧದ ಇಲ್ಲವೆ ಬೇವಿನ ಹುಟ್ಟಿಗೆಯ ಉಟ್ಟು ಕೊಂಡು ದರ್ಶನಕ್ಕೆ ಹೋಗುತ್ತಾರೆ; ಪೂರ್ವದಲ್ಲಿ ಬಕ್ತರು ಶಿಡೀ ಆಡುವರು. ಜಾತ್ರೆಗೆ ಹೋದವರು ಗುಡ್ಡದ ಮೇಲೆ ಮೂರು ಕಲ್ಲುಗ ಳನ್ನು ವೊಂದರ ಮೇಲೊಂದು ಯೇರಿಸಿಟ್ಟು ಬರುತ್ತಾರೆ. ಇವೆಲ್ಲ ಪ್ರಕಾರಗಳು ಯೆಲ್ಲ ಮ್ಮನು ದ್ರವಿಡ ದೇವತೆ ಯೆಂಬ ಲಕ್ಷಣವನ್ನು ತೋರಿಸುತ್ತವೆ. ಶಿಡೀ ಆಡುವದನ್ನು ಸರಕಾರದವರು ಸನ್ ೧೮೩೪ರಲ್ಲಿ ಕಟ್ಟು ಮಾಡಿದರು. ಆ ವರ್ಷ ೧೭೫ ಜನ ಶಿಡೀ ಆಡಿದರು.

ಯೆಲ್ಲಮ್ಮನ ಪೂಜಾರಿಗಳು ಲಿಂಗವಂತರಿದ್ದಾರೆ. ಅವರಿಗೆ ವರ್ಷಕ್ಕೆ ಸುಮಾರು ೧೦೦೦೦ ರೂಪಾಯಿಯ ಆದಾಯವಿರುತ್ತದೆ. ಇದಲ್ಲದೆ ದೇವತೆಗೆ ಶೀರೆ, ಕುಬ್ಬಸ, ಅಲಂಕಾರಗಳು ಮುಡಪಿನ ಹಣ ಮುಂತಾದವುಗಳು ಬರುವದು ಬೇರೆ. ಈ ದೇವತೆಗೆ ಇನಾಮು ಗ್ರಾಮಗಳಾಗಲಿ ಭೂಮಿಗಳಾಗಲಿ ಇರುವದಿಲ್ಲ. ಈ ಸಂಗತಿಗೂ ಗುಡಿಯು

ಅರ್ವಾಚೀನ ಕಾಲದ್ದಿರುತ್ತದೆಂಬ ಮಾತಿಗೂ ತಳಕು ಹಾಕಿದರೆ ಈ ದೇವಸ್ಥಾನವು ೧೩ನೇ ಶತಕದ ಈಚೆಯಲ್ಲಿ ಬೆಳಿದದ್ದೆಂದು ಅನುಮಾನವಾಗುತ್ತದೆ.

ಚೈತ್ರ ಪೂರ್ಣಿಮೆಯಲ್ಲಿಯೂ ಮಾರ್ಗಶೀರ್ಷ ಪೂರ್ಣಿಮೆಯಲ್ಲಿಯೂ ಯೆಲ್ಲಮ್ಮನ ಜಾತ್ರೆಯಾಗುತ್ತದೆ. ಮಾರ್ಗಶೀರ್ಷ ಪೂರ್ಣಿಮೆಗೆ ರಂಡಿ ಹುಣ್ಣಿವೆಯೆನ್ನುವರು. ಈ ಜಾತ್ರೆಯಲ್ಲಿ ದೇವತೆಯ ಕೈಯೊಳಗಿನ ಬಳೆಗಳನ್ನು ವೊಡಿದು ರಂಡಿತನ ಬಂದಂತೆ ತೋರಿಸುವರು. ಈ ಜಾತ್ರೆಯಲ್ಲಿ ಸುಮಾರು ೭೦೦೦೦ದ ವರೆಗೆ ಜನ ಕೂಡಿ ಬಹು ದೊಡ್ಡ ವ್ಯಾಪಾರವಾಗುತ್ತದೆ. ಚೈತ್ರ ಪೂರ್ಣಿಮೆಗೆ ಮುತ್ತೈದಿ ಹುಣ್ಣಿವೆ ಯೆಂದು ಹೇಳಿ ಆ ಜಾತ್ರೆಯಲ್ಲಿ ದೇವತೆಯ ಕೈಯಲ್ಲಿ ಬಳೆಗಳನ್ನು ಇಡಿಸುವರು. ಈ ಜಾತ್ರೆಯಲ್ಲಿ ಸುಮಾರು ೨೦೦೦೦ ಜನ ಕೂಡುತ್ತದೆ.

ಯೆಲ್ಲಮ್ಮನ ಗುಡ್ಡದ ಮೇಲೆ ಜಾತ್ರೆಗಳ ಪೂರ್ತೆಗೆ ಮ್ಯುನಿಸಿಪಾಲಿಟಿಯನ್ನು ಸ್ಥಾಪಿಸಿದ್ದಾರೆ. ಅವರು ಪ್ರತಿಯೊಬ್ಬ ಯಾತ್ರಿಕನ ಕೈಯಿಂದ ವೊಂದು ದುಡ್ಡು ತೆರಿಗೆ ಯೆತ್ತುವದಲ್ಲದೆ ಮಾಲಿನ ಮೇಲೆಯೂ ಜಕಾತಿಯನ್ನು ತಕ್ಕೊಳ್ಳುವರು. ಸನ್ ೧೮೮೫-೮೩ರಲ್ಲಿ ಈ ಮ್ಯುನಿಸಿಪಾಲಿಟಿಯ ಆದಾಯವು ೪೭೧೪ ರೂಪಾಯಿ ಇತ್ತು. ಈ ಹಣವನ್ನು ಲೈನ ಮಾರ್ಗಗಳನ್ನು ಕಟ್ಟಿಸಲಿಕ್ಕೂ, ಬಾವಿಗಳನ್ನು ಕಡಿಸಲಿಕ್ಕೂ ಬೇರೆ ಸಾರ್ವಜನಿಕ ಕೆಲಸಗಳಿಗೂ ವೆಚ್ಚ ಮಾಡುವರು.

**ಯಳ್ಳೂರಗಡ.**— ಬೆಳಗಾವಿಯ ಆಗ್ನೇಯಕ್ಕೆ ೭ ಮೈಲಿನ ಮೇಲೆ ದುರ್ಗ ಕೋಟೆಯು. ಈ ಗಡವು ಸಮುದ್ರದ ಸಪಾಟಯಿಂದ ೩೩೭೫ ಫೂಟು ಯೆತ್ತರಿರುತ್ತದೆ. ಕೋಟೆಯು ಸಣ್ಣದಿರುತ್ತದೆ. ಇದರಲ್ಲಿ ವಸ್ತಿ ಇಲ್ಲ. ಇಂಜಿನೀಯರ ಖಾತೆಯ ಅಧಿಕಾರಿಗಳು ಈ ಗಡವನ್ನು ಯೆತ್ತರದ ಮಾಪು ಮಾಡಿ ಕೊಂಡಿದ್ದಾರೆ.

# ವಿಜಾಪುರ ಜಿಲ್ಲೆ.

**ಅಗರಖೇಡ (ಅಗ್ರಖೇಟಕ).**— ಇಂಡಿಯ ಈಶಾನ್ಯಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೩೨೮೨. ಶಂಕರಲಿಂಗ, ಧೈರಪ್ಪ, ಯೆಂಬೆರಡು ಹಳೆ ಗುಡಿಗಳಿರುತ್ತವೆ. ಧೈರಪ್ಪನ ಗುಡಿಯನ್ನು ಕಟೆದ ವೊಣಕಲ್ಲಿನಿಂದ ಕಟ್ಟಿದ್ದಾರೆ. ಇಂಥಾ ಗುಡಿಗಳಿಗೆ ಕರ್ನಾಟಕದಲ್ಲಿ ಜಕಣಾಚಾರ್ಯರ ಗುಡಿಯೆಂತಲೂ, ಮಹಾರಾಷ್ಟ್ರದಲ್ಲಿ ಹೇಮಾಡ ಪಂತೀಯೆಂತಲೂ ಅನ್ನುವರು. ಈ ವೂರು ಆದ್ಯರೆಂಬ ಮನೆತನದ ಆಚಾರ್ಯರಿಗೆ ಅಗ್ರಹಾರವಿರುತ್ತದೆ.

ಹೇಮಾಡ ಪಂತನು ದೇವಗಿರಿಯ ರಾಮರಾಜನ ಮಂತ್ರಿ ಇದ್ದನು. ದ್ವಾಪರ ಯುಗದಲ್ಲಿ ಲಂಕೆಯ ವಿಭೀಷಣ ರಾಜನಿಗೆ ಔಷಧ ಕೊಟ್ಟು ಅವನ ರೋಗವನ್ನು ಪರಿ

ಹಾರ ಮಾಡಿದ ಹೇಮಾಡ ಪಂತನೊಬ್ಬನು ಬೇರೆ ಇದ್ದನೆಂದು ಹೇಳುತ್ತಾರೆ. ಅವನು ಲಂಕೆಯಿಂದ ವೋಡೀ ಲಿಪಿಯನ್ನು ತಂದನಂತೆ.

ಐಹೊಳೆ.—ಬಾದಾವಿಯ ಪೂರ್ವಕ್ಕೆ ೧೬ ಮೈಲಿನ ಮೇಲೆ, ಮಲಾಪಹಾರಿಯ ದಂಡೆಯಲ್ಲಿ, ಜ. ಸ. (೮೧) ೧೦೫೪. ಅಯ್ಯ, ಹೊಳೆ, ಈ ಯೆರಡು ಶಬ್ದಗ್ದಳಿಂದ ಈ ಹೆಸರು ಆಗಿದೆ. ಪರಶುರಾಮನು ಕ್ಷತ್ರಿಯರನ್ನು ಕೊಂದ ಬಳಿಕ ಇಲ್ಲಿ ಮಲಾಪಹಾರಿ ಯಲ್ಲಿ ತನ್ನ ಕೊಡ್ಲೆಯನ್ನು ತೊಳಿದನೆಂದು ಹೇಳುತ್ತಾರೆ. ಕೊಡ್ಲೆಯ ಆಕಾರದ್ದೊಂದು ಬಂಡೆಯು ಹೊಳೆಯ ಮೇಲೆ ಇರುತ್ತದೆ. ಅದರ ಬಳಿಯಲ್ಲಿ ಪರಶುರಾಮನ ಪಾದಗಳು ಮೂಡಿರುತ್ತವೆಂದು ಕೆಲವೊಂದು ಬಗೆಯ ಆಕಾರಗಳನ್ನು ಕಲ್ಲಿನ ಮೇಲೆ ತೋರಿಸು ತ್ತಾರೆ. ಆ ಪಾದಗಳ ಹತ್ತರ ರಾಮಲಿಂಗನ ಗುಡಿಯು ಪ್ರಾಚೀನವಿರುತ್ತದೆ. ಈ ದೇವರ ಜಾತ್ರೆಯು ಫಾಲ್ಗುಣ ಪೂರ್ಣಿಮೆಯಲ್ಲಿ ಆಗುತ್ತದೆ. ಈ ಗುಡಿಯಿಂದ ಊರಿನ ತನಕ ಕಲ್ಲು ಹಾಸಿಗೆಯ ಬೀದಿಯೂ ಅದರ ಯೆಡ ಬಲಗಳಲ್ಲಿ ಹಾಳು ಗುಡಿಗಳೂ ಇರುತ್ತವೆ. ಊರ ಹೊರಗೆ ವೊಂದು ಗುಡ್ಡದ ಮೇಲೆ ಮೇಗುತಿ ಯೆಂಬ ಹೆಸರಿನ ದೇವಸ್ಥಾನವಿರುತ್ತದೆ. ಅದರಲ್ಲಿ ಚಲುಕ್ಯರ ೨ನೇ ಪುಲಿಕೇಶಿಯ ಆಳಿಕೆಯಲ್ಲಿ ರವಿವ ರ್ಮನೆಂಬವನು ಶಕೆ ೫೫೬ರಲ್ಲಿ ಈ ಜಿನೇಂದ್ರನ ಗುಡಿಯನ್ನು ಕಟ್ಟಿಸಿದನೆಂದು ಬರಿದದೆ. ಈ ಲಿಪಿಯು ಕರ್ನಾಟಕ ಭಾಗದಲ್ಲಿ ಯೆಲ್ಲಕ್ಕೂ ಪುರಾತನ ಕಾಲದ್ದೆಂದು ಹೇಳ ಬಹುದು. ಇದರಲ್ಲಿ ಬಾದಾವಿಯ ಪ್ರಾಂತಕ್ಕೆ ಮಹಾರಾಷ್ಟ್ರವೆಂಬ ಹೆಸರು ಕೊಡಲ್ಪಟ್ಟಿದೆ. ಊರೊಳಗೆ ದುರಗವ್ವನ ಗುಡಿಯು ಯೆಲ್ಲ ಗುಡಿಗಳಲ್ಲಿ ಶ್ರೇಷ್ಠವೆನಿಸುತ್ತದೆ. ಇದು ಕರ್ನಾಟಕದಲ್ಲಿ ಯೆಲ್ಲಕ್ಕೂ ಹಳೆ ಗುಡಿಯೆಂದು ಹೇಳ ಬಹುದು. ಇದರ ಬಾಗಿಲಿನ ಮೇಲೆ ಚಲುಕ್ಯ ವಿಕ್ರಮನ ಹೆಸರು ಬರಿದದೆ. ಈ ಅರಸು ಕ್ರಿಸ್ತೀ ಶಕದ ೬೫೦ರಿಂದ ೬೮೦ರ ವರೆಗೆ ಆಳಿದನು. ಬೌದ್ಧ ಧರ್ಮದವರು ಗುಡ್ಡಗಳಲ್ಲಿ ಕೊರಿದು ಮಾಡಿದ ಗುಡಿಗಳ ಆಕಾರದಂತೆ ಈ ದುರಗವ್ವನ ಗುಡಿಯ ಆಕಾರವಿರುತ್ತದೆ. ಆದ್ದರಿಂದ ಇದನ್ನು ಕಟ್ಟಿದಾಗ ಬೌದ್ಧ ಧರ್ಮವು ಇನ್ನೂ ನಡಿಯುತ್ತಿತ್ತೆಂದೆನ್ನ ಬಹುದು. ಈ ಗುಡಿಯ ಗೋಡೆಗಳ ಮೇಲೆಯೂ ಬೇರೆ ಕಡೆಯಲ್ಲಿಯೂ ವಿಷ್ಣು, ಗರುಡ, ಮುಂತಾದ ದೇ ವತೆಗಳ ಚಿತ್ರಗಳಿರುತ್ತವೆ. ಈ ಗುಡಿಯಲ್ಲಿ "ಜಿನೇಂದ್ರನ ಪವಿತ್ರವಾದ ಆಸ್ಥಾನವು" ಯೆಂಬ ಶಬ್ದಗಳನ್ನು ಸಂಸ್ಕೃತದಲ್ಲಿ ಬರಿದಿದ್ದಾರೆ. ಈ ಲಿಪಿಯು ೭ನೇ ಶತಕದ್ದೆಂದು ತೋರುತ್ತದೆ.

ಐಹೊಳೆಯಲ್ಲಿ ಗುಡ್ಡದಲ್ಲಿ ಕೊರಿದು ಮಾಡಿದಂಥ ಯೆರಡು ಗುಡಿಗಳು ಊರ ಹೊರಗೆ ಇರುತ್ತವೆ. ಒಂದು ಜೈನರದು, ಯೆರಡನೇದು ಬ್ರಾಹ್ಮಣರದು. ಎರಡೂ ಗುಡಿ ಗಳಲ್ಲಿ ನಾನಾ ಪ್ರಕಾರದ ಚಿತ್ರಗಳೂ ಮೂರ್ತಿಗಳೂ ಇರುತ್ತವೆ. ಆದರೆ ಅವುಗಳನ್ನು ಮಾಡಿದವರ ಕೌಶಲ್ಯವು ಅಷ್ಟು ವರ್ಣಿಸ ತಕ್ಕಂಥಾದ್ದಲ್ಲ. ಬ್ರಾಹ್ಮಣರ ಗುಡಿಯಲ್ಲಿ ಕೆಲವು ಲಿಪಿಗಳಿರುತ್ತವೆ.

ಇವಲ್ಲದೆ ಐಹೊಳೆಯಲ್ಲಿ ಹುಚ್ಚಿಮಲ್ಲೀ ಗುಡಿ, ಲಾಡಖಾನ ಗುಡಿ, ನಾರಾಯಣನ

ಗುಡಿ, ಕೊಂಟದೇವನ ಗುಡಿ, ಮುಂತಾದ ಹಲವು ಗುಡಿಗಳುಂಟು. ಲಾಡಖಾನ ಗುಡಿಯಲ್ಲಿ ವೊಬ್ಬ ಮುಸಲ್ಮಾನನಿರುವದರಿಂದ ಅದಕ್ಕೆ ಈ ಹೆಸರು ಬಂದದೆ. ಈ ಯೂವತ್ತು ಗುಡಿಗಳಲ್ಲಿಯೂ ಚಲುಕ್ಯರ ಕಾಲದ, ಅಂದರೆ ೯ನೇ ಶತಕದ ಪೂರ್ವದ ಲಿಪಿಗಳಿರುತ್ತವೆ. ಊರ ಹೊರಗೆ ಲಿಂಗಗಳಿಗಂತು ಲೆಕ್ಕವಿಲ್ಲ. ಹೊಸ ಗುಡಿಗಳನ್ನೂ ಇಮಾರತುಗಳನ್ನೂ ಕಟ್ಟಿಸುವವರು ಈ ಊರೊಳಗಿನ ಹಾಳು ಗುಡಿಗಳಲ್ಲಿಯ ಬೇಕಾದಂಥ ಕಲ್ಲುಗಳನ್ನು ವೊಯ್ಯುತ್ತಾರೆ. ಆದರೆ ಸರಕಾರದವರು ವೊಳಗಪೆಯಲ್ಲಿ ಇಲ್ಲಿಯ ಕಲ್ಲುಗಳನ್ನು ಯಾರೂ ತಕ್ಕೊಳ್ಳ ಕೂಡದೆಂದು ನಿರ್ಬಂಧ ಮಾಡಿದ್ದಾರೆ.

**ಆಲಮೇಲೆ.**—ಸಿಂದಗಿಯ ಉತ್ತರಕ್ಕೆ ೧೦ ಮೈಲಿನ ಮೇಲೆ, ಜನಸಂಖ್ಯ (೮೧) ೪೧೪೪. ಈ ವೂರನ್ನು ಬಿಜ್ಜಳ ರಾಜನು ಕಟ್ಟಿಸಿದನೆಂದು ಹೇಳುತ್ತಾರೆ. ರಾಮಲಿಂಗನ ಗುಡಿಯು ಪುರಾತನದ್ದಿರುತ್ತದೆ. ಇದರಲ್ಲಿ ಇರುವ ಮೂರು ಲಿಂಗಗಳಲ್ಲಿ ವೊಂದಕ್ಕೆ ನಾಲ್ಕು ಮುಖಗಳಿವೆ. ಗರ್ಭಾಗಾರದ ಮೇಲೆ ವೊಂದು ಆನೆಯು ಮೂವರು ಮನುಷ್ಯರನ್ನು ಸೊಂಡಿಲಿನೊಳಗೆ ಹಿಡಿದು ಕೊಂಡು ಹೋಗುವ ಹಾಗೆ ಚಿತ್ರವನ್ನು ಕೊರಿದಿದ್ದಾರೆ. ಸಭಾಮಂಟಪದ ಗೋಡೆಗಳ ಮೇಲೆಯೂ ಕಂಬಗಳ ಮೇಲೆಯೂ ಸುಂದರವಾದ ಚಿತ್ರಗಳಿರುತ್ತವೆ. ಶಾಲೆಯ ಬಳಿಯಲ್ಲಿ ವೊಂದು ಕಲ್ಲಿನ ನಾಲ್ಕು ಮೋರೆಗಳ ಮೇಲೆಯೂ ೧೧೦೭ನೇ ವರ್ಷದ ಲಿಪಿಗಳಿರುತ್ತವೆ. ಊರ ಹೊರಗೆ ಹಾಳಾದದ್ದೊಂದು ಹನುಮಂತನ ಗುಡಿಯಲ್ಲಿ ವೊಬ್ಬ ಮನುಷ್ಯನನ್ನು ಯೆರಡು ಆನೆಗಳು ಮೇಲಕ್ಕೆ ಯೆತ್ತಿದ ಹಾಗೆ ಚಿತ್ರವನ್ನು ಕಟದಿದ್ದಾರೆ. ಇನ್ನೊಂದು ಅರ್ವಾಚೀನಕಾಲದ ಈಶ್ವರನ ಗುಡಿಯಲ್ಲಿಯೂ ಆನೆಗಳ ಚಿತ್ರಗಳಿರುತ್ತವೆ. ಇದನ್ನು ರಾಮಾಜೀ ನರಹರ ಬಿನ್ನೀವಾಲೆ ಯೆಂಬ ಅಧಿಕಾರಿ ಸನ್ ೧೭೮೦ರಲ್ಲಿ ಕಟ್ಟಿಸಿದನೆಂದು ಹೇಳುತ್ತಾರೆ. ಮುಧೋಳದ ಮಾಲೋಜೀರಾವ ಘೋರ್ಪಡೆ ಯೆಂಬ ಸರದಾರನ ವಶದಲ್ಲಿ ಆಲಮೇಲೆಯ ಪ್ರಾಂತವಿದ್ದಾಗ ೧೮೦೦ನೇ ವರ್ಷ ವೊಂದು ಭವಾನಿಯ ಗುಡಿಯನ್ನು ಕಟ್ಟಿಸಿದ್ದಾರೆ. ಇದು ಸಾಮಾನ್ಯ ತರದ್ದಿರುತ್ತದೆ. ಆಲಮೇಲೆಯ ದೇಶಪಾಂಡೆಯಾದ ಶೇಷಗಿರಿ ರಾಯನೆಂಬವನು ರಾಮನ ಗುಡಿಯನ್ನು ೧೭೮೮ರಲ್ಲಿ ಕಟ್ಟಿಸಿದ್ದಾನೆ. ಅದಕ್ಕೆ ಪೇಶವನಿಂದ ದೊರಿದ ಇನಾಮು ಭೂಮಿಯು ಈಗ್ಯೂ ನಡಿಯುತ್ತದೆ. ಇನ್ನೊಂದು ಮಾರುತಿಯ ಗುಡಿ, ಪಾವಾಡೀ ಬಸವೇಶ್ವರನ ಗುಡಿ, ದೇವಪ್ಪಯ್ಯನ ಸಮಾಧಿ, ಘಾಲಿಬ ಸಾಹೇಬನ ಗೋರಿ, ಲಕ್ಷ್ಮಿಯ ಗುಡಿ, ಅಕ್ಕ ತಂಗಿಯರ ಬಾವಿ, ಮುಂತಾದ ಪೂರ್ವ ಕಾಲದ ಸ್ಮಾರಕಗಳು ಈ ವೂರಲ್ಲಿ ಹಲವುಂಟು. ಕೆಲವುಗಳಿಗೆ ಸಂಬಂಧಿಸಿದ ಚಮತ್ಕಾರವಾದ ಕಥೆಗಳಿರುತ್ತವೆ. ಉದಾಹರಣಾರ್ಥವಾಗಿ ಲಕ್ಷ್ಮಿಯ ಗುಡಿಯ ಕಥೆ ಹ್ಯಾಗಂದರೆ.—ಒಬ್ಬ ಸಾಹೇಬನು ತನ್ನ ಡೇರೆಯನ್ನು ಹೊಡಿಸುವದಕ್ಕಾಗಿ ಈ ಲಕ್ಷ್ಮಿಯ ಸಣ್ಣ ಗುಡಿಯನ್ನು ಕಿತ್ತಿಸಿ ತೆಗಿದದ್ದರಿಂದ ತತ್ಕಾಲವೇ ಅವನ ಕಣ್ಣುಗಳು ಹೋದವು. ಆದರೆ ಸಾಹೇಬನು ಪಶ್ಚಾತ್ತಾಪ ಪಟ್ಟು ಆ ಗುಡಿಯನ್ನು ಮರಳಿ ಮೊದಲು ಇದ್ದಂತೆ ಕಟ್ಟಿಸಿದ ಬಳಿಕ ಅವನ ಕಣ್ಣು ಮತ್ತೆ ಬಂದವಂತೆ. ಅಕ್ಕ ತಂಗಿಯರ ಬಾವಿಯೆಂಬ ದೊಡ್ಡ ಹೊಕ್ಕು ತುಂಬುವ

ಬಾವಿಯನ್ನು ಇಬ್ಬರು ಪಾತರದವರಾದ ಅಕ್ಕ ತಂಗಿಯರು ಕಟ್ಟಿಸಿದರು. ಆದರೆ ನೀರು ಬೀಳಲಿಲ್ಲ. ಒಬ್ಬ ಸತ್ಪುರುಷನು, ನೀವು ನಿಮ್ಮನ್ನೇ ಬಲಿ ಕೊಟ್ಟ ಹೊರ್ತು ಬಾವಿಗೆ ನೀರು ಬೀಳಲಿಕ್ಕಿಲ್ಲೆಂದು ಆ ಅಕ್ಕ ತಂಗಿಯರಿಗೆ ಹೇಳಿದನು. ಆದ್ದರಿಂದ ಅವರು ರಾತ್ರಿಯಲ್ಲಿ ಬಾವಿಯೊಳಗೆ ಹೋಗಿ ಮಲಗಿ ಕೊಂಡರು. ಮರು ದಿವಸ ಬೆಳಿಗ್ಗೆ ಬಾವಿ ತುಂಬಿ ಆ ಪರೋಪಕಾರಿಗಳಾದ ಅಕ್ಕ ತಂಗಿಯರು ನೀರೊಳಗೆ ಮುಳುಗಿ ಹೋಗಿದ್ದರು.

ಅನವಾಲ.—ಕಲಾದಗಿಯ ಆಗ್ನೇಯಕ್ಕೆ ೫ ಮೈಲಿನ ಮೇಲೆ. ಇಲ್ಲಿ ಅನಂತ ಶಯನನ ಯೆರಡಂತಸ್ತಿನ ಸಣ್ಣ ಗುಡಿಯಲ್ಲಿ ಅನಂತಶಯನನ ಮೂರ್ತಿಯು ಸುಂದರವಾದದ್ದಿರುತ್ತದೆ.

ಅರಸಿಬೀಡಿ.—ಹುನಗುಂದದ ದಕ್ಷಿಣಕ್ಕೆ ೧೬ ಮೈಲಿನ ಮೇಲೆ. ಈಗ ಬಹುತರ ಯೆಲ್ಲ ಹಾಳಾಗಿದೆ. ಪೂರ್ವದಲ್ಲಿ ಇದಕ್ಕೆ ವಿಕ್ರಮಪುರವೆನ್ನುವರು. ಚಾಲುಕ್ಯರ ವಿಖ್ಯಾತ ವೀರನಾದ ೬ನೇ ವಿಕ್ರಮಾದಿತ್ಯನು ಈ ವೂರು ಕಟ್ಟಿಸಿ ತನ್ನ ರಾಜಧಾನಿಯನ್ನು ಮಾಡಿ ಕೊಂಡಿದ್ದನು. ಮುಂದೆ ಸ್ವಲ್ಪ ದಿವಸದೊಳಗೆ ಕಲಚೂರೀ ಬಿಜ್ಜಳನು ಚಾಲುಕ್ಯರ ರಾಜ್ಯವನ್ನು ಆಕ್ರಮಿಸಿದ ಬಳಿಕ ಈ ವೂರು ಹಾಳಾಯಿತೆಂದು ತೋರುತ್ತದೆ.

ಬಾದಾಮಿ.—ಉತ್ತರ ಅಕ್ಷಾಂಶ ೧೫°, ೫೫′, ಪೂರ್ವ ರೇಖಾಂಶ ೭೫°, ೪೫′, ವಿಜಾಪುರದ ದಕ್ಷಿಣಕ್ಕೆ ೭೫ ಮೈಲಿನ ಮೇಲೆ, ಜ. ಸ. (೮೧) ೩೦೬೦. ತಾಲೂಕಿನ ಮುಖ್ಯ ಗ್ರಾಮವು; ಹೊಗೆಬಂಡಿಯ ಸ್ಟೇಶನ್ನು ಇರುತ್ತದೆ.

ಈ ವೂರು ಯೆರಡು ಗುಡ್ಡಗಳ ನಡುವಿನ ಕಂದರದಲ್ಲಿ ಇರುತ್ತದೆ. ಒಂದು ಗುಡ್ಡದ ಬುಡದಿಂದ ಮತ್ತೊಂದರ ವರೆಗೆ ವೊಡ್ಡು ಹಾಕಿ ದೊಡ್ಡದೊಂದು ಕೆರೆಯನ್ನು ಮಾಡಿದ್ದಾರೆ. ಈ ಕೆರೆಯ ಉತ್ತರ ದಂಡೆಗುಂಟ ಗುಡಿಗಳಿರುತ್ತವೆ; ಗುಡ್ಡಗಳ ಮೇಲೆ ಯೆರಡು ದುರ್ಗಕೋಟೆಗಳುಂಟು. ದಕ್ಷಿಣದ ಕೋಟೆಯ ಪಶ್ಚಿಮ ಮೋರೆಯಲ್ಲಿ ನಾಲ್ಕು ಕೊರಿದು ಮಾಡಿದ ಗವಿಗಳಿರುತ್ತವೆ; ಇವುಗಳಲ್ಲಿ ವೊಂದು ಶೈವರದು, ಯೆರಡು ವೈಷ್ಣವರವು, ವೊಂದು ಜೈನರದು. ಈ ಗುಹಾಸ್ಥಾನಗಳು ಯೆಷ್ಟು ಮಾತ್ರವೂ ಕೆಟ್ಟಿಲ್ಲ; ಇವುಗಳಲ್ಲಿ ಅತ್ಯುತ್ತಮವಾಗಿ ಕೊರಿದಂಥ ನಾನಾ ಪ್ರಕಾರದ ಚಿತ್ರಗಳಿರುತ್ತವೆ.

೧ನೇ ಶೈವರ ಗವಿಯ ಮುಂದೆ ಸಭಾಮಂಟಪ, ಅದರ ಹಿಂದೆ ಗರ್ಭಾಗಾರ, ಹೀಗೆ ಯೆರಡು ವಿಭಾಗಗಳಿರುತ್ತವೆ. ಸಭಾಮಂಟಪವು ೪೦ ಫೂಟು ೧ ಇಂಚು ಉದ್ದ, ೨೪ ಫೂಟು ೬ ಇಂಚು ಅಗಲು ಇರುತ್ತದೆ. ಗರ್ಭಾಗಾರವು ೬ ಫೂಟು ೧೧ ಇಂಚಿನಿಂದ ೮ ಫೂಟು ೩ ಇಂಚಿನ ವರೆಗೆ ಉದ್ದ, ೯ ಫೂಟು ೬ ಇಂಚು ಅಗಲು ಇರುತ್ತದೆ. ಈ ಆಸ್ಥಾನದ ಹೊರಗಿನ ಪಾವಟಿಗೆಗಳ ಯೆಡ ಬಲಗಳಲ್ಲಿ ಆಕಳಿನ ಮೋರೆ, ಕುದುರೆಯ ಮೋರೆಗಳುಳ್ಳಂಥ ಶಿವನ ಗಣಗಳ ಮೂರ್ತಿಗಳನ್ನು ಕಟಿದು ಮಾಡಿದ್ದಾರೆ. ಪಾವಟಿಗೆಗಳ ಮೇಲ್ಬದಿಯಲ್ಲಿ ೫ ಫೂಟು ಯೆತ್ತರವಾದ ತಾಂಡವನರ್ತನ ಮಾಡುವ ಶಿವನ ಮೂರ್ತಿಯುಂಟು. ಅದರ ಬಳಿಯಲ್ಲಿ ನಂದಿ, ಗಣಪತಿ, ನಾರದ, ಈ ಮೂವರ ಮೂರ್ತಿಗಳಿವೆ. ಈ ಶಿವನ ಮೂರ್ತಿಯನ್ನು ದಾಟಿ ಮತ್ತು ಕೆಲವು ಪಾವಟಿಗೆಗಳ

ಮೇಲೆ ವೊಂದು ಸಣ್ಣ ಮಂಟಪವಿರುತ್ತದೆ. ಈ ಪಾವಟಗೆಗಳ ಯೆಡ ಬಲಗಳಲ್ಲಿಯೂ ಮಂಟಪದೊಳಗೆ ಸುತ್ತು ಮುತ್ತಲೂ ನಾನಾ ಪ್ರಕಾರದ ಗಣಗಳ ಮೂರ್ತಿಗಳಿವೆ; ಎದುರಿನ ಗೋಡೆಗೆ ಮಹಿಷಾಸುರ ಮರ್ದನಿಯಾದ ಜಗದಂಬೆಯ ಮೂರ್ತಿಯುಂಟು. ಗುಹೆಯ ಬಾಗಿಲಿನಲ್ಲಿ ೬ ಫೂಟು ೦ ಇಂಚು ಯೆತ್ತರವಾದ ದ್ವಾರಪಾಲಕನ ಮೂರ್ತಿಯು ತ್ರಿಶೂಲವನ್ನು ಧರಿಸಿ ಕೊಂಡು ನಿಂತಿರುತ್ತದೆ. ಅದರ ಕೆಳಗೆ ವೊಂದು ಬಹು ಚಮತ್ಕಾರದ ಪಶುವಿನ ಮೂರ್ತಿಯನ್ನು ಮಾಡಿದ್ದಾರೆ. ಅದಕ್ಕೆ ಯೆರಡು ಮೈಗಳುಂಟು. ಒಂದು ಮೈಯನ್ನು ಮುಚ್ಚಿದರೆ ಅದು ಆನೆಯ ಹಾಗೆ ಕಾಣುತ್ತದೆ; ಎರಡನೇ ಮೈಯನ್ನು ಮುಚ್ಚಿದರೆ ಯೆತ್ತಿನ ಹಾಗೆ ಕಾಣುತ್ತದೆ. ಈ ಸಣ್ಣ ಮಂಟಪದ ಹಿಂದೆ ಪಡಶಾಲೆಯುಂಟು. ಅದರೊಳಗೆ ೭ ಫೂಟು ೩ ಇಂಚು ಯೆತ್ತರವಾದ ಹರಿಹರನ ಮೂರ್ತಿಯೂ ಅದರ ಬಳಿಯಲ್ಲಿ ಇಬ್ಬರು ಸ್ತ್ರೀಯರ ಮೂರ್ತಿಗಳೂ ಇರುತ್ತವೆ. ಹರಿಹರನ ಅರ್ಧ ಭಾಗವು ವಿಷ್ಣುವಿನಂತೆ, ಅರ್ಧ ಭಾಗವು ಶಿವನಂತೆ ಇರುತ್ತದೆ. ಇದೇ ಮೇರೆಗೆ ಪಡಶಾಲೆಯಲ್ಲಿ ಬಲಗಡೆಗೆ ಅರ್ಧ ನಾರೀನರೇಶ್ವರನ ಮೂರ್ತಿಯು ಬಹು ದೊಡ್ಡದಿರುತ್ತಧೆ. ಅದರ ಅರ್ಧ ಭಾಗವನ್ನು ಶಿವನಂತೆ, ಅರ್ಧ ಭಾಗವನ್ನು ಪಾರ್ವತಿಯಂತೆ ಮಾಡಿದ್ದಾರೆ. ಶಿವನ ಭಾಗದಲ್ಲಿ ಅವನ ಅಲಂಕಾರಗಳನ್ನೂ ಪಾರ್ವತಿಯ ಭಾಗದಲ್ಲಿ ಆಕೆಯ ಅಲಂಕಾರಗಳನ್ನೂ ಬಹು ಸುಂದರವಾಗಿ ಕೊರಿದಿದ್ದಾರೆ. ಶಿವನ ಕಿವಿಯಲ್ಲಿಯೂ ರಟ್ಟೆಗೂ ಟೊಂಕಕ್ಕೂ ಕೈಯೊಳಗಿನ ಕೊಡ್ಲೆಗೂ ಹಾವುಗಳು ಸುತ್ತಿಕೊಂಡಿರುತ್ತವೆ. ಪಾರ್ವತಿಯ ತುರುಬನ್ನು ಮದ್ರಾಸೀ ಹೆಂಗಸರಂತೆ ಬಲಭುಜದ ಮೇಲೆ ಕಟ್ಟಿ, ಕೈಯೊಳಗೆ ಲಮಾಣಿಗಳಂತೆ ಮೊಣಕೈ ವರೆಗೆ ಕಡಗಗಳನ್ನು ಇಡಿಸಿದ್ದಾರೆ. ಶಿವನ ಭಾಗಕ್ಕೆ ನೀಲೀ ಬಣ್ಣವನ್ನೂ, ಪಾರ್ವತಿಯ ಭಾಗಕ್ಕೆ ಸಿಂದೂರದ ಬಣ್ಣವನ್ನೂ ಕೊಟ್ಟದ್ದಾರೆ. ಸಭಾಮಂಟಪದಲ್ಲಿ ಯೆರಡು ನಾಲ್ಕು ನಾಲ್ಕು ಕಂಬಗಳ ಸಾಲುಗಳಿವೆ. ಮೇಲಿನ ಛಾವಣಿಯಲ್ಲಿ ಶೇಷ ಮುಂತಾದ ಚಿತ್ರಗಳನ್ನು ಸರಸಾಗಿ ಕೊರಿದಿದ್ದಾರೆ. ಗರ್ಭಾಗಾರದಲ್ಲಿ ಸಣ್ಣದೊಂದು ಲಿಂಗವನ್ನು ಕೂಡ್ರಿಸಿದ್ದಾರೆ.

೨ನೇ ಗುಹಾಸ್ಥಾನವು ವೈಷ್ಣವರದಿರುತ್ತದೆ. ಈ ಆಸ್ಥಾನದ ಮುಂಭಾಗದಲ್ಲಿ ಪಡಶಾಲೆ, ಅದರಾಚೆಯಲ್ಲಿ ಸಭಾಮಂಟಪ, ಅದರ ಹಿಂದೆ ಗರ್ಭಾಗಾರ, ಹೀಗೆ ಮೂರು ವಿಭಾಗಗಳಿವೆ. ಸಭಾಮಂಟಪವು ೩೩ ಫೂಟು ೪ ಇಂಚು ಅಗಲು, ೨೩ ಫೂಟು ೭ ಇಂಚು ಉದ್ದ ಇರುತ್ತದೆ. ಇದರಲ್ಲಿಯೂ ನಾಲ್ಕು ನಾಲ್ಕು ಕಂಬಗಳ ಯೆರಡು ಸಾಲುಗಳಿವೆ. ಗರ್ಭಾಗಾರವು ೮ ಫೂಟು ೯ ಇಂಚು ಉದ್ದ, ೭ ಫೂಟು ೫ ಇಂಚು ಅಗಲು ಇರುತ್ತದೆ. ಇದರಲ್ಲಿ ಮೂರ್ತಿ ಇಲ್ಲ. ಪಡಶಾಲೆಯ ಮುಂದಿನ ಅಂಗಳಿನಲ್ಲಿ ಯೆಡಕ್ಕೂ ಬಲಕ್ಕೂ ೫ ಫೂಟು ೧೦ ಇಂಚು ಯೆತ್ತರವಾದ ದ್ವಾರಪಾಲಕರ ಮೂರ್ತಿಗಳಿವೆ. ಪಡ ಶಾಲೆಯ ಮುಂದಿನ ಕಂಬಗಳ ಮೇಲೆ ಸೂಕ್ಷ್ಮವಾದ ಚಿತ್ರಗಳನ್ನು ಬಹು ಸರಸಾಗಿ ಕೊರಿದಿದ್ದಾರೆ. ಪಡಶಾಲೆಯ ಯೆಡದುದಿಯಲ್ಲಿ ವರಾಹನ ಮೂರ್ತಿಯನ್ನೂ ಬಲದುದಿಯಲ್ಲಿ ವಾಮನನ ಮೂರ್ತಿಯನ್ನೂ ಕಟಿದಿದ್ದಾರೆ.

೩ನೇ ಗುಹಾಸ್ಥಾನವು ಯೆಲ್ಲಕ್ಕೂ ಸುಂದರವಾದದ್ದಿರುತ್ತದೆ. ಇದೂ ವೈಷ್ಣವರದೇ. ಇದರಲ್ಲಿಯೂ ಮೇಲೆ ಹೇಳಿದ ಆಸ್ಥಾನಗಳಂತೆ ಯೆತ್ತರವಾದ ಗದ್ದುಗೆಯ ಮೇಲೆ ಮುಂಭಾಗದಲ್ಲಿ ೭೦ ಫೂಟು ಅಡ್ಡಳತೆಯುಳ್ಳ ಪಡಶಾಲೆಯನ್ನೂ, ಅದರ ಹಿಂದೆ ೬೫ ಫೂಟು ಉದ್ದಳತೆಯುಳ್ಳ ಸಭಾಮಂಟಪವನ್ನೂ, ಅದರ ಹಿಂದೆ ೧೦ ಫೂಟು ಚಚ್ಚೌಕಾದ ಗರ್ಭಾಗಾರವನ್ನೂ ಕೊರಿದು ಮಾಡಿದ್ದಾರೆ. ಎಲ್ಲ ಕಡೆಯಲ್ಲಿ ನೆಲದಿಂದ ಛಾವಣಿಯು ೧೫ ಫೂಟು ಯೆತ್ತರವಿರುತ್ತದೆ. ಇದರಲ್ಲಿ ಇರುವದೊಂದು ಸಂಸ್ಕೃತ ಲಿಪಿಯು ಈ ಆಸ್ಥಾನವನ್ನು ಮಂಗಲೇಶನೆಂಬ ಚಲುಕ್ಯ ಅರಸು ಸನ್ ೫೭೮ರಲ್ಲಿ ಮಾಡಿಸಿದನೆಂದು ಹೇಳುತ್ತದೆ. ಆಸ್ಥಾನದ ಮುಂಭಾಗದಲ್ಲಿ ಮೊದಲು ವಿಸ್ತಾರವಾದ ಅಂಗಳಿರುತ್ತದೆ. ಪಡಶಾಲೆಯ ಪೂರ್ವ ತುದಿಯಲ್ಲಿ ಶೇಷನ ಮೇಲೆ ಮಲಗಿದ ವಿಷ್ಣುವಿನ ಮೂರ್ತಿಯನ್ನು ಬಹು ದೊಡ್ಡದಾಗಿ ಕೊರಿದ್ದಾರೆ. ವಿಷ್ಣುವಿನ ಬಲ ಭಾಗಕ್ಕೆ ಗರುಡನನ್ನೂ, ಯೆಡ ಭಾಗಕ್ಕೆ ವೊಬ್ಬ ಹೆಂಗಸಿನ ಮೂರ್ತಿಯನ್ನೂ, ಹಿಂದೆ ಚೌರಿಗಳನ್ನು ಬೀಸುವ ಇಬ್ಬರು ಹೆಂಗಸರ ಮೂರ್ತಿಗಳನ್ನೂ ಮಾಡಿದ್ದಾರೆ. ಪಶ್ಚಿಮ ತುದಿಯಲ್ಲಿ ನಾರಸಿಂಹನ ಮೂರ್ತಿಯನ್ನೂ ಅದರ ಬಳಿಯಲ್ಲಿ ಗರುಡನನ್ನೂ ಮಾಡಿದ್ದಾರೆ. ಪಡಶಾಲೆಯ ಯೆದುರಿನ ಗೋಡೆಯಲ್ಲಿ ಬಲಕ್ಕೆ ವರಾಹನ ಮೂರ್ತಿಯನ್ನೂ ಹಿರಣ್ಯಾಕ್ಷನನ್ನು ಮೆಟ್ಟಿದಂತೆ ಕೊರಿದಿದ್ದಾರೆ. ಈ ಮೂರ್ತಿಯ ಬಳಿಯಲ್ಲಿಯೂ ಬೇರೆ ಕೆಲವು ಪುತ್ತಳಿಗಳನ್ನು ಮಾಡಿದ್ದಾರೆ. ಅದೇ ಯೆದುರಿನ ಗೋಡೆಯಲ್ಲಿ ಯೆಡಕ್ಕೆ ವಿರಾಟ ರೂಪವನ್ನು ಬಹು ಭವ್ಯವಾಗಿ ಕೊರಿದ್ದಾರೆ. ಈ ವಿರಾಟ ರೂಪಿಯಾದ ವಾಮನನ ಯೆದುರಿಗೆ ದಾನೋದಕವನ್ನು ಬಿಡುವ ಹಾಗೆ ಬಲಿರಾಜನನ್ನೂ ಅವನ ಬಳಿಯಲ್ಲಿ ಶುಕ್ರಾಚಾರ್ಯನನ್ನೂ ಮತ್ತೊಂದು ಬದಿಗೆ ಬಲಿ ರಾಜನ ಹೆಂಡತಿಯನ್ನೂ ಮಾಡಿದ್ದಾರೆ. ವಾಮನನ ಯೆದುರಿಗೆ ಬಲಗಡೆಯಲ್ಲಿ ಮತ್ತೊಂದು ಬಹು ಭವ್ಯವಾದ ಅಷ್ಟ ಭುಜಗಳುಳ್ಳ ಪುರುಷಾಕೃತಿಯನ್ನು ಮಾಡಿದ್ದಾರೆ. ಈ ಮೂರ್ತಿಯ ಮುಕುಟದ ತುದಿಯಿಂದ ನಾರಸಿಂಹನು ಹೊರಡುವ ಹಾಗೆ ಕಾಣಿಸಿದ್ದಾರೆ. ಈ ಪಡಶಾಲೆಯಲ್ಲಿ ಹರಿಹರನ ಮೂರ್ತಿಯೂ ವೊಂದು ಇರುತ್ತದೆ. ಇದನ್ನು ೧ನೇ ಆಸ್ಥಾನದೊಳಗಿನ ಮೂರ್ತಿಗಿಂತ ಸುಂದರವಾಗಿಯೂ ಭವ್ಯವಾಗಿಯೂ ಕೊರಿದಿದ್ದಾರೆ.

೪ನೇ ಗುಹಾಸ್ಥಾನವು ಜೈನರದು; ಇದು ಮೂರನೇ ಗುಹೆಯ ಪೂರ್ವಕ್ಕೆ ಇರುತ್ತದೆ. ಇದರ ಪಡಶಾಲೆಯು ೬ ಫೂಟು ೬ ಇಂಚು ಅಗಲು, ೩೧ ಫೂಟು ಉದ್ದ ಇರುತ್ತದೆ; ಸಭಾಮಂಟಪವು ೩೧ ಫೂಟು ಉದ್ದ ೧೬ ಫೂಟು ಅಗಲು ಇರುತ್ತದೆ. ಗರ್ಭಾಗಾರದಲ್ಲಿ ಮಹಾವೀರನ ಮೂರ್ತಿಯನ್ನು ಕೂಡ್ರಿಸಿದ್ದಾರೆ. ಪಡಶಾಲೆಯಲ್ಲಿ ವೊಂದು ತುದಿಯಲ್ಲಿ ಗೌತುಮನ ಮೂರ್ತಿಯನ್ನೂ ಮಾಡಿದ್ದಾರೆ. ಈ ಮೂರ್ತಿಗಳು ಯೇಳೂವರೆ ಫೂಟು ಯೆತ್ತರಿರುತ್ತವೆ. ಕಂಬಗಳ ಮೇಲೆಯೂ ಗೋಡೆಗಳಲ್ಲಿಯೂ ನಾನಾ ಪ್ರಕಾರದ ಚಿತ್ರಗಳನ್ನು ಕೊರಿದಿದ್ದಾರೆ.

**ಶಿಲಾಲಿಪಿಗಳು.**— ಮೇಲೆ ವಿವರಿಸಿದ ಗುಹಾಸ್ಥಾನಗಳಲ್ಲಿ ೫ ಲಿಪಿಗಳೂ, ಕೆರೆಯ

ಮೇಲಿನ ಗುಡಿಗಳಲ್ಲಿ ೧೮ ಲಿಪಿಗಳೂ ಇರುತ್ತವೆ. ಎಲ್ಲಕ್ಕೂ ಪೂರ್ವದ ಲಿಪಿಯು ಪಲ್ಲವ ಅರಸರದು ಸಂಸ್ಕೃತದಲ್ಲಿ ಬರಿದದ್ದಿರುತ್ತದೆ. ಇದಕ್ಕೆ ಮಿತಿ ಇಲ್ಲ, ಆದರೆ ಇದರ ಅಕ್ಷರ ಗಳು ೫ನೇ ಶತಕದ ಅಕ್ಷರಗಳನ್ನು ಹೋಲುತ್ತವೆ. ಮೇಲೆ ಹೇಳಿದ ಮಂಗಲೇಶನ ಲಿಪಿಯೇ ಚಲುಕ್ಯರ ಮೊದಲೇ ಲಿಪಿಯು; ಅದೂ ಸಂಸ್ಕೃತವೇ ಇರುತ್ತದೆ. ಊರೊಳ ಗಿನ ಕಲ್ಲ ಮಠ ಯೆಂಬ ಹಳೆ ಇಮಾರತಿನಲ್ಲಿ ಚಲುಕ್ಯ ವಿಜಯಾದಿತ್ಯನು ಸನ್ ೬೯೯ರಲ್ಲಿ ಬರಿಸಿದ ಲಿಪಿಯಾದರೂ ಸಂಸ್ಕೃತವೇ ಇರುತ್ತದೆ. ಇದರ ಮುಂದೆ ೮ನೇ, ೯ನೇ, ಮುಂ ತಾದ ಶತಕಗಳಲ್ಲಿ ಚಲುಕ್ಯ ಅರಸರು ಬರಿಸಿದ ಲಿಪಿಗಳು ಕನ್ನಡದಲ್ಲಿ ಇರುತ್ತವೆ. ಇದರಿಂದ ಸುಮಾರು ಕ್ರಿಸ್ತೀ ಶಕದ ೮ನೇ ಶತಕದ ವರೆಗೆ ಕನ್ನಡ ಭಾಷೆಯು ಶಿಲಾಲೇಖಗಳಲ್ಲಿ ಉಪ ಯೋಗಿಸ ತಕ್ಕಷ್ಟು ಸುಧಾರಿಸಿದ್ದಿಲ್ಲವೆಂದು ಫಲಿತವಾಗುತ್ತದೆ. ಶಬ್ದಮಣಿದರ್ಪಣವು ಶಾಲಿ ವಾಹನ ಶಕ ೯ನೇ ಶತಕದಲ್ಲಿ ಹುಟ್ಟಿತು. ಇದರ ಪೂರ್ವದ ಶಿಲಾಲಿಪಿಗಳಲ್ಲಿ ಕಾಣಿಸುವ ಕನ್ನಡ ಭಾಷೆಯು ಬಹಳ ಅವ್ಯವಸಿತವಾದದ್ದಿರುತ್ತದೆಂದು ಮೆ. ಫ್ಲೀಟ ಸಾಹೇಬರು ಬರಿದಿದ್ದಾರೆ. ಆದ್ದರಿಂದ ೭ನೇ ಶತಕದ ಸುಮಾರಿನಲ್ಲಿ ಕನ್ನಡ ಭಾಷೆಯ ಸುಧಾರಣೆಗೆ ಆರಂಭವಾಯಿತೆಂದು ನಿಶ್ಚಯವಾಗುತ್ತದೆ. ಇದರ ನಂತರ ೧೬ನೇ ಶತಕದ ವರೆಗೆ ಬರಿ ಸಿದ ಲಿಪಿಗಳೆಲ್ಲ ಕನ್ನಡವೇ ಇರುತ್ತವೆ. ಬಾದಾಮಿಯಲ್ಲಿ ವಿಜಯನಗರದ ಅರಸರು ೧೬ನೇ ಶತಕದಲ್ಲಿ ಬರಿಸಿದ ಲಿಪಿಗಳು ಯೆರಡು ಇರುತ್ತವೆ. ಕೃಷ್ಣ ಮಹಾರಾಜನ ಆಳಿ ಕೆಯಲ್ಲಿ ಅವನ ಸರದಾರರು ವಿಜಾಪುರದ ಇಸ್ಮಾಯಲ ಶಹನನ್ನು ಸೋಲಿಸಿ ಬಾದಾಮಿಯ ಉತ್ತರಕ್ಕೆ ಸಹ ಕೆಲವು ಶೀಮೆಯನ್ನು ಆಕ್ರಮಿಸಿದರೆಂದು ಇತಿಹಾಸವು ಹೇಳುತ್ತದೆ.

**ಕೋಟೆಗಳು.**—ಬಾದಾಮಿಯ ಉತ್ತರ ದಕ್ಷಿಣ ದಿಕ್ಕುಗಳಲ್ಲಿ ಯೆತ್ತರವಾದ ಗುಡ್ಡಗಳೂ ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಭದ್ರವಾದ ಕೋಟೆಯ ಗೋಡೆಯೂ ಅದರ ಹೊರಗೆ ಕಂದಕವೂ ಇರುತ್ತದೆ. ಇದರ ಹೊರ್ತು ಗುಡ್ಡಗಳ ಮೇಲಿನ ದುರ್ಗ ಕೋಟೆ ಗಳು ಬೇರೆ. ಉತ್ತರದ ಗುಡ್ಡದ ಮೇಲಿನ ಕೋಟೆಗೆ ಬಾವನ್ನ ಬಂಡೆಯ ಕೋಟೆಯಂ ತಲೂ ದಕ್ಷಿಣದ ಕೋಟೆಗೆ ರಣಮಂಡಲವೆಂತಲೂ ಅನ್ನುವರು. ಈ ಕೋಟೆಗಳು ಸುಮಾರು ೩೪೦ ಫೂಟು ಯೆತ್ತರವಾಗಿಯೂ, ವೊಂದರಿಂದೊಂದು ೯೦೦ ಫೂಟು ದೂರಾ ಗಿಯೂ ಇರುತ್ತವೆ. ಉತ್ತರದ ಕೋಟೆಯ ಸುತ್ತಳತೆ ೯೦೦ ಫೂಟು ಇರುತ್ತದೆ. ಇದು ದಕ್ಷಿಣದ ಕೋಟೆಗಿಂತ ಹೆಚ್ಚು ಭದ್ರವಾಗಿ ಕಟ್ಟಿಸಿದ್ದಿರುತ್ತದೆ. ದಕ್ಷಿಣದ ಕೋಟೆಗೆ ಯೆರಡು ಸುತ್ತು ಗೋಡೆಗಳಿವೆ. ಈ ಯೆರಡೂ ಕೋಟೆಗಳು ಬಹುತರ ಕೆಟ್ಟಿಲ್ಲ. ಗೋಡೆಗಳ ಮೇಲಿನ ಭಾಗಗಳನ್ನು ಮಾತ್ರ ಸರಕಾರದವರು ಸನ್ ೧೮೪೦ರಲ್ಲಿ ತೆಗಿಸಿದರು.

ಊರ ಹೊರಗಿನ ಕೆರೆಯ ಸಮೀಪದಲ್ಲಿ ಕೆಲವು ಕ್ರಿಸ್ತೀ ಜನರ ಗೋರಿಗಳಿವೆ. ಅವುಗಳ ಮೇಲೆ ನಿಲ್ಲಿಸಿದ ಕ್ರಾಸಗಳ ಮೇಲೆ ಸತ್ತವರ ಹೆಸರುಗಳನ್ನು ಕನ್ನಡ ಲಿಪಿ ಯಿಂದ ಬರಿದಿದ್ದಾರೆ.

**ಇತಿಹಾಸ.**—ಇಜಿಪ್ತ ದೇಶದ ತಾಲೆಮಿಯೆಂಬ ಗ್ರಂಥಕಾರನು ಕ್ರಿಸ್ತೀ ಶಕದ

೧೫೦ನೇ ವರ್ಷ ಬರಿದ ಗ್ರಂಥದಲ್ಲಿ ಹಿಂದುಸ್ತಾನದ ಕೆಲವು ಪಟ್ಟಣಗಳ ಹೆಸರುಗಳೊಳಗೆ ಬಾದಾವಿಯ ಹೆಸರು ಬರಿದಿದ್ದಾನೆ. ಆದ್ದರಿಂದ ಬಾದಾವಿಯು ಸುಮಾರು ೨೦೦೦ ವರ್ಷ ಗಳ ಪೂರ್ವದಲ್ಲಿ ಇತ್ತೆಂದು ತೋರುತ್ತದೆ. ಇತಿಹಾಸದಿಂದ ಸದ್ಯಕ್ಕೆ ತಿಳಿದಂಥ ಬಾದಾ ವಿಯಲ್ಲಿ ಆಳಿದ ಮೊದಲನೇ ರಾಜ ವಂಶವು ಪಲ್ಲವರದು. ಆದರೆ ಅವರ ಪೂರ್ವದಲ್ಲಿ ಈ ಪಟ್ಟಣದಲ್ಲಿ ಬೇರೆ ರಾಜ ವಂಶಗಳು ಆಳಿರುವ ಸಂಭವವದೆ. ಚಲುಕ್ಯರ ೨ನೇ ಪುಲಿಕೇಶಿಯು ಪಲ್ಲವರ ಕೈಯಿಂದ ಬಾದಾವಿಯನ್ನು ೬ನೇ ಶತಕದ ಆರಂಭದಲ್ಲಿ ಕಸು ಕೊಂಡು ತನ್ನ ರಾಜಧಾನಿಯನ್ನು ಮಾಡಿ ಕೊಂಡನು. ಚಲುಕ್ಯರನ್ನು ಮುರಿದ ರಾಷ್ಟ್ರ ಕೂಟರು ಹಾಳಾದ ಬಳಿಕ ಬಾದಾವಿಯು ದೇವಗಿರಿ ಯಾದವರ ಕೈಶೇರಿತೆಂದು ತೋರು ತ್ತದೆ. ಅವರ ತರುವಾಯ ಈ ಪಟ್ಟಣವು ವಿಜಾಪುರದ ಬಾದಶಹನ ಕೈಯಲ್ಲಿ ಕೆಲವು ನಿಂತ ಬಳಿಕ ವಿಜಯನಗರದವರ ರಾಜ್ಯಕ್ಕೆ ಶೇರಿತು. ವಿಜಯನಗರವು ಹಾಳಾದ ಬಳಿಕ ಬಾದಾವಿಯು ಮತ್ತೆ ವಿಜಾಪುರಕ್ಕೆ ಶೇರಿ ಅಲ್ಲಿಂದ ಸವಣೂರಿನ ನಬಾಬನ ಜಹಾಗೀರಿ ನೊಳಗೆ ಬಂದು, ಅವನಿಂದ ಪೇಶವನಿಗೆ ಕೊಡಲ್ಪಟ್ಟಿತು, ೧೭೪೬. ಪೇಶವನು ಇದನ್ನು ರಾಸ್ತೆಯೆಂಬ ಸರದಾರನಿಗೆ ಕೊಟ್ಟನು, ೧೭೫೭. ಮುಂದೆ ಹೈದರನು ಇದನ್ನು ಕೆಲವು ದಿವಸ ತಕ್ಕೊಂಡಿದ್ದನು; ಆದರೆ ಪೇಶವನು ಸ್ವಲ್ಪ ದಿವಸದೊಳಗೆ ಹಿಂದಕ್ಕೆ ತಕ್ಕೊಂಡು ಮತ್ತೆ ರಾಸ್ತೆಯನಿಗೆ ಕೊಟ್ಟನು. ಬಾಜೀ ರಾಯನ ರಾಜ್ಯ ಹಾಳಾದ ಬಳಿಕ ಸನ್ ೧೮೪೦ರಲ್ಲಿ ೧೨೫ ಜನ ಅರಬರನ್ನು ನಿಜಾಮನ ರಾಜ್ಯದಿಂದ ನರಸಿಂಗರಾಯನೆಂಬ ಕುರುಡ ಮನುಷ್ಯನು ಕರೆಕೊಂಡು ಬಂದು ಬಾದಾವಿಯನ್ನು ಹಿಡುಕೊಂಡಿದ್ದನು. ಆದರೆ ಸ್ವಲ್ಪ ದಿವಸದೊಳಗೆ ಸರಕಾರದ ದಂಡಿನವರು ಕೋಟೆಯನ್ನು ತಕ್ಕೊಂಡು ನರಸಿಂಗ ನನ್ನು ಶರೆ ಹಿಡಿದರು.

ಬಾಗಲಕೋಟೆ.— ವಿಜಾಪುರದ ದಕ್ಷಿಣಕ್ಕೆ ೪೫ ಮೈಲಿನ ಮೇಲೆ ಘಟ ಪ್ರಭೆಯ ದಂಡೆಯಲ್ಲಿ, ಜ. ಸ. (೮೧) ೧೨೮೫೦. ತಾಲೂಕಿನ ಮುಖ್ಯ ಗ್ರಾಮವು; ಮುನಸಿಫ ಕಚೇರಿ, ಆಸಪತ್ರಿ, ೧೪ ಶಾಲೆಗಳು ಉಂಟು. ಹೊಗೆ ಬಂಡಿಯ ಸ್ಟೇಶನ್ನು ಊರಿಂದ ಸುಮಾರು ವೊಂದುವರೆ ಮೈಲಿನ ಮೇಲೆ ಇರುತ್ತದೆ.

ಊರಿನ ಸುತ್ತು ಮುತ್ತು ಅವಾರದ ಗೋಡೆಯು ಈಗ್ಯೂ ತಕ್ಕಮಟ್ಟಿಗೆ ನೆಟ್ಟಗೆ ಇರುತ್ತದೆ. ಊರಿನ ಪಶ್ಚಿಮಕ್ಕೆ ನೆಲ ಕೋಟೆಯು ಬೇರೆಯುಂಟು. ಅದು ೭೮೦ ಫೂಟು ಅಗಲು, ೯೦೦ ಫೂಟು ಉದ್ದ ಇರುತ್ತದೆ. ಕೋಟೆಯ ಸುತ್ತು ಮುತ್ತು ಕಂದ ಕವಿರುತ್ತದೆ. ಕೋಟೆಯೊಳಗೆ ಹೋಗಲಿಕ್ಕೆ ಮೂರು ಅಗಸೆಗಳು ವೊಂದರೊಳಗೊಂದು ಇರುತ್ತವೆ.

ಬಾಗಲಕೋಟೆಗೆ ಹಳೆ ಪೇಟೆ, ಜೈನ ಪೇಟೆ, ಲಿಂಗಾಯತ ಪೇಟೆ, ಯೆಂಬ ಮೂರು ಪೇಟೆಗಳಿರುತ್ತದೆ. ಹಳೆ ಪೇಟೆ ಪುರಾತನದ್ದು; ಜೈನ ಪೇಟೆಯನ್ನು ಸವಣೂರಿನ ನಬಾ ಬನ ಆಳಿಕೆಯಲ್ಲಿ (೧೬೬೪-೧೭೫೫) ಕಟ್ಟಿಸಿದರು; ಲಿಂಗಾಯತರ ಪೇಟೆಯನ್ನು ಸನ್ ೧೭೯೧ರಲ್ಲಿ ಜೈನರಿಗೂ ಲಿಂಗವಂತರಿಗೂ ಜಗಳ ಹುಟ್ಟಿದ್ದರಿಂದ ಲಿಂಗವಂತರು ಕಟ್ಟಿಸಿ

ದರು. ಇವುಗಳ ಹೊರ್ತು ಕೌಲ ಪೇಟೆಯೆಂಬ ಭಾಗವು ಅನಂದರಾವ ರಾಸ್ತೆಯನ ಕಾಲದಲ್ಲಿ ವೊಕ್ಕಲಾಯಿತು; ಗೋಪಾಳಪುರವೆಂಬ ಭಾಗವು ಸನ್ ೧೮೩೫ರಲ್ಲಿ ಉಂಟಾ ಯಿತು; ವೆಂಕಟಪುರವೆಂಬ ಪೇಟೆಯನ್ನು ರಾ. ಬ. ತಿರುಮಲರಾಯರು ಸನ್ ೧೮೫೬ ರಲ್ಲಿ ಸ್ಥಾಪಿಸಿದರು. ಬಾಗಲಕೋಟೆಯಲ್ಲಿ ಧಡೋತಿಯ ವಸ್ತ್ರಗಳೂ, ಬೆಲೆಯುಳ್ಳ ವಸ್ತ್ರಗಳೂ ವೊಳಿತಾಗಿ ಹುಟ್ಟುತ್ತವೆ. ಇಲ್ಲಿ ೫೦೦೦ದಿಂದ ೨ ಲಕ್ಷದ ವರೆಗೆ ಬಂಡವಲು ಳ್ಳಂಥ ವ್ಯಾಪಾರಸ್ಥರು ೨೨೫ ಜನರಿರುತ್ತಾರೆ. ರೇಶಿಮೆ, ವಸ್ತ್ರ, ಬೆಳ್ಳಿ, ಬಂಗಾರ, ಮುತ್ತು, ಕುಸುಂಬಿಯ ಹೂ, ನೀಲಿ, ಕಾಳು, ಅರಳೆ, ಮುಂತಾದವುಗಳ ವ್ಯಾರಾಟವು ಬಹಳವಾಗಿ ನಡಿಯುತ್ತದೆ. ದಕ್ಷಿಣ ಮಹಾರಾಷ್ಟ್ರದಲ್ಲಿ ಹುಬ್ಬಳ್ಳಿಯ ಕೆಳಗೆ ಬಾಗಲಕೋಟೆಯು ವ್ಯಾಪಾರದ ಮುಖ್ಯ ಸ್ಥಳವೆನಿಸುತ್ತದೆ. ಇಲ್ಲಿಯ ಮ್ಯುನಿಸಿಪಾಲಿಟಿಯ ಆದಾಯವು ಸನ್ ೧೮೮೨-೮೩ರಲ್ಲಿ ೧೦೧೭೦ ರೂಪಾಯಿ ಇತ್ತು.

ಬಾಗಲಕೋಟೆಯು ಆರಂಭದಲ್ಲಿ ರಾವಣನ ಬಜಂತ್ರಿಯವರ ಗ್ರಾಮವಿತ್ತೆಂದು ಹೇಳುತ್ತಾರೆ. ಇದರಿಂದ ಈ ಊರು ಬಹು ಪುರಾತನ ಕಾಲದ್ದೆಂದು ತೋರುತ್ತದೆ. ಆದರೆ ಇತಿಹಾಸದಲ್ಲಿ ಪ್ರಸಿದ್ಧವಿಲ್ಲ. ಇದನ್ನು ವೊಬ್ಬ ಮುಸಲ್ಮಾನನು ಕಟ್ಟಿಸಿದನೆಂತಲೂ ಕೆಲವರು ಹೇಳುವರು. ವಿಜಾಪುರದ ಬಾದಶಹನು ತನ್ನ ಮಗಳ ಬಳೆಯ (ಬಾಂಗಡಿಗಳ) ವೆಚ್ಚಕ್ಕಾಗಿ ಬಾಗಲಕೋಟೆಯನ್ನು ಹಚ್ಚಿ ಕೊಟ್ಟದ್ದರಿಂದ ಇದಕ್ಕೆ "ಬಾಂಗಡೀಕೋಟ" ಯೆಂಬ ಹೆಸರು ಬಂತೆಂದು ಕೆಲವರು ಹೇಳುತ್ತಾರೆ. ಈ ಊರು ಬಾದಾವಿ ಸಹಿತವಾಗಿ ವಿಜಯನಗರದವರ ರಾಜ್ಯಕ್ಕೆ ಬಹು ಕಾಲ ಶೇರಿತ್ತೆಂದು ತೋರುತ್ತದೆ. ತರುವಾಯ ಇದು ವಿಜಾಪುರದ ರಾಜ್ಯಕ್ಕೆ ಶೇರಿ ಸವಣೂರಿನ ನಬಾಬನ ವಶಕ್ಕೆ ಹೋಯಿತು, (೧೬೬೪-೧೭೫೫). ಮುಂದೆ ಹೈದರ ಅಲ್ಲಿ, ಪೇಶವೆ, ಇವರ ಕೈಶೇರಿದ ಬಳಿಕ ಕಡೆ ಯಲ್ಲಿ ರಾಸ್ತೆಯನ ಜಹಾಗೀರಿನೊಳಗೆ ಕೂಡಿತು. ರಾಸ್ತೆಯನ ಆಳಿಕೆಯಲ್ಲಿ ಬಾಗಲ ಕೋಟೆಯಲ್ಲಿ ಟಂಕಸಾಲೆ ಇತ್ತು.

ಬಾಗೇವಾಡಿ.— ವಿಜಾಪುರದ ಆಗ್ನೇಯಕ್ಕೆ ೨೫ ಮೈಲಿನ ಮೇಲೆ, ಜ. ಸ. (೮೧) ೪೬೧೫. ತಾಲೂಕಿನ ಮುಖ್ಯ ಗ್ರಾಮವು. ಇಲ್ಲಿ ಗಣಪತಿ, ಸಂಗಮೇಶ್ವರ, ಮಲ್ಲಿಕಾ ರ್ಜುನ, ಬಸವೇಶ್ವರ, ಹನುಮಂತ, ಅನಂತಶಯನ, ಮುಂತಾದ ಗುಡಿಗಳಿವೆ. ಇವುಗ ಳಲ್ಲಿ ಕೆಲವು ಪುರಾತನ ಕಾಲದವಿರುತ್ತದೆ. ಗಣಪತಿಯ ಗುಡಿಯಲ್ಲಿಯೂ ಸಾರಂಗದ ಬಾವಿಯ ಬದಿಯಲ್ಲಿಯೂ ಲಿಪಿಯ ಕಲ್ಲುಗಳಿರುತ್ತವೆ. ಈ ವೂರಲ್ಲಿ ಲಿಂಗವಂತರ ಧರ್ಮ ಗುರುವಾದ ಬಸವೇಶ್ವರನು ಹುಟ್ಟಿದನೆಂದು ಹೇಳುತ್ತಾರೆ. ಅದರಿಂದ ಇದಕ್ಕೆ ಬಸವನ ಬಾಗೇವಾಡಿ ಯೆಂದೆನ್ನುವರು.

ಬಾಗೇವಾಡಿಗೆ ಪೂರ್ವದಲ್ಲಿ ಭೋಗವತಿ ಯೆಂಬ ಹೆಸರಿತ್ತು. ಇಲ್ಲಿ ಚಾಲುಕ್ಯರ ಆಳಿಕೆಯಲ್ಲಿ ವೊಬ್ಬ ಮಾಂಡಲಿಕನಿರುತ್ತಿದ್ದನು.

ಬಸರ್ಕೋಡ.— ಮುದ್ದೇಬಿಹಾಳದ ವಾಯುವ್ಯಕ್ಕೆ ೬ ಮೈಲಿನ ಮೇಲೆ, ಜ. ಸ.

(೮೧) ೧೪೮೪. ಇಲ್ಲಿ ವೊಂದು ಜೈನರ ಬಸ್ತಿ, ಮಲ್ಲಿಕಾರ್ಜುನ, ಮೂರ್ಲಿಂಗ, ಯೆಂಬ ಗುಡಿಗಳು ಇರುತ್ತವೆ; ಯೆರಡು ಲಿಪಿಯ ಕಲ್ಲುಗಳಿವೆ.

ಬೇಲೂರು. — ಬಾದಾವಿಯ ಆಗ್ನೇಯಕ್ಕೆ ೯ ವೈಲಿನ ಮೇಲೆ, ಜ. ಸ. (೮೧) ೧೫೯೫. ಕೋಟೆಯಲ್ಲಿ ನಾರಾಯಣನ ಗುಡಿಯೊಳಗೂ, ಹನುಮಂತನ ಗುಡಿಯೊಳಗೂ ೧೦ನೇ ೧೧ನೇ ಶತಕಗಳ ಚಾಲುಕ್ಯರ ಲಿಪಿಗಳಿವೆ. ಈ ಊರಲ್ಲಿ ಉರುಟು ಬಟ್ಟಿಗಳೂ, ಜೋಡುಗಳೂ, ಮಣ್ಣಿನ ಪಾತ್ರೆಗಳೂ ಆಗುತ್ತವೆ.

ಬೇವೂರು. — ಬಾಗಲಕೋಟೆಯ ಪೂರ್ವಕ್ಕೆ ೧೦ ವೈಲಿನ ಮೇಲೆ, ಜ. ಸ. (೮೧) ೧೭೯೩. ಇಲ್ಲಿ ಮೂರು ಹಳೆ ಗುಡಿಗಳಿವೆ. ರಾಮೇಶ್ವರನ ಗುಡಿಯಲ್ಲಿ ೧೨ನೇ ಶತಕದ ಲಿಪಿಯುಂಟು.

ಭೈರನಮಟ್ಟಿ. — ಬಾಗಲಕೋಟೆಯ ಪೂರ್ವಕ್ಕೆ ೬ ವೈಲಿನ ಮೇಲೆ. ಇಲ್ಲಿ ಚಾಲುಕ್ಯರ ಕಾಲದ ೧೦ನೇ ೧೧ನೇ ಶತಕದ ಹಳೆ ಲಿಪಿಗಳು ಯೆರಡು ಇರುತ್ತವೆ.

ಬೀಳಗಿ. — ಬಾಗಲಕೋಟೆಯ ವಾಯುವ್ಯಕ್ಕೆ ೧೨ ವೈಲಿನ ಮೇಲೆ, ಜ. ಸ. (೮೧) ೩೪೫೪. ಈ ಊರಲ್ಲಿ ಸುಮಾರು ೩೦೦ ವರ್ಷಗಳ ಹಿಂದೆ ಕಟ್ಟಿಸಿದಂಥ ಗುಡಿಗಳೂ ಜಲಾಶಯಗಳೂ ಇರುತ್ತವೆ. ಊರ ಹೊರಗೆ ಆರೆತ್ತಿನ ಬಾವಿ ಯೆಂಬ ಬಾವಿಯು ೧೫೦ ಫೂಟು ಉದ್ದ, ೭೫ ಫೂಟು ಅಗಲು ಇರುತ್ತದೆ. ಈ ಬಾವಿಯೊಳಗೆ ಈಶ್ವರನ ಗುಡಿಯುಂಟು. ಅದರಲ್ಲಿ ಕನ್ನಡ, ಮರಾಠಿ, ಸಂಸ್ಕೃತ, ಪರ್ಶಿಯನ್ ಲಿಪಿಗಳಿವೆ. ಇವುಗಳಿಂದ ಈ ಬಾವಿಯನ್ನು ಮಾಧವಜೀ ವಿಸಾಜಿ ಯೆಂಬವನು ಸನ್ ೧೭೦೮ರಲ್ಲಿ ಕಟ್ಟಿಸಿದನೆಂದು, ಬರಿದದೆ. ಊರೊಳಗೆ ಅರಸನ ಬಾವಿಯಲ್ಲಿಯೂ ಇಂಥಾ ಲಿಪಿಗಳಿವೆ. ಊರ ಹೊರಗೆ ವೊಂದು ವೈಲಿನ ಮೇಲೆ ಸಿದ್ಧೇಶ್ವರನ ಗುಡಿಯುಂಟು. ಅದರ ಬಳಿಯಲ್ಲಿಯ ಹೊಂಡದಲ್ಲಿ ಗುಡ್ಡದೊಳಗಿಂದ ನೀರು ಹರಿದು ಬಂದು ಬೀಳುತ್ತದೆ. ಸಿದ್ಧೇಶ್ವರನ ಮುಂದಿನ ದೀಪಮಾಲೆಯ ಕಂಬವು ೩೦ ಫೂಟು ಉದ್ದ ಅಖಂಡ ಕಲ್ಲಿನಿಂದ ಮಾಡಿದ್ದಿರುತ್ತದೆ. ಅದರ ಬುಡದಲ್ಲಿ ಸನ್ ೧೫೯೫ನೇ ವರ್ಷದ ಲಿಪಿಯುಂಟು.

ವಿಜಾಪುರ. — ಉತ್ತರ ಅಕ್ಷಾಂಶ ೧೬°, ೫೦′, ಪೂರ್ವ ರೇಖಾಂಶ ೭೫°, ೪೮′. ಇದು ಸಮುದ್ರದ ಸಪಾಟಿಯಿಂದ ೧೯೫೦ ಫೂಟು ಯೆತ್ತರವಿರುತ್ತದೆ. ಕೋಟೆಯ ಸುತ್ತಳತಿಯು ಸುಮಾರು ೬¼ ವೈಲು, ಒಳಗಿನ ಕ್ಷೇತ್ರವು ೧೬೦೦ ಯೆಕರು, ಅಥವಾ ಎರಡೂವರೆ ಚಚ್ಚೌಕು ವೈಲು, ಪರಮಾವಧಿ ಉದ್ದಳತೆ ೨¼ ವೈಲು, ಪರಮಾವಧಿ ಅಗಲು ೧¾ ವೈಲು. ಜನಸಂಖ್ಯೆ (೮೧) ೧೦೧೨೩.

ಕೋಟೆಯೂ ಕೊತ್ತಳಗಳೂ. — ಪಟ್ಟಣದ ಸುತ್ತಲಿನ ಕೋಟೆಯು ಅನಿಯಮಿತವಾದ ದೀರ್ಘವರ್ತುಳಾಕಾರವಿದೆ. ಅದರ ಹೊರ ವೈಯಲ್ಲಿ ೪೦ರಿಂದ ೫೦ ಫೂಟಿನ ವರೆಗೆ ಅಗಲಾದ ವೊಣ ಕಂದಕವಿದೆ. ಗೋಡೆಯ ಯೆತ್ತರವು ೩೦ರಿಂದ ೫೦ ಫೂಟಿನ ವರೆಗೆ; ಪಿಂಡವು ಸರಾಸರೀ ಮಾನದಿಂದ ೨೦ ಫೂಟು ಇರುತ್ತದೆಂದು ಹೇಳಬಹುದು; ಆದರೆ ಕೆಲ ಕೆಲವು ಕಡೆಯಲ್ಲಿ ಇದಕ್ಕೂ ಬಹಳ ಹೆಚ್ಚು ಇರುತ್ತದೆ. ಅಂದರೆ

ಯೆರಡು ಭದ್ರವಾದ ಕಲ್ಲಿನ ಗೋಡೆಗಳನ್ನು ೨೦ರಿಂದ ೩೦ ಫೂಟಿನ ವರೆಗೆ ನಡುವೆ ಅಂತರವನ್ನಿಟ್ಟು, ವೊಂದರ ಹಿಂದೊಂದು ಕಟ್ಟಿ, ಯೆರಡೂ ಗೋಡೆಗಳ ನಡುವೆ ಮಣ್ಣನ್ನು ವೊಳಿತಾಗಿ ಜಡಿದು ತುಂಬಿ ಕೋಟೆಯನ್ನು ಮಾಡಿದ್ದಾರೆ. ಈ ಕೋಟೆಯನ್ನು ೧ನೇ ಅಲ್ಲೀ ಅದಿಲ್‌ಶಹನು ಸನ್ ೧೫೬೫ರಲ್ಲಿ ಆರಂಭ ಮಾಡಿ ಯೆರಡೂವರೆ ವರ್ಷಗಳಲ್ಲಿ ಮುಗಿಸಿದನೆಂದು ಹೇಳುತ್ತಾರೆ. ಎರಡು ಕೊತ್ತಳಗಳ ನಡುವಿನ ಗೋಡೆಯನ್ನು ವೊಂದು ಕೊತ್ತಳ ಸಹಿತವಾಗಿ ವೊಬ್ಬೊಬ್ಬ ಸರದಾರನ ಕೈಯಿಂದ ಬಾದಶಹನು ಕಟ್ಟಿಸಿದನೆಂತಲೂ ತಿಳಿದದೆ. ೫ ಅಗಸೆಗಳ ಯೆಡ ಬಲಗಳಲ್ಲಿ ವೊಂದೊಂದರಂತೆ ೧೦ ಕೊತ್ತಳಗಳಲ್ಲದೆ ಕೋಟೆಗೆ ವೊಟ್ಟಿಗೆ ೯೬ ಕೊತ್ತಳಗಳಿವೆ. ಎಲ್ಲ ಕೊತ್ತಳಗಳು ಅರ್ಧವರ್ತುಳಾಕಾರವಾಗಿ ಇರುತ್ತವೆ; ಅವುಗಳ ವ್ಯಾಸವು ೬೦ ಫೂಟಗಿಂತ ಕಡಿಮೆ ಇಲ್ಲ. ಇವುಗಳಲ್ಲಿ ಶೆರ್ಝಿ, ಲಾಂಡಾ ಕಸಾಬ, ಫಿರಂಗಿ, ಯೆಂಬ ಮೂರು ಕೊತ್ತಳಗಳು ಯೆಲ್ಲಕ್ಕೂ ದೊಡ್ಡವೂ ಹೆಚ್ಚು ಬಲವುಳ್ಳವೂ ಇರುತ್ತವೆ. ಶೆರ್ಝೀ ಕೊತ್ತಳದ ಮೇಲೆ "ಮಲಿಖ ಈ ಮೈದಾನ" (ಬೈಲಿನ ಅರಸು) ಯೆಂಬ ಅತಿ ವಿಖ್ಯಾತವಾದ ತೋಫು ಇರುತ್ತದೆ. ಇದರ ಬಣ್ಣ ಹಸುರು, ಬಾರಿಸಿದರೆ ಗಂಟೆಯ ಹಾಗೆ ನಾದವಾಗುತ್ತದೆ. ತೋಫಿನ ಉದ್ದಳತಿ ೧೪ ಫೂಟು ೩½ ಇಂಚು, ಸರಾಸರೀ ವ್ಯಾಸ ೪ ಫೂಟು ೪ ಇಂಚು, ವೊಳ ಉಸುಲಿನ ಉದ್ದಳತೆ ೧೨ ಫೂಟು ೧೦ ಇಂಚು, ಮದ್ದು ಜಡಿಯುವ ಕೊಠಡಿಯ ಉದ್ದಳತೆ ೫ ಫೂಟು ೭ ಇಂಚು, ಕೊಠಡಿಯ ವ್ಯಾಸ ೧ ಫೂಟು ೩ ಇಂಚು, ಅದರ ಮುಂಭಾಗದ ವೊಳ ಉಸುಲಿನ ವ್ಯಾಸ ೨ ಫೂಟು ೪ ಇಂಚು, ಕಿವಿಯ ವ್ಯಾಸ ¾ ಇಂಚು. ಈ ತೋಫಿನ ತೂಕವು ಸುಮಾರು ೯೧೦ ಮಣ ಇರುತ್ತದೆ. ಇದರ ಬಾಯಿಯನ್ನು ಸಿಂಹನ ಬಾಯಿಯ ಆಕಾರವಾಗಿ ಮಾಡಿದ್ದಾರೆ. ಈ ತೋಫಿನ ಮೇಲೆ ಅರಬೀ ಲಿಪಿಯನ್ನು ಕೊರಿದಿದ್ದಾರೆ. ಅದರಲ್ಲಿ ಮಹಮ್ಮದ ಬಿನ್ನ ಹಸನ್ ರೂಮಿ ಯೆಂಬ ಶಿಲ್ಪಿ ಇದನ್ನು ಅಹಮ್ಮದ ನಗರದಲ್ಲಿ ಸನ್ ೧೫೪೯ರಲ್ಲಿ ಹೊಯ್ದನೆಂದು ಬರಿದದೆ. ಔರಂಗಜೇಬನು ಸನ್ ೧೬೮೬ರಲ್ಲಿ ವಿಜಾಪುರವನ್ನು ತಕ್ಕೊಂಡ ಬಳಿಕ ತನ್ನದೊಂದು ಫಾರ್ಸಿ ಲಿಪಿಯನ್ನು ಕೊರಿಸಿದ್ದಾನೆ. ಈ ತೋಫು ಅಹಮ್ಮದನಗರದಿಂದ ವಿಜಾಪುರಕ್ಕೆ ಹ್ಯಾಗೆ ಬಂತೆಂಬುವದು ಚನ್ನಾಗಿ ತಿಳಿದಿಲ್ಲ; ಆದರೂ ಸನ್ ೧೬೩೪ರಲ್ಲಿ ಇದು ವಿಜಾಪುರದಲ್ಲಿ ಇತ್ತೆಂದು ತಿಳಿದದೆ. ಶೆರ್ಝೀ ಬುರುಜಿನ ಮೇಲೆ ಮದ್ದಿನ ಮನೆಯೂ ವೊಂದು ಹೊಂಡವೂ ಉಂಟು.

ಲಾಂಡಾ ಕಸಾಬೆಂಬ ಬುರುಜು ದಕ್ಷಿಣ ಮೋರೆಯಲ್ಲಿ ಫತ್ತೇದರೋಜಾ ಯೆಂಬ ಅಗಸೆಯ ಬಳಿಯಲ್ಲಿ ಇರುತ್ತದೆ. ಈ ಬುರುಜಿನ ಮೇಲೆ ಮಲಿಖ ಈ ಮೈದಾನಕ್ಕಿಂತಲೂ ದೊಡ್ಡ ತೋಫು ಇರುತ್ತದೆ. ಈ ಬುರುಜಿನ ಮೇಲೆ ಜನರು ಹೋಗುವದಿಲ್ಲಾದ ಕಾರಣ ಈ ತೋಫು ಪ್ರಸಿದ್ಧವಿಲ್ಲ. ಈ ತೋಫಿನ ಅಳತೆ ಮಾಪುಗಳು ಹ್ಯಾಗಂದರೆ— ಉದ್ದ ೨೧ ಫೂಟು ೭ ಇಂಚು, ಹಿಂದುದಿಯಲ್ಲಿ ಹೊರಸುತ್ತಿನ ವ್ಯಾಸ ೪ ಫೂಟು ೪ ಇಂಚು, ಬಾಯಿಯ ವ್ಯಾಸ ೪ ಫೂಟು ೫ ಇಂಚು, ವೊಳಮೈ ಉದ್ದಳತೆ ೧೮ ಫೂಟು

೭ ಇಂಚು, ತೂಕ ೯೮೦ ಮಣ, ಇತ್ಯಾದಿ. ಔರಂಗಜೇಬನು ೧೬೮೬ರಲ್ಲಿ ವಿಜಾಪುರವನ್ನು ತಕ್ಕೊಂಡಾಗ ಈ ಬುರುಜಿಗೆ ತೋಫುಗಳನ್ನು ಹೊಡಿದನು. ಆದರೆ ಬುರುಜಿಗೆ ಯೆಷ್ಟು ಮಾತ್ರವೂ ಧಕ್ಕಿ ಆಗದೆ, ಅದರ ಬಳಿಯಲ್ಲಿ ಕೋಟೆಯ ಗೋಡೆ ಮಾತ್ರ ಬಿತ್ತು.

ಫತ್ತೆ್ದರೋಜಾದ ಪೂರ್ವಕ್ಕೆ ಫಿರಂಗೀ ಬುರುಜು ಇರುತ್ತದೆ. ಒಬ್ಬ ಪೋರ್ತುಗೀಸ ಸರದಾರನು ಬಹುತರ ಮುಸಲ್ಮಾನನಾಗಿ ಯೋಗ್ರೀಸಖಾನನೆಂಬ ಹೆಸರು ಧರಿಸಿ, ಅಲ್ಲೀ ಶಹನ ದಂಡಿನಲ್ಲಿ ಸರದಾರನಾದನು, ೧೫೭೭. ಅವನು ಈ ಕೊತ್ತಳವನ್ನು ಕಟ್ಟಿಸಿದರಿಂದ ಇದಕ್ಕೆ ಫಿರಂಗೀ ಬುರುಜೆನ್ನುವರು. ಇದು ವೊಳ ಮೈಯಲ್ಲಿ ಪೊಳ್ಳಾಗಿಯೂ ಬಹು ಭದ್ರವಾಗಿಯೂ ಕಟ್ಟಿದ್ದಿರುತ್ತದೆ.

ಕೋಟೆಗೆ ೫ ಅಗಸೆಗಳಿವೆ. ಮಕ್ಕಾದರೋಜಾ ಪಶ್ಚಿಮಕ್ಕೆ, ಶಹಾಪೂರದರೋಜಾ ವಾಯವ್ಯಕ್ಕೆ, ಬಾಮನೀದರೋಜಾ ಉತ್ತರಕ್ಕೆ, ಅಲ್ಲಾಪುರದರೋಜಾ ಪೂರ್ವಕ್ಕೆ, ಮನಗೋಳೀದರೋಜಾ ದಕ್ಷಿಣಕ್ಕೆ. ಮಕ್ಕಾದರೋಜಾ ಯೆಂಬ ಅಗಸೆಯು ಸುಮಾರು ೧೦೦ ವರ್ಷದ ಹಿಂದೆ ಇಕ್ಕಿದ್ದು ಈಗ್ಯೂ ಹಾಗೇ ಇರುತ್ತದೆ. ಆ ಅಗಸೆಯ ವೊಳ ಮೈಯಲ್ಲಿ ಈಗ ಸರಕಾರೀ ಕಚೇರಿಗಳನ್ನು ಮಾಡಿದ್ದಾರೆ. ಔರಂಗಜೇಬನು ಮನಗೋಳೀ ಅಗಸೆಯಿಂದ ಪಟ್ಟಣವನ್ನು ಜಯಶಾಲಿಯಾಗಿ ಪ್ರವೇಶಿಸಿದ ಕಾರಣ ಅದಕ್ಕೆ ಫತ್ತೇದರೋಜಾ ಯೆಂಬ ಹೆಸರಿಟ್ಟದ್ದಾನೆ. ಈ ೫ ಅಗಸೆಗಳಲ್ಲದೆ ವೊಳಗಡೆಯಲ್ಲಿ ಪೂರ್ವಕ್ಕೂ ಪಶ್ಚಿಮಕ್ಕೂ ಯೆರಡು ಹೊಸ ಅಗಸೆಗಳನ್ನು ಯೆದುರು ಬದುರಾಗಿ ಮಾಡಿದ್ದಾರೆ. ಕೋಟೆಯ ಗೋಡೆ, ಕೊತ್ತಳಗಳು, ಬಹಳವಾಗಿ ಕೆಟ್ಟಿಲ್ಲ. ಅಗಸೆಗಳೆಲ್ಲ ಬಹು ಭದ್ರವಾಗಿ ಕಟ್ಟಲ್ಪಟ್ಟವೆ. ಮಕ್ಕಾ ಅಗಸೆಯನ್ನು ಯೆಲ್ಲಕ್ಕೂ ಹೆಚ್ಚು ಬಲವಾದ್ದಾಗಿಯೂ ಭವ್ಯವಾಗಿಯೂ ಕಟ್ಟಿದ್ದಾರೆ. ಇದಕ್ಕೆ ಅಗಸೆ ಯೆನ್ನುವದಕ್ಕೆ ಬದಲಾಗಿ ಸ್ವತಂತ್ರವಾದದ್ದೊಂದು ಸಣ್ಣ ಕೋಟೆಯನ್ನ ಬಹುದು. ಇದನ್ನು ಪೇಶವನ ಅಪ್ಪಣೆಯಿಂದ ಇಕ್ಕಿಸಿದ್ದಾರೆಂದು ಹೇಳುತ್ತಾರೆ. ಈ ಅಗಸೆಯಲ್ಲಿ ಈಗ ಮಾಮಲೇದಾರ ಕಚೇರಿ, ಮುನಸೀಫ ಕಚೇರಿ, ಇರುತ್ತವೆ.

ಶಾಖಾನಗರಗಳು.— ವಿಜಾಪುರದ ಕೋಟೆಯ ಹೊರಗೆ ಯೆಂಟು ಶಾಖಾನಗರಗಳಿರುತ್ತವೆ. ಅವುಗಳ ವಿವರ— ಖುದಾನಪುರ, ಫಕೀರಾಬಾದ, ವಾಯವ್ಯದಲ್ಲಿ ಕೋಟೆಯ ಸಮೀಪಕ್ಕೆ; ಜೋರಾಪುರ ಪಶ್ಚಿಮಕ್ಕೆ; ಇಭ್ರಾಹಿಮಪುರ ದಕ್ಷಿಣಕ್ಕೆ; ಶಹಾಪುರ ಅಥವಾ ಪೀರ ಅಮೀನನ ದರ್ಗಾ ವಾಯವ್ಯಕ್ಕೆ ಕೋಟೆಯಿಂದ ಯೆರಡು ಮೈಲಿನ ಮೇಲೆ; ತೊರವಿ ಪಶ್ಚಿಮಕ್ಕೆ ನಾಲ್ಕು ಮೈಲಿನ ಮೇಲೆ; ಅಲ್ಲಾಪುರ ಪೂರ್ವಕ್ಕೆ ವೊಂದುವರೆ ಮೈಲಿನ ಮೇಲೆ; ಐನಾಪುರ ಪೂರ್ವಕ್ಕೆ ಎರಡೂವರೆ ಮೈಲಿನ ಮೇಲೆ. ರೇಲ್ವೇ ಸ್ಟೇಶನ್ನು ಕೋಟೆಯ ಪೂರ್ವಕ್ಕೆ ಸುಮಾರು ೫೦೦ ಫೂಟಿನ ಅಂತರದಲ್ಲಿ ಇರುತ್ತದೆ.

ಕೋಟೆಯೊಳಗಿನ ವಿಭಾಗಗಳು.— ಪಟ್ಟಣವು ತುಂಬಿದಾಗ ಇದರಲ್ಲಿ ಅರಕಿಲ್ಲೆ ಹೊರ್ತಾಗಿ ೩೪ ಪೇಟೆಗಳಿದ್ದವು. ಅವುಗಳಲ್ಲಿ ೧೦ ಪೇಟೆಗಳು ಈಗ ಚನ್ನಾಗಿ ತಿಳಿಯುವದಿಲ್ಲ; ಉಳಿದ ೨೪ ಪೇಟೆಗಳ ಹೆಸರುಗಳನ್ನು ಮ್ಯುನಿಸಿಪಾಲಿಟಿಯವರು

ಈಗ್ಯೂ ವಹಿವಾಟಸುತ್ತಾರೆ. ಇವುಗಳಲ್ಲಿ ವಾಯುವ್ಯದಲ್ಲಿ ಬಾರಾಖುದಾನ ಬಾಜಾರು, ಪಶ್ಚಿಮದಲ್ಲಿ ಮಹಮೂದ ಖಾನನ ಬಾಜಾರು, ಆನೇ ಖೆಂಡೀ ಬಾಜಾರು ಮಧ್ಯ ಭಾಗದ ಪೂರ್ವಕ್ಕೆ, ಜಾಮಾ ಮಶೀದೀ ಪೇಟೆ ಪೂರ್ವಕ್ಕೆ, ಶಹಾಪೇಟೆ ಈಶಾನ್ಯಕ್ಕೆ, ಇವೈದು ಮುಖ್ಯವಿರುತ್ತವೆ. ಬಾರಾಖುದಾನ ಬಾಜಾರಿನಲ್ಲಿ ಜನರ ವಸ್ತಿಯು ವೊಳಿತಾಗಿ ಇರುತ್ತದೆ. ಮಹಮೂದ ಖಾನನ ಬಾಜಾರಿನಲ್ಲಿ ಅಂಗಡಿಗಳಿವೆ, ಸಂತೆಯಲ್ಲಿ ವ್ಯಾಪಾರ ನಡಿಯುತ್ತದೆ. ಆನೇ ಖೆಂಡೀ ಬಾಜಾರಿನಲ್ಲಿ ಪೂರ್ವ ಕಾಲದ ಸುಂದರವಾದ ಮನೆಗಳೂ ವೊಂದೆರಡು ಮಶೀದಿಗಳೂ ಇರುತ್ತವೆ; ಪೂರ್ವಕಾಲದಲ್ಲಿ ಆನೆಗಳ ಪಾಗಾ ಈ ಬಾಜಾರಿನಲ್ಲಿ ಇತ್ತು. ಜಾಮಾ ಮಶೀದೀ ಪೇಟೆಯಲ್ಲಿ ಈ ಹೆಸರಿನ ಮಶೀದಿ ಇದ್ದದ್ದಲ್ಲದೆ ಪೂರ್ವಕಾಲದ ದೊಡ್ಡ ದೊಡ್ಡ ಮನೆಗಳು ಇರುತ್ತವೆ; ಈ ಪೇಟೆಯಲ್ಲಿ ಮುಖ್ಯವಾಗಿ ಮುಸಲ್ಮಾನರ ವಸ್ತಿಯುಂಟು. ಶಹಾಪೇಟೆಯಲ್ಲಿ ಪೂರ್ವಕಾಲದ ಉಪ್ಪಾರರ ವಂಶದವರು ವಾಸಿಸುತ್ತಾರೆ. ಆದ್ದರಿಂದ ಇದಕ್ಕೆ ಗೌಂಡೀ ಪೇಟೆ ಯೆಂತಲೂ ಅನ್ನುವರು. ಉಳಿದ ಪೇಟೆಗಳಲ್ಲಿ ಜನರ ವಸ್ತಿಯು ಬಹು ಕಡಿಮೆಯುಂಟು; ಅವುಗಳಲ್ಲಿ ಕೆಲವು ಪೂರಾ ಹಾಳಾಗಿವೆ ಯೆಂದು ಹೇಳ ಬಹುದು.

ಜಲಾಶಯಗಳು. — ವಿಜಾಪುರದೊಳಗೆ ಹನ್ನೆರಡು ಕಾಲವೂ ತುಂಬಿರುವಂಥ ಬಾವಿಗಳು ಹಲವುಂಟು. ಆದರೂ ಪಟ್ಟಣವು ತುಂಬಿದಾಗ ಅವುಗಳ ನೀರು ಸಾಕಾಗುತ್ತಿಲ್ಲೆಂಬುವದು ಮೇಲೇ ಕಾಣುತ್ತದೆ. ಆದ್ದರಿಂದ ಕೋಟೆಯ ಹೊರಗೆ ಹೊಸ ಜಲಾಶಯಗಳನ್ನು ಕಟ್ಟಿಸಿ ನಳದಿಂದ ಪಟ್ಟಣದೊಳಗೆ ನೀರು ತಂದಿದ್ದರು. ೧ನೇ ಅಲ್ಲೀ ಶಹನು ಶಹಾಪುರದಲ್ಲಿ ಕಟ್ಟಿಸಿದ ಚಾಂದಬಾವಡಿಯೆಂಬ ಬಾವಿಯು ಹೆಸರಾಗಿರುತ್ತದೆ. ಈ ಬಾವಿಯಿಂದ ಪಟ್ಟಣದೊಳಗೆ ನಳ ತಂದಿದ್ದಾರೆ. ತೊರವಿಯ ಬಳಿಯಲ್ಲಿ ವೊಂದು ಮೈಲಿನ ಮೇಲೆ ಇರುವದೊಂದು ಹಳ್ಳಕ್ಕೆ ವೊಡ್ಡು ಹಾಕಿ ದೊಡ್ಡ ಕೆರೆ ಮಾಡಿ ಅಲ್ಲಿಂದ ತೊರವಿಯ ವರೆಗೆ ದೊಡ್ಡದೊಂದು ಕಾವಲಿಯನ್ನು ಮಾಡಿದ್ದಾರೆ. ಮುಂದೆ ನೆಲದೊಳಗಿಂದಲೇ ನಳದಂತೆ ದೊಡ್ಡ ಕಾವಲಿಯನ್ನು ತೊರವಿಯ ಊರ ಕೆಳಗಿಂದ ಕೊರಿದು ಮುಂದೆ ವೊಂದು ಮೈಲಿನ ಮೇಲೆ ಇರುವ ಆಫಜುಲ್‌ಪುರದ ವರೆಗೆ ವೊಯಿದು ಅಲ್ಲಿ ವೊಂದು ಕೆರೆ ಕಟ್ಟಿ ಅದರೊಳಗೆ ನಳದ ನೀರು ಬಿಟ್ಟಿದ್ದರೆಂದು ತೋರುತ್ತದೆ. ತೊರವಿಯ ಪಶ್ಚಿಮಕ್ಕೂ ದಕ್ಷಿಣಕ್ಕೂ ಗುಡ್ಡಗಳ ಝುರಿಗಳನ್ನು ಕಟ್ಟಿ ಬೇರೆ ಯೆರಡು ಸಣ್ಣ ಕೆರೆಗಳನ್ನು ಮಾಡಿ, ಅಲ್ಲಿಂದಲೂ ಆಫಜುಲ್‌ಪುರದ ಕೆರೆಗೆ ನಳದೊಳಗಿಂದ ನೀರು ವೊಯಿದಿದ್ದರೆಂದು ತೋರುತ್ತದೆ. ಆಫಜುಲ್‌ಪುರದ ಕೆರೆಯ ವೊಡ್ಡು ೬೦ ಫೂಟು ಯೆತ್ತರವಿರುತ್ತದೆ. ಆದ್ದರಿಂದ ಆ ಕೆರೆಯು ಬಹು ದೊಡ್ಡದಾಗಿತ್ತೆಂಬದಕ್ಕೆ ಸಂದೇಹವಿಲ್ಲ. ಈ ವೊಡ್ಡು ಈಗ ಯೆರಡು ಮೂರು ಕಡೆಯಲ್ಲಿ ವೊಡಿದದೆ. ಈ ಪ್ರಕಾರ ಸುತ್ತು ಮುತ್ತು ದೊರಿದಷ್ಟು ನೀರು ಆಫಜುಲ್‌ಪುರದ ಕೆರೆಯಲ್ಲಿ ಸಂಗ್ರಹಿಸಿ, ಅಲ್ಲಿಂದ ಬಹು ದೊಡ್ಡದಾದ ಕಾವಲಿಯನ್ನು ಅಥವಾ ನಳವನ್ನು ನೆಲದ ಕೆಳಗಿಂದ ಕೊರಿದು ಪಟ್ಟಣದೊಳಗೆ ತಂದಿದ್ದಾರೆ. ಆರಂಭದಲ್ಲಿ ಈ ನಳದ ಬಾಯಿಯು ೮ ಫೂಟು ಅಗಲು, ೬ ಫೂಟು ಯೆತ್ತರ ಇರುತ್ತದೆ.

ಇದನ್ನು ಗರಸಿನ ನೆಲದೊಳಗಿಂದ ಕೊರಿದು ಮಾಡಿದ್ದಾರೆ; ಪೊಳ್ಳು ನೆಲ ಹತ್ತಿದಲ್ಲಿ ಇಟ್ಟಂಗಿ ಗಚ್ಚುಗಳಿಂದ ಭದ್ರವಾಗಿ ಕಟ್ಟಿದ್ದಾರೆ. ಈ ನಳವು ಕೆಲ ಕೆಲವು ಕಡೆಯಲ್ಲಿ ನೆಲದೊಳಗೆ ೬೦ ಫೂಟಿನ ಕೆಳಗೆ ಇರುತ್ತದೆ. ಇಂಥಾ ಅಗಾಧವಾದ ಇಕ್ಕಟ್ಟಿನ ಕೃತ್ಯಗಳನ್ನು ಬೇರೆ ಕಡೆಯಲ್ಲಿ ಕಾಣುವದು ಅಪರೂಪವು. ಈ ನಳಕ್ಕೆ ೧೨೦ ಫೂಟಿನ ಅಂತರದಿಂದ ವೊಂದೊಂದು ಉಶ್ವಾಸವನ್ನು ಮಾಡಿದ್ದಾರೆ. ಆಫಜುಲ್‌ಪುರದಿಂದ ಇಭ್ರಾಹೀಮರೋಝಾದ ವರೆಗೂ ಈ ಉಶ್ವಾಸಗಳು ಈಗ್ಯೂ ಇರುತ್ತವೆ. ಈ ನಳದ ನೀರು ಪಟ್ಟಣದೊಳಗೆ ಯೆಲ್ಲ ಕಡೆಯಲ್ಲಿ ತಿರುಗುತ್ತಿತ್ತು. ಈಗ ಆಫಜುಲ್‌ಪುರದ ಕೆರೆಯು ಪೂರಾ ವೊಣಗಿದಾಗ್ಯೂ, ಈ ಕಾವಲಿಯಿಂದ ಪಟ್ಟಣದೊಳಗೆ ನೀರು ಬಂದು ಆಸಾರ ಮಾಹಾಲಿನ ಹೊಂಡದಲ್ಲಿಯೂ ಅರಕಿಲ್ಲೆಯ ಕಂದಕದಲ್ಲಿಯೂ ಬೀಳುತ್ತದೆ. ನೀರು ಯೆಲ್ಲಿಂದ ಬರುತ್ತದೆಂಬುವದು ತಿಳಿದಿಲ್ಲ. ನಳದೊಳಗೆ ಶೇರಿದ ಶಲೆಗಳಿಂದ ಬರುತ್ತಿರಬಹುದೆಂದು ಕೆಲವರು ತರ್ಕಿಸುತ್ತಾರೆ. ಪಟ್ಟಣವು ಬೆಳೆಯುತ್ತ ಹೋದ ಹಾಗೆ ತೊರವೆಯ ನೀರು ಸಾಕಾಗಲಿಲ್ಲೆಂದು ತೋರುತ್ತದೆ. ಆದ್ದರಿಂದ ಪಟ್ಟಣದ ದಕ್ಷಿಣಕ್ಕಿರುವ ಗುಡ್ಡಗಳಲ್ಲಿ ಅನುಕೂಲವಾದ ಕಂದರವನ್ನು ನೋಡಿ ಕೊಂಡು ಅದಕ್ಕೆ ಸುಮಾರು ವೊಂದು ಮೈಲುದ್ದ ವೊಡ್ಡು ಹಾಕಿದ್ದಾರೆ. ಈ ವೊಡ್ಡಿನಿಂದ ಸುಮಾರು ೫೦೦ ಯೆಕರಿನ ಪಾತ್ರೆಯುಳ್ಳ ದೊಡ್ಡ ಕೆರೆಯುಂಟಾಗಿತ್ತೆಂದು ತೋರುತ್ತದೆ. ಈ ಕೆರೆಯು ಯೆತ್ತರದ ಪ್ರದೇಶದಲ್ಲಿ ಇರುವ ಕಾರಣ ಪಟ್ಟಣದೊಳಗೆ ಇದರ ನೀರನ್ನು ನೆಲದಿಂದ ೩೦ ಫೂಟು ಮೇಲಕ್ಕೆ ಯೇರಿಸಿದ್ದರ ಕುರುಹುಗಳು ಇರುತ್ತವೆ. ಈ ಕೆರೆಯ ನೀರನ್ನು ೧೫ ಇಂಚಿನ ಕೊಳಿವೆಯೊಳಗಿಂದ ಯೆರಡುವರೆ ಮೈಲು ವೊಯಿದು ಅರಕಿಲ್ಲೆಯ ಬಳಿಯಲ್ಲಿ ಶಹಾಗಂಜೆಂಬ ಉಶ್ವಾಸಕ್ಕೆ ವೊಯಿದು, ಅಲ್ಲಿಂದ ಅರಕಿಲ್ಲೆಯೊಳಗೂ ಬೇರೆ ಕಡೆಯಲ್ಲಿಯೂ ನೀರು ತಿರುಗಿಸಿದ್ದರು. ಈ ಕೆರೆಯನ್ನೂ ನಳವನ್ನೂ ೧ನೇ ಅಲ್ಲೀಶಹನು ಕಟ್ಟಿಸಿದನೆಂದು ತಿಳಿದದೆ. ಈ ಯೆರಡನೇ ನಳದ ಹೊರ್ತು ಸುಲ್ತಾನ ಮುಹಮೂದಶಹನು ಊರ ಹೊರಗೆ ಬೇಗಮ್ ತಲಾವೆಂಬದಿನ್ನೊಂದು ದೊಡ್ಡ ಕೆರೆಯನ್ನು ಕಟ್ಟಿಸಿ, ಅದರಿಂದಲೂ ಪಟ್ಟಣದೊಳಗೆ ನಳವನ್ನು ತಂದಿದ್ದಾನೆ. ಈ ಕೆರೆಯ ನೀರು ಈಗ್ಯೂ ಊರೊಳಗೆ ಬರುತ್ತದೆ. ಸನ್ ೧೮೭೬-೭೭ನೇ ವರ್ಷದ ಬರದಲ್ಲಿ ಸರಕಾರದವರು ಈ ಕೆರೆಯೊಳಗಿನ ಕೆಸರು ತೆಗಿಸಿ, ನಳವನ್ನು ಸ್ವಚ್ಛ ಮಾಡಿದ್ದಾರೆ. ಆದರೆ ಬೇಗಮ್ ತಲಾವವು ಬಹಳ ದೊಡ್ಡದಿರುವದಿಲ್ಲ.

ವಿಜಾಪುರದಲ್ಲಿ ನೋಡ ತಕ್ಕಂಥ ಭವ್ಯ ಸ್ಥಳಗಳು ಬಹಳ ವುಂಟು. ಅವುಗಳಲ್ಲಿ ಮುಖ್ಯವಾದವುಗಳನ್ನು ಕೆಳಗೆ ವಿವರಿಸುತ್ತೇವೆ.

ಅರಕಿಲ್ಲೆ.—ಇದು ಪಟ್ಟಣದ ಕೋಟೆಯ ಮಧ್ಯ ಭಾಗದ ಪಶ್ಚಿಮಕ್ಕೆ ವರ್ತುಳಾಕೃತಿಯಾಗಿರುತ್ತದೆ. ಇದರ ಸುತ್ತು ಮುತ್ತಲೂ ದೊಡ್ಡ ಕಂದಕವಿರುತ್ತದೆ. ಕಂದಕದ ಹೊರ ಅಂಚಿನ ಸುತ್ತಳತೆಯು ಸುಮಾರು ವೊಂದು ಮೈಲು ಆಗುವದು. ಕೋಟೆಯೂ ಕೊತ್ತಳಗಳೂ ಬಹು ಭದ್ರವಾಗಿ ಕಟ್ಟಲ್ಪಟ್ಟವೆ. ಕೋಟೆಯ ಸುತ್ತು ಮುತ್ತು ವೊಂದು

ವೊಣ ಕಂದಕವಿರುವದಲ್ಲದೆ, ಉತ್ತರ ಈಶಾನ್ಯ ದಿಕ್ಕುಗಳಲ್ಲಿ ನೀರು ತುಂಬಿದ ಯೆರಡನೇ ಕಂದಕವಿರುತ್ತದೆ. ದಕ್ಷಿಣಕ್ಕೂ ಆಗ್ನೇಯಕ್ಕೂ ಯೆರಡು ಸುತ್ತು ಗೋಡೆಗಳಿವೆ. ಅವೆರಡುಗಳ ನಡುವೆ ಕೆಲವು ಹೊಂಡಗಳೂ ಕಾರಂಜಿಗಳೂ ತೋಟದ ಕುರುಹುಗಳೂ ಇರುತ್ತವೆ. ವಾಯುವ್ಯ ಮೂಲೆಗೆ ಉಪರೀ ಬುರುಜೆಂಬ ಹೆಸರಾದ ಕೊತ್ತಳವಿರುತ್ತದೆ. ಆದರೆ ಪಟ್ಟಣವು ಹಗೆಗಳ ಕೈ ಶೇರಿದ ಮೇಲೆ ಈ ಅರಕಿಲ್ಲೆಯು ತೋಫುಗಳ ಹೊಡತಕ್ಕೆ ಕ್ಷಣ ಮಾತ್ರವೂ ತಾಳಲಿಕ್ಕಿಲ್ಲೆಂದು ಅನುಭವಜ್ಞರಾದ ದಂಡಿನ ಅಧಿಕಾರಿಗಳ ಅಭಿಪ್ರಾಯವಿರುತ್ತದೆ. ಅರಕಿಲ್ಲೆಯಲ್ಲಿ ಭವ್ಯವಾದಂಥ ಮಂದಿರಗಳು ಹಲವುಂಟು.

ಗೋಲಗುಮುಟವು, (ಬೋಲೀಗುಂಬಾಝು).—ಇದು ಕೋಟೆಯೊಳಗೆ ಪೂರ್ವ ಭಾಗದಲ್ಲಿ ಕೋಟೆಯ ಗೋಡೆಗೆ ಸಮೀಪವಾಗಿರುತ್ತದೆ. ಇದನ್ನು ಸುಲ್ತಾನ ಮಹಮೂದಶಹನು ತನ್ನ ಮನೆತನದವರನ್ನು ಹುಗಿಯಲಿಕ್ಕೆ ಗೋರಿಯಾಗಿ ಕಟ್ಟಿಸಿದನು. ಈ ಗೋರಿಯ ನಾಲ್ಕೂ ದಿಕ್ಕಿನ ಗೋಡೆಗಳು ಸರಿಯಾಗಿ ೧೩೫ ಫೂಟು ಉದ್ದ, ೯ ಫೂಟು ಪಿಂಡ, ೧೧೦ ಫೂಟು ಯೆತ್ತರ ಇರುತ್ತವೆ. ಈ ಗೋಡೆಗಳನ್ನು ಕಟದ ಕಲ್ಲು ಗಚ್ಚುಗಳಿಂದ ಕಟ್ಟಿದ್ದಾರೆ. ನಾಲ್ಕೂ ಸರಳಾಕೃತಿಯ ಗೋಡೆಗಳು ೫೭ ಫೂಟು ಮೇಲಕ್ಕೆ ಯೇರಿದ ಬಳಿಕ ಬಹು ಯುಕ್ತಿಯಿಂದ ಇವುಗಳಿಗೆಲ್ಲ ಕೂಡಿ ವೊಂದೇ ವರ್ತುಳದ ಆಕಾರವನ್ನು ಕ್ರಮ ಕ್ರಮವಾಗಿ ಕೊಡುತ್ತ ಇವನ್ನು ಯೇರಿಸಿದ್ದಾರೆ. ಈ ಪ್ರಕಾರ ೧೧೦ ಫೂಟಿನ ಯೆತ್ತರದ ಮೇಲೆ ೯೪ ಫೂಟು ಯೆತ್ತರವಾದ ಬಹು ಭವ್ಯವಾದ ಗುಮುಟವನ್ನು ಕಟ್ಟಿದ್ದಾರೆ. ಆದ್ದರಿಂದ ಗುಮುಟವು ನೆಲದಿಂದ ೧೯೪ ಫೂಟು ಯೆತ್ತರವಾಗಿದೆ. ಗುಮುಟದ ವ್ಯಾಸವು ಬುಡದಲ್ಲಿ ೧೨೪ ಫೂಟು ಇರುವದು; ಇದರ ಗೋಡೆಯು ಬುಡದಲ್ಲಿ ೧೦ ಫೂಟು, ಮಧ್ಯ ಭಾಗದಲ್ಲಿ ೨೩ ಫೂಟು ದಿಪ್ಪವಿರುತ್ತದೆ. ಈ ಗುಮುಟದ ಬುಡದಲ್ಲಿ, ಅಂದರೆ ಕೆಳಗಿಂದ ೧೧೦ ಫೂಟು ಯೇರಿಬಂದ ಗೋಡೆಯ ತಲೆಯ ಮೇಲೆ, ಗುಮುಟದ ವೊಳ ಮೈಯಲ್ಲಿ ಸುತ್ತು ಮುತ್ತು ೧೨ ಫೂಟು ಅಗಲಾದ ಮಾರ್ಗವಿರುತ್ತದೆ. ಇಲ್ಲಿ ಯೇರಿ ನಿಂತು ವೊಂದು ಶಬ್ದವನ್ನು ನುಡಿದರೆ ನೂರಾರು ಅದರ ಪ್ರತಿ ಧ್ವನಿಗಳಾಗುತ್ತವೆ. ಗೋರಿಯ ನಾಲ್ಕೂ ಹೊರ ಮೂಲೆಗಳಲ್ಲಿ ಅಷ್ಟಕೋನಾಕೃತಿಯಾದ ಯೇಳಂತಸ್ತಿನ ಕೊತ್ತಳಗಳಿರುತ್ತವೆ. ಪ್ರತಿಯೊಂದು ಕೊತ್ತಳದ ವೊಂದೊಂದು ಮೈಯಲ್ಲಿ ವೊಂದೊಂದು ಅಂತಸ್ತಿನಲ್ಲಿ ವೊಂದೊಂದು ಕಿಡಕಿಯುಂಟು. ಈ ಕೊತ್ತಳಗಳ ಬಳಿಯಲ್ಲಿ ವೊಳ ಮೈಯಲ್ಲಿ ಮಲ ಸೂತ್ರದಂಥ ಜಿನೆಯಲ್ಲಿ ಮೇಲೆ ಯೇರಲಿಕ್ಕೆ ಪಾವಟಗೆಗಳಿರುತ್ತವೆ. ಈಗ ಮೂರು ಜಿನೆಗಳನ್ನು ಇಕ್ಕಿದ್ದಾರೆ; ನಾಲ್ಕನೇದೊಂದೇ ತೆರಿದಿರುತ್ತದೆ. ಗೋರಿಯೊಳಗೆ ನಟ್ಟ ನಡುವೆ ೭೭ ಫೂಟು ಚಚ್ಚೌಕು, ೨೪ ಫೂಟು ಯೆತ್ತರವಾದ ಕಟ್ಟೆಯ ಮೇಲೆ, ೫ ಗೋರಿಯ ಕಲ್ಲುಗಳಿರುತ್ತವೆ. ಒಂದು ಸುಲ್ತಾನ ಮಹಮೂದನದು, ವೊಂದು ಅವನ ರಾಣೀದು, ಮೂರು ಅವನ ಮಕ್ಕಳವು. ಗೋರಿಯ ದಕ್ಷಿಣದ ಬಾಗಿಲಿನ ಮೇಲೆ ಕಬ್ಬಿಣದ ಸರ್ಪಣಿಯ ಬುಡದಲ್ಲಿ ದೊಡ್ಡದೊಂದು ಕಲ್ಲು ತೂಗಾಡುತ್ತದೆ. ಆ ಕಲ್ಲು ಆಕಾಶದಿಂದ ಬಿದ್ದ

ಉಲ್ಕೆಯ ಕಲ್ಲು ಇರುತ್ತದೆಂತಲೂ ಅದು ಗೋಲ ಗುಮುಟಕ್ಕೆ ಸಿಡ್ಲು ಹತ್ತಗೊಡುವದಿಲ್ಲೆಂತಲೂ ಹೇಳುತ್ತಾರೆ. ಒಳಗಡೆಯಲ್ಲಿ ಈ ಕಲ್ಲು ಕೆಳಗೆ ತೆಗಿದು ಪರೀಕ್ಷಿಸಿದ್ದಾರೆ. ಇದು ಬಹು ಬಿರಿಸಾದ ಹಸರು ಬಣ್ಣದ ಕಲ್ಲು ನೆಲದೊಳಗೆ ದೊರಿಯುತ್ತದೆ; ಇದನ್ನು ಅಲಂಕಾರಗಳಲ್ಲಿ ಉಪಯೋಗಿಸುವರು. ಇಂಗ್ಲಿಷದಲ್ಲಿ ಇದಕ್ಕೆ "ನೆಫ್ರೈಟ" ಅಥವಾ "ಜೇಡ" ಯೆಂಬ ಹೆಸರುಂಟು. ಗೋಲ ಗುಮುಟದ ಬಳಿಯಲ್ಲಿ ನಿಂತು ನೋಡಿದರೆ ಕೆಳಗಿನ ಇಮಾರತಿಗೆ ತಕ್ಕಂತೆ ಗುಮುಟವನ್ನು ದೊಡ್ಡದಾಗಿ ಕಟ್ಟಿಲ್ಲವೆಂಬ ಹಾಗೆ ಕಾಣುತ್ತದೆ. ಆದರೆ ಪಟ್ಟಣದ ಹೊರಗೆ ೨೦, ೨೫ ಮೈಲಿನ ಅಂತರದಲ್ಲಿ ಈ ಗುಮುಟವು ಕಾಣುತ್ತದೆ. ಈ ಗುಮುಟದಲ್ಲಿ ಭವ್ಯತ್ವದ ಹೊರ್ತು ಅಲಂಕಾರದ ವೊಡವೆಗಳೇನು ಇಲ್ಲ.

ಗೋಲ ಗುಮುಟದ ಪಶ್ಚಿಮಕ್ಕೆ, ಆ ಗುಮುಟವನ್ನು ಕಟ್ಟಿದ ಕಟ್ಟೆಯ ಮೇಲೆಯೇ ಸಣ್ಣದೊಂದು ಬಹು ಸುಂದರವಾದ ಮಶೀದಿಯುಂಟು. ಆ ಮಶೀದಿಗೂ ಗೋಲ ಗುಮುಟಕ್ಕೂ ನಡುವೆ ಭವ್ಯವಾದದ್ದೊಂದು ಕಾರಂಜಿ ಇರುತ್ತದೆ. ಅದು ಈಗ ಹಾಳಾಗಿದೆ.

ಇಭ್ರಾಹೀಮರೋಝಾ.—ಇದು ಇಭ್ರಾಹೀಮ ಶಹನ ಗೋರಿಯು, ಪಟ್ಟಣದ ಕೋಟೆಯ ಹೊರಗೆ ಪಶ್ಚಿಮಕ್ಕೆ ಸುಮಾರು ೬೦೦ ಯಾರ್ಡಿನ ಅಂತರದಲ್ಲಿ ಇರುತ್ತದೆ. ಇದರ ಸುತ್ತಲಿನ ಅವಾರವು ೪೦೦ ಫೂಟು ಚಚ್ಚೌಕು ಇರುತ್ತದೆ. ಇದರ ಮಾಹಾದ್ವಾರವು ಬಹು ಯೆತ್ತರವಾಗಿಯೂ ಸುಂದರವಾಗಿಯೂ ಕಟ್ಟಲ್ಪಟ್ಟದೆ. ಈ ಅವಾರದ ನಡುವೆ ೧೨ ಫೂಟು ಯೆತ್ತರಿಸಿ ಕಟ್ಟಿದ ಕಟ್ಟೆಯ ಮೇಲೆ ಇಭ್ರಾಹಿಮನ ಗೋರಿಯೂ ವೊಂದು ಮಶೀದಿಯೂ ಯೆದುಬದುರಾಗಿ ಇರುವವು. ಈ ಯೆರಡುಗಳ ನಡುವೆ ಕಾರಂಜಿಯ ಹೊಂಡವಿರುತ್ತದೆ. ಗೋರಿಯ ಇಮಾರುತು ೧೧೬ ಫೂಟು ಚಚ್ಚೌಕು ಇರುತ್ತದೆ. ಅದರ ಮಧ್ಯ ಭಾಗದಲ್ಲಿ ಸುಮಾರು ೫೪ ಫೂಟು ಚಚ್ಚೌಕಾದ ಗೋರಿಯ ಕೋಣೆ ಇದ್ದು, ಅದರ ಸುತ್ತು ಮುತ್ತು ಯೆರಡು ಕಮಾನುಗಳ ಸಾಲುಗಳಿವೆ. ಕೋಣೆಯ ಗೋಡೆಗೂ ವೊದಲನೇ ಕಮಾನುಗಳ ನಾಲಿಗೂ ನಡುವೆ ೧೨ ಫೂಟಿನ ಅಂತರವಿರುತ್ತದೆ; ಒಳಗಿನ ಕಮಾನುಗಳ ಸಾಲಿಗೂ ಹೊರಗಿನ ಸಾಲಿಗೂ ನಡುವೆ ೨೦ ಫೂಟಿನ ಅಂತರವಿದೆ. ಹೊರ ಸಾಲಿನ ನಾಲ್ಕೂ ಮೂಲೆಗಳಲ್ಲಿ ಕಲ್ಲುಗಳಿಂದ ಬಹು ಭದ್ರವಾಗಿ ಕಟ್ಟಿದ ೮ ಫೂಟು ಚಚ್ಚೌಕಾದ ಸ್ತಂಭಗಳಿರುವವು. ಅವುಗಳಲ್ಲಿ ನಾನಾ ಪ್ರಕಾರದ ಬಹು ಸುಂದರವಾದ ಚಿತ್ರಗಳನ್ನು ಕೊರಿದಿದ್ದಾರೆ. ಕೋಣೆಗೆ ನಾಲ್ಕೂ ದಿಕ್ಕುಗಳಲ್ಲಿ ವೊಂದೊಂದು ಬಾಗಿಲಿರುವದು. ಗೋಡೆಗಳ ಹೊರ ಮೈಯಲ್ಲಿ ಕಟ್ಟಿಗೆಯಲ್ಲಿ ಕೊರಿದಂತೆ ಬಹು ಮನೋಹರವಾದ ಚಿತ್ರಗಳನ್ನೂ ಕುರಾಣದ ವಾಕ್ಯಗಳನ್ನೂ ಕಲ್ಲಿನೊಳಗೆ ಕೊರಿದಿದ್ದಾರೆ. ಆ ವಾಕ್ಯಗಳಿಗೆ ಬಂಗಾರದ ಬಣ್ಣವನ್ನು ಕೊಟ್ಟಿದ್ದರು. ಅದು ಈಗ ಹಾರಿ ಹೋಗಿದೆ. ಕೋಣೆಯ ವೊಳ ಉಸುಲು ೪೦ ಫೂಟು ಚಚ್ಚೌಕು ಇರುವದು. ಒಳಗೆ ಚಿತ್ರಗಳೇನು ಇಲ್ಲ. ನಟ್ಟ ನಡುವೆ ಯೆತ್ತರವಾದ ಗದ್ದಿ

ಗೆಯ ಮೇಲೆ ಇಬ್ರಾಹೀಮ ಶಹ, ಅವನ ಹೆಂಡತಿ, ಮೂವರು ಮಕ್ಕಳು, ಈ ಪ್ರಕಾರ ೫ ಜನರ ಗೋರಿಗಳ ಕಲ್ಲುಗಳಿರುತ್ತವೆ. ಹೊರಗಿನ ಯೆರಡು ಸುತ್ತು ಕಮಾನುಗಳ ಅವಾರಿನ ಮೇಲೆ ನಡುವೆ ಅಡ್ಡ ಕಮಾನುಗಳನ್ನು ಮಾಡಿ ಛಾವಣಿಯು ಹಾಕಿದ್ದಾರೆ. ಆದರೆ ಕೋಣೆಯೊಳಗೆ ಕಂಬಗಳೂ ಅಡ್ಡ ಕಮಾನಗಳೂ ಯೇನು ಇರದೆ ಸಪಾಟಾದ ಛಾವಣಿಯನ್ನು ಕಲ್ಲುಗಳಿಂದ ಹಾಕಿದ್ದಾರೆ. ಈ ಛಾವಣಿಯು ನೋಡುವವರನ್ನು ಆಶ್ಚರ್ಯ ಪಡಿಸುತ್ತದೆ. ಇನ್ನೊಂದು ಕೌತುಕವೇನೆಂದರೆ ಈ ಛಾವಣಿಯ ಮೇಲೆ ಗುಮುಟವನ್ನು ಕಟ್ಟಿದ್ದಾರೆ. ಕೆಳಗಿನ ಇಮಾರತಿಗೂ ಗುಮುಟಕ್ಕೂ ನಡುವೆ ಛಾವಣಿಯು ವಿಜಾಪುರದಲ್ಲಿ ಬೇರೆ ಯೆಲ್ಲಿಯೂ ಇಲ್ಲ. ಕೋಣೆಯ ಪೂರ್ವ ಪಶ್ಚಿಮ ಗೋಡೆಗಳಲ್ಲಿ ಮೇಲೆ ಯೇರಲಿಕ್ಕೆ ಪಾವಟಗೆಗಳಿವೆ. ಮೇಲೆ ಗುಮುಟದ ಸುತ್ತು ಮುತ್ತು ಸಪಾಟ ನೆಲದಂತೆ ಛಾವಣಿಯ ಮೇಲ್ಮೈ ಇರುತ್ತದೆ. ನಾಲ್ಕೂ ಮೂಲೆಗಳಲ್ಲಿಯ ಕಂಬಗಳು ಛಾವಣಿಯ ಮೇಲೆ ೮೦ ಫೂಟು ಯೆತ್ತರವಾಗಿ ಕಟ್ಟಲ್ಪಟ್ಟವೆ. ಒಂದು ಕಂಬದಿಂದ ಮತ್ತೊಂದರ ವರೆಗೆ ಛಾವಣಿಯ ಮೇಲೆ ಕಿರಿ ಗೋಡೆಯನ್ನು ಹಾಕಿ ಅದರಲ್ಲಿ ಚಿತ್ರ ಕೊರಿದಂಥ ಸುಂದರವಾದ ಕಿರಿಗಂಬಗಳನ್ನು ಸಾಲಾಗಿ ನಿಲ್ಲಿಸಿದ್ದಾರೆ.

ಈ ಗೋರಿಯನ್ನು ಮಲಿಖ ಸಂದಲನೆಂಬ ಅಮಲದಾರನು ಕಟ್ಟಿಸಿದನೆಂತಲೂ ಇದಕ್ಕೆ ೧೫೦೭೦೦ ಹೊನ್ನು ವೆಚ್ಚವಾಯಿತೆಂತಲೂ ಗೋರಿಯ ದಕ್ಷಿಣ ದ್ವಾರದ ಮೇಲೆ ಶಿಲಾಲಿಪಿಯಲ್ಲಿ ಬರಿದದೆ.

ಗೋರಿಯ ಯೆದುರಿಗಿರುವ ಮಶೀದಿಯು ಗೋರಿಯಷ್ಟೇ, ಅಂದರೆ ೧೧೬ ಫೂಟು ಅಗಲು, ೧೬೬ ಫೂಟು ಉದ್ದ ಇರುತ್ತದೆ. ಮಶೀದಿಯ ಮುಂಭಾಗದಲ್ಲಿ ಮಾತ್ರ ಗೋರಿಯಂತೆ ಚಿತ್ರಗಳನ್ನು ಕೊರಿದಿದ್ದಾರೆ; ಬುಡದಲ್ಲಿ ಗುಂಡುಗಳುಳ್ಳಂಥ ಉದ್ದುದ್ದವಾದ ಕಲ್ಲಿನ ಸರ್ಪಣಿಗಳನ್ನು ಮೇಲಿಂದ ಇಳಿ ಬಿಟ್ಟಿದ್ದಾರೆ. ಮಶೀದಿಯ ಮೇಲಿನ ಗುಮುಟವು ಗೋರಿಯ ಗುಮುಟಕ್ಕಿಂತ ಸಣ್ಣದೂ ಅಂದವಿಲ್ಲದ್ದೂ ಇರುತ್ತದೆ. ಛಾವಣಿಯ ಮೇಲೆ ನಾಲ್ಕೂ ಮೂಲೆಗಳಲ್ಲಿ ಕಂಬಗಳೂ ಅವುಗಳ ನಡುವೆ ಕಿರಿಗಂಬಗಳ ಸಾಲುಗಳೂ ಗೋರಿಯಂತೆ ಇರುತ್ತವೆ.

ಈ ಗೋರಿ ಮಶೀದಿಗಳ ಸುತ್ತು ಮುತ್ತು ಪೌಳಿಗಳ ಹಾಗೆ ಕಮಾನುಗಳುಳ್ಳಂಥ ಸುಂದರವಾದ ಸಣ್ಣ ಸಣ್ಣ ಕೋಣೆಗಳನ್ನು ಮಾಡಿದ್ದಾರೆ. ಛಾವಣಿಯ ಮುಂಭಾಗದಲ್ಲಿ ಸುತ್ತು ಮುತ್ತು ಕಿರಿ ಗೋಡೆಯನ್ನು ಕಟ್ಟಿದ್ದರಿಂದ ಈ ಅವಾರದ ಛಾವಣಿಯು ಯುದ್ಧದಲ್ಲಿ ಕೋಟೆಯಂತೆ ಕೆಲಸಕ್ಕೆ ಬರುವ ಹಾಗಿದೆ. ವಿಜಾಪುರದಲ್ಲಿ, ಕಿಂಬಹುನಾ ಇಡೀ ಹಿಂದುಸ್ತಾನದಲ್ಲಿ ಇಬ್ರಾಹೀಮರೋಝಾದಷ್ಟು ಸುಂದರವೂ ಭವ್ಯವೂ ಆದ ಇಮಾರತು ಬೇರೆ ಯಾವದೂ ಇಲ್ಲೆಂದು ಹೇಳ ಬಹುದು.

೨ನೇ ಅಲ್ಲೀಶಹನ ಗೋರಿ.—ಇದು ಅರಕಿಲ್ಲೆಯ ವಾಯವ್ಯಕ್ಕೆ ಹೊರಗಿನ ಕಂದಕದಿಂದ ಸುಮಾರು ೧೦೦ ಯಾರ್ಡಿನ ಅಂತರದಲ್ಲಿ ಇರುತ್ತದೆ. ಇದರ ಕಟ್ಟುವ ಕೆಲಸವು ಮುಗಿದಿಲ್ಲ, ಛಾವಣಿಯನ್ನು ಸಹ ಹಾಕಿಲ್ಲ. ಸುಮಾರು ೨೦೦ ಫೂಟು ಚಚ್ಚೌ

ಕಾದ ಕಟ್ಟೆಯ ಮೇಲೆ ಇಭ್ರಾಹೀಮರೋಝಾದಂತೆ ಯೆರಡು ಕಮಾನುಗಳ ಸಾಲುಗಳನ್ನು ಕಟ್ಟಿದ್ದಾರೆ. ಆದರೆ ನಡುವೆ ಗೋರಿಗಾಗಿ ಕೋಣೆಯನ್ನು ಮಾಡಿಲ್ಲ; ಸುತ್ತಲಿನ ಆವಾರದ ಪೌಳಿಗಳೂ ಇಲ್ಲ. ಈ ಇಮಾರತಿನ ಕ್ಷೇತ್ರವು ಇಭ್ರಾಹೀಮರೋಝಾ, ಗೋಲಗುಮುಟ, ಇವೆರಡಕ್ಕಿಂತಲೂ ದೊಡ್ಡದಿರುವ ಕಾರಣ, ಇದು ಮುಗಿದಿದ್ದರೆ ವಿಜಾಪುರದಲ್ಲಿ ಯೆಲ್ಲಕ್ಕೂ ಭವ್ಯವಾದ ಇಮಾರತು ಆಗುತ್ತಿತ್ತು. ಕೆಲವು ಕಮಾನುಗಳ ತಲೆ ಕಲ್ಲು ಮಾತ್ರ ಕೂಡ್ರಿಸಿದ್ದಾರೆ; ಕೆಲವು ಕಮಾನುಗಳು ಅರ್ಧವಾಗಿ ನಿಂತಿರುತ್ತವೆ. ಆದರೂ ನಿಂತ ಗೋಡೆಗಳೂ ಕಲ್ಲುಗಳೂ ಯೆಷ್ಟು ಮಾತ್ರವೂ ಕೆಟ್ಟಿಲ್ಲ. ಒಳಗಿನ ಸಾಲುಗಳ ಮಧ್ಯದಲ್ಲಿ ಯೆತ್ತರವಾದ ಕಟ್ಟೆಯ ಮೇಲೆ ಗೋರಿಯ ಕಲ್ಲುಗಳಿರುತ್ತವೆ.

೧ನೇ ಅಲ್ಲೀಶಹನ ಗೋರಿ.—ಮೇಲೆ ವಿವರಿಸಿದ ಗೋರಿಯು ೧ನೇ ಅಲ್ಲೀಶಹನ ಗೋರಿ ಯೆಂದು ಕೆಲವರ ಗ್ರಹಿಕೆಯುಂಟು. ಆದರೆ ಅವನ ಗೋರಿಯು ಪಟ್ಟಣದ ನೈರುತ್ಯ ಭಾಗದಲ್ಲಿ ಕೋಟೆಯ ಸಮೀಪಕ್ಕೆ ಇರುತ್ತದೆ. ಅದು ತೀರ ಸಾಧಾರಣ ತರದ್ದಿರುತ್ತದೆ; ಭವ್ಯತ್ವವೂ ಸೌಂದರ್ಯವೂ ಹೇಳ ತಕ್ಕಂಥಾದ್ದೇನು ಇಲ್ಲ. ಇದರಲ್ಲಿ ವೊಂದು ಸುತ್ತು ಕಮಾನುಗಳ ನಡುವೆ ಗೋರಿಯ ಕೋಣೆಯನ್ನು ಮಾಡಿದ್ದಾರೆ. ಕೋಣೆಯ ಹೊರಗೆ ಮೊದಲು ಬಣ್ಣ ಕೊಟ್ಟಿದ್ದರು.

ಹಸುರುಗೋರಿ.—೧ನೇ ಅಲ್ಲೀಶಹನ ಗೋರಿಯ ಬಳಿಯಲ್ಲಿ ಹಸುರು ಕಲ್ಲಿನಿಂದ ಬಹು ಸುಂದರವಾಗಿ ಕಟ್ಟಿದ್ದಿನ್ನೊಂದು ಗೋರಿಯುಂಟು. ಈ ಗೋರಿಯು ನೋಡ ತಕ್ಕಂಥಾದಿರುತ್ತದೆ. ಇದು ಇಂಥವನ ಗೋರಿಯೆಂದು ತಿಳಿದಿಲ್ಲ.

ಅಕ್ಕ ತಂಗಿಯರೆಂಬ ಗೋರಿಗಳು.—ಇವು ಹಸುರು ಗೋರಿಯ ಉತ್ತರಕ್ಕೆ ೫೦೦ ಯಾರ್ಡಿನ ಮೇಲೆ ಇರುತ್ತವೆ. ಒಂದು ಖಾನ ಮುಹಮ್ಮದನೆಂಬ ಸರದಾರನ ಗೋರಿಯೂ, ಯೆರಡನೇದು ಅಬದುಲ್‌ರಝಾಖ ಕಾದಿರನೆಂಬ ವಲ್ಲಿಯ ಗೋರಿಯೂ ಉಂಟು. ಈ ಯೆರಡನೇ ಗೋರಿಗೆ ಮುಸಲ್ಮಾನರು ಬಹಳ ಮಾನ ಕೊಡುತ್ತಾರೆ. ಇವು ಸಾಧಾ ಇದ್ದಾಗ್ಯೂ ನೋಡ ತಕ್ಕಂಥವಿರುತ್ತವೆ. ಈ ಗೋರಿಗಳು ವೊಂದಕ್ಕೊಂದು ಸಮೀಪವಾಗಿ ಜೋಡಿನಿಂದ ಕಾಣಿಸುವ ಕಾರಣ ಇವುಗಳಿಗೆ ಅಕ್ಕ ತಂಗಿಯರೆಂಬ ಹೆಸರು ಬಂದದೆ.

ಇವಲ್ಲದೆ ಹಾಜೀ ಹುಸೇನನ ಗೋರಿ, ಹಮೀದ ಖಾದಿರನ ಗೋರಿ, ಹನ್ನೆರಡು ಕಂಬದ ಗೋರಿ, ಮೋತೀಗುಂಬಾಝು, ಮುಂತಾದ ಅಸಂಖ್ಯ ಗೋರಿಗಳು ನೋಡ ತಕ್ಕಂಥವಿರುತ್ತವೆ. ಒಂದೊಂದರಲ್ಲಿ ವೊಂದೊಂದು ಪ್ರಕಾರದ ಚಮತ್ಕಾರವನ್ನು ಕಾಣಬಹುದು.

ಸಾತಮಜಲೀ ಅರಮನೆ.—ಇದು ಅರಕಿಲ್ಲೆಯ ಪಶ್ಚಿಮ ಭಾಗದಲ್ಲಿ ಇರುತ್ತದೆ. ಇದನ್ನು ೨ನೇ ಇಭ್ರಾಹಿಮ ಶಹನು ಕಟ್ಟಿಸಿದನು. ಇದರ ೭ ಅಂತಸ್ತುಗಳಲ್ಲಿ ಈಗ ೫ ಉಳಿದಿರುತ್ತವೆ. ಈ ಅರಮನೆಯಲ್ಲಿ ೨ನೇ ಇಭ್ರಾಹಿಮನಿಂದ ಮುಂದಿನ ಬಾದಶಹಗಳು ವಾಸಿಸುತ್ತಿದ್ದರು. ಕೆಲವು ಅಂತಸ್ತುಗಳ ಗೋಡೆಗಳಿಗೆ ಬಂಗಾರದ

ಮುಲಾಮು ಮಾಡಿದ್ದರು. ಆದರೆ ಅದನ್ನು ಈಗ ಕೆದರಿ ತೆಗಿದಿದ್ದಾರೆ. ಈ ಸಾತಮಜಲೀ ಅರಮನೆಯ ಮಾಳಿಗೆಯ ಮೇಲೆ ನಿಂತರೆ ಪಟ್ಟಣವೆಲ್ಲ ಕಾಣಿಸುತ್ತದೆ.

ಅರಕಿಲ್ಲೆಯೊಳಗೆ ಸಾತಮಜಲೀ ಹೊರ್ತಾಗಿ ಚಿನೀಮಹಾಲು, ಗಗನಮಹಾಲು, ಆನಂದಮಹಾಲು, ಮುಂತಾದ ಇಮಾರತುಗಳು ನೋಡ ತಕ್ಕಂಥವಿರುತ್ತವೆ. ಆದರೆ ಇವು ಅರ್ಧ ಮರ್ಧ ಹಾಳಾಗಿವೆ. ಅದಾಲತು, ಟಂಕಸಾಲೆ, ಮೊದಲಾದ ಬೇರೆ ಕೆಲವು ದೊಡ್ಡ ಇಮಾರತುಗಳು ಪೂರಾ ಹಾಳಾಗಿರುತ್ತವೆ.

ಆಸಾರಮಹಾಲು.—ಇದು ಅರಕಿಲ್ಲೆಯ ಹೊರಗೆ ಪೂರ್ವಕ್ಕೆ ಇರುತ್ತದೆ. ಇದನ್ನು ಮಹಮೂದ ಶಹನು ಸನ್ ೧೬೪೬ರ ಸುಮಾರಿನಲ್ಲಿ ಅದಾಲತಿನ ಕಚೇರಿಗಾಗಿ ಇದನ್ನು ಮೊದಲು ಕಟ್ಟಿಸಿದನು. ಆದರೆ ಆ ಕಚೇರಿಯನ್ನು ಅರಕಿಲ್ಲೆಯೊಳಗೆ ಕಟ್ಟಿಸಿದ ಬಳಿಕ ಆಸಾರಮಹಾಲಿನಲ್ಲಿ ಮಹಮ್ಮದ ಪೈಗಂಬರನ ಯೆರಡು ಕೂದಲುಗಳನ್ನು ತಂದು ಇಟ್ಟಿದ್ದಾರೆ. ಆದರಿಂದ ಇದಕ್ಕೆ ಆಸಾರಮಹಾಲೆಂಬ ಹೆಸರು ಬಂದದೆ. ಆಸಾರಮಹಾಲು ೧೩೫ ಫೂಟು ಉದ್ದ, ೧೦೦ ಫೂಟು ಅಗಲು ಇರುತ್ತದೆ. ಇದಕ್ಕೆ ಯೆರಡು ಅಂತಸ್ತುಗಳಿವೆ. ಕೆಳಗಿನ ಅಂತಸ್ತಿನ ಪಡಶಾಲೆಗೆ ಬುಡದಲ್ಲಿ ನಾಲ್ಕು ಫೂಟು ಚಚ್ಚೌಕು, ೩೫ ಫೂಟು ಯೆತ್ತರ, ಇರುವ ನಾಲ್ಕು ತೇಗಿನ ಕಂಬಗಳ ಆಧಾರದಿಂದ ಛಾವಣಿಯನ್ನು ಹಾಕಿದ್ದಾರೆ. ಮೇಲಿನ ಅಂತಸ್ತಿನ ವೊಂದು ಭವ್ಯವಾದ ಕೋಣೆಯಲ್ಲಿ ಪೈಗಂಬರನ ಕೂದಲುಗಳನ್ನಿಟ್ಟು ಅದಕ್ಕೆ ಕೀಲೆಯನ್ನು ಹಾಕಿದ್ದಾರೆ. ಮೇಲಿನ ಅಂತಸ್ತಿನ ಗೋಡೆಗಳಿಗೂ ಕಂಬ ಛಾವಣಿಗಳಿಗೂ ನಾನಾ ಪ್ರಕಾರದ ಬಣ್ಣಗಳನ್ನು ಕೊಟ್ಟು ಚಿತ್ರಗಳನ್ನು ತೆಗಿದದ್ದಲ್ಲದೆ, ಯೆಷ್ಟೋ ಕಡೆಯಲ್ಲಿ ಗೋಡೆಗೆ ಬಂಗಾರದ ಮೊಲಾಮು ಮಾಡಿದ್ದು ಈಗ್ಯೂ ಇರುತ್ತದೆ. ಪ್ರತಿ ವರ್ಷ ರಬಿಲಾವಲ್ ತಿಂಗಳಲ್ಲಿ ಆಸಾರ ಉರುಸೆಂಬ ಜಾತ್ರೆಯಾಗುತ್ತದೆ. ಈ ಜಾತ್ರೆಗಾಗಿ ಸರಕಾರದಿಂದ ವರ್ಷಕ್ಕೆ ೩೦೦ ರೂಪಾಯಿಯ ನೇಮಣೂಕು ಬುನಾದಿಯಿಂದ ನಡಿಯುತ್ತ ಬಂದದೆ. ಆಸಾರಮಹಾಲು ೫ ಜನ ಪಂಚರ ವಶದಲ್ಲಿ ಇರುತ್ತದೆ.

ಮೆಹೆತರಮಹಾಲು.—ಇದು ಅರಕಿಲ್ಲೆಯ ಆಗನೆಯಿಂದ ೬೫೦ ಯಾರ್ಡಿನ ಅಂತರದಲ್ಲಿ ಇರುತ್ತದೆ. ಇದು ಸ್ವತಂತ್ರವಾದ ಮನೆಯಲ್ಲ; ಒಂದು ಸಣ್ಣ ಮಶೀದಿಯ ಮಹಾದ್ವಾರವಿರುತ್ತದೆ. ಆ ಮಶೀದಿಯು ಈಗ್ಯೂ ಇರುತ್ತದೆ. ಆದರೆ ಅದರಲ್ಲಿ ವರ್ಣಿಸ ತಕ್ಕಂಥಾ ವೊಡವೆ ಯೇನು ಇಲ್ಲ. ಈ ಮೆಹೆತರ ಮಹಾಲೆಂಬ ಮಹಾದ್ವಾರವು ೨೪ ಫೂಟು ಚಚ್ಚೌಕಾಗಿಯೂ ಯೆರಡು ಅಂತಸ್ತುಗಳುಳ್ಳದ್ದಾಗಿಯೂ ಇರುತ್ತದೆ. ಎರಡನೇ ಅಂತಸ್ತಿನ ಮೇಲೆ ನಾಲ್ಕು ಮೂಲೆಗಳಲ್ಲಿ ಯೆತ್ತರವಾದ ಕಂಬಗಳಿವೆ. ಮೇಹತರಮಹಾಲಿನ ಮುಖ್ಯ ಲಕ್ಷಣವೇನೆಂದರೆ, ಇದರ ಕಂಬಗಳಲ್ಲಿಯೂ ಗೋಡೆಗಳಲ್ಲಿಯೂ ಛಾವಣಿಯಲ್ಲಿಯೂ ಸಹ ಸ್ಲೇಟಿನ ಜಾತಿಯ ಕಲ್ಲುಗಳಲ್ಲಿ ಅತ್ಯುತ್ತಮವಾದ ಚಿತ್ರಗಳನ್ನು ಕಟ್ಟಿಗೆಯಲ್ಲಿ ಕೊರದಂತೆ ಕೊರಿದಿದ್ದಾರೆ. ಈ ಚಿತ್ರಗಳು ಇಭ್ರಾಹೀಮರೋಝಾದ ಚಿತ್ರಗಳನ್ನು ಹೋಲುತ್ತವೆ. ಈ ಮಹಾಲನ್ನು ವೊಬ್ಬ ಮೆಹೆತರಿಯೆಂದರೆ ಓಣಿಯನ್ನು ಉಡುಗುವ ಹಲಾಲಖೋರನು ಕಟ್ಟಿಸಿದನೆಂದು ಕೆಲವರು ಹೇಳುತ್ತಾರೆ; ಬೇರೆ ಕೆಲ

ವರು ಮೆಹೆತರಗದನೆಂಬ ಫಕೀರ ಜನರ ಮುಖ್ಯಸ್ಥನು ಕಟ್ಟಿಸಿದನೆಂದು ಹೇಳುತ್ತಾರೆ. ಇದನ್ನು ಕಟ್ಟಿಸಿದವನ ತರ ತರದ ಕಥೆಗಳನ್ನು ಜನರು ಹೇಳುತ್ತಾರೆ; ಆದರೆ ಇಂಥ ವನೇ ಕಟ್ಟಿಸಿದನೆಂದು ಗೊತ್ತಾಗಿಲ್ಲ. ಇದು ಬಹುತರ ೧ನೇ ಅಥವಾ ೨ನೇ ಇಭ್ರಾಹಿಮನ ಆಳಿಕೆಯಲ್ಲಿ ಆಯಿತೆಂದು ತೋರುತ್ತದೆ.

ಸಂಗೀತಮಹಾಲು.— ಇದು ಪಟ್ಟಣದ ಪಶ್ಚಿಮಕ್ಕೆ ೪ ಮೈಲಿನ ಮೇಲೆ ನವ ರಸಪುರದಲ್ಲಿ ಇರುತ್ತದೆ. ಇದು ಬಹಳವಾಗಿ ಕೆಟ್ಟಿಲ್ಲ; ನೋಡ ತಕ್ಕಂಥಾದಿರುತ್ತದೆ.

ಜಾಮೂ ಮಶೀದಿ.— ಪಟ್ಟಣದ ಪೂರ್ವ ಭಾಗದಲ್ಲಿ ಅರಕಿಲ್ಲೆಯ ಪೂರ್ವಕ್ಕೆ ಸುಮಾರು ೧೨೦೦ ಯಾರ್ಡಿನ ಅಂತರದಲ್ಲಿ ಇರುತ್ತದೆ. ಇದರಷ್ಟು ದೊಡ್ಡ ಮಶೀದಿಯು ದಕ್ಷಿಣದಲ್ಲಿ ಇನ್ನೊಂದು ಇಲ್ಲ. ಇದರ ಉದ್ದಳತಿ ೪೦೦ ಫೂಟು, ಅಗಲು ೨೮೦ ಫೂಟು, ನೆಲದಿಂದ ೩೦ ಫೂಟು ಯೆತ್ತರವಾದ ಕಟ್ಟೆಯ ಮೇಲೆ ಕಟ್ಟಲ್ಪಟ್ಟದೆ. ಕಟ್ಟೆಯ ಮೇಲೆ ಯೇರಿ ಹೋಗುವ ಪಾವಟಿಗೆಗಳು ಭವ್ಯವಾದದ್ದೊಂದು ಕಮಾನಿನೊಳಗೆ ಇರುತ್ತವೆ. ಆ ಕಮಾನಿನ ಮೇಲೆ ೪೦ ಫೂಟು ಯೆತ್ತರವಾದ್ದೊಂದು ಚತುಷ್ಕೋನಾಕೃತಿಯಾದ ಸ್ತಂಭವನ್ನು ಕಟ್ಟಿಸಿದ್ದಾರೆ. ಪೂರ್ವ ದಿಕ್ಕಿನ ಮಹಾದ್ವಾರದ ವೊಳ ಮೈಯಲ್ಲಿ ವಿಸ್ತಾರ ವಾದ ಅಂಗಳಿನೊಳಗೆ ಕಾರಂಜಿಯ ಹೌದು ಇರುವದು. ಅದರ ಮೂರು ದಿಕ್ಕುಗಳಲ್ಲಿ ಮಶೀದಿಯ ಇಮಾರತು ಇರುತ್ತದೆ. ಅಂಗಳಿನ ಯೆದುರಿಗೆ ೭ ಭವ್ಯವಾದ ಕಮಾನು ಗಳ ಆಚೆಯಲ್ಲಿ ವಿಸ್ತಾರವಾದ ದಿವಾಣಖಾನೆ ಅಥವಾ ಪ್ರಾರ್ಥನಾ ಸ್ಥಾನವಿರುತ್ತದೆ. ಅದರ ಉದ್ದಳತೆ ೨೫೭ ಫೂಟು, ಅಗಲು ೧೪೫ ಫೂಟು, ಈ ದಿವಾಣಖಾನೆಯಲ್ಲಿ ೨೨೮೬ ಜನರಿಗೆ ಪ್ರಾರ್ಥನೆಗೆ ಕೂಡ್ರಲಿಕ್ಕೆ ಬರುವ ಹಾಗೆ ಬೇರೆ ಬೇರೆ ಚೌಕುಗಳನ್ನು ಮಾಡಿ ದ್ದಾರೆ. ಇವಲ್ಲದೆ ಯೆಡ ಬಲದ ಪಡಸಾಲೆಗಳಲ್ಲಿ ಸುಮಾರು ೧೫೦ ಜನರಿಗೆ ಕೂಡ್ರಲಿಕ್ಕೆ ಸ್ಥಳವಿರುತ್ತದೆ. ಆ ಪಡಸಾಲೆಗಳಿಗೂ ಯೆದುರಿನ ದಿವಾಣಖಾನೆಯಂತೆ ಯೇಳೇಳು ಕಮಾನುಗಳಿರುತ್ತವೆ. ದಿವಾಣಖಾನೆಯ ಯೆದುರಿನ ಗೋಡೆಯಲ್ಲಿ ಧರ್ಮೋಪದೇಶ ಕನು ನಿಲ್ಲುವ ಮೆಹೆರಾಬಿನೊಳಗೆ ಅತ್ಯುತ್ತಮವಾದ ಬಣ್ಣ ಕೊಟ್ಟು ಚಿನ್ನದ ಅಕ್ಷರಗ ಳಿಂದ ಉಪದೇಶದ ವಾಕ್ಯಗಳನ್ನೂ ಬಳ್ಳಿಗಳನ್ನೂ ಬರಿದಿದ್ದಾರೆ. ಆ ವಾಕ್ಯಗಳು ಹ್ಯಾಗಂದರೆ—

೧. ಆಯುಷ್ಯವನ್ನು ನಂಬ ಬೇಡ; ಅದು ಅಲ್ಪವಿರುತ್ತದೆ.

೨. ಈ ರೂಪಾಂತರ ಕೊಡುವ ಜಗತ್ತಿನಲ್ಲಿ ವಿಶ್ರಾಂತಿ ಇಲ್ಲ.

೩. ಈ ಜಗತ್ತು ಇಂದ್ರಿಯಗಳನ್ನು ಸಂತೋಷ ಪಡಿಸುತ್ತದೆ.

೪. ಮನುಷ್ಯ ಜನ್ಮವು ಅತ್ಯುತ್ತಮವಾದ ದಾಯವಿರುತ್ತದೆ; ಆದರೆ ಅದು ಬಾಳುವದಿಲ್ಲ.

೫. ಈ ಮಶೀದಿಯ ಪರಿಚಾರಕನೂ ಸುಲ್ತಾನ ಮಹಮೂದನ ದಾಸನೂ ಆದ ಮಲಿಖ ಯಾಕೂಬನು ಈ ಮಶೀದಿಯ ಕೆಲಸವನ್ನು ಮುಗಿಸಿದನು.

೬. ಚಿನ್ನದ ಮೊಲಾಮಿನ ಲೇಖವೂ ಅಲಂಕಾರಗಳೂ ಸುಲ್ತಾನ ಮಹಮೂದನ ಅಪ್ಪಣೆಯಿಂದ ಬರಿಯಲ್ಪಟ್ಟಿರುತ್ತವೆ. (೧೬೩೬).

ಜಾಮಾ ಮಶೀದಿಯ ಗುಮುಟವು ವಿಜಾಪುರದಲ್ಲಿ ಯೆಲ್ಲಕ್ಕೂ ಬಹು ಮನೋಹರವಾದದ್ದಿರುತ್ತದೆ. ಅದು ನೆಲದಿಂದ ೧೨೦ ಫೂಟು ಯೆತ್ತರವಿರುವದು. ಆದರೆ ಮಶೀದಿಗಳ ಮೇಲೆ ನಾಲ್ಕೂ ಮೂಲೆಗಳಲ್ಲಿ ಇರತಕ್ಕ ಕಂಬಗಳನ್ನು ಕಟ್ಟಿಲ್ಲ. ಬೇರೆ ಕಡೆಯಲ್ಲಿಯೂ ಕಟ್ಟುವ ಕೆಲಸವು ಪೂರಾ ಮುಗಿದಿಲ್ಲ. ಈ ಮಶೀದಿಯನ್ನು ಸನ್ ೧೫೩೭ರಲ್ಲಿ ೧ನೇ ಅಲ್ಲೀ ಅದಿಲ್‌ಶಹನು ಆರಂಭ ಮಾಡಿದ ಬಳಿಕ ಮುಂದಿನ ಯಾವತ್ತು ಬಾದಶಹಗಳ ಆಳಿಕೆಯಲ್ಲಿ ಇದರ ಕೆಲಸವು ನಡಿದೇ ಇತ್ತೆಂದು ಹೇಳುತ್ತಾರೆ.

**ಮಕ್ಕಾ ಮಶೀದಿಯು.**—ಇದು ಅರಕಿಲ್ಲೆಯಲ್ಲಿ ಆನಂದ ಮಹಾಲಿನಿಂದ ೧೩೦ ಯಾರ್ಡಿನ ಅಂತರದಲ್ಲಿ ಇರುತ್ತದೆ. ಇದು ಬಹು ಸಣ್ಣದು, ೩೦ ಫೂಟು ಚಚ್ಚೌಕು, ಇರುತ್ತದೆ. ಮಕ್ಕಾ ಪಟ್ಟಣದಲ್ಲಿ ಇರುವ ಹೆಸರಾದ ಮಶೀದಿಯ ಹಾಗೆ ಇದನ್ನು ವೊಬ್ಬ ಪೀರನು ಕಟ್ಟಿಸಿದ್ದರಿಂದ ಇದಕ್ಕೆ ಈ ಹೆಸರು ಬಂದದೆ. ಆದರೆ ಇದು ೨ನೇ ಇಭ್ರಾಹಿಮನ ಆಳಿಕೆಯಲ್ಲಿ ಕಟ್ಟಿಸಿದಂತೆ ತೋರುತ್ತದೆ. ಇದರಲ್ಲಿಯ ಕಲ್ಲುಗಳ ಸುಂದರವಾದ ವರ್ಣ, ಹೊಳಪು, ಅವುಗಳಲ್ಲಿ ಕೊರಿದ ಚಿತ್ರಗಳು ನೋಡ ತಕ್ಕಂಥವಿರುತ್ತವೆ. ಇದನ್ನು ಕಟ್ಟಿಸಿದ ಪೀರನ ಕಥೆಯನ್ನು ಜನರು ಹೇಳುವದು ಹ್ಯಾಗಂದರೆ—

ವಿಜಾಪುರದ ಬಾದಶಾಹಿಯು ಸ್ಥಾಪನೆಯಾಗುವ ಪೂರ್ವದಲ್ಲಿ ಸನ್ ೧೩೦೫ರ ಸುಮಾರಿನಲ್ಲಿ ಪೀರಹ್ಮಬ್ರಾಯಿ ಖಂದಾಯತನೆಂಬ ವಲ್ಲಿಯು ಕೆಲ ಜನ ಶಿಷ್ಯರೊಡನೆ ಈ ಮಕ್ಕಾ ಮಶೀದಿ ಇರುವ ಸ್ಥಳದಲ್ಲಿ ಬಂದು ನಿಂತನು. ಆಗ ವಿಜಾಪುರದ ಮೊದಲಿನ ಬಿಜ್ಜನಹಳ್ಳಿ ಯೆಂಬ ಗ್ರಾಮವು ಮಂಗಳವೇಢೆಯಲ್ಲಿ ಇರುತ್ತಿದ್ದ ಬಿಜನರಾವ ಯೆಂಬವನ ಶೀಮೆಗೆ ಶೇರಿತ್ತು. ಆ ಪೀರನು ಬಂದು ನಿಂತ ಸ್ಥಳದ ಸುತ್ತು ಮುತ್ತು ಕೆಲವು ಗುಡಿಗಳಿದ್ದವು. ಆದ್ದರಿಂದ ಊರವರಿಗೂ ಹೊಸದಾಗಿ ಬಂದ ಮುಸಲ್ಮಾನರಿಗೂ ಆಗಾಗ್ಗೆ ಜಗಳಗಳಾಗುತ್ತಿದ್ದವು. ಊರವರು ಮುಸಲ್ಮಾನರನ್ನು ಹೊರಗೆ ಹಾಕುವದಕ್ಕೋಸ್ಕರ ಅವರಿಗೆ ಧಾನ್ಯ ಮಾರುವದನ್ನು ಕಟ್ಟು ಮಾಡಿದರು. ಅದರಿಂದ ಮುಸಲ್ಮಾನರಿಗೆ ಉಪವಾಸದ ಹೊತ್ತು ಬರಲಾಗಿ, ಅವರು ಯೆಡ ಬಲದ ಗುಡಿಗಳಲ್ಲಿ ತಿರುಗಾಡುತ್ತಿದ್ದ ಗೂಳಿಗಳಲ್ಲಿ ವೊಂದು ಆಕಳವನ್ನು ಕೊಯ್ಯುದು ತಿಂದರು. ಆ ಕಾರಣ ಊರವರಿಗೂ ಮುಸಲ್ಮಾನರಿಗೂ ಕಡು ಕದನವಾಗಿ ಅದರಲ್ಲಿ ಪೀರನ ಮಗನು ಮಡಿದನು. ತರುವಾಯ ಊರವರು ಪೀರನನ್ನು ಶರೆ ಹಿಡಿದು ಬಿಜನರಾಯನ ಮುಂದೆ ವೊಯಿದು ನಿಲ್ಲಿಸಲಾಗಿ, ಪೀರನು ದೇವರಿಗೆ ಬಿಟ್ಟ ಆಕಳೆಂದು ನನಗೆ ತಿಳಿಯದ್ದರಿಂದ, ಹೊಟ್ಟೆಗೆ ಕಾಳು ಇಲ್ಲದ ಕಾರಣ ಅದನ್ನು ಕೊಯಿಸಿದೆನೆಂದು ಹೇಳಿ ಕ್ಷಮಿಸೆಂದು ಬೇಡಿ ಕೊಂಡನು. ಬಿಜನರಾಯನು ನಮ್ಮ ಆಕಳನ್ನು ನೀನು ತಂದು ಕೊಡಲಿಕ್ಕೆ ಬೇಕೆಂದು ಹೇಳಲಾಗಿ ಪೀರನು ಆಕಳಿನ ಯೆಲುವುಗಳನ್ನು ಕೂಡಿಸಿ, ಮಂತ್ರ ಪ್ರಯೋಗದಿಂದ ಆಕಳನ್ನು ಬದುಕಿಸಿದನು. ಆದರಿಂದ ಬಿಜನರಾಯನು ಸಂತುಷ್ಟನಾಗಿ ಮಕ್ಕಾ ಮಶೀದಿ ಇರುವ

ಸ್ಥಳವನ್ನು ಪೀರನಿಗೆ ಇನಾಮು ಕೊಟ್ಟನು. ಆ ಇನಾಮು ಕೊಡುವ ಸನದು ಕನ್ನಡ ದಲ್ಲಿ ಬರಿದದ್ದು ಪೀರನ ವಂಶದವರ ಬಳಿಯಲ್ಲಿ ಈಗ್ಯೂ ಇರುತ್ತದೆ. ಆದರೆ ಅಕ್ಷರಗಳು ತಿಳಿಯುವದಿಲ್ಲ. ಪೀರನ ಗೋರಿಯೂ ಅವನ ಮಗನ ಗೋರಿಯೂ ಮಕ್ಕಾ ಮಶೀದಿಯ ಬಳಿಯಲ್ಲಿ ಇರುತ್ತವೆ. ಇವೆರಡರ ಹೊರ್ತು ಅರಕಿಲ್ಲೆಯಲ್ಲಿ ಗೋರಿ ಇಲ್ಲ. ಆದ್ದರಿಂದ ಈ ಕಥೆಯಲ್ಲಿ ಸತ್ಯಾಂಶವು ಇರ ಬಹುದೆಂದು ತೋರುತ್ತದೆ.

ಇವಲ್ಲದೆ ಮಲಿಖಜಹಾನ, ಮಲಿಖಸಂದಲ, ಬುಖಾರಾಮಲಿಖ ಕರೀಮ, ಮುಂತಾದ ಹೆಸರುಗಳುಳ್ಳ ಮಶೀದಿಗಳು ನೋಡ ತಕ್ಕಂಥವಿರುತ್ತವೆ.

**ಗುಡಿಗಳು.**—ಪಟ್ಟಣದೊಳಗೆ, ಮುಖ್ಯವಾಗಿ ಅರಕಿಲ್ಲೆಯಲ್ಲಿ ಬಾದಶಾಹಿಯ ಪೂರ್ವ ಕಾಲದ ಗುಡಿಗಳು ಕೆಲವು ಇರುತ್ತವೆ. ಅರಕಿಲ್ಲೆಯ ಗೋಡೆಯಲ್ಲಿಯೂ, ಅದರ ಆಗ್ನೇಯ ದಿಕ್ಕಿನ ಅಗಸೆಯಲ್ಲಿಯೂ ಮಲಿಖ ಕರೀಮನ ಮಶೀದಿಯಲ್ಲಿಯೂ ಬೇರೆ ಕಡೆಯಲ್ಲಿಯೂ ಪೂರ್ವ ಕಾಲದ ಹಿಂದೂ ಗುಡಿಗಳ ಕಲ್ಲುಗಳನ್ನು ತಂದು ಇಮಾರತಿಗೆ ಹಾಕಿದ್ದಾರೆ. ಅರಕಿಲ್ಲೆಯ ಅಗಸೆಯಲ್ಲಿ ಬಹು ಸುಂದರವಾಗಿ ಕೊರಿದಂಥ ಕಂಬಗಳ ಕೆಳಗೂ ಅದರ ಬಳಿಯಲ್ಲಿ ಅರ್ಧ ಮರ್ಧ ಉಳಿದಂಥ ವೊಣ ಕಲ್ಲಿನ ಗುಡಿಗಳಲ್ಲಿಯೂ ೧೧ನೇ ೧೩ನೇ ಶತಕಗಳಲ್ಲಿ ಚಾಲುಕ್ಯರೂ ದೇವಗಿರಿಯ ಯಾದವರೂ ಕನ್ನಡ ಲಿಪಿಯಲ್ಲಿ ಸಂಸ್ಕೃತದಿಂದ ಬರಿಸಿದ ಲೇಖಗಳಿರುತ್ತವೆ. ಅರಕಿಲ್ಲೆಯ ಅಗಸೆಯ ಹೊರಗೆ ೭ನೇ ಶತಕದಲ್ಲಿ ಮಾಡಿದ್ದೊಂದು ಬಹು ದೊಡ್ಡ ಕಂಬವು ಬಿದ್ದಿರುತ್ತದೆ.

ಅರಕಿಲ್ಲೆಯ ಪಶ್ಚಿಮದ ಕಂದಕದ ದಂಡೆಯಲ್ಲಿ ಪೂರ್ವ ಕಾಲದ ನರಸಿಂಹನ ಗುಡಿಯು ಈಗ್ಯೂ ಇರುತ್ತದೆ. ೨ನೇ ಇಭ್ರಾಹಿಮಶಹನಿಗೆ ಹತ್ತಿದ್ದೊಂದು ಘನವಾದ ರೋಗವು ಗಾಣಗಾಪುರದ ದತ್ತಾತ್ರಯನ ಪ್ರಸಾದದಿಂದ ಹೋದ ಕಾರಣ ಆ ಬಾದಶಹನು ದತ್ತಾತ್ರಯನನ್ನು ಕರೆ ತಂದು ಈ ಗುಡಿಯ ಮೇಲೆ ಹಬ್ಬಿರುವ ಹಳೆ ಅರಳೀ ಮರದ ಕೆಳಗೆ ದತ್ತಾತ್ರಯನಿಗಾಗಿ ಗುಡಿಯನ್ನು ಕಟ್ಟಿಸಿದನಂತೆ. ಈ ಗುಡಿಯಲ್ಲಿ ಅರಳೀ ಮರದ ಬೇರೇ ನರಸೋಬ ಯೆಂಬ ಹೆಸರಿನಿಂದ ಪೂಜಿಸಲ್ಪಡುತ್ತದೆ. ಇಭ್ರಾಹಿಮಶಹನು ಈ ದೇವರಿಗೆ ಭಕ್ತಿಯಿಂದ ನಡಕೊಳ್ಳುತ್ತಿದ್ದನು.

ಇನ್ನೂ ಕೆಲವು ಪ್ರಸಿದ್ಧವಾದ ಇಮಾರತು ಮುಂತಾದವುಗಳು ಯಾವವೆಂದರೆ— ತಾಜಬಾವಡಿ ಪಟ್ಟಣದ ಪಶ್ಚಿಮ ಭಾಗದಲ್ಲಿ ೨೨೩ ಫೂಟು ಚಚ್ಚೌಕು; ಚಾಂದಬಾವಡಿ ಪಟ್ಟಣದ ನೈರುತ್ಯ ಮೂಲೆಯಲ್ಲಿ; ಉಪರೀಬುರುಜೆಂಬ ಕೊತ್ತಳ ತಾಜಬಾವಡಿಯಿಂದ ಸ್ವಲ್ಪ ಅಂತರದಲ್ಲಿ; ಮಲಿಖ ಈ ಮೈದಾನ (ಹಿಂದೆ ಕೋಟೆಯ ವರ್ಣನೆ ನೋಡು), ಲಾಂಡಾ ಕಸಾಬ ಯೆಂಬ ಕೊತ್ತಳದ ಮೇಲೆ ಇರುವ ಯೆಲ್ಲಕ್ಕೂ ದೊಡ್ಡ ತೋಫು (ಕೋಟೆಯ ವರ್ಣನೆ ನೋಡು), ಇತ್ಯಾದಿ.

**ಇತಿಹಾಸ.**—ವಿಜಾಪುರಕ್ಕೆ ಬುನಾದಿಯಲ್ಲಿ, ಅಂದರೆ ೧೦ನೇ ಶತಕದ ಪೂರ್ವದಲ್ಲಿ ಬಿಚಕನ ಹಳ್ಳಿ ಯೆಂಬ ಹೆಸರು ಇತ್ತೆಂದು ಹೇಳುತ್ತಾರೆ; ಆದರೆ ಇದಕ್ಕೆ ಆಧಾರವೇನು ಇದ್ದಂತೆ ತೋರುವದಿಲ್ಲ. ೭ನೇ ಶತಕದಲ್ಲಿ ಮಾಡಿಸಿದ್ದೊಂದು ಸ್ತಂಭವನ್ನು

ಮೇಲೆ ಉಲ್ಲೇಖಿಸಿದ್ದೇವೆ. ಅದು ಜಯ ಸ್ತಂಭವೆಂದರೆ ವೀರಗಲ್ಲೆಂದು ತೋರುತ್ತದೆ. ಮೇಲೆ ಉಲ್ಲೇಖಿಸಿದ ಲಿಪಿಗಳೊಂದರಲ್ಲಿ ಚಾಲುಕ್ಯರ ೨ನೇ ಸೋಮೇಶ್ವರನು "ವಿಜಯ ಪುರದ" ನರಸಿಂಹನ ಗುಡಿಗೆ ಕೆಲವು ಇನಾಮುಗಳನ್ನು ಕೊಟ್ಟ ಲೇಖವಿರುತ್ತದೆ. ಮತ್ತೊಂದು ಲೇಖದಲ್ಲಿ ದೇವಗಿರಿಯ ಜೈತುಗಿ ಯೆಂಬ ಅರಸು "ವಿಜಯಪುರವನ್ನು" ತನ್ನ ರಾಜಧಾನಿಯನ್ನು ಮಾಡಿ ಕೊಂಡಿದ್ದನೆಂದು ಬರಿದದೆ, ೧೧೯೬. ಮೂರನೇ ದೊಂದು ಲಿಪಿಯಲ್ಲಿ ದೇವಗಿರಿಯ ೨ನೇ ಸಿಂಹಣ ರಾಜನು (೧೨೦೯-೧೨೪೭) ವಿಜಯ ಪುರದೊಳಗಿನ ಕೆಲವೊಂದು ಗುಡಿಗೆ ಭೂಮಿಯನ್ನು ಕೊಟ್ಟ ಲೇಖವಿರುತ್ತದೆ.

ಸನ್ ೧೩೧೬ರಲ್ಲಿಯೂ ೧೩೨೦ರಲ್ಲಿಯೂ ಮಲಿಖ ಕಾಫೂರನ ಮಗನಾದ ಕರೀಮ ಉದ್ದೀನನೆಂಬ ಸರದಾರನು ವಿಜಾಪುರದ ಸುಭೇದಾರನಿದ್ದನೆಂದು ಇತಿಹಾಸದಲ್ಲಿ ಲೇಖ ವದೆ. ಇದರ ಮುಂದೆ ವಿಜಾಪುರದಲ್ಲಿ ಮುಸಲ್ಮಾನರ ಪೈವಸ್ತಿಯು ಬಿದ್ದದ್ದರ ಪ್ರಮಾ ಣಗಳು ಇತಿಹಾಸದಲ್ಲಿ ಇರುತ್ತವೆ. ಅದಿಲ್‌ಶಾಹಿಯ ಮೂಲಪುರುಷನಾದ ಯೂಸಫ್ ಅದಿಲ್‌ಶಹನು ಮೊದಲು ಬಾಮನೀ ಬಾದಶಾಹಿಯ ಕೆಳಗೆ ವಿಜಾಪುರದ ಸುಭೇದಾರ ನಾಗಿದ್ದನೆಂದು ೭ನೇ ಭಾಗದಲ್ಲಿ ಹೇಳಿದ್ದೇವೆ. ಇದೇ ಕಾರಣದಿಂದ ಯೂಸಫನು ಸ್ವತಂ ತ್ರನಾದ ಬಳಿಕ ವಿಜಾಪುರವನ್ನು ತನ್ನ ರಾಜಧಾನಿಯನ್ನು ಮಾಡಿಕೊಂಡನು. ಯೂಸ ಫನ ತರುವಾಯ ಪ್ರತಿಯೊಬ್ಬ ಬಾದಶಹನು ನೀರಿನ ಪುರೋತೆಯಿಂದಲೂ ಹೊಸ ಹೊಸ ಭವ್ಯವಾದ ಇಮಾರತುಗಳಿಂದಲೂ ವ್ಯಾಪಾರಕ್ಕೆ ಆಶ್ರಯ ಕೊಡುವದರಿಂದಲೂ ಪಟ್ಟಣವನ್ನು ಬಲಿಸುತ್ತ ನಡಿದನು. ಆದ್ದರಿಂದ ಮಹಮೂದನ ಆಳಿಕೆಯಲ್ಲಿ ವಿಜಾಪುರ ದಲ್ಲಿ ಶಾಖಾನಗರಗಳು ಸಹಿತ ೨೦ ಲಕ್ಷ ಜನರು ವಾಸಿಸುತ್ತಿದ್ದರೆಂದು ತಿಳಿದದೆ. ದಕ್ಷಿಣ ಹಿಂದುಸ್ತಾನದಲ್ಲಿ ಇಷ್ಟು ದೊಡ್ಡ ಪಟ್ಟಣವು ಯಾವದಾದರೂ ಯೆಂದಾದರೂ ಇತ್ತೆಂದು ತೋರುವದಿಲ್ಲ. ಸನ್ ೧೬೦೪ರಲ್ಲಿ ವೊಬ್ಬ ಪ್ರವಾಸಿಯು ವಿಜಾಪುರವನ್ನು ನೋಡಿ ಬರಿದದ್ದು ಹ್ಯಾಗಂದರೆ—

"ಪಟ್ಟಣದೊಳಗೆ ಯೆತ್ತರವಾದ ಉಪ್ಪರಿಗೆಗಳ ಸಾಲುಗಳನ್ನೂ ಅರಮನೆಗಳ ಸಾಲು ಗಳನ್ನೂ ಅಲ್ಲಲ್ಲಿಗೆ ನೋಡ ಬಹುದು. ಹವೆಯು ಬಹು ಆರೋಗ್ಯವಾದದ್ದು. ಪಟ್ಟಣದ ಹೊರಗೆ ಬಾಜಾರು ಮೂವತ್ತು ಯಾರ್ಡು ಅಗಲಾಗಿಯೂ ೪ ಮೈಲು ಉದ್ದಾಗಿಯೂ (ಪಶ್ಚಿಮ ಅಗಸೆಯಿಂದ ತೋರವಿಯ ವರೆಗೆ) ವೊಂದೇ ಸವನಾಗಿ ಹಬ್ಬಿದೆ. ಪ್ರತಿ ವೊಂದು ಅಂಗಡಿಯ ಮುಂದೆ ವೊಂದೊಂದು ಮರವಿರುತ್ತದೆ; ಇಡೀ ಬಾಜಾರು ಬಹು ಸ್ವಚ್ಛವಿರುವದರಿಂದ ಮನೋಹರವಾಗಿ ಕಾಣುತ್ತದೆ. ವಸ್ತ್ರ, ಅಲಂಕಾರಗಳು, ಆಯುಧ ಗಳು, ತರತರದ ಮದ್ಯಗಳು, ಉಪಹಾರದ ಪದಾರ್ಥಗಳು, ಮುಂತಾದ ಸರಕುಗಳನ್ನು ಮಾರುವವರ ಅಂಗಡಿಗಳಿಗೆ ತೆರಪಿಲ್ಲ. ಆಭರಣಗಳನ್ನು ಮಾರುವವರ ಅಂಗಡಿಗಳಲ್ಲಿ ವಜ್ರ ಮಾಣಿಕಗಳನ್ನು ಹಚ್ಚಿದಂಥ ಕಟಾರಿಗಳು, ಚೂರಿಗಳು, ಕನ್ನಡಿಗಳು, ಸರಗಳು, ಮುಂತಾದ ಬೆಲೆಯುಳ್ಳ ವೊಡವೆಗಳನ್ನು ಬಹು ಸೊಬಗಿನಿಂದ ಇಟ್ಟಿರುವರು. ಅವೇ ಅಂಗಡಿಗಳಲ್ಲಿ ನಾನಾ ಪ್ರಕಾರದ ರತ್ನಗಳಿಂದ ಹೊಳಿಯುವಂಥ ಗಿಣಿ, ಪಾರಿವಾಳ,

ನವಿಲು, ಮುಂತಾದ ಪಕ್ಷಿಗಳ ಸಾಲುಗಳನ್ನು ವೊಂದರ ಮೇಲೊಂದು ಚಿತ್ರ ವಿಚಿತ್ರ ವಾಗಿ ಇಟ್ಟಿದ್ದು ನೋಡಿ ಮನುಷ್ಯನು ಬೆರಗಾಗುತ್ತಾನೆ. ಸುಗಂಧ ದ್ರವ್ಯಗಳ ಅಂಗಡಿ ಗಳಲ್ಲಿ ಬೆಲೆಯುಳ್ಳ ಸ್ಫಟಿಕದ ಕುಪ್ಪಿಗಳಲ್ಲಿಯೂ ಬಹು ಚಂದವಾದ ಚೀನೀ ಪಾತ್ರೆಗಳ ಲ್ಲಿಯೂ ಘಮ ಘಮಿಸುವಂಥ ದುರ್ಮಿಳವಾದ ಅರ್ಕಗಳನ್ನು ತುಂಬಿ ವೊಂದರಮೇ ಲೊಂದು ಹಾಕಿದ ಹಲಿಗೆಗಳ ಮೇಲೆ ಸಾಲಾಗಿ ಇಟ್ಟಿರುವರು. ಅವುಗಳ ಯೆದುರಿಗೆ ಮದ್ಯದ ಅಂಗಡಿಗಳಲ್ಲಿ ಅಸಂಖ್ಯ ಸೀಸೆಗಳಲ್ಲಿ ತರತರದ ಬಣ್ಣಗಳುಳ್ಳ ಮದ್ಯಗಳು ಮಾರ್ಗಸ್ಥರನ್ನು ಕರೆಯುವಂತೆ ತೋರುವವು. ಸುಂದರಿಯರಾದ ನರ್ತಕಿಯರು ಮೈ ತುಂಬ ಬೆಲೆಯುಳ್ಳ ಆಭರಣಗಳನ್ನು ಧರಿಸಿಕೊಂಡು ಕಳೆ ಯೇರಿದ ಮುಖಗಳನ್ನು ಪಾಂಥಸ್ಥರಿಗೆ ತೋರುವರು. ಸಾರಾಂಶ ಬಾಜಾರಿನಲ್ಲಿ ಯೆತ್ತ ನೋಡಿದತ್ತ ದ್ರಾಕ್ಷಾ ಸವ, ಮದ್ಯ, ಸುಂದರಿಯರು, ನರ್ತಕಿಯರು, ಉಪಭೋಗ ಸಾಹಿತ್ಯಗಳು, ಪುಷ್ಪಗಳು, ಅಲಂಕಾರಗಳು, ಉಪ್ಪರಿಗೆಗಳು, ಇವೇ ಕಾಣಿಸುವವು. ಒಂದು ಓಣಿಯಲ್ಲಿ ಸಾವಿರಾರು ಜನ ಗಂಡಸರೂ ಹೆಂಗಸರೂ ಶರೆ ಕುಡಿದು ಕುಣಿಯುತ್ತಲೂ ಹಾಡುತ್ತಲೂ ಅತ್ಯಾನಂದ ದಲ್ಲಿ ಹೊತ್ತುಗಳೆಯುತ್ತಿದ್ದರು. ಅವರೊಳಗೆ ಕಡಿದಾಟ ಬಡಿದಾಟದ ಸುದ್ದಿಯೇ ಇದ್ದಿಲ್ಲ. ಈ ಬಗೆಯಾಗಿ ಆನಂದದಲ್ಲಿ ಮುಳುಗಿದ ಜನರ ತಂಡಗಳಿಗೆ ತೆರಪಿಲ್ಲ. ಇದ ಕ್ಕಿಂತ ಹೆಚ್ಚು ಆಶ್ಚರ್ಯಕರವಾದ ದರ್ಶನೀಯ ವಸ್ತುಗಳುಳ್ಳಂಥ ಇನ್ನೊಂದು ಪಟ್ಟಣ ವನ್ನು ಈ ಲೋಕದಲ್ಲಿ ಕಾಣುವದು ಶಕ್ಯವಲ್ಲ."

ಔರಂಗಜೇಬನು ಸನ್ ೧೬೮೬ರಲ್ಲಿ ವಿಜಾಪುರದ ಬಾದಶಾಹಿಯನ್ನು ಮುರಿದ ಬಳಿಕ, ಕಡೆಯ ಬಾದಶಹನಾದ ಶಿಕಂದರಶಹನಿಗೆ ವರ್ಷಕ್ಕೆ ಲಕ್ಷ ರೂಪಾಯಿ ನೇಮ ಣೂಕು ಗೊತ್ತು ಮಾಡಿ ಅವನನ್ನು ವಿಜಾಪುರದಲ್ಲೇ ಇಟ್ಟು, ತಾನೂ ಮೂರು ವರ್ಷ ಅಲ್ಲಿ ನಿಂತನು. ಸನ್ ೧೬೮೯ರಲ್ಲಿ "ತಾವುಸ" ಯೆಂಬ ಪಿಡುಗಿನಿಂದ ಪಟ್ಟಣದ ನಿವಾಸಿ ಗಳು ಲಕ್ಷಾವಧಿ ಜನರು ಸತ್ತದ್ದರಿಂದ ಔರಂಗಜೇಬನು ಅಲ್ಲಿಂದ ಹೊರಟು ಔರಂಗಾಬಾ ಧಿಗೆ ಹೋದನು. ಪಿಡಗು ಹಿಮ್ಮೆಟ್ಟಿದ ಬಳಿಕ ಬಾದಶಹನು ಪಟ್ಟಣದ ಖಾನೇಸುಮಾ ರಿಯನ್ನು ತಕ್ಕೊಂಡಾಗ ೧೧೧೬೦೦೦ ಜನರಿದ್ದರು. ಮುಂದೆ ಪಟ್ಟಣ ಬಹು ಬೇಗ ಹಾಳಾಗುತ್ತ ನಡೀತು. ಔರಂಗಜೇಬನು ಪಟ್ಟಣವನ್ನು ಮೊದಲಿನಂತೆ ತುಂಬಿಸಲಿಕ್ಕೆ ಬಹಳ ಹವಣಿಸಿದಾಗ್ಯೂ, ವ್ಯಾಪಾರಸ್ಥರಿಗೆ ಹೊಸ ಹಕ್ಕುಗಳನ್ನು ಕೊಟ್ಟು ದರ್ಬಾರದ ಜನರಿಗೆ ಹೊಸ ವೇತನಗಳನ್ನು ಮಾಡಿ ಕೊಟ್ಟಾಗ್ಯೂ ಪಟ್ಟಣದೊಳಗೆ ಜನರು ನಿಲ್ಲಲಿಲ್ಲ, ಯೆತ್ತ ನೋಡಿದತ್ತ ಹಾಳು ಕಳೆಯು ಸುರಿಯ ಹತ್ತಿತು. ಔರಂಗಜೇಬನು ಸನ್ ೧೭೦೭ರಲ್ಲಿ ಸಾಯುವ ಪೂರ್ವದಲ್ಲಿ ತನ್ನ ಮಗನಾದ ಕಾಮಬಕ್ಷನನ್ನು ವಿಜಾಪುರದ ಸುಭೇದಾರನಾಗಿ ನೇಮಿಸಿ, ಬಾದಶಹನಂತೆ ಅವನನ್ನು ಇಡುವ ಆಲೋಚನೇ ಮಾಡಿ ದನು. ಕಾಮಬಕ್ಷನು ವಿಜಾಪುರಕ್ಕೆ ತಲಪುವ ಪೂರ್ವದಲ್ಲಿ ಔರಂಗಜೇಬನು ಮರಣ ಹೊಂದಿದಾಗ್ಯೂ, ಕಾಮಬಕ್ಷನು ವಿಜಾಪುರದ ಕಿಲ್ಲೇದಾರನನ್ನು ಯುಕ್ತಿಯಿಂದ ವಶ ಮಾಡಿಕೊಂಡು ಪಟ್ಟಣದೊಳಗೆ ನಿಂತು ಸ್ವತಂತ್ರ ಬಾದಶಹನಂತೆ ಆಳ ಹತ್ತಿದನು.

ಆದರೆ ಅವನು ಬಹು ಕ್ರೂರತನದಿಂದ ದರ್ಬಾರಿನ ಜನರಲ್ಲಿ ಅಹಸೆನಖಾನ ಮುಂತಾದ ಪ್ರಮುಖ ಜನರನ್ನು ಕೊಲ್ಲಿಸಿದ್ದರಿಂದ ಉಳಿದ ಮುತ್ಸದ್ದಿಗಳು ಅವನನ್ನು ಬಿಟ್ಟು ಹೋದರು. ತರುವಾಯ ಸ್ವಲ್ಪ ದಿವಸದೊಳಗೆ ಔರಂಗಜೇಬನ ತರುವಾಯ ದಿಲ್ಲಿಯ ಬಾದಶಹನಾದ ಬಾಹಾದೂರಶಹನೆಂಬ ಕಾಮುಬಕ್ಷನ ಅಣ್ಣನಿಗೂ ಕಾಮುಬಕ್ಷನಿಗೂ ಜಗಳ ಹುಟ್ಟಿ, ಹೈದರಾಬಾದಿನ ಬಳಿಯಲ್ಲಿ ದಿಲ್ಲಿಯ ದಂಡಿನವರಿಗೂ ಕಾಮುಬಕ್ಷನಿಗೂ ಯುದ್ಧವಾಗಿ ಅದರಲ್ಲಿ ಕಾಮುಬಕ್ಷನು ಮಡಿದನು, ೧೭೧೦. ತರುವಾಯ ವಿಜಾಪುರವು ಹೈದರಾಬಾದಿನ ಸರಸುಭೇದಾರನಾದ ನಿಜಾಮ ಉಲ್ಮುಲ್ಕನ ಅಧಿಕಾರಕ್ಕೆ ಶೇರಿತು. ಅವನು ಸನ್ ೧೭೨೪ರಲ್ಲಿ ದಿಲ್ಲಿಯ ಸ್ವಾಮಿತ್ವವನ್ನು ದೂಡಿ ಸ್ವತಂತ್ರನಾದನು. ಈ ಪೂರ್ವದಲ್ಲಿ ಸನ್ ೧೭೧೦ರಲ್ಲಿಯೂ ೧೭೧೭ರಲ್ಲಿಯೂ ಬರ ಬಿದ್ದು ವಿಜಾಪುರವು ಬಹಳ ಹಾಳಾಯಿತು. ಈ ಪ್ರಕಾರ ವಿಜಾಪುರವು ಮೊದಲಿನಂತೆ ಒಂದು ಹಳ್ಳಿಯ ಸ್ವರೂಪಕ್ಕೆ ಬರುವ ಮಾರ್ಗಕ್ಕೆ ಹತ್ತಿತು. ಮುಂದೆ ಸನ್ ೧೭೬೦ರಲ್ಲಿ ಉದಗೀರದ ಬಳಿಯಲ್ಲಿ ನಿಜಾಮನಿಗೂ ಪೇಶವೇ ನಾನಾ ಸಾಹೇಬನಿಗೂ ಆದ ಯುದ್ಧದ ಕಡೆಯಲ್ಲಿ ನಿಜಾಮನು ವಿಜಾಪುರವನ್ನು ಪೇಶವನಿಗೆ ಕೊಟ್ಟನು. ಅಂದಿನಿಂದ ಸನ್ ೧೮೧೮ರಲ್ಲಿ ಪೇಶವನ ರಾಜ್ಯ ಹಾಳಾಗುವ ವರೆಗೂ ವಿಜಾಪುರವು ಪೇಶವನ ರಾಜ್ಯಕ್ಕೆ ಶೇರಿತ್ತು. ಈ ಅವಧಿಯಲ್ಲಿ ಪೇಶವನ ಸುಭೇದಾರರು ಪಟ್ಟಣದೊಳಗಿನ ದೊಡ್ಡ ದೊಡ್ಡ ಇಮಾರತುಗಳನ್ನು ಕೆಡಹಿ ಅವುಗಳಲ್ಲಿಯ ಬೆಲೆಯುಳ್ಳ ಸಾಮಾನುಗಳನ್ನು ಯೆತ್ತಿ ಕೊಂಡು ಹೋದರು. ಸನ್ ೧೮೧೮ರಲ್ಲಿ ಇಂಗ್ಲಿಷ ಸರಕಾರದವರು ವಿಜಾಪುರವನ್ನು ಸಾತಾರೆಯ ಅರಸನಿಗೆ ಕೊಟ್ಟರು. ಆ ಅರಸನ ಸರದಾರರಾದರೂ ವಿಜಾಪುರದಲ್ಲಿ ಅಲ್ಪ ಸ್ವಲ್ಪ ಉಳಿದದ್ದನ್ನು ಯೆತ್ತಿ ಕೊಂಡು ಹೋಗುವ ಕಾಯಕವನ್ನೇ ನಡಿಸಿದರು. ಈ ಪ್ರಕಾರ ಸನ್ ೧೮೪೮ರಲ್ಲಿ ಸಾತಾರೆಯ ಅರಸು ಸತ್ತದ್ದರಿಂದ ಅವನ ರಾಜ್ಯವು ಇಂಗ್ಲಿಷ ಸರಕಾರಕ್ಕೆ ಶೇರಿದಾಗ ವಿಜಾಪುರವು ಈಗಿನ ಸ್ಥಿತಿಗೆ ಬಂದು ನಿಂತಿತ್ತು. ಮುಸಲ್ಮಾನರು ವಿಜಯನಗರವನ್ನು ಹಾಳು ಮಾಡಿದ್ದರಿಂದ ಹಿಂದೂ ಜನರು ವಿಜಾಪುರವನ್ನು ಹಾಳು ಮಾಡಿದರೆಂದು ಕೆಲವರು ಅನ್ನುತ್ತಾರೆ. ಆದರೂ ಈ ಹೆಸರಾದ ಪಟ್ಟಣವು ಇಂಗ್ಲಿಷ ಸರಕಾರದ ಕೈ ಶೇರಿದ ಬಳಿಕ ಸರಕಾರದವರು ಇನ್ನೂ ಉಳಿದ ಇಮಾರತುಗಳ ದಾಗದೂಜಗಾಗಿ ವರ್ಷಕ್ಕೆ ೧೦೦೦ ರೂಪಾಯಿ ವೆಚ್ಚ ಮಾಡುತ್ತ ಬಂದದ್ದರಿಂದ ಈ ಹೊತ್ತಿಗೆ ಹಲಕೆಲವು ಇಮಾರತುಗಳು ಜೀವದಿಂದ ಉಳಿದಿರುತ್ತವೆ. ಸನ್ ೧೮೬೪ರ ವರೆಗೆ ವಿಜಾಪುರವು ತಾಲೂಕಿನ ಮುಖ್ಯ ಗ್ರಾಮವಿತ್ತು. ಸರಕಾರದವರು ಲಕ್ಷಾವಧಿ ರೂಪಾಯಿ ವೆಚ್ಚ ಮಾಡಿ, ಹಳೆ ಇಮಾರತುಗಳನ್ನು ಒಳಿತಾಗಿ ದುರಸ್ತ ಮಾಡಿ, ಆ ವರ್ಷ ವಿಜಾಪುರವನ್ನು ಜಿಲ್ಲೆಯ ಮುಖ್ಯ ಗ್ರಾಮವನ್ನು ಮಾಡಿದರು.

ಬೊಬ್ಲೇಶ್ವರ.—ವಿಜಾಪುರದ ನೈರುತ್ಯಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೪೪೦೦. ಈ ಗ್ರಾಮವಿದ್ದ ಸ್ಥಳದಲ್ಲಿ ಮೊದಲು ಜಾಲಿಯ ದೊಡ್ಡ ಬನವಿದ್ದು, ಅದರಲ್ಲಿ ಕಳ್ಳರಿಗೆ ಆಶ್ರಯವಾಗಿ ಸುತ್ತಲಿನ ಗ್ರಾಮುಗಳಿಗೆ ಬಹಳ ಉಪದ್ರವವಾಗುತ್ತಿತ್ತು. ಆದ್ದರಿಂದ ಸುತ್ತಲಿನ ೭ ಹಳ್ಳಿಗಳ ಜನರು ಕೂಡಿ ಜಾಲಿಯನ್ನು ಕಡಿದು ಈ ಗ್ರಾಮವನ್ನು

ಸ್ಥಾಪಿಸಿದರು. ಜಂಗಮಶಟ್ಟೀ ಮರಿ ಲಿಂಗಪ್ಪನೆಂಬವನು ಸನ್ ೧೭೮೦ರಲ್ಲಿ ಈ ವೂರು ಕಟ್ಟಿಸಿದನು. ಮೊದಲು ಜಾಲಿಯೊಳಗಿದ್ದ ಈಶ್ವರನಿಗಾಗಿ ಊರೊಳಗೆ ದೊಡ್ಡ ಗುಡಿಯನ್ನು ಕಟ್ಟಿಸಿ ಈಶ್ವರನ ಸ್ಥಾಪನೇ ಮಾಡಿದ್ದಾರೆ. ಇದಕ್ಕೆ ಸಿದ್ಧೇಶ್ವರನ ಗುಡಿಯೆನ್ನುವರು. ಊರ ಹೊರಗೆ ಅಂಬಲ ಮುತ್ಯಪ್ಪನೆಂಬ ಹೆಸರಿನ ದೇವಸ್ಥಾನವು ಮಶೀದಿಯ ಹಾಗೆ ಇರುತ್ತದೆ. ಅದರಲ್ಲಿ ಯಾವ ಮೂರ್ತಿಯೂ ಇಲ್ಲ.

ಚಾಂದಕವಠೆ.—ಸಿಂದಗಿಯ ವಾಯುವ್ಯಕ್ಕೆ ೮ ಮೈಲಿನ ಮೇಲೆ, ಜ. ಸ. (೮೧) ೧೭೫೮. ಊರೊಳಗೆ ರಾಮಲಿಂಗನ ಗುಡಿ, ಊರ ಹೊರಗೆ ಪರಮಾನಂದನ ಗುಡಿ ಇವೆರಡೂ ಹಳೇವಿರುತ್ತವೆ.

ಚಟ್ಟರಿಕಿ.—ಸಿಂದಗಿಯ ಪಶ್ಚಿಮಕ್ಕೆ ೧೦ ಮೈಲಿನ ಮೇಲೆ. ಇಲ್ಲಿ ದತ್ತಾತ್ರಯನ ಗುಡಿಯೊಳಗೂ ಹೊರಗೂ ನಾನಾ ಪ್ರಕಾರದ ಮೂರ್ತಿಗಳೂ ಕಲ್ಲಿನ ಆನೆ, ಸಿಂಹ, ಮುಂತಾದ ಪಶುಗಳೂ ಇರುತ್ತವೆ. ಈ ಗುಡಿಯಲ್ಲಿ ಸವಿದವೊಂದು ಲಿಪಿಯುಂಟು; ಅದು ಓದಲಿಕ್ಕೆ ಬರುವ ಹಾಗಿಲ್ಲ.

ಚಿಮ್ಮಲಿಗಿ.—ಕೃಷ್ಣಾ ಘಟಪ್ರಭೆಗಳ ಸಂಗಮ ಸ್ಥಳದಲ್ಲಿ ಇರುವ ಕಪ್ಪಡೀ ಸಂಗಮದಿಂದ ೪ ಮೈಲಿನ ಮೇಲೆ. ಇದು ಕ್ಷೇತ್ರವೆನಿಸುತ್ತದೆ. ಊರೊಳಗೂ ಹೊರಗೂ ಕೂಡಿ ೧೦೮ ಲಿಂಗಗಳಿರುತ್ತವೆಂದು ಹೇಳುತ್ತಾರೆ. ಇಲ್ಲಿ ಓದಲಿಕ್ಕೆ ಬಾರದಂಥ ಯೆರಡು ಕನ್ನಡ ಲಿಪಿಗಳಿರುತ್ತವೆ. ಕಪ್ಪಡೀ ಸಂಗಮದಲ್ಲಿ ಚೈತ್ರ ಪೂರ್ಣಿಮೆಯಲ್ಲಿ ಈಶ್ವರನ ಜಾತ್ರೆಯಾಗುತ್ತದೆ.

ದೇವನಗಾವ.—ಸಿಂದಗಿಯ ಈಶಾನ್ಯಕ್ಕೆ ೧೨ ಮೈಲಿನ ಮೇಲೆ, ಭೀಮೆಯ ದಂಡೆಯಲ್ಲಿ ಜ. ಸ. (೮೧) ೧೯೪೩. ಇವನ್ನು ದೇವನ ಭಟ್ಟನೆಂಬ ಬ್ರಾಹ್ಮಣನು ಸ್ಥಾಪಿಸಿದನೆಂದು ಹೇಳುತ್ತಾರೆ. ಕಲಮೇಶ್ವರ, ಮಲ್ಲಿಕಾರ್ಜುನ, ಶಂಕರಲಿಂಗ ಯೆಂಬ ಗುಡಿಗಳಿರುತ್ತವೆ.

ದೇವರನಾವಡಗಿ.—ಇಂಡಿಯ ಪೂರ್ವಕ್ಕೆ ೩೦ ಮೈಲಿನ ಮೇಲೆ. ಪುಣೆಯ ಪೋಲೀಸ ಸುಪರಿಂಟೆಂಡೆಂಟನೂ ನಿಜಾಮಾ ಇಲಾಖೆಯ ಪೋಲೀಸ ಕಮಿಶನರನೂ ಕೂಡಿ ಸನ್ ೧೮೭೯ರ ಜುಲಾಯಿ ತಿಂಗಳಿನ ೨೧ನೇ ತಾರೀಖಿನ ರಾತ್ರಿಯಲ್ಲಿ ವಾಸುದೇವ ಬಳವಂತ ಫಡಕೆ ಯೆಂಬ ದಾಳಿಗಾರನನ್ನು ಈ ವೂರಲ್ಲಿ ವೊಂದು ಗುಡಿಯೊಳಗೆ ಮಲಗಿದವನನ್ನು ಹಿಡಿದರು.

ಧೂಳಖೇಡ.—ಇಂಡಿಯ ಉತ್ತರಕ್ಕೆ ೧೫ ಮೈಲಿನ ಮೇಲೆ, ಭೀಮೆಯ ದಂಡೆಯಲ್ಲಿ, ಕ್ಷೇತ್ರವೆನಿಸುತ್ತದೆ. ಇಲ್ಲಿಯ ಶಂಕರಲಿಂಗವನ್ನು ಬ್ರಹ್ಮ ದೇವರು ಸ್ಥಾಪಿಸಿದ್ದಾರೆಂದು ಹೇಳುತ್ತಾರೆ. ಈ ಗುಡಿಯಲ್ಲಿ ವೊಂದು ಲಿಪಿಯುಂಟು. ಈ ಗ್ರಾಮವು ಆದ್ಯರೆಂಬ ಮನೆತನದ ವೈಷ್ಣವ ಬ್ರಾಹ್ಮಣರಿಗೆ ಇನಾಮು ಇರುತ್ತದೆ.

ಗದ್ದನಕೇರಿ.—ಕಲಾದಗಿಯ ಪೂರ್ವಕ್ಕೆ ೮ ಮೈಲಿನ ಮೇಲೆ. ಇಲ್ಲಿ ಊರ ಹೊರಗೆ ವೊಂದು ಗುಡ್ಡದ ಮೇಲೆ ವಿಜಾಪುರದ ಪದ್ಧತಿಯ ಗೋರಿಗಳೂ ಗುಡಿಗಳೂ ಕೆಲವುಂಟು. ಉಕ್ಕಲಿಯ ಮಳಿಯಪ್ಪನೆಂಬ ಪಂಚಾಳ ಜಾತಿಯ ಸತ್ಪುರುಷನ ಗೋರಿಯೂ ಅವನ ಮಗನಾದ ವೋನಪ್ಪನ ಗೋರಿಯೂ ಈ ಗುಡ್ಡದ ಮೇಲೆ ಇರುತ್ತವೆ. ಈ ಗೋರಿಗಳ ಮೇಲೆ ಗುಡಿಗಳನ್ನು ಕಟ್ಟಿಸಿದ್ದಾರೆ. ಮಳೆ ಹೋದರೆ ವೋನಪ್ಪನನ್ನು ಪೂಜಿಸಿ ಬೇಡಿ ಕೊಳ್ಳುವರು.

ಗಜೇಂದ್ರಗಡ.—ಬಾದಾಮಿಯ ದಕ್ಷಿಣಕ್ಕೆ ೨೮ ಮೈಲಿನ ಮೇಲೆ, ಜ. ಸ. (೮೧) ೫೪೫೮. ಈ ವೂರು ಮುಧೋಳದ ಘೋರ್ಪಡೆಯುವರ ಮನೆತನಕ್ಕೆ ಶೇರಿರುತ್ತದೆ. ಈ ವೂರಿನ ಬಳಿಯಲ್ಲಿ ಗಜೇಂದ್ರಗಡವೆಂಬ ದುರ್ಗ ಕೋಟೆಯನ್ನು ಶಿವಾಜಿಯು ಕಟ್ಟಿಸಿದನು. ಉಚಗಿರಿಯೆಂಬ ಮತ್ತೊಂದು ದುರ್ಗ ಕೋಟೆಯು ದೌಲತರಾವ ಘೋರ್ಪಡೆಯೆಂಬವನು ಸನ್ ೧೬೮೮ರಲ್ಲಿ ಕಟ್ಟಿಸಿದ್ದಿರುತ್ತದೆ. ಊರೊಳಗೆ ಮೂರು ನಾಲ್ಕು ಗುಡಿಗಳಿವೆ. ಊರ ಹೊರಗೆ ಮೂರು ಮೈಲಿನ ಮೇಲೆ ಕೋಟೆಯ ಬಳಿಯಲ್ಲಿ ಹೆಸರಾದದ್ದೊಂದು ಗವಿಯುಂಟು. ಇದರಲ್ಲಿ ಲಿಂಗವನ್ನು ಸ್ಥಾಪಿಸಿದ್ದಾರೆ. ಈ ಗವಿಯ ಬಳಿಯಲ್ಲಿ ಇರುವ ಯೆಳಡು ತೀರ್ಥಗಳಲ್ಲಿಯ ನೀರು ಯೆಂದೂ ಬತ್ತುವದಿಲ್ಲ. ಬಳಿಯಲ್ಲಿ ಇರುವ ವೀರಭದ್ರನ ಗುಡಿಯ ಮುಂದಿನ ಅಂತರ ಗಂಗೆಯೆಂಬ ಹೊಂಡಕ್ಕೆ ಗುಡ್ಡದ ಮೇಲಿರುವದೊಂದು ಮರದ ಬೇರಿನಿಂದ ನೀರು ಇಳಿದು ಬರುತ್ತದೆ. ಈ ಗವಿಯ ಉತ್ತರಕ್ಕೆ ಬೇರೆ ಯೆರಡು ಗವಿಗಳಲ್ಲಿ ಅರಿಶಿಣಗೊಂಡ, ಯೆಣ್ಣೆಗೊಂಡ ಯೆಂಬೆರಡು ಸಣ್ಣ ಕುಂಡಗಳಿವೆ. ಇಲ್ಲಿಯ ಕಾಳಕೇಶ್ವರನಿಗೆ ಜನರು ನಡಕೊಳ್ಳುತ್ತಾರೆ. ಕಾಳಕೇಶ್ವರನಿಗೂ ಗರ್ಭ ಗುಡಿಯ ಹಣೆ ಪಟ್ಟಿಗೂ ಬೆಳ್ಳಿಯ ಕವಚವನ್ನು ಹಾಕಿದ್ದಾರೆ. ಈ ಲಿಂಗದ ಯೆಡಕ್ಕೆ ಪಾತಾಳಗಂಗೆ ಯೆಂಬದಿನ್ನೊಂದು ಕುಂಡವಿರುತ್ತದೆ. ಈ ದೇವರ ಮುಂದಿನ ನಂದಿಯು ಕ್ರಮವಾಗಿ ಬೆಳಿಯುತ್ತದೆಂದು ಹೇಳುತ್ತಾರೆ. ಬಂಜೆ ಹೆಂಗಸರು ಈ ನಂದಿಗೆ ನಡಕೊಳ್ಳುವರು.

ಗಲಗಲಿ.—ಕಲಾದಗಿಯ ಉತ್ತರಕ್ಕೆ ೧೪ ಮೈಲಿನ ಮೇಲೆ ಕೃಷ್ಣೆಯ ದಂಡೆಯಲ್ಲಿ, ಜ. ಸ. (೮೧) ೨೨೫೨. ಇದಕ್ಕೆ ಗಾಲವ ಕ್ಷೇತ್ರವೆನ್ನುವರು. ಈ ವೂರಿನ ಬಳಿಯಲ್ಲಿ ಕೃಷ್ಣೆಯ ದಂಡೆಯಲ್ಲಿ ಸ್ವಲ್ಪ ಯೆತ್ತರವಾದ ಬಂಡೆಯಲ್ಲಿ ಸುಮಾರು ೫ ಫೂಟು ಯೆತ್ತರವಾದ ಕಮಾನಿನಂಥ ಯೇಳು ಗೂಡುಗಳಿರುತ್ತವೆ. ಅವು ಗಾಲವ ಮುಂತಾದ ಯೇಳು ಋಷಿಗಳ ಸ್ಥಾನಗಳೆಂದು ತೋರಿಸುತ್ತಾರೆ. ಕೃಷ್ಣೆಯ ಪ್ರವಾಹದೊಳಗೆ ದೊಡ್ಡದೊಂದು ಬಂಡೆಗೆ ಋಷಿ ಬಂಡೆಯೆಂದೆನ್ನುವರು. ಊರಿನ ಉತ್ತರಕ್ಕೆ ವೊಂದುವರೆ ಮೈಲಿನ ಮೇಲೆ ಹೊಳೆಯ ಪ್ರವಾಹದ ಕೆಳಗೆ ದೊಡ್ಡದೊಂದು ಗುಡಿ ಇರುತ್ತದೆಂತಲೂ, ಸನ್ ೧೮೭೬-೭೭ನೇ ವರ್ಷ ಹೊಳೆ ನೀರು ಬಹಳ ಕಡಿಮೆಯಾದದ್ದರಿಂದ ೯೦ ಫೂಟು ಚಚ್ಚೌಕಾದ ಆ ಗುಡಿಯ ಭಾಗವು ಕಾಣಿಸುತ್ತಿತ್ತೆಂತಲೂ ಹೇಳುತ್ತಾರೆ.

ಔರಂಗಜೇಬನು ಸನ್ ೧೬೮೯ರಲ್ಲಿ ಸಂಭಾಜಿಯನ್ನು ಹಿಡಿದು ಕೊಂದ ಬಳಿಕ ಬ್ರಹ್ಮಪುರಿಯಿಂದ ಹೊರಟು ಗಲಗಲಿಯಲ್ಲಿ ಬಂದು ನಿಂತಿದ್ದನು. ಸನ್ ೧೬೯೫ರಲ್ಲಿ ಅವನ ಅತಿ ವಿಸ್ತಾರವಾದ ದಂಡಿನ ಠಾಣ್ಯವು ಗಲಗಲಿಯಲ್ಲಿ ಇತ್ತು. ಆ ದಂಡಿನಲ್ಲಿ ೧೦ ಲಕ್ಷ ಕಾಲಾಳುಗಳೂ, ೬೦೦೦೦ ರಾಹುತರೂ, ೫೦೦೦೦ ವೊಂಟೆಗಳೂ, ೩೦೦೦ ಆನೆಗಳೂ, ಇದ್ದವು. ಎಲ್ಲ ಕೂಡಿ ದಂಡಿನಲ್ಲಿ ೫೦೦೦೦೦೦ ಜನರಿದ್ದರು. ಈ ದಂಡಾಳುಗಳಿಗೆ ಸಾಮಾನುಗಳನ್ನು ಪೂರೈಸಲಿಕ್ಕೆ ೬೫೦ ಬಾಜಾರುಗಳಿದ್ದವು. ದಂಡಿನ ಠಾಣ್ಯದ ಕ್ಷೇತ್ರವು ೩೦ ಮೈಲು ವಿಸ್ತಾರವಾಗಿತ್ತು. ಔರಂಗಜೇಬನೂ ಅವನ ಮಕ್ಕಳೂ ಇರುತ್ತಿದ್ದ ರಾಹುಟಗಳು ಮೂರು ಮೈಲಿನ ವರೆಗೆ ಹಬ್ಬಿದ್ದವು.

ಗೊಳಗೇರಿ.— ಸಿಂದಗಿಯ ಆಗ್ನೇಯಕ್ಕೆ ೧೦ ಮೈಲಿನ ಮೇಲೆ. ಈ ಗ್ರಾಮವನ್ನು ೧೪ನೇ ಶತಕದಲ್ಲಿ ವೊಬ್ಬ ಕುರುಬನು ತನ್ನ ಕುರಿಗಳ ದಡ್ಡಿ ಇದ್ದ ಸ್ಥಳದಲ್ಲಿ ಕಟ್ಟಿಸಿದನೆಂದು ಹೇಳುತ್ತಾರೆ. ಅವನು ಶ್ರೀಶೈಲದ ಯಾತ್ರೆಗೆ ಹೋಗುವ ಜನರಿಗೆ ಅತ್ತ ಕಡೆಯಿಂದ ವೊಂದು ಲಿಂಗವನ್ನು ತಂದು ಕೊಡಿರೆಂದು ಹೇಳಿಕೊಂಡದ್ದಕ್ಕೆ ಆ ಜನರು ಚೇಷ್ಟೆಯಿಂದ ವೊಂದು ಕುರಿಯ ಹಿಕ್ಕೆಯನ್ನು ತಂದು ಕೊಟ್ಟರಂತೆ. ಕುರುಬನು ಗುಡಿಯನ್ನು ಕಟ್ಟಿಸಿ ಅದರಲ್ಲಿ ಆ ಹಿಕ್ಕೆಯನ್ನು ಲಿಂಗವೆಂದು ಸ್ಥಾಪಿಸಿ ಬಹು ಭಕ್ತಿಯಿಂದ ಅದನ್ನು ಆರಾಧಿಸುತ್ತಿರಲಾಗಿ ಹಿಕ್ಕೆಯು ನಿಜವಾದ ಲಿಂಗವೇ ಆಯಿತು. ಈ ಲಿಂಗನಿಗೆ ಗೊಳಲೀಶ್ವರನೆಂದೆನ್ನುವರು. ಈಗ ಯೆಲ್ಲ ಜಾತಿಗಳ ಹಿಂದೂ ಜನರು ಈ ದೇವರಿಗೆ ನಡಕೊಳ್ಳುತ್ತಾರೆ. ಪ್ರತಿ ವರ್ಷ ಚೈತ್ರವದ್ಯ ಪ್ರತಿ ಪದೆಯಲ್ಲಿ ಈ ದೇವರ ಜಾತ್ರೆಯಲ್ಲಿ ಸುಮಾರು ೫೦೦೦೦ ಜನ ಕೂಡುತ್ತದೆ. ಅದರಲ್ಲಿ ೫೦೦೦ ರೂಪಾಯಿಯ ವ್ಯವಹಾರವಾಗುತ್ತದೆ.

ಗುಡೂರು.— ಹುನಗುಂದದ ನೈರುತ್ಯಕ್ಕೆ ೧೩ ಮೈಲಿನ ಮೇಲೆ, ಜ. ಸ. (೮೧) ೧೧೪೬. ಇಲ್ಲಿ ಕುಬ್ಬಸದ ಕಣಗಳೂ, ತಾಮ್ರ ಹಿತ್ತಾಳೆಗಳ ಪಾತ್ರೆಗಳೂ ಮೂರ್ತಿಗಳೂ ಆಗುತ್ತವೆ.

ಗುಳೇದಗುಡ್ಡ.— ಬಾದಾವಿಯ ಈಶಾನ್ಯಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೧೦೬೪೯. ಈ ವೂರಲ್ಲಿ ೫೦೦ ಮಗ್ಗಗಳಿರುತ್ತವೆ. ಅವುಗಳಲ್ಲಿ ಮೇಲಾದ ಕಣಗಳು ಹುಟ್ಟುತ್ತವೆ. ಇಲ್ಲಿ ಜರ್ಮನ್ ಮಿಶನರಿಗಳ ಠಾಣ್ಯವಿರುತ್ತದೆ. ಇಲ್ಲಿಯ ಕೋಟೆಯನ್ನು ವಿಜಾಪುರದವರ ಸರದಾರನಾದ ನಿಂಗಪ್ಪಾ ನಾಯಿಕ ದೇಸಾಯಿ ಯೆಂಬವನು ಸನ್ ೧೬೭೭ರಲ್ಲಿ ಕಟ್ಟಿದನು.

ಹಳ್ಳೂರು.— ಬಾಗಲಕೋಟೆಯ ಪೂರ್ವಕ್ಕೆ ೯ ಮೈಲಿನ ಮೇಲೆ, ಜನಸಂಖ್ಯೆ (೮೧) ೧೧೯೪. ಇಲ್ಲಿಯ ಬಸವೇಶ್ವರನ ಗುಡಿಯನ್ನು ಚೋಳ ಅರಸರು (ಚಲುಕ್ಯರ ಪೂರ್ವದವರು) ಕಟ್ಟಿಸಿದ್ದಾರೆಂದು ಹೇಳುತ್ತಾರೆ. ಇದರಲ್ಲಿಯ ಬಸವೇಶ್ವರನ ಮೂರ್ತಿಯು ಬಹು ದೊಡ್ಡದಿರುತ್ತದೆ. ಈ ಗುಡಿಯ ಬಳಿಯಲ್ಲಿ ವೊಂದು ಹೊಂಡವೂ ವೊಂದು ಬಾವಿಯೂ ಉಂಟು. ಊರ ಹೊರಗೆ ಗುಡ್ಡದ ಮೇಲೆ ಮೇಲ್ಗುಡಿ ಯೆಂಬ ಈಶ್ವರನ

ಗುಡಿಯುಂಟು. ಈ ಗುಡಿಯಲ್ಲಿ ೮ ಜೈನರ ತೀರ್ಥಂಕರರ ಮೂರ್ತಿಗಳಿವೆ; ಅವುಗಳಲ್ಲಿ—ಕೆಲವು ವೊಡಿದಿರುತ್ತವೆ. ಮಾರ್ಗಶೀರ್ಷದಲ್ಲಿ ಬಸೇಶ್ವರನ ಜಾತ್ರೆಯಾಗುತ್ತದೆ. ಈ ವೂರಲ್ಲಿ ಯೆರಡು ಸವಿದಂಥ ಕನ್ನಡ ಲಿಪಿಗಳಿರುತ್ತವೆ.

ಹಲಸಂಗಿ.—ಇಂಡಿಯ ಉತ್ತರಕ್ಕೆ ೧೨ ಮೈಲಿನ ಮೇಲೆ, ಜ. ಸ. (೮೧) ೧೩೭೭. ವಿಜಾಪುರದ ಮಹಮೂದಶಹನು ಇದನ್ನು ತನ್ನ ವಜೀರನಿಗೆ ಜಹಾಗೀರು ಹಾಕಿ ಕೊಟ್ಟಿದ್ದನು. ಆ ವಜೀರನು ಕಟ್ಟಿಸಿದ ಕೋಟೆಯಲ್ಲಿ ಇರುವ ದಾದೇಸಾಹೇಬ ಯೆಂಬ ಪೀರನ ಜಾತ್ರೆಯು ಪ್ರತಿ ವರ್ಷ ಆಗುತ್ತದೆ.

ಹೆಬ್ಬಾಳ.—ಬಾಗೇವಾಡಿಯ ದಕ್ಷಿಣಕ್ಕೆ ೧೦ ಮೈಲಿನ ಮೇಲೆ. ಇಲ್ಲಿ ಮುಳ್ಳುಗಳ್ಳಿಯೊಳಗೆ ವೊಂದು ದೊಡ್ಡ ಜೈನರ ಗುಡಿಯೂ ಅದರ ಬಳಿಯಲ್ಲಿ ಬೇರೆ ಮೂರು ಹಳೆ ಗುಡಿಗಳೂ ಇರುತ್ತವೆ.

ಹಿಪ್ಪರಿಗಿ.—ಸಿಂದಗಿಯ ನೈರುತ್ಯಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೨೮೪೭. ಊರ ಹೊರಗೆ ಕಲಮೇಶ್ವರನ ಗುಡಿಯಲ್ಲಿ ೧೨೫೪ನೇ ವರ್ಷದ್ದೊಂದು ಲಿಪಿಯುಂಟು. ಮತ್ತೊಂದು ಮಾರ್ತಂಡನ ಗುಡಿಯಲ್ಲಿ ವೊಂದು ಕಲ್ಲಿನ ಗುಂಡನ್ನು ಪೂಜಿಸುವರು. ಆಶ್ವಿನ ಮಾಸದಲ್ಲಿ ಈ ದೇವರ ಜಾತ್ರೆಯಾಗುತ್ತದೆ.

ಹೊತ್ರಿ.—ಇಂಡಿಯ ನೈರುತ್ಯಕ್ಕೆ ೧೨ ಮೈಲಿನ ಮೇಲೆ, ಜ. ಸ. (೮೧) ೩೧೯೩. ಇಲ್ಲಿ ಸಿದ್ಧೇಶ್ವರ, ಮಲ್ಲಿಕಾರ್ಜುನ, ಮುಂತಾದ ನಾಲ್ಕು ಹಳೆ ಗುಡಿಗಳಿವೆ.

ಹುನಗುಂದ.—ತಾಲೂಕಿನ ಮುಖ್ಯ ಗ್ರಾಮವು; ವಿಜಾಪುರದ ಆಗ್ನೇಯಕ್ಕೆ ೭೦ ಮೈಲಿನ ಮೇಲೆ, ಜ. ಸ. (೮೧) ೫೪೧೭. ಊರ ಬಳಿಯಲ್ಲಿ ಗುಡ್ಡದ ಮೇಲೆ ಮೇಗುಟಿ ಯೆಂಬ ಜೈನ ಗುಡಿಯು ಹಾಳಾದದ್ದಿರುತ್ತದೆ. ಈ ಗುಡಿಯೊಳಗಿನ ಬಹು ಸುಂದರವಾಗಿ ಚಿತ್ರ ಕೊರಿದಂಥ ಕಂಬ ಮುಂತಾದ ಕಲ್ಲುಗಳನ್ನು ವೊಯಿದು ಬಾವಿಗಳಿಗೆ ಹಾಕಿದ್ದಾರೆ. ಹಳೇ ಕಚೇರಿಯ ಬಳಿಯಲ್ಲಿ ಬಂಡೆಯೊಳಗೆ ಕೊರಿದು ಮಾಡಿದ್ದೊಂದು ಗವಿಯುಂಟು. ಊರೊಳಗೆ ರಾಮಲಿಂಗನ ಗುಡಿಯಲ್ಲಿ ಬಲ್ಲಾಳರ ಮನೆತನದ ಅಯ್ಯನೋರ್ವನೆಂಬವನು ಬರಿಸಿದ್ದೊಂದು ಲಿಪಿಯುಂಟು. ಹುನಗುಂದದಲ್ಲಿ ಮಾಮಲೇದಾರ, ಫೌಜದಾರರ ಕಚೇರಿಗಳು, ಟಪಾಲ ಕಚೇರಿ, ಯೆರಡು ಶಾಲೆಗಳು ಇರುತ್ತವೆ.

ಇಲಕಲ್ಲು.—ಹುನಗುಂದದ ದಕ್ಷಿಣಕ್ಕೆ ೮ ಮೈಲಿನ ಮೇಲೆ, ಜ. ಸ. (೮೧) ೯೫೨೪. ಇದು ವಿಜಾಪುರ ಜಿಲ್ಲೆಯಲ್ಲಿ ಮುಖ್ಯ ಪಡ ಮೂಲೆಗಳಲ್ಲಿ ಯೆಣಿಸಲ್ಪಡುತ್ತಧೆ, ಮತ್ತೂ ಇದು ಮಹಾಲಿನ ಮುಖ್ಯ ಗ್ರಾಮವದೆ. ಮಹಾಲ ಕಚೇರಿಯ ಹೊರ್ತು ಫೌಜದಾರ ಕಚೇರಿ, ಟಪಾಲ ಕಚೇರಿ, ಆಸಪತ್ರಿ, ಮ್ಯುನಿಸಿಪಾಲಿಟಿ, ೧೧ ಶಾಲೆಗಳು ಇರುತ್ತವೆ. ಈ ವೂರಲ್ಲಿ ೭೮೪ ಮಗ್ಗಗಳಿವೆ. ಅವುಗಳಲ್ಲಿ ಮೇಲಾದ ಶೀರೆಗಳು ಹುಟ್ಟುತ್ತವೆ. ಮ್ಯುನಿಸಿಪಾಲಿಟಿಯ ಅದಾಯವು ವರ್ಷಕ್ಕೆ ೫೭೭೦ ರೂಪಾಯಿ ಇರುತ್ತದೆ. ಈ ಊರಲ್ಲಿ ಬನಶಂಕರಿ, ಬಸವಣ್ಣ, ವೆಂಕೋಬ, ಯೆಂಬ ಅರ್ವಾಚೀನ ದೇವಸ್ಥಾನಗಳಿವೆ.

ಇಂಡಿ.—ವಿಜಾಪುರದ ಈಶಾನ್ಯಕ್ಕೆ ೩೦ ಮೈಲಿನ ಮೇಲೆ, ಜ. ಸ. (೮೧) ೩೬೬೭. ತಾಲೂಕಿನ ಮುಖ್ಯ ಗ್ರಾಮವು; ಮಾಮಲೇದಾರ ಮುಂತಾದ ಸರಕಾರೀ ಕಚೇರಿಗಳಿರುತ್ತವೆ. ಈ ವೂರಿಗೆ ಬುನಾದಿಯಲ್ಲಿ ಪಯಕ್ಷೇತ್ರವೆಂಬ ಹೆಸರಿತ್ತು. ಅದರೀಚೆಯಲ್ಲಿ ಇದಕ್ಕೆ ಚಿಕ್ಕ ಇಂಡಿಯನ್ನುವರು. ಹಿರೆ ಇಂಡಿಯು ಸುಮಾರು ವೊಂದು ಮೈಲಿನ ಮೇಲೆ ಇತ್ತೆಂದು ತೋರುತ್ತದೆ. ಒಂದಾನೊಂದು ಕಾಲದಲ್ಲಿ ಹಿರೆ ಇಂಡಿಯದೊಂದು ಆಕಳು ಪ್ರತಿ ದಿವಸ ಅಡವಿಯಲ್ಲಿ ವೊಂದು ಸ್ಥಳದಲ್ಲಿ ಹಾಲು ಕರೆದು ಹೋಗುತ್ತಿತ್ತಂತೆ. ದನ ಕಾಯುವ ಹುಡುಗನು ಅದನ್ನು ನೋಡಿ ಊರ ಜನರಿಗೆ ತಿಳಿಸಲಾಗಿ, ಅವರು ಬಂದು ಆ ಹಾಲು ಕರೆಯುವ ಸ್ಥಳವನ್ನು ಅಗಿದರು. ಅಲ್ಲಿ ವೊಂದು ಕಲ್ಲು ಕಾಣಿಸಿತು. ಅದರ ಸುತ್ತು ಮುತ್ತು ಅಗಿದ ಹಾಗೆ ಕಲ್ಲು ನೆಲದೊಳಗೆ ಇಳಿಯುತ್ತ ಹೋಗಿ ಕೈಗೆ ಹತ್ತಲಿಲ್ಲ. ಮುಂದೆ ಹಿರೆ ಹಿಂಡಿಯ ಗೌಡನಿಗೆ ಸ್ವಪ್ನದಲ್ಲಿ ಈಶ್ವರನು ಆ ಅಗಿದ ಸ್ಥಳದಲ್ಲಿ ನನ್ನನ್ನು ಪೂಜಿಸಿರೆಂದು ಹೇಳಿದನು. ಮುಂದೆ ಕಂತೇಶ್ವರನೆಂಬ ಈ ಈಶ್ವರನ ಮಾಹಾತ್ಮ್ಯ ಬೆಳಿದು ಚಿಕ್ಕ ಇಂಡಿಯ ಗ್ರಾಮವು ವುಂಟಾಯಿತು, ಕಂತೇಶ್ವರನ ಗುಡಿಯನ್ನು ಕಟ್ಟಿಸಿದರು. ಈ ಗುಡಿಯ ಬಳಿಯಲ್ಲಿ ವೊಂದು ಕನ್ನಡ ಲಿಪಿಯುಂಟು; ಅದರಲ್ಲಿ ಬರಿದದ್ದು ತಿಳಿದಿಲ್ಲ. ಸಾಲೊಟಗಿಯಿಂದ ತಂದದ್ದಿನ್ನೊಂದು ಲಿಪಿಯ ಕಲ್ಲು ಪೋಲೀಸ ಕಚೇರಿಯ ಬಳಿಯಲ್ಲಿ ಇರುತ್ತದೆ. ಅದರ ಮೂರು ಮೋರೆಗಳ ಮೇಲೆ ದೇವನಗರೀ ಲಿಪಿಗಳೂ ೪ನೇ ಮೋರೆಯ ಮೇಲೆ ಕನ್ನಡ ಲಿಪಿಯೂ ಉಂಟು.

ಇಂಗಳೇಶ್ವರ.—ಬಾಗೇವಾಡಿಯ ಈಶಾನ್ಯಕ್ಕೆ ೬ ಮೈಲಿನ ಮೇಲೆ, ಜ. ಸ. (೮೧) ೨೪೬೧-೬ನೇ ಶತಕದಲ್ಲಿ ಕಟ್ಟಿಸಿದ ಮೂರು ಗುಡಿಗಳು, ಸೋಮೇಶ್ವರ, ನಾರಾಯಣ, ಕಲಮೇಶ್ವರ, ಯೆಂಬವು ಇರುತ್ತವೆ. ೪ನೇ ಶೋಭನ ದೇವನ ಗುಡಿಯಲ್ಲಿ ವೊಂದು ಲಿಪಿಯುಂಟು. ಊರ ಹೊರಗೆ ಗುಡ್ಡದೊಳಗೆ ಕೊರಿದ ಗುಡಿಗಳು ಯೆರಡು ಇರುತ್ತವೆ. ಅವುಗಳಲ್ಲಿ ಅಕ್ಕನಾಗಮ್ಮನ ಗುಡಿಯು ಹಾಳಾಗಿದೆ; ೨ನೇ ಸಿದ್ಧೇಶ್ವರನ ಗುಡಿಯು ವೊಳಿತಾಗಿ ಕೊರಿದದ್ದಿರುತ್ತದೆ. ಇಂಗಳೇಶ್ವರದ ಬಳಿಯಲ್ಲಿ ತಿಂಗಳೇಶ್ವರವೆಂಬದೊಂದು ಹಳೆ ಪಟ್ಟಣವಿತ್ತೆಂದು ಹೇಳುತ್ತಾರೆ. ನಾರಾಯಣನ ಗುಡಿಯಲ್ಲಿಯೂ ಸೋಮೇಶ್ವರನ ಗುಡಿಯಲ್ಲಿಯೂ ಲಿಪಿಗಳಿರುತ್ತವೆ.

ಜೈನಾಪುರ.—ಬಾಗಲಕೋಟೆಯ ವಾಯವ್ಯಕ್ಕೆ ೨೫ ಮೈಲಿನ ಮೇಲೆ ಕೃಷ್ಣೆಯ ದಂಡೆಯಲ್ಲಿ, ಜ. ಸ. (೮೧) ೧೬೬೩. ಇಲ್ಲಿ ಕೃಷ್ಣೆಯು ಉತ್ತರ ವಾಹಿನಿ ಇದ್ದದರಿಂದ ಜನರು ಭಕ್ತಿಯಿಂದ ಸ್ನಾನ ಮಾಡುತ್ತಾರೆ. ಹೊಳೆಯ ದಂಡೆಯಲ್ಲಿ ಮೂರು ಅರ್ವಾಚೀನ ಗುಡಿಗಳಿವೆ. ಪೂರ್ವದಲ್ಲಿ ಇಲ್ಲಿ ಜೈನರ ವಸ್ತಿಯೇ ಇತ್ತೆಂದು ಹೇಳುತ್ತಾರೆ.

ಕಾಖಂಡಿಕಿ.—ವಿಜಾಪುರದ ದಕ್ಷಿಣಕ್ಕೆ ೧೬ ಮೈಲಿನ ಮೇಲೆ. ಇಲ್ಲಿ ಮಹಿಪತಿ ಸ್ವಾಮಿ ಯೆಂಬ ಸತ್ಪುರುಷನ ವೃಂದಾವನವಿರುತ್ತದೆ. ಮಹಿಪತಿಯು ಅಥಣಿಯ ಬಳಿಯಲ್ಲಿ ಐಗಳಿ ಯೆಂಬ ಹಳ್ಳಿಯ ಕುಲಕರಣಿ ಇದ್ದು, ಸ್ವಪರಾಕ್ರಮದಿಂದ ಔರಂಗಜೇಬನು

ವಿಜಾಪುರದಲ್ಲಿ ಇದ್ದಾಗ ಅವನ ಮಂತ್ರಿಯಾದನು. ಅವನ ಹೆಂಡತಿ ತಿಮ್ಮವ್ವನೆಂಬವಳು ಸಾರವಾಡದಲ್ಲಿ ಭಾಸ್ಕರ ಸ್ವಾಮಿಯ ಸೇವೆಯನ್ನು ಮಾಡುತ್ತಿದ್ದಳು. ಆ ಸ್ವಾಮಿಯ ಅಪ್ಪಣೆಯಿಂದ ಮಹಿಪತಿಯೂ ಸೇವೆಗೆ ನಿಂತನು. ಕಡೆಯಲ್ಲಿ ಭಾಸ್ಕರ ಸ್ವಾಮಿಯು ಆ ಗಂಡ ಹೆಂಡರಿಗೆ ಪ್ರಸನ್ನನಾಗಿ ಉಪದೇಶ ಮಾಡಿದ್ದರಿಂದ ಮಹಿಪತಿಯು ತನ್ನ ಮಂತ್ರಿಪದವನ್ನು ಬಿಟ್ಟು ಹೆಂಡತಿಯೊಡನೆ ಭಿಕ್ಷೆ ಬೇಡ ಹತ್ತಿದನು. ಕಾಖಂಡಿಕಿಯ ಊರವರು ಮಹಿಪತಿಗೆ ವೊಂದು ಮನೆಯನ್ನೂ ಕೆಲವು ಭೂಮಿಯನ್ನೂ ಕೊಟ್ಟು ಅವನನ್ನು ಇಟ್ಟು ಕೊಂಡರು. ಅಲ್ಲಿ ತಿಮ್ಮವ್ವನು ಯೆರಡು ಅವಳ ಜವಳ ಮಕ್ಕಳನ್ನು ಹಡಿದಳು. ಮಹಿಪತಿಯು ಸತ್ಪುರುಷನೆನಿಸಿಕೊಂಡು ಕಾಲಕ್ಷೇಪ ಮಾಡಿ ಕಡೆಯಲ್ಲಿ ಕೊಲ್ಲಾಪುರದಲ್ಲಿ ಮರಣ ಹೊಂದಿದನು. ಅವನ ಹೆಣವನ್ನು ತಂದು ಕಾಖಂಡಿಕಿಯಲ್ಲಿ ಹುಗಿದು ಗೋರಿಯ ಮೇಲೆ ವೃಂದಾವನವನ್ನು ಕಟ್ಟಿದ್ದಾರೆ. ಮಹಿಪತಿಯ ಗುಡಿಯ ಮಹಾದ್ವಾರದ ಮೇಲೆ ನೌಬತಖಾನೆ ಇರುತ್ತದೆ. ಮಾರ್ಗಶೀರ್ಷ ವದ್ಯ ಪ್ರತಿಪದೆಯಲ್ಲಿ ಮಹಿಪತಿಯ ಆರಾಧನೆಯಾಗುತ್ತವೆ. ಕಾಖಂಡಿಕಿಯಲ್ಲಿ ಬೇರೆ ಮೂರು ಸಣ್ಣ ಗುಡಿಗಳಿವೆ. ಊರ ಹೊರಗೆ ದಸ್ತಗೀರೆಂಬ ಪೀರನ ದರ್ಗಾದಲ್ಲಿ ಪ್ರತಿ ವರ್ಷ ಉರುಸು ಆಗುತ್ತದೆ.

ಕಲಾದಗಿ.—ಉತ್ತರ ಅಕ್ಷಾಂಶ ೧೬°, ೧೧′, ಪೂರ್ವ ರೇಖಾಂಶ ೭೫°, ೩೩′, ಘಟಪ್ರಭೆಯ ದಕ್ಷಿಣ ದಂಡೆಯಲ್ಲಿ, ವಿಜಾಪುರದ ದಕ್ಷಿಣಕ್ಕೆ ೪೫ ಮೈಲಿನ ಮೇಲೆ, ಜ. ಸ. (೮೧) ೭೦೦೪. ಇದು ಪೂರ್ವದಲ್ಲಿ ಅಪ್ರಸಿದ್ಧವಾದ ಗ್ರಾಮವು. ಬ್ರಿಟಿಶ ಸರಕಾರದ ಅಮಲಿನ ಆರಂಭದಲ್ಲಿ ದಕ್ಷಿಣ ಮಹಾರಾಷ್ಟ್ರದ ಜಹಾಗಿರದಾರರು ಸರಕಾರದ ನೌಕರಿಗೆ ಇಟ್ಟ ರಾಹುತರು ಕಲಾದಗಿಯಲ್ಲಿ ಇರುತ್ತಿದ್ದರು. ಆ ರಾಹುತರನ್ನು ಸರಕಾರದವರು ತೆಗಿದ ಬಳಿಕ ರಾಹುತರ ಛಾವಣಿಯು ಹಾಳು ಬಿದ್ದಿತ್ತು. ಮುಂದೆ ಸನ್ ೧೮೬೪ರಲ್ಲಿ ಕಲಾದಗಿಯು ಜಿಲ್ಲೆಯ ಮುಖ್ಯ ಗ್ರಾಮವಾದದ್ದರಿಂದ ಊರು ತುಂಬುತ್ತ ನಡಿದಿತ್ತು. ಆದರೆ ೧೮೮೪ರಲ್ಲಿ ಜಿಲ್ಲೆಯ ಠಾಣ್ಯವನ್ನು ವಿಜಾಪುರಕ್ಕೆ ವೊಯಿದದ್ದರಿಂದ ಕಲಾದಗಿಯು ಮೊದಲಿನಂತೆ ಹಳ್ಳಿಯ ಸ್ವರೂಪವನ್ನು ಹೊಂದಿತು. ಆದರೂ ಟಪಾಲ ಕಚೇರಿ, ಆಸಪತ್ರಿ, ಯೆರಡು ಶಾಲೆಗಳು ಇರುತ್ತವೆ.

ಕರಡಿ.—ಹುನಗುಂದದ ಈಶಾನ್ಯಕ್ಕೆ ೧೦ ಮೈಲಿನ ಮೇಲೆ. ಇಲ್ಲಿ ಮೂರು ಪ್ರಾಚೀನ ಗುಡಿಗಳೂ ಮೂರು ಲಿಪಿಗಳೂ ಇರುತ್ತವೆ. ಬಸವಣ್ಣನ ಗುಡಿಯೊಳಗಿನ ಬಸವಣ್ಣನು ಕರಡಿಯ ಹಾಗೆ ಇರುವದರಿಂದ ಈ ವೂರಿಗೆ ಈ ಹೆಸರು ಬಂದದೆಂದು ಹೇಳುತ್ತಾರೆ. ಶಿಲಾಲಿಪಿಗಳಲ್ಲಿ ವೊಂದು ವಿಜಯನಗರದ ಸದಾಶಿವರಾಯನು ೧೫೫೩ರಲ್ಲಿ ಬರಿಸಿದ್ದಿರುತ್ತದೆ.

ಕಟಗೇರಿ.—ಕಲಾದಗಿಯ ಆಗ್ನೇಯಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೧೧೧೯, ಇಲ್ಲಿ ರೇಲ್ವೇ ಸ್ಟೇಶನ್ನು ಇರುತ್ತದೆ. ಪೂರ್ವದಲ್ಲಿ ಊರ ಸುತ್ತು ಮುತ್ತು

ಬಹಳ ಕೆರೆಗಳಿದ್ದವೆಂದು ಹೇಳುತ್ತಾರೆ. ಅವುಗಳಲ್ಲಿ ಯೆರಡು ಮಾತ್ರ ಈಗ ಉಳಿದಿರುತ್ತವೆ. ಒಂದು ಕೆರೆಯ ಮೇಲೆ ಚಾಲುಕ್ಯರ ಯೆರಡು ಲಿಪಿಗಳಿರುತ್ತವೆ.

ಕೆಳವಡಿ.—ಬಾದಾಮಿಯ ದಕ್ಷಿಣಕ್ಕೆ ೧೧ ಮೈಲಿನ ಮೇಲೆ. ಇಲ್ಲಿ ರಂಗನಾಥನ ಗುಡಿಯಲ್ಲಿ ಸಿಂದನೆಂಬ ಮಾಂಡಲಿಕ ಅರಸು ಬರಿಸಿದ್ದೊಂದು ಲಿಪಿ ಇರುತ್ತದೆ.

ಕೆರೂರು.—ಬಾದಾಮಿಯ ವಾಯವ್ಯಕ್ಕೆ ೧೧ ಮೈಲಿನ ಮೇಲೆ, ಜ. ಸ. (೮೧) ೩೮೩೩. ಕೊಲ್ಲಾಪುರದಿಂದ ಹುಬ್ಬಳ್ಳಿಗೆ ಹೋಗುವ ಹಳೆ ಮಾರ್ಗದ ಮೇಲೆ ಈ ವೂರು ಇರುವ ಸ್ಥಳದಲ್ಲಿ ವೊಬ್ಬ ಸಮ್ಮಗಾರನು ಗುಡುಸಲು ಹಾಕಿ ಕೊಂಡು ಇರುತ್ತಿದ್ದನು. ಅವನು ದಾರಿಕಾರರ ಹರಕ ಕೆರವುಗಳನ್ನು ಹೊಲಿದು ಕೊಟ್ಟು ಹೊಟ್ಟೆ ತುಂಬಿ ಕೊಳ್ಳುತ್ತಿದ್ದನು. ಒಂದಾನೊಂದು ದಿವಸ ಸಲಾಬತಖಾನನೆಂಬ ಪಠಾಣನು ಬೇಟೆಯಾಡುತ್ತ ಕೆರವುಗಾರನ ಮನೆಯಲ್ಲಿ ನೀರು ಕುಡಿದು, ಆ ಮಾರ್ಗದಲ್ಲಿ ದಾರಿಕಾರರ ತುಳಕಲ ಬಹಳ ಇರುತ್ತದೆಂದು ಕೇಳಿ, ಆ ಸಮ್ಮಗಾರನ ಸಹಾಯ ತಕ್ಕೊಂಡು ಕೆರೂರಿನ ಕೋಟೆಯನ್ನು ಕಟ್ಟಿಸಿದನು. ಈ ಕೋಟೆಯ ವೊಂದು ಕೊತ್ತಳದಲ್ಲಿ ವೊಂದು ಕಲ್ಲಿನ ಮೇಲೆ ಆ ಕೆರವುಗಾರನ ಮೂರ್ತಿಯನ್ನು ಕಟೆದು ಇಟ್ಟಿದ್ದಾರೆ. ಅವನಿಂದಲೇ ಕೆರೂರು (ಕೆರವಿನವನ ಊರು) ಯೆಂಬ ಹೆಸರು ಬಂದದೆ. ಊರ ಸುತ್ತಲಿನ ಕೋಟೆಯು ಸಾಮಾನ್ಯ ತರದ್ದಿರುತ್ತದೆ. ಕೋಟೆಯ ಹೊರಗೆ ಬಾಜಾರು ಇರುವದು. ನಗರೇಶ್ವರ, ರಾಚೋಟೇಶ್ವರ, ಮುಂತಾದ ಗುಡಿಗಳು ಯೇಳೆಂಟು ಇರುತ್ತವೆ. ರಾಚೋಟೇಶ್ವರನ ರಾಮನವಮಿಯ ರಥೋತ್ಸವದಲ್ಲಿ ಭಕ್ತರು ದೇವರ ಮುಂದೆ ಬೆಂಕಿಯ ಮೇಲೆ ನಡಿಯುತ್ತಾರೆ. ಈ ಊರಲ್ಲಿ ಕೆಲವು ಲಿಪಿಗಳಿರುತ್ತವೆ. ಗಣಪತಿಯ ಗುಡಿಯೊಳಗಿನ ಗಣಪತಿಯ ಹೊಟ್ಟೆಯೊಳಗೆ ದ್ರವ್ಯವಿರುತ್ತದೆಂದು ವೊಂದು ಲಿಪಿಯಲ್ಲಿ ಬರಿದದ್ದರಿಂದ ಯಾರೋ ಗಣಪತಿಯನ್ನು ವೊಡಿದು ಚಲ್ಲಿದರು. ಗಣಪತಿಯ ಹೊಟ್ಟೆಯೊಳಗೆ ಪೊಳ್ಳು ಪ್ರದೇಶವಿತ್ತು. ಆದರೆ ದ್ರವ್ಯದ ಸುದ್ದಿ ಮಾತ್ರ ಬೈಲಿಗೆ ಬರಲಿಲ್ಲ.

ಕುಂದರಗಿ.—ಬಾಗಲಕೋಟೆಯ ವಾಯವ್ಯಕ್ಕೆ ೧೦ ಮೈಲಿನ ಮೇಲೆ. ಇಲ್ಲಿ ಹನುಮಂತ, ಈಶ್ವರ, ಯೆಂಬೆರಡು ದೇವಸ್ಥಾನಗಳಿವೆ. ಎರಡನೇದು ೧೦ನೇ ಶತಕದಲ್ಲಿ ಕಟ್ಟಿದ ಹಾಗೆ ಕಾಣುತ್ತದೆ.

ಕುಂಟೋಜಿ.—ಮುದ್ದೇಬಿಹಾಳದ ಈಶಾನ್ಯಕ್ಕೆ ೦ ಮೈಲಿನ ಮೇಲೆ. ಇಲ್ಲಿ ಬಸವೇಶ್ವರನ ಗುಡಿಯು ದೊಡ್ಡದಿರುತ್ತದೆ. ಅದರಲ್ಲಿ ಸವಿದದ್ದೊಂದು ಲಿಪಿಯುಂಟು.

ಮಹಾಕೂಟ.—ನಂದಿಕೇಶ್ವರ ನೋಡು.

ಮಮದಾಪುರ.—ವಿಜಾಪುರದ ನೈರುತ್ಯಕ್ಕೆ ೨೦ ಮೈಲಿನ ಮೇಲೆ, ಜ. ಸ. (೮೧) ೧೭೭೧. ವಿಜಾಪುರದ ಮಹಮೂದಶಹನಿಗೆ ಕೊಂಕಣವನ್ನು ನೋಡುವ ಅಪೇಕ್ಷೆಯು ಬಹಳಾದ್ದರಿಂದ ಅವನ ಪ್ರಖ್ಯಾತ ಮಂತ್ರಿಯಾದ ಮುರಾರಿ ಪಂತನು ಈಗ ಮಮದಾಪುರವಿರುವ ಸ್ಥಳದಲ್ಲಿ ಹೊಸ ಕೆರೆಗಳನ್ನು ಮಾಡಿ ಕೊಂಕಣದ ಮರ ಪೈರುಗಳನ್ನು ಸ್ವಲ್ಪ ದಿವಸದೊಳಗೆ ಬೆಳಿಸಿ ಬಾದಶಹನಿಗೆ ತೋರಿಸಲಾಗಿ ಬಾದಶಹನು ಸಂತು

ಷ್ಟನಾಗಿ, ಅಲ್ಲಿ ಹೊಸ ಊರು ಕಟ್ಟಿಸಿ, ಅದಕ್ಕೆ ಮಹಮುದಾಪುರವೆಂದು ತನ್ನ ಹೆಸರೇ ಇಟ್ಟನು. ಮೊದಲು ಈ ಸ್ಥಳದಲ್ಲಿ ಅಂತಾಪುರ, ಬರಿಗಿ, ಖಾಸಬಾಗ, ಚವಡಾಪುರ ಯೆಂಬ ನಾಲ್ಕು ಸಣ್ಣ ಹಳ್ಳಿಗಳಿದ್ದವು. ಊರ ಹೊರಗೆ ಯೆರಡು ಕೆರೆಗಳನ್ನು ಮಹಮೂದನು ಕಟ್ಟಿಸಿದ್ದಾನೆ. ದೊಡ್ಡ ಕೆರೆಯ ವೊಡ್ಡು ೨೬೬೦ ಫೂಟು ಉದ್ದ, ೨೭ ಫೂಟು ಯೆತ್ತರ ಇರುತ್ತದೆ. ಕೆರೆ ತುಂಬಿದಾಗ ಅದರ ಪಾತ್ರೆಯು ೮೬೪ ಯೆಕರು ಇರುತ್ತದೆ. ಮಳೆಯು ತೀರ ಹೋದರೆ ಮಾತ್ರ ಕೆರೆಯ ನೀರು ಬತ್ತುತ್ತದೆ. ಮುಂಬಯಿ ಇಲಾಖೆಯಲ್ಲಿ ಇದರಷ್ಟು ದೊಡ್ಡ ಹಳೆ ಕೆರೆಯು ಡಂಬಳದ ಕೆರೆಯ ಹೊರ್ತು ಮತ್ತೊಂದು ಇಲ್ಲೆಂದು ಹೇಳ ಬಹುದು. (ಮದಗದ ಕೆರೆಯು ಮೈಸೂರಿನ ಶೀಮೆಯೊಳಗೆ ಇರುತ್ತದೆ). ಸಣ್ಣ ಕೆರೆಯು ತುಂಬಿದಾಗ ಅದರ ಪಾತ್ರೆಯು ೪೨೮ ಯೆಕರು ಇರುತ್ತದೆ; ಅದರ ವೊಡ್ಡು ೧೧೮೦ ಫೂಟು ಉದ್ದ ಇರುತ್ತದೆ. ಆದರೆ ಕೆರೆ ಯೆಷ್ಟು ತುಂಬಿದರೂ ನೀರು ೧೦ ಫೂಟಗಿಂತ ಹೆಚ್ಚು ಆಳವಿರುವದಿಲ್ಲ. ಆದ್ದರಿಂದ ಬೇಸಿಗೆಯಲ್ಲಿ ಕೆರೆಯು ಬತ್ತುತ್ತದೆ. ಆಗ ಕೆರೆಯೊಳಗೆ ಧಾನ್ಯಗಳನ್ನು ಬಿತ್ತುವರು. ಈ ಯೆರಡೂ ಕೆರೆಗಳಿಂದ ೬೭೪ ಯೆಕರು ಭೂಮಿಗೆ ನೀರು ದೊರಿಯುತ್ತದೆ. ಈ ಯೆರಡೂ ಕೆರೆಗಳ ಮೇಲೆ ಮಹಮೂದಶಹನು ಸನ್ ೧೬೩೩ರಲ್ಲಿ ಬರಿಸಿದ ಲಿಪಿಗಳು ಇರುತ್ತವೆ. ಅವುಗಳಲ್ಲಿ ಯೆರಡೂ ಕೆರೆಗಳಿಗೆ ಕೂಡಿ ೫೦೦೦೦ ಹೊನ್ನು ವೆಚ್ಚಾಯಿತೆಂದು ಬರಿದದೆ. ಮಮುದಾಪುರದಲ್ಲಿ ವೊಳಗಡೆಯಲ್ಲಿ ಕಟ್ಟಿಸಿದ ಮಾರುತಿ, ಸಿದ್ದೇಶ್ವರ, ವಿಠೋಬ, ಮುಂತಾದ ದೇವಸ್ಥಾನಗಳು ಹತ್ತೆಂಟು ಇರುತ್ತವೆ. ಬಾಜಾರಿನಲ್ಲಿ ಕಮಾಲ ಸಾಹೇಬನೆಂಬ ಪೀರನ ಗೋರಿ ಇರುತ್ತದೆ. ಈ ವೂರಲ್ಲಿ ಢಡೋತಿಯ ಬಟ್ಟೆಗಳು ಹುಟ್ಟುತ್ತವೆ.

**ಮಂಕಣಿ.**— ಬಾಗಲಕೋಟೆಯ ಈಶಾನ್ಯಕ್ಕೆ ೨೦ ಮೈಲಿನ ಮೇಲೆ. ಕೃಷ್ಣೆಯ ದಂಡೆಯಲ್ಲಿ ಈಶ್ವರನ ಗುಡಿಯಲ್ಲಿ ದೇವಗಿರಿಯ ಯಾದವರ ಕನ್ನಡ ಲಿಪಿಯುಂಟು. ಕೃಷ್ಣೆಯ ದಂಡೆಯಲ್ಲಿ ವಿಷದ ಕುಂಡವಿರುತ್ತದೆ. ಅದರ ನೀರೊಳಗೆ ವಿಷ್ಟವಿರುತ್ತದೆಂದು ಹೇಳಿ ಊರವರು ಅದರ ಸುತ್ತು ಮುತ್ತು ಬೇಲಿಯನ್ನು ಹಚ್ಚಿರುತ್ತಾರೆ.

**ಮುದ್ದೇಬಿಹಾಳ.**— ವಿಜಾಪುರದ ಆಗ್ನೇಯಕ್ಕೆ ೪೫ ಮೈಲಿನ ಮೇಲೆ, ತಾಲೂಕಿನ ಮುಖ್ಯ ಗ್ರಾಮವು, ಜ. ಸ. (೮೧) ೫೩೨೫. ಇಲ್ಲಿ ಮುನಸೀಫ ಕೋರ್ಟು, ಆಸಪತ್ರಿ, ಉಂಟು. ಈ ವೂರನ್ನು ಬಸರಕೋಟೆಯ ಈಗಿನ ನಾಡಗೌಡರ ಮೂಲ ಪುರುಷನಾದ ಪರಮಣ್ಣನೆಂಬವನು ಸನ್ ೧೬೮೦ರಲ್ಲಿ ಕಟ್ಟಿಸಿದನು. ಒಂದು ಹಳ್ಳದ ಪೂರ್ವ ದಂಡೆಯಲ್ಲಿ ಪರ್ವತಗಿರಿ ಯೆಂಬ ಹಳ್ಳಿಯೂ, ಪಶ್ಚಿಮ ದಂಡೆಯಲ್ಲಿ ಮುದ್ದೇಬಿಹಾಳವೂ ಉಂಟು.

**ಮುದಕವ್ವಿ.**— ಬಾದಾವಿಯ ವಾಯವ್ಯಕ್ಕೆ ೨೪ ಮೈಲಿನ ಮೇಲೆ, ಜ. ಸ. (೮೧) ೧೨೩೬. ಊರಿನ ಸುತ್ತು ಮುತ್ತು ಕೋಟೆಯೂ ನಡು ಊರಲ್ಲಿ ಬಾಲೇಕಿಲ್ಲೆಯೂ ಉಂಟು. ಎರಡೂ ಈಗ ಹಾಳಾಗಿವೆ. ಪೂರ್ವದಲ್ಲಿ ಇದಕ್ಕೆ ಗಹನದುರ್ಗವೆಂಬ ಹೆಸರಿತ್ತು. ಇಲ್ಲಿ ಢಡೋತಿಯ ವಸ್ತ್ರಗಳು ಹುಟ್ಟುತ್ತವೆ.

ಮುತ್ತಿಗಿ.—ಬಾಗೇವಾಡಿಯ ನೈರುತ್ಯಕ್ಕೆ ೭ ಮೈಲಿನ ಮೇಲೆ. ಇಲ್ಲಿ ೯ ಗುಡಿಗಳಿವೆ; ಲಕ್ಷ್ಮಿನಾರಾಯಣನ ಗುಡಿಯಲ್ಲಿ ದೇವಗಿರಿಯ ಯಾದವ ಅರಸು ೧೧೮೯ರಲ್ಲಿ ಬರಿಸಿದ ಲಿಪಿ ಇರುತ್ತದೆ.

ನಾಲತವಾಡ.—ಮುದ್ದೇಬಿಹಾಳದ ಆಗ್ನೇಯಕ್ಕೆ ೧೩ ಮೈಲಿನ ಮೇಲೆ, ಜನಸಂಖ್ಯ (೮೧) ೪೨೯೩. ಇಲ್ಲಿ ಮೂರು ಗುಡಿಗಳೂ ನಾಲ್ಕು ಲಿಪಿಗಳೂ ಇರುತ್ತವೆ. ಒಂದು ಲಿಪಿಯು ಚಾಲುಕ್ಯರ ಜಗದೇಕಮಲ್ಲನು ಬರಿಸಿದ್ದಿರುತ್ತದೆ.

ನಂದಿಕೇಶ್ವರ.—ಬಾದಾವಿಯ ಪೂರ್ವಕ್ಕೆ ೩ ಮೈಲಿನ ಮೇಲೆ. ಹಲವು ಸಣ್ಣ ಹಳ್ಳಿಗಳು ಕೂಡಿ ಈ ಹಳ್ಳಿಯಾಗಿರುತ್ತದೆ; ಜ. ಸ. (೮೧) ೯೦೭. ಇಲ್ಲಿ ಮಹಾಕೂಟೇಶ್ವರವೆಂಬ ದೇವಾಲಯುಗಳು ಬಹು ಪ್ರಸಿದ್ಧವಿರುತ್ತವೆ. ಒಂದು ತಗ್ಗಾದ ಪ್ರದೇಶದೊಳಗೆ ಪಾವಟಗೆಗಳ ಕೆಳಗೆ ವೊಂದು ಸುತ್ತು ಅವಾರದ ಗೋಡೆಯೊಳಗೆ ನಾನಾ ಪ್ರಕಾರದ ಆಕಾರವುಳ್ಳಂಥ ಅಸಂಖ್ಯ ಸಣ್ಣ ಗುಡಿಗಳಿರುತ್ತವೆ. ಈ ಗುಡಿಗಳೊಳಗೂ ಹೊರಗೂ ಅಸಂಖ್ಯ ಲಿಂಗಗಳೂ ನಾಗರ ಹಾವಿನ ಕಲ್ಲುಗಳೂ ಇರುತ್ತವೆ. ಅವಾರದ ಮಧ್ಯ ಭಾಗದಲ್ಲಿ ವಿಷ್ಣು ಪುಷ್ಕರಣೀ ತೀರ್ಥವೆಂಬ ಹೊಂಡವಿರುತ್ತದೆ. ಅದರ ನೀರು ಯಾವಾಗಲೂ ಇದ್ದಷ್ಟೇ ಇರುತ್ತದೆಂತಲೂ, ಅದನ್ನು ಅಗಸ್ತ್ಯ ಋಷಿಯು ಕಟ್ಟಿಸಿದನೆಂತಲೂ ಹೇಳುತ್ತಾರೆ. ಈ ಹೊಂಡದ ದಂಡೆಯಲ್ಲಿ ಮಹಾಕೂಟೇಶ್ವರನ ಗುಡಿಯುಂಟು. ಆ ಗುಡಿಯೊಳಗೆ ಹೋಗ ಬೇಕಾದರೆ ಹೊಂಡದೊಳಗೆ ಮುಳುಗಿ ಹೋಗಲಿಕ್ಕೆ ಬೇಕು. ಹೊಂಡದ ಮಧ್ಯ ಭಾಗದಲ್ಲಿ ನೀರಿನ ಕೆಳಗೆ ವೊಂದು ಛತ್ರಿಯಲ್ಲಿ ನಾಲ್ಕು ಮೋರೆಗಳುಳ್ಳ ಬ್ರಹ್ಮ ದೇವರ ಮೂರ್ತಿಯುಂಟೆಂದು ಹೇಳುತ್ತಾರೆ. ದೇವಿದಾಸನೆಂಬ ಕಾಶಿಯ ಅರಸನಿಗೆ ಮಂಗನ ಮೋರೆಯ ಮಗಳು ಹುಟ್ಟಿತು. ಆ ಕೂಸನ್ನು ಈ ವಿಷ್ಣು ಪುಷ್ಕರಣಿಗೆ ತಕ್ಕೊಂಡು ಬಂದು ಇದರಲ್ಲಿ ಸ್ನಾನ ಮಾಡೆಂದು ದೇವಿದಾಸನಿಗೆ ಸ್ವಪ್ನವಾದ್ದರಿಂದ ಅವನು ಆ ಪ್ರಕಾರ ಮಾಡಲಾಗಿ ಕೂಸಿನ ಮೋರೆ ನೆಟ್ಟಗಾಯಿತು. ಆದ್ದರಿಂದ ದೇವಿದಾಸನು ಮಹಾಕೂಟೇಶ್ವರ, ಮುದಿ ಮಲ್ಲಿಕಾರ್ಜುನ, ವಿರೂಪಾಕ್ಷ ಯೆಂಬ ದೇವಸ್ಥಾನಗಳನ್ನು ಕಟ್ಟಿಸಿದನು. ಅವಾರದ ಬಾಗಿಲಿನ ಹೊರಗೆ ಲಜ್ಜಾಗೌರಿ ಯೆಂಬ ದೇವಸ್ಥಾನವಿರುತ್ತದೆ. ಲಜ್ಜಾಗೌರಿಯು ಬತ್ತಲೆ ಅಂಗಾತ ಮಲಗಿದ ಹೆಂಗಸಿನ ಧಡವಿರುತ್ತದೆ; ಇದಕ್ಕೆ ರುಂಡವಿಲ್ಲ, ಬಂಜೆ ಹೆಂಗಸರು ಈ ದೇವಿಗೆ ನಡಕೊಳ್ಳುತ್ತಾರೆ. ಅವಾರದ ಹೊರ ಬದಿಯಲ್ಲಿ ಪಾಪವಿನಾಶಿ ಯೆಂಬ ಹೊಂಡವಿರುತ್ತದೆ. ಅದು ಕೃತ ಯುಗದಲ್ಲಿ ಕಟ್ಟಿಸಿದ್ದೆಂದು ಹೇಳುತ್ತಾರೆ. ಅವಾರದ ಬಾಗಿಲಲ್ಲಿ ಮಹಾಕೂಟೇಶ್ವರನ ದೊಡ್ಡ ರಥವು ನಿಂತಿರುತ್ತದೆ. ನಂದಿಕೇಶ್ವರದಿಂದ ಬಾದಾವಿಗೆ ಹೋಗುವ ಮಾರ್ಗ ಮೇಲೆ ತೊಂಡಚೆಂಚಿ ಯೆಂಬ ಹೊಂಡವಿರುತ್ತದೆ. ...ಪ್ಪರಾಯನೆಂಬ ಕುಷ್ಟ ರೋಗ ಹತ್ತಿದ ಮನುಷ್ಯನು ಈ ಹೊಂಡದಲ್ಲಿ ಸ್ನಾನ ...ಂದ ಅವನ ರೋಗವು ಹೋಯಿತಂತೆ. ಆದ್ದರಿಂದ ಕೋಪ್ಪರಾಯನು ನೆರೆ...ಲ್ಲಿ ಬಹಳ ಹೊಂಡಗಳನ್ನು ಕಟ್ಟಿಸಿದ್ದಾನೆಂದು ಹೇಳುತ್ತಾರೆ. ತೊಂಡಚೆಂಚೀ ...ೂಂಡದ ಪೂರ್ವಕ್ಕೆ ವೊಂದು ಗವಿಯೊಳಗೆ ಕೋಪ್ಪ

ರಾಯನ ಗುಡಿ ಇರುತ್ತದೆ; ಆ ಹೊಂಡದ ಪಶ್ಚಿಮಕ್ಕೆ ಅವನ ಹೆಂಡತಿಯಾದ ಯೆಲ್ಲಮ್ಮನ ಗುಡಿ ಇರುತ್ತದೆ. ಯೆಲ್ಲಮ್ಮನ ಮೂರ್ತಿಯು ಬಿಳಿ ಶಿಲೆಯಿಂದ ಮಾಡಿದ್ದಿರುತ್ತದೆ. ಯೆಲ್ಲವ್ಮನ ಗುಡಿಯ ಯೆದುರಿಗೆ [illegible]ದ್ದೊಂದು ಲಿಪಿಯು ಕಲ್ಲು ಇರುತ್ತದೆ. ಮಹಾ ಕೂಟೇಶ್ವರನ ಗುಡಿಯಲ್ಲಿ ಕಂಬಗಳ [illegible] ಲಿಪಿಗಳಿರುತ್ತವೆ. ಇವೆಲ್ಲ ೭ನೇ ಯಿಂದ ೧೦ನೇ ಶತಕದ ವರೆಗೆ ಚಲುಕ್ಯರ ಆಳಿಕೆಯಲ್ಲಿ [illegible]ವಿರುತ್ತದೆ.

ನಂದವಾಡಿಗೆ.—ಹುನಗುಂದದ ಆಗ್ನೇಯಕ್ಕೆ ೧೫ ವ್ಯೈಲಿನ ಮೇಲೆ. ನಿಜಾಮಿ ರಾಜ್ಯದ ಶೀಮೆಯ ಬಳಿಯಲ್ಲಿ, ಜ. ಸ. (೮೧) ೧೦೦೧. ಈ ವೂರಿಗೆ ಕೋಟೆ ಪೇಟೆ ಯೆಂಬ ಯೆರಡು ಭಾಗಗಳಿವೆ. ಇದು ಪೂರ್ವದಲ್ಲಿ ನಂದರಾಜನೆಂಬ ಅರಸನ ರಾಜಧಾನಿ ಇತ್ತೆಂದು ಹೇಳುತ್ತಾರೆ. ಒಂದು ಹೊಕ್ಕು ತುಂಬುವ ಬಾವಿಯ ಮೇಲೆ ಇರುವ ನಾರಾಯಣನ ಗುಡಿಯಲ್ಲಿ ರಾಷ್ಟ್ರಕೂಟರ ಆಳಿಕೆಯಲ್ಲಿ ೯೦೨ರಲ್ಲಿ ಬರಿಸಿದ್ದೊಂದು ಲಿಪಿ ಇರುತ್ತದೆ. ಕೋಟೆಯೊಳಗೆ ಈಶ್ವರನ ಗುಡಿ ದೊಡ್ಡದಿರುತ್ತದೆ. ಅದರ ಬಳಿಯಲ್ಲಿ ಬಿದ್ದಿರುವ ೯ ಫೂಟು ಉದ್ದವಾದ ವೀರಗಲ್ಲಿನಂಥ ಕಂಬದ ಮೇಲೆ ಕನ್ನಡ ಲಿಪಿಗಳಿರುತ್ತವೆ.

ನವರಸಪುರ.—ವಿಜಾಪುರದ ಬಳಿಯಲ್ಲಿ. ಇದನ್ನು ೨ನೇ ಇಬ್ರಾಹಿಮ ಶಹನು ತಾನು ಇರುವದಕ್ಕೋಸ್ಕರ ಬಹು ಭವ್ಯವಾಗಿ ಕಟ್ಟಿಸಿದ್ದನು. ಆದರೆ ವೊಬ್ಬ ಜ್ಯೋತಿಷಿಯು ಈ ವೂರಲ್ಲಿ ನಿಂತರೆ ನಿನ್ನ ರಾಜ್ಯ ಹಾಳಾಗುವದೆಂದು ಹೇಳಿದ್ದರಿಂದ ಬಾದಶಹನು ತನ್ನ ದರ್ಬಾರವನ್ನು ಇಲ್ಲಿಗೆ ತರಲಿಲ್ಲ. ಈಗ ಊರೆಲ್ಲ ಹಾಳಾಗಿದೆ; ೧೫೧ಕ್ಕಿಂತ ಹೆಚ್ಚು ನಿವಾಸಿಗಳಿಲ್ಲ.

ನಿಂಬರಿಗಿ.—ಇಂಡಿಯ ವಾಯವ್ಯಕ್ಕೆ ೨೭ ಮೈಲಿನ ಮೇಲೆ, ಜ. ಸ. (೮೧) ೧೪೨೭. ಇಲ್ಲಿಯ ಪ್ರಾಣದೇವರ ಗುಡಿಯು ಪ್ರಸಿದ್ಧ ವುಂಟು. ವಿಸ್ತಾರವಾದ ಬೈಲೊಳಗೆ ಗುಡಿಯನ್ನು ಕಟ್ಟಿದ್ದಾರೆ. ಸುತ್ತು ಮುತ್ತು ಪೌಳಿಗಳಿವೆ. ಬಳಿಯಲ್ಲಿ ವೊಂದು ಹಳ್ಳ ಹರಿಯುತ್ತದೆ. ಈ ಗುಡಿಯು ಊರ ಹೊರಗೆ ಇರುವದರಿಂದ ರಮಣೀಯವಾದ ಏಕಾಂತ ಸ್ಥಳವಿರುತ್ತದೆ. ಗರ್ಭ ಗುಡಿಯಲ್ಲಿ ಒಂದು ಸೀತಾರಾಮನ ಮೂರ್ತಿ, ಹನುಮಂತನ ಯೆರಡು ಮೂರ್ತಿಗಳು, ವೊಂದು ಲಿಂಗ ಉಂಟು. ಮುಖ್ಯ ಹನುಮಂತನ ಮೂರ್ತಿಯು ವೊಂದು ಕಲ್ಲಿನ ಮೇಲೆ ಮೂಡಿದ ಹಾಗಿರುತ್ತದೆ. ಈ ಗುಡಿಯನ್ನು ಧನಾಯಿ ಯೆಂಬ ಕುರುಬರ ಹೆಂಗಸು ಕಟ್ಟಿಸಿದಳೆಂದು ಹೇಳುತ್ತಾರೆ. ಧನಾಯಿಯು ತನ್ನ ಆಕಳು ವೊಂದು ಹುತ್ತಿನ ಮೇಲೆ ಮೊಲೆಯೊಳಗಿನ ಹಾಲು ಕರೆದು ಬರಿ ಮೊಲೆಯಾಗಿ ಮನೆಗೆ ಬರುತ್ತದೆಂದು ನೋಡಿ ಆಕಳನ್ನು ಮನೆಯಲ್ಲಿ ಕಟ್ಟಿದಳು. ಆ ರಾತ್ರಿಯಲ್ಲಿ ಆ ಹುತ್ತಿನ ಮೇಲೆ ವೊಂದು ಗುಡಿಯನ್ನು ಕಟ್ಟಿಸಿ ವೊಂಬತ್ತು ತಿಂಗಳು ಅದರ ಬಾಗಿಲು ಇಕ್ಕಿ ಬಿಡೆಂದು ಆಕೆಗೆ ಸ್ವಪ್ನವಾಯಿತು. ಆಕೆ ಆ ಪ್ರಕಾರ ಗುಡಿಯನ್ನು ಕಟ್ಟಿಸಿ, ಕೆಲವು ತಿಂಗಳು ಬಾಗಿಲವನ್ನು ಇಕ್ಕಿ ಇಟ್ಟ ಬಳಿಕ ಸ್ತ್ರೀ ಸ್ವಭಾವದ ಮೂಲಕವಾಗಿ

ವೊಂಬತ್ತು ತಿಂಗಳು ತುಂಬುವ ಪೂರ್ವದಲ್ಲಿಯೇ ಬಾಗಿಲು ತೆರಿದಳು. ಆಗ ಗುಡಿಯೊಳಗಿನ ಮೂರ್ತಿಯು ಅರೆವಾಸಿ ಹುಟ್ಟಿತ್ತು. ಅದು ಅಷ್ಟಕ್ಕೇ ನಿಂತಿತು.

ಪಟ್ಟದಕಲ್ಲು.—ಬಾದಾವಿಯ ಈಶಾನ್ಯಕ್ಕೆ ೮ ಮೈಲಿನ ಮೇಲೆ, ಜ. ಸ. ೬೭೪. ಇದಕ್ಕೆ ಬುನಾದಿಯಲ್ಲಿ ಕಿಸುವೊಳಲೆಂಬ ಹೆಸರಿತ್ತು. ಬಾದಾವಿಯಂತೆ ಇಲ್ಲಿಯೂ ಚಲುಕ್ಯರ ಆರಂಭ ಕಾಲದ ಗುಡಿಗಳೂ ಲಿಪಿಗಳೂ ಬಹಳ ಇರುತ್ತವೆ. ಸುಮಾರು ನಾಲ್ಕು ಯೆಕರಿನ ಕ್ಷೇತ್ರದ ಸುತ್ತು ಮುತ್ತು ಹಾಕಿದ ಕಲ್ಲಿನ ಗೋಡೆಯ ಅವಾರದೊಳಗೆ ನಾಲ್ಕು ದೊಡ್ಡ ಗುಡಿಗಳೂ ಆರು ಸಣ್ಣ ಗುಡಿಗಳೂ ಇರುತ್ತವೆ. ಅವಾರಕ್ಕೆ ಪೂರ್ವಕ್ಕೂ ಪಶ್ಚಿಮಕ್ಕೂ ದ್ವಾರಗಳಿವೆ. ದೊಡ್ಡ ಗುಡಿಗಳು ದ್ರವಿಡ ಅಥವಾ ದಕ್ಷಿಣದ ಪದ್ಧತಿಯವು ಇರುತ್ತವೆ. ಅವುಗಳ ಶಿಖರಗಳು ಚೌಕೋನಾಕೃತಿಯಾಗಿ ವೊಂದರ ಮೇಲೊಂದು ಉತ್ತರೊತ್ತರವಾಗಿ ಸಣ್ಣ ಸಣ್ಣ ಉಪ್ಪರಿಗೆಗಳನ್ನು ಯೇರಿಸಿದಂತೆ ಇರುತ್ತವೆ. ಕಲ್ಲಿನೊಳಗೆ ಕೊರಿದ ಚಿತ್ರಗಳು ಉರುಟು, ಸೌಂದರ್ಯ ಕಡಿಮೆ. ಆದರೆ ಇಮಾರತು ಹೆಚ್ಚು ಭವ್ಯವಾದದ್ದೂ ತಾಳಿಕೆಯುಳ್ಳದ್ದೂ. ಅವಾರದೊಳಗೆ ಯೆಲ್ಲಕ್ಕೂ ಭವ್ಯವಾದ ವಿರೂಪಾಕ್ಷೇಶ್ವರನ ಗುಡಿಯು ಇದೇ ಪ್ರಕಾರದ್ದಿರುತ್ತದೆ. ಇದರ ಸುತ್ತು ಮುತ್ತು ಜೈನರ ಪದ್ಧತಿಯ ಸಣ್ಣ ಸಣ್ಣ ಗುಡಿಗಳಿರುತ್ತವೆ. ಮುಂದಿನ ಸಭಾಮಂಟಪವು ೫೦ ಫೂಟು ಉದ್ದ, ೪೫ ಫೂಟು ಅಗಲಾಗಿ ೧೬ ಕಂಬಗಳುಳ್ಳದ್ದಿರುತ್ತದೆ. ಗರ್ಭಗುಡಿಯು ೧೨ ಫೂಟು ಚಚ್ಚೌಕು ಇರುವದು. ಗೋಡೆಗಳನ್ನು ಗಚ್ಚು ಇಲ್ಲದೆ ಕಟದ ವೊಣ ಕಲ್ಲಿನಿಂದ ಕಟ್ಟಿದ್ದಾರೆ. ಕಂಬಗಳು, ಛಾವಣಿಯ ವೊಳ ಮೈ, ಗೋಡೆಗಳು, ಇವುಗಳ ಮೇಲೆ ನಾನಾ ಪ್ರಕಾರದ ಹೂ, ಬಳ್ಳಿಗಳನ್ನೂ, ಆನೆ, ಸಿಂಹ, ಮುಂತಾದ ಪಶುಗಳ ಆಕಾರಗಳನ್ನೂ, ಸರ್ಪಗಳನ್ನೂ ಶಿವ, ವಿಷ್ಣು ಮುಂತಾದ ದೇವತೆಗಳನ್ನೂ ಕೊರಿದಿದ್ದಾರೆ. ಈ ಗುಡಿಯಲ್ಲಿ ೧೨ ಲಿಪಿಗಳಿರುತ್ತವೆ. ಎಲ್ಲಕ್ಕೂ ಹಳೇದು ಚಲುಕ್ಯರ ವಿಜಯಾದಿತ್ಯನ (೬೯೬-೭೩೩) ಕಾಲದ್ದಿರುತ್ತದೆ; ಎಲ್ಲಕ್ಕೂ ಕಡೆಯಲ್ಲಿ ಆದದ್ದು ೯ನೇ ಶತಕದ್ದಿರುತ್ತದೆ. ಇವುಗಳಲ್ಲಿ ಯೆರಡು ರಾಷ್ಟ್ರ ಕೂಟರ ಆಳಿಕೆಯಲ್ಲಿ ಆದ್ದವಿರುತ್ತವೆ; ಮಿಕ್ಕಾದವುಗಳೆಲ್ಲ ಚಲುಕ್ಯರ ಕಾಲದವು. ಎಲ್ಲಕ್ಕೂ ಹಳೇ ಲಿಪಿಗಳು ಸಂಸ್ಕೃತದಲ್ಲಿ ಬರಿದಿರುತ್ತವೆ. ೮ನೇ ಶತಕದಿಂದಿತ್ತ ಆದ್ದವು ಕನ್ನಡ ಇರುತ್ತವೆ.

ಅವಾರದೊಳಗೆ ಮಲ್ಲಿಕಾರ್ಜುನ, ಸಂಗಮೇಶ್ವರ, ಚಂದ್ರಶೇಖರ, ಬೆಳಗುಡಿ, ಗಳಗನಾಥ, ಆದಿಕೇಶ್ವರ, ಮುಂತಾದ ಬೇರೆ ವೊಂಬತ್ತು ಗುಡಿಗಳಿವೆ. ಅವುಗಳ ರಚನೆಯು ಬಹುತರ ವಿರೂಪಾಕ್ಷೇಶ್ವರನ ಗುಡಿಯಂತೆ ಇರುತ್ತದೆ. ವಿರೂಪಾಕ್ಷೇಶ್ವರನಿಗೆ ಮಾತ್ರ ನಿತ್ಯ ಪೂಜೆಯಾಗುತ್ತದೆ; ಬೇರೆ ಯಾವ ದೇವರಿಗೂ ಆಗುವದಿಲ್ಲ. ಈ ಅವಾರದೊಳಗಿನ ಗುಡಿಗಳಲ್ಲದೆ ಪಟ್ಟದ ಕಲ್ಲಿನ ಊರೊಳಗೂ ಹೊರಗೂ ಬೇರೆ ಅಸಂಖ್ಯ ಗುಡಿಗಳಿರುತ್ತವೆ. ಅವೆಲ್ಲ ಹೆಚ್ಚಾಗಲಿ ಕಡಿಮೆಯಾಗಲಿ ಹಾಳಾಗಿರುತ್ತವೆ. ಸಂಗಮೇಶ್ವರನ ಗುಡಿಯಲ್ಲಿ ಆರು ಲಿಪಿಗಳಿರುತ್ತವೆ. ಅವೆಲ್ಲ ೧೦ನೇ ಶತಕದೀಚೆ ಆದಂಥವು.

ಊರಿನ ಆಗ್ನೇಯಕ್ಕೆ ಕೋಟೆಗೆ ಹೊಂದಿ ಪಾಪವಿನಾಶನ ಅಥವಾ ಪಾಪನಾಥ

ಯೆಂಬ ದೇವರ ಗುಡಿಯುಂಟು. ಅದು ಈ ವೂರಲ್ಲಿಯ ಯಾವತ್ತು ಗುಡಿಗಳಿಗಿಂತ ಹಳೇದೆಂದು ಹೇಳ ಬಹುದು. ಇದರಲ್ಲಿ ರಾಮಾಯಣ ಕಥೆಯ ಚಿತ್ರಗಳನ್ನು ಕೊರಿದು ಅವುಗಳ ತಲೆಯ ಮೇಲೆ ಹೆಸರುಗಳನ್ನು ಹಾಕಿದ್ದಾರೆ. ಇದೇ ಪ್ರಕಾರವಾಗಿ ಕೊರಿದಂಥ ಚಿತ್ರಗಳು ವಿರೂಪಾಕ್ಷೇಶ್ವರನ ಗುಡಿಯಲ್ಲಿಯೂ ಇರುತ್ತವೆ. ಪಾಪನಾಥನ ಗುಡಿಯಲ್ಲಿ ಹಳೆಗನ್ನಡ ಲಿಪಿಯಲ್ಲಿ ಸಂಸ್ಕೃತ ಭಾಷೆಯಿಂದ ೬ನೇ ೭ನೇ ಶತಕಗಳಲ್ಲಿ ಬರಿಸಿದ ಲಿಪಿಗಳು ಮೂರು ಇರುತ್ತವೆ. ಒಂದರಲ್ಲಿ ಗುಡಿಗಳನ್ನು ಕಟ್ಟುವವನೊಬ್ಬ ಹೆಸರಾದ ಆಚಾರ್ಯನ ಸ್ತುತಿಯುಂಟು.

**ಇತಿಹಾಸ.**— ಇಜಿಪ್ತ ದೇಶದ ತಾಲೆಮಿ ಯೆಂಬ ಗ್ರಂಥಕರ್ತನು "ಪೆತಿರ್ಗಲ್" ಯೆಂಬ ಹೆಸರಿನಿಂದ ಪಟ್ಟದ ಕಲ್ಲಿನ ಉಲ್ಲೇಖವನ್ನು ತನ್ನ ಗ್ರಂಥದಲ್ಲಿ ಮಾಡಿದ್ದಾನೆ, ಸನ್ ೧೫೦. ಪಾಪನಾಥನ ಗುಡಿಯನ್ನು ೫ನೇ ಶತಕದಲ್ಲಿ ಕಟ್ಟಿದಂತೆ ತೋರುತ್ತದೆ. ಅದರಪ್ಪು ಹಳೆ ಇಮೂರತು ಈ ದಕ್ಷಿಣ ಮಹಾರಾಷ್ಟ್ರ ದೇಶದಲ್ಲಿ ಬೇರೆ ಯಾವದೂ ಇಲ್ಲೆಂದು ಹೇಳುತ್ತಾರೆ. ಚಲುಕ್ಯರ ಆಳಿಕೆಯಲ್ಲಿ ಪಟ್ಟದ ಕಲ್ಲು ಕ್ಷೇತ್ರವೆಂದು ಯೆಣಿಸಲ್ಪಡುತ್ತಿತ್ತು.

**ಸಾಲೋಟಗಿ.**— ಇಂಡಿಯ ಆಗ್ನೇಯಕ್ಕೆ ೬ ಮೈಲಿನ ಮೇಲೆ, ಜ. ಸ. (೮೧) ೨೪.೦೭. ಇಲ್ಲಿ ಶಿವಯೋಗೇಶ್ವರನ ಪುರಾತನದ ಗುಡಿಯು ದೊಡ್ಡದಿರುತ್ತದೆ. ಇದರ ಮೇಲೆ ಶಿಖರವಿಲ್ಲ, ನಾಲ್ಕು ಗುಮುಟಗಳಿವೆ. ಗರ್ಭ ಗುಡಿಯಲ್ಲಿ ಲಿಂಗವನ್ನು ನೆಲದೊಳಗೆ ಹುಗಿದಿದ್ದಾರೆ. ಸೋರಟಿಯ ಸೋಮನಾಥನ ಗುಡಿಯನ್ನು ಗಿಝನಿಯ ಮಹಮ್ಮದನು ಹಾಳು ಮಾಡಿದ ಕಾಲಕ್ಕೆ ಈ ಗುಡಿಯಲ್ಲಿಯ ಈಶ್ವರನು ತನ್ನನ್ನು ನೆಲದೊಳಗೆ ಹುಗಿಯೆಂದು ಪೂಜಾರಿಯ ಸ್ವಪ್ನದಲ್ಲಿ ಬಂದು ಹೇಳಿದನಂತೆ. ಈ ಗುಡಿಯನ್ನು ಬೇದರ ಪಟ್ಟಣದ ಚಾಲುಕ್ಯ ಅರಸರು ಕಟ್ಟಿಸಿದಂತೆ ತೋರುತ್ತದೆ. ಆ ಅರಸರು ಕೊಟ್ಟ ಇನಾಮು ದೇವರಿಗೆ ಈಗ್ಯೂ ನಡಿಯುತ್ತದೆ. ಈ ಗುಡಿಯೊಳಗೆ ಮುಸಲ್ಮಾನರೂ ಕಡಿಮೇ ಜಾತಿಯ ಹಿಂದೂ ಜನರೂ ಪ್ರವೇಶಿಸುವದಿಲ್ಲ. ಆದರೆ ಚೈತ್ರ ಪೂರ್ಣಿಮೆಯಲ್ಲಿ ಉತ್ಸವವಾಗುವ ಕಾಲಕ್ಕೆ ಹೊಲಿಯರು ಮಾದಿಗರು ಸಹ ಗುಡಿಯೊಳಗೆ ಹೋಗುವರು, ಜಾತಿ ನಿರ್ಬಂಧವಿಲ್ಲದೆ ನೀಚ ಜಾತಿಯವರು ಮುಟ್ಟಿದ ಅನ್ನವನ್ನು ಉತ್ತಮ ಜಾತಿಯವರು ತಿನ್ನುವರು.

ನಿಜಾಮಿನ ರಾಜ್ಯದಲ್ಲಿ ಇರುವ ಸ್ವಾಂತಿ ಯೆಂಬ ಊರಿನ ಅರಸನಿಗೆ ಸಂತತಿ ಯಿಲ್ಲದ್ದರಿಂದ ಅವನು ಬಸವೇಶ್ವರನ ಆರಾಧನೇ ಮಾಡಿದನು. ಬಸವೇಶ್ವರನು ಸಣ್ಣ ಕೂಸಾಗಿ ಭೀಮೆಯಲ್ಲಿ ತೇಲುತ್ತ ಸಾಲೋಟಗಿಯಲ್ಲಿ ಹೋಗಿ ದಂಡೆಗೆ ಹತ್ತಲಾಗಿ, ಊರವರು ಆ ಕೂಸನ್ನು ವೊಯಿದು ಅರಸನಿಗೆ ಕೊಟ್ಟರು. ಅರಸನು ಮಗನಂತೆ ಬಸವೇಶ್ವರನನ್ನು ಪ್ರತಿಪಾಲಿಸಿ ಅವನಿಗೆ ಶಿವಯೋಗೇಶ್ವರನೆಂಬ ಹೆಸರಿಟ್ಟನು. ಶಿವಯೋಗೇಶ್ವರನು ಯೋಗಿಯಂತೆ ಕಾಲಕ್ಷೇಪ ಮಾಡಿ, ಕಡೆಯಲ್ಲಿ ಸಾಲೋಟಗಿಗೆ ಬಂದು ಈಗ ಗುಡಿ

ಇರುವ ಸ್ಥಳದಲ್ಲಿ ಅದೃಶ್ಯನಾದನು. ಆದ್ದರಿಂದ ಅಲ್ಲಿ ಶಿವಯೋಗೇಶ್ವರನ ಗುಡಿಯನ್ನು ಕಟ್ಟಿಸಿದರು. ಈ ಗುಡಿಯೊಳಗಿನ ಲಿಪಿಯ ಕಂಬವನ್ನು ಅಗಸೆಯಲ್ಲಿ ವೊಯಿದು ಇಟ್ಟಿದ್ದಾರೆ. ಅದರಲ್ಲಿ ರಾಷ್ಟ್ರಕೂಟರ ೪ನೇ ಕೃಷ್ಣ ರಾಜನ ಆಳಿಕೆಯಲ್ಲಿ ೯೪೭ನೇ ವರ್ಷ ಕರ್ಣಪುರಿಯ ಪ್ರಾಂತದಲ್ಲಿ ಪವಿಟ್ಟಗೆ ಯೆಂಬಲ್ಲಿ ವೊಂದು ವಿದ್ಯಾಲಯವನ್ನು ಸ್ಥಾಪಿಸಿದ ಲೇಖವಿರುತ್ತದೆ; ಆ ವಿದ್ಯಾಲಯಕ್ಕೆ ಕೆಲವು ಭೂಮಿಯನ್ನು ಕೊಟ್ಟದ್ದು ಅದರಲ್ಲಿ ಬರಿದದೆ. ಪವಿಟ್ಟಗೆ ಅಂದರೆ ಸಾಲೋಟಗಿ ಯೆಂದು ಕೆಲವರು ತರ್ಕಿಸುತ್ತಾರೆ.

ಸಂಗಮ.—ಹುನಗುಂದದ ಉತ್ತರಕ್ಕೆ ೧೦ ಮೈಲಿನ ಮೇಲೆ ಕೃಷ್ಣೆಗೆ ಮಲಾಪಹಾರಿ ಕೂಡಿದ ಸ್ಥಳದಲ್ಲಿ, ಜ. ಸ. (೮೧) ೧೫೯೬. ಈ ಹೊಳೆಗಳ ದಂಡೆಯಲ್ಲಿ ಸಂಗಮೇಶ್ವರನೆಂಬ ದೇವಸ್ಥಾನವಿರುತ್ತದೆ. ಇದನ್ನು ಸುಮಾರು ೮೦೦ ವರ್ಷಗಳ ಹಿಂದೆ ದ್ಯಾವನಾಯಕನೆಂಬ ಜೈನನು ಕಟ್ಟಿಸಿದನೆಂದು ಹೇಳುತ್ತಾರೆ. ಈ ಗುಡಿಯಲ್ಲಿ ಯೆರಡು ಲಿಪಿಯ ಕಲ್ಲುಗಳಿರುತ್ತವೆ; ಆದರೆ ಅವು ಓದಲಿಕ್ಕೆ ಬರುವ ಹಾಗಿಲ್ಲ. ಬಸವೇಶ್ವರನು ಕಲ್ಯಾಣಪುರದಲ್ಲಿ ತನ್ನ ಶಿಷ್ಯರಿಗೆ ಬಿಜ್ಜಳನನ್ನು ಕೊಲ್ಲ ಹೇಳಿ ಈ ವೂರಿಗೆ ಬಂದು ಸಂಗಮೇಶ್ವರನ ಲಿಂಗದಲ್ಲಿ ಐಕ್ಯ ಹೊಂದಿದನಂತೆ. ಈ ಲಿಂಗದಲ್ಲಿ ಬಸವೇಶ್ವರನು ಐಕ್ಯ ಹೊಂದಿದ ಸ್ಥಳವೆಂದು ವೊಂದು ತಗ್ಗನ್ನು ಈಗ್ಯೂ ತೋರಿಸುತ್ತಾರೆ. ಸಂಗಮೇಶ್ವರನ ಜಾತ್ರೆಯು ಮಾಘ ಮಾಸದಲ್ಲಿ ಆಗುತ್ತದೆ.

ಸಿಂದಗಿ.—ವಿಜಾಪುರದ ಈಶಾನ್ಯಕ್ಕೆ ೩೫ ಮೈಲಿನ ಮೇಲೆ, ಜ. ಸ. (೮೧) ೩೧೫೪. ಇದು ತಾಲೂಕಿನ ಮುಖ್ಯ ಗ್ರಾಮವು; ತಾಲೂಕಿನ ಕಚೇರಿಗಳಲ್ಲದೆ ಆಸಪತ್ರಿಯೂ ಇರುತ್ತದೆ. ಈ ಗ್ರಾಮವನ್ನು ಸಿಂದು ಬಲ್ಲಾಳನೆಂಬ ಪುರುಷನು ೧೨ನೇ ಶತಕದಲ್ಲಿ ಸ್ಥಾಪಿಸಿದನೆಂದು ಹೇಳುತ್ತಾರೆ. ಇದಕ್ಕೆ ವೊದಲು ಸಿಂದಾಪುರವೆನ್ನುತ್ತಿದ್ದರು. ಊರ ಹೊರಗೆ ಸಂಗಮೇಶ್ವರನ ಸಣ್ಣ ಗುಡಿ ಇರುತ್ತದೆ. ಈ ಗುಡಿಯೊಳಗೂ ಹೊರಗೂ ಅಸಂಖ್ಯ ಲಿಂಗಗಳಿರುತ್ತವೆ. ಗುಡಿಯೊಳಗೆ ಜೈನರ ವೊಡಕ ಮೂರ್ತಿಗಳು ಕೆಲವಿರುತ್ತವೆ. ಮಕರ ಸಂಕ್ರಾಂತಿಯಲ್ಲಿ ಈ ಗುಡಿಯೊಳಗಿನ ಈಶ್ವರನಿಗೂ ಪಾರ್ವತಿಗೂ ಲಗ್ನವಾಗುತ್ತದೆ. ಊರ ಕುಲಕರಣಿಯು ಶಿವನಾಗುತ್ತಾನೆ; ಗೌಡನು ಪಾರ್ವತಿಯಾಗುತ್ತಾನೆ. ಲಗ್ನವಾದ ೫ನೇ ದಿವಸ ದೇವರ ರಥೋತ್ಸವವಾಗುತ್ತದೆ. ಪೂರ್ವದಲ್ಲಿ ಈ ವೂರಿನ ಕುಲಕರಣಿಯಾದ ಟಕ್ಕಪ್ಪಯ್ಯನೆಂಬವನು ಸನ್ಯಾಸಿಯಾಗಿ ದತ್ತಾತ್ರಯನನ್ನು ಆರಾಧಿಸಿ ಸತ್ಪುರುಷನೆನಿಸಿಕೊಂಡು ಇದೇ ಊರಲ್ಲಿ ಮರಣ ಹೊಂದಿದನು. ಅವನ ಗೋರಿಯ ಮೇಲೆ ಮಠವನ್ನು ಕಟ್ಟಿದ್ದಾರೆ. ಆಶ್ವಿನ ಪೂರ್ಣಿಮೆಯಿಂದ ಮೂರು ದಿವಸ ಟಕ್ಕಪ್ಪಯ್ಯನ ಆರಾಧನೆಯಾಗುತ್ತದೆ. ಕಡೆಯ ದಿವಸ ಊಟಕ್ಕೆ ಬಂದ ಬ್ರಾಹ್ಮಣರ ಕಾಲುಗಳನ್ನು ತೊಳಿಯಲಾಗಿ, ಆ ಕಾಲು ತೊಳಿದ ನೀರು ವೊಂದು ಬಿಂದಿಗೆಯೊಳಗೆ ಹೋಗಿ ಬೀಳುತ್ತದೆ. ಯೆಷ್ಟು ನೀರು ಬಿದ್ದರೂ ಬಿಂದಿಗೆಯು ತುಂಬುವದಿಲ್ಲ. ಬಿಂದಿಗೆಯನ್ನು ವೊಂದು ಜಗುಲಿಯ ಮೇಲೆ ಇಟ್ಟಿದ್ದಾರೆ. ಸಿಂದಿಗಿಯಲ್ಲಿ ಇನ್ನೊಂದು ಅರಮನೆಯಂಥ ನೀಲಗಂಗೆಯ ದೇವಸ್ಥಾನವಿರುತ್ತದೆ. ಇದರ ಗರ್ಭ ಗುಡಿಯಲ್ಲಿ ಯೆರಡು

ಬಂಗಾರದ ತಂಬಿಗೆಗಳನ್ನೂ ವೊಂದು ಬೆಳ್ಳಿಯ ತಂಬಿಗೆಯನ್ನೂ ನೀರು ತುಂಬಿ ಇಟ್ಟಿದ್ದಾರೆ. ಪ್ರತಿ ವೊಂದು ತಂಬಿಗೆಯ ಮೇಲೆ ಮೂರು ಮೂರು ಲಿಂಗಗಳು, ಬಂಗಾರದ ತಂಬಿಗೆಗಳ ಮೇಲೆ ಬಂಗಾರದವು, ಬೆಳ್ಳಿಯ ತಂಬಿಗೆಯ ಮೇಲೆ ಬೆಳ್ಳಿಯವು, ಇರುತ್ತವೆ. ಪ್ರತಿ ವರ್ಷ ಆಷಾಢ ಪೂರ್ಣಿಮೆಯಲ್ಲಿ ಲಿಂಗವಂತ ಮುತ್ತೈದಿಯರು ಈ ನೀಲಗಂಗೆಯನ್ನು ಪೂಜಿಸಲಿಕ್ಕೆ ಹೋಗುತ್ತಾರೆ. ಆರಂಭದಲ್ಲಿ ೫ ಜನರು ಮಾತ್ರ ಹೋಗುತ್ತಿದ್ದರು. ಆದರೆ ಪ್ರತಿ ವರ್ಷ ವೊಬ್ಬಳಂತೆ ಪೂಜಿಸುವವರ ಸಂಖ್ಯೆವು ಬೆಳಿಯುತ್ತ ಬಂದದರಿಂದ ಈಗ ಪೂಜಿಸುವವರ ಸಂಖ್ಯೆವು ೧೦೫ಕ್ಕಿಂತ ಹೆಚ್ಚಾಗಿದೆ. ಈ ಪೂಜೆಯಾಗುವ ಕೋಣೆ ವೊಳಿತಾಗಿ ವಿಸ್ತಾರವಾದದ್ದಿದ್ದಾಗ್ಯೂ ಪೂಜೆಯ ಕಾಲಕ್ಕೆ ಜನರ ದಟ್ಟಣಿಯಾಗಿ ಬಹಳ ದೀಪಗಳು ಉರಿಯುತ್ತಿರುವ ಕಾರಣ ಪೂಜಿಸುವ ಹೆಂಗಸರಲ್ಲಿ ಕೆಲವರಿಗೆ ಮೂರ್ಛೆ ಬರುತ್ತದೆ. ಅದು ನೀಲಗಂಗೆಯ ಮಾಹಾತ್ಮ್ಯದಿಂದ ಬರುತ್ತದೆಂದು ಜನರ ನಂಬಿಗೆಯುಂಟು. ನೆರೆಹೊರೆಯ ಲಿಂಗವಂತರು ಈ ಗುಡಿಗೆ ಪ್ರತಿ ವರ್ಷ ಕಾಣಿಕೆಗಳನ್ನು ಕಳಿಸುತ್ತಾರೆ.

ದಿವಾಕರ ದೀಕ್ಷಿತನೆಂಬ ದಾಳಿಗಾರನು ಸನ್ ೧೮೦೪ರಲ್ಲಿ ಸಿಂದಗಿಯ ಕೋಟೆಯನ್ನು ಆಕ್ರಮಿಸಿ ಸುಲಿಗೆ ಮಾಡುತ್ತಿದ್ದನು. ಸರಕಾರದವರು ಅವನನ್ನು ಹಿಡಿದು ಶಿಕ್ಷಿಸಿ ಕೋಟೆಯನ್ನು ನೆಲಸವ ಮಾಡಿದರು.

ಸಿರೂರು.—ಬಾಗಲಕೋಟೆಯ ನೈರುತ್ಯಕ್ಕೆ ೯ ಮೈಲಿನ ಮೇಲೆ, ಜ. ಸ. (೮೧) ೪೦೭೦. ಇಲ್ಲಿ ರಾಮಲಿಂಗ, ಲಕ್ಷ್ಮೀನಾರಾಯಣ, ಗಣಪತಿ, ಸಿದ್ಧೇಶ್ವರ, ಮುಂತಾದ ಪ್ರಾಚೀನ ಗುಡಿಗಳಿವೆ. ಈ ಗುಡಿಗಳಲ್ಲಿ ೧೦ನೇ ೧೧ನೇ ಶತಕಗಳ ಲಿಪಿಗಳಿರುತ್ತವೆ. ಸಿದ್ಧೇಶ್ವರನ ಗುಡಿಯಲ್ಲಿಯ ಲಿಪಿಗಳು ಕೊಲ್ಲಾಪುರದ ಮಾಂಡಲೀಕ ರಾಜರ (ಶಿಲಾಹಾರರ?) ಕಾಲದವಿರುತ್ತವೆ. ಊರ ಹೊರಗೆ ಗುಡ್ಡದ ಮೇಲೆ ಬೈಲೊಳಗೆ ಹನುಮಂತನ ಮೂರ್ತಿಯುಂಟು. ಈ ವೂರಲ್ಲಿ ಜೈನರ ಕಾಲದ ಕಂಬಗಳು ಬಹಳ ಇರುತ್ತವೆ. ಸಿರೂರಿನ ಕೆರೆಯು ಚಂದವಾದದ್ದಿರುತ್ತದೆ.

ತಾಳೀಕೋಟೆ.—ಮುದ್ದೇಬಿಹಾಳದ ಈಶಾನ್ಯಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೫೩೦೫. ಪುಣೆಯ ಬಾಳಾಜೀ ಬಾಜೀ ರಾಯನು ತನ್ನ ಬೀಗನಾದ ಆನಂದರಾವ ರಾಸ್ತೆ ಯೆಂಬವನಿಗೆ ತಾಳೀಕೋಟೆಯನ್ನು ಸರಂಜಾಮಿಗಾಗಿ ಸನ್ ೧೭೫೦ರ ಸುಮಾರಿನಲ್ಲಿ ಕೊಟ್ಟನು. ಅವನು ಆನಂದರಾವ ಪೇಟೆ, ಕೈಲಾಸ ಪೇಟೆ, ಯೆಂಬ ಪೇಟೆಗಳನ್ನು ಕಟ್ಟಿಸಿದನು. ಪೇಶವನ ರಾಜ್ಯ ಹಾಳಾದ ಬಳಿಕ ಬಾಳಾ ಸಾಹೇಬ ರಾಸ್ತೆ ಯೆಂಬವನು ತಾಳೀಕೋಟೆಯಲ್ಲಿ ಇರುತ್ತಿದ್ದನು. ಇಲ್ಲಿ ಈಶ್ವರನ ಗುಡಿಯು ಪುರಾತನದ್ದಿರುತ್ತದೆ. ಇಲ್ಲಿ ಪಂಚ ಪೀರೆಂಬ ಹೆಸರಿನ ಮಶೀದಿ ಇರುತ್ತದೆ. ಅದಕ್ಕೆ ಮುಸಲ್ಮಾನರೂ ಹಿಂದೂ ಜನರೂ ಸರಿಯಾಗಿ ಮಾನ ಕೊಡುತ್ತಾರೆ. ದಿಲ್ಲಿಯ ದಂಡಿನಲ್ಲಿ ಸರದಾರರಾಗಿದ್ದ ಶೇಖ ಬುಡ್ಡಣ, ಹಸನ, ಹುಶೇನ, ಇಬ್ರಾಹಿಮು, ಕರೀಮ, ಯೆಂಬ ಕಲಿಗಳು ತೆಲಗು ದೇಶದ ಕೊಮಾರ ರಾಮನನ್ನು ಗೆಲ್ಲಲಿಕ್ಕೆ ಹೋಗುವ ಮಾರ್ಗದಲ್ಲಿ ವೊಬ್ಬ ಹೆಂಗಸು ಭೇಟಿಯಾಗಿ ಅವರಿಗೆ ಹೇಳಿದಳೇನೆಂದರೆ—ಕೊಮಾರ ರಾಮನು ಬಹು ಶಿಟ್ಟಿನವನಿರುತ್ತಾನೆ;

ಅವನ ಧ್ವನಿ ಕೇಳಿದ ಕೂಡಲೆ ಅವನ ಶತ್ರುಗಳ ರುಂಡಗಳು ಕಳಚಿ ಬೀಳುತ್ತವೆ. ಈ ಮಾತು ಕೇಳಿ ಐವರು ಕಲಿಗಳು ಕೊಮಾರ ರಾಮನ ರಾಜಧಾನಿಯಲ್ಲಿ ತಮ್ಮ ರುಂಡಗಳನ್ನು ಚಲ್ಲಿ, ಅವನೆದುರಿಗೆ ನಿಂತು ಯುದ್ಧ ಮಾಡಿ, ರುಂಡಗಳಿಲ್ಲದೆ ಹಾಗೇ ತಾಳೀಕೋಟೆಗೆ ಬಂದು ಅದೃಶ್ಯರಾದರು. ಇದು ಬಾಮನೀ ಬಾದಶಹಗಳಿಗೂ ತೆಲಗು ದೇಶದ ಅರಸನಿಗೂ ನಡಿದ ಯುದ್ಧಕ್ಕೆ ಸಂಬಂಧಿಸಿದ ಕಥೆ ಇರ ಬಹುದೆಂದು ತೋರುತ್ತದೆ.

ವಿಜಯನಗರದ ರಾಮ ರಾಜನಿಗೂ ಆದಿಲ್‌ಶಹ ಮುಂತಾದ ಮೂವರು ಬಾದಶಹಗಳಿಗೂ ವೊದಗಿದ ಯುದ್ಧವು ತಾಳೀಕೋಟೆಯ ದಕ್ಷಿಣಕ್ಕೆ ೩೦ ಮೈಲಿನ ಮೇಲೆ ಕೃಷ್ಣೆಯ ದಂಡೆಯಲ್ಲಿ ಆಯಿತು. ಆ ಬಾದಶಹಗಳು ತಾಳೀಕೋಟೆಯಲ್ಲಿ ಠಾಣ್ಯವನ್ನು ಇಟ್ಟಿದ್ದರಿಂದ ಆ ಯುದ್ಧಕ್ಕೆ ತಾಳೀಕೋಟೆಯ ಯುದ್ಧವೆಂದೆನ್ನುವರು.

ತೊಳಚಗೋಡ.— ಬಾದಾಮಿಯ ದಕ್ಷಿಣಕ್ಕೆ ೩ ಮೈಲಿನ ಮೇಲೆ, ಜ. ಸ. (೮೧) ೧೨೫೭. ಇಲ್ಲಿಯ ಬನಶಂಕರಿಯ ಗುಡಿಯು ಹೆಸರಾದದ್ದು. ಬನಶಂಕರಿಗೆ ಶಾಕಂಬರಿ ಯೆಂತಲೂ ಅನ್ನುವರು. ಬನಶಂಕರಿಯ ಹಳೇ ಗುಡಿಯು ಹಾಳಾಗಿ ನೆಲದೊಳಗೆ ಅರ್ಧ ಮರ್ಧ ಹುಗಿದದೆ. ಹೊಸ ಗುಡಿಯನ್ನು ಕರೆ ಕಲ್ಲಿನಿಂದ ಸಾತಾರೆಯ ಪರಶುರಾಮ ನಾಯಿಕ ಅಗಳೆ ಯೆಂಬವನು ಸನ್ ೧೭೫೦ರ ಸುಮಾರಿನಲ್ಲಿ ದೇವಿಯ ಅಪ್ಪಣೆಯಿಂದ ಕಟ್ಟಿ ಅದರೊಳಗೆ ದೇವಿಯ ಮೂರ್ತಿಯನ್ನು ಹಳೆ ಗುಡಿಯಿಂದ ತೆಗಿದು ಸ್ಥಾಪಿಸಿದ್ದಾನೆ. ಹಳೆ ಗುಡಿಯು ದಕ್ಷಿಣ ದೇಶದ ಪದ್ಧತೀದಿರುತ್ತದೆ. ಅದರ ಸಭಾಮಂಟಪದ ಛಾವಣಿಯು ಹೋಗಿದೆ. ಈ ಗುಡಿಯು ೭ನೇ ೮ನೇ ಶತಕದಲ್ಲಿ ಆದದ್ದೆಂದು ತೋರುತ್ತದೆ. ಹೊಸ ಗುಡಿಯ ಮೇಲೆ ಶಿಖರ ಕಟ್ಟಿ ಅದರ ಮೇಲೆ ಗುಮುಟವನ್ನು ಮಾಡಿದ್ದಾರೆ. ಗುಡಿಯ ಸುತ್ತು ಮುತ್ತು ಧರ್ಮ ಶಾಲೆಗಳಿರುತ್ತವೆ. ಒಂದಾನೊಂದು ಕಾಲದಲ್ಲಿ ನೂರು ವರ್ಷದ ವರೆಗೆ ಮಳೆ ಬೀಳದ್ದರಿಂದ ಬ್ರಾಹ್ಮಣರು ಭಕ್ತಿಯಿಂದ ದೇವಿಯ ಆರಾಧನೆಯನ್ನು ಮಾಡುತ್ತಿರಲು, ಆಕೆ ಶಾಕಂಬರಿಯ ರೂಪದಿಂದ ಅವತರಿಸಿ, ಈಗ ಗುಡಿಯ ಮುಂದೆ ಇರುವ ಹೊಂಡದೊಳಗೆ ಬಂದು ನಿಂತಳು. ಈ ದೇವತೆಗೆ ಕೊಟ್ಟ ನೈವೇದ್ಯದ ಪದಾರ್ಥಗಳನ್ನು ವೊಬ್ಬ ಹುಡುಗನು ತಿಂದದ್ದರಿಂದ ಶಾಕಂಬರಿಯು ಆ ಹುಡುಗನನ್ನು ನುಂಗಿದಳು. ಬ್ರಾಹ್ಮಣರು ಮತ್ತೆ ದೇವಿಯನ್ನು ಬಹಳವಾಗಿ ಪ್ರಾರ್ಥಿಸಿದ್ದರಿಂದ ದೇವಿಯು ಹುಡುಗನನ್ನು ಉಗುಳಿ ಚಲ್ಲಿದಳು. ತರುವಾಯ ದೇವಿಯು ಹೊಂಡದೊಳಗೆ ನಿಂತು ಕೊಂಡದ್ದರಿಂದ ಹೊಂಡದ ನೀರು ಯಾವಾಗಲೂ ಇದ್ದಷ್ಟೇ ಇರುತ್ತದೆ. ಈ ಬನಶಂಕರಿಯ ಹೊಂಡವು ೩೬೦ ಫೂಟು ಚಚ್ಚೌಕು ಇರುತ್ತದೆ; ಪರಮಾವದಿ ಆಳವು ೨೫ ಫೂಟು. ಇದಕ್ಕೆ ಪೂರ್ವದಲ್ಲಿ ಹರಿಶ್ಚಂದ್ರ ತೀರ್ಥವೆನ್ನುವರು. ಈ ಹೊಂಡಕ್ಕೆ ನಾಲ್ಕೂ ದಿಕ್ಕುಗಳಲ್ಲಿ ಭದ್ರವಾದ ಕಲ್ಲಿನ ಗೋಡೆಗಳನ್ನು ಶಂಕರಶೆಟ್ಟಿ, ಚಂದ್ರಶೆಟ್ಟಿ, ಯೆಂಬವರಿಬ್ಬರು ಜೈನರು ಸನ್ ೧೬೮೦ರ ಸುಮಾರಿನಲ್ಲಿ ಹಾಕಿಸಿದರೆಂದು ಹೇಳುತ್ತಾರೆ. ಪೂರ್ವ ದಿಕ್ಕಿನ ಗೋಡೆಯಲ್ಲಿ ಹೆಚ್ಚಿನ ನೀರು ಹರಿದು ಹೋಗಲಿಕ್ಕೆ ಮೂರು ಮಾರ್ಗಗಳನ್ನು ಮಾಡಿದಾರೆ. ಹೊಂಡದ ಪಶ್ಚಿಮದ ಗೋಡೆಯ ಮೇಲೆ ೨೪

ಕಂಬಗಳುಳ್ಳದ್ದೊಂದು ದೊಡ್ಡ ಮಂಟಪವಿರುತ್ತದೆ. ಅದರ ಬಳಿಯಲ್ಲಿ ವೊಂದು ದೀಪ ಸ್ತಂಭವು, ಮೂರು ಉಪ್ಪರಿಗೆಗಳನ್ನು ಕಟ್ಟಿ ತಲೆಯ ಮೇಲೆ ಶಿಖರವನ್ನು ಇಟ್ಟು ಮಾಡಿ ದ್ದಿರುತ್ತದೆ. ಬನಶಂಕರಿಯ ಯೆದುರಿಗೂ ಬಲಗಡೆಯಲ್ಲಿಯೂ ಯೆರಡು ಶಲೆಗಳಿರುತ್ತವೆ. ಗುಡಿಯ ಪೂರ್ವ ಉತ್ತರ ದಿಕ್ಕುಗಳಲ್ಲಿ ಅರಿಶಿಣಗೊಂಡ, ಯೆಣ್ಣಿಗೊಂಡ, ಯೆಂಬೆರಡು ಕುಂಡಗಳಿವೆ. ಗುಡಿಯ ಉತ್ತರ ದ್ವಾರದ ಹೊರಗೆ ಬಹು ಸುಂದರವಾಗಿ ಕಟ್ಟಿದ ರಥವು ಇರುತ್ತದೆ.

ತೊರವಿ.—ವಿಜಾಪುರದ ಪಶ್ಚಿಮಕ್ಕೆ ೪ ಮೈಲಿನ ಮೇಲೆ, ಜ. ಸ. (೮೧) ೨೪೦೪. ವಿಜಾಪುರದ ಭರಭರಿಯ ಕಾಲಕ್ಕೆ ಇದು ಪಟ್ಟಣದ ಭಾಗವೆನಿಸುತ್ತಿತ್ತು. ೨ನೇ ಇಭ್ರಾ ಹಿಮುಶಹನು ಇಲ್ಲಿ ದೊಡ್ಡ ದೊಡ್ಡ ಅರಮನೆಗಳನ್ನೂ ಮಶೀದಿಗಳನ್ನೂ ಕಟ್ಟಿಸಿ ವಾಸಿಸು ತ್ತಿದ್ದನು. ಈ ಊರಿನ ಬಳಿಯಲ್ಲಿ ವೊಂದು ನರಿಯನ್ನು ನಾಯಿಯು ಬೆನ್ನಟ್ಟಲಾಗಿ, ನರಿಯು ಹಿಂದಿರುಗಿ ನಾಯಿಯನ್ನು ಹಿಡೀತಂತೆ. ಇದು ಅಪಶಕುನವೆಂದು ತಿಳಿದು ಇಭ್ರಾಹಿಮುಶಹನು ತೊರವಿಯನ್ನು ಬಿಟ್ಟು ವಿಜಾಪುರದಲ್ಲಿ ಹೋಗಿ ನಿಂತನೆಂದು ಹೇಳು ತ್ತಾರೆ. ಅವನು ಕಟ್ಟಿಸಿದ ಇಮಾರತುಗಳಲ್ಲಿ ವೊಂದೆರಡು ಮಶೀದಿಗಳು ಮಾತ್ರ ಈಗ ಉಳಿದಿರುತ್ತವೆ. ತೊರವಿಯಲ್ಲಿ ಹತ್ತೆಂಟು ಅರ್ವಾಚೀನ ಕಾಲದ ಗುಡಿಗಳಿರುತ್ತವೆ. ಅವುಗಳಲ್ಲಿ ನರಸಿಂಹನ ಗುಡಿಯು ಜಾಗೃತ ಸ್ಥಾನವೆಂದು ಯೆಣಿಸಲ್ಪಡುತ್ತದೆ. ನರ ಸಿಂಹನ ಗುಡಿಯನ್ನು ಇಟ್ಟಂಗಿಗಳಿಂದ ಚಚ್ಚೌಕಾಗಿ ಕಟ್ಟಿದ್ದಾರೆ. ಅದರ ಮಧ್ಯ ಭಾಗ ದಲ್ಲಿ ವೊಂದು ವೃಂದಾವನವೂ ಹನುಮಂತನ ಮೂರ್ತಿಯೂ ಉಂಟು. ಗರ್ಭ ಗುಡಿ ಯಲ್ಲಿ ನಾರಸಿಂಹನ ಮೂರ್ತಿಯೂ ವೊಂದು ಲಿಂಗವೂ ಉಂಟು. ಊರ ಹೊರಗೆ ದೊಡ್ಡದೊಂದು ಕೆರೆಯುಂಟು; ಅದರೊಳಗೆ ೧೨೦೦ ಫೂಟು ಚಚ್ಚೌಕಾದ ಹೊಂಡ ವಿರುತ್ತದೆ. ಇದಲ್ಲದೆ ಊರೊಳಗೆ ೪೦ ಬಾವಿಗಳಿರುತ್ತವೆ. (ತೊರವಿಯ ಜಲಾಶಯ ಗಳನ್ನು ವಿಜಾಪುರದ ವರ್ಣನೆಯಲ್ಲಿ ನೋಡು).

ತುಂಬಿಗಿ.—ಇಂಡಿಯ ದಕ್ಷಿಣಕ್ಕೆ ೧೩ ಮೈಲಿನ ಮೇಲೆ. ಇಲ್ಲಿ ಹನುಮಂತನ ಗುಡಿಯಲ್ಲಿ ವೊಂದು, ಪೋಲೀಸ ಚೌಕಿಯ ಬಳಿಯಲ್ಲಿ ವೊಂದು ಲಿಪಿ ಕಲ್ಲುಗಳಿರುತ್ತವೆ. ಇವು ಚಾಲುಕ್ಯರ ಆಳಿಕೆಯಲ್ಲಿ ೧೧ನೇ ಶತಕದಲ್ಲಿ ಆಗಿರುತ್ತವೆ.

ಯಲಗೂರು.—ಮುದ್ದೇಬಿಹಾಳದ ಪಶ್ಚಿಮಕ್ಕೆ ೧೩ ಮೈಲಿನ ಮೇಲೆ, ಕೃಷ್ಣೆ ಯಿಂದ ೩ ಮೈಲಿನ ಮೇಲೆ. ಇಲ್ಲಿಯ ಹನುಮಂತನು ಬಹು ಜಾಗೃತನೆಂದು ಪ್ರಸಿದ್ಧಿ ಯುಂಟು. ದೇವರ ಗುಡಿಯನ್ನು ಊರ ಹೊರಗೆ ಪಡಪ್ಪದೇಸಾಯಿ ಯೆಂಬವನು ಭದ್ರವಾ ಗಿಯೂ ವಿಸ್ತಾರವಾಗಿಯೂ ಕಟ್ಟಿಸಿದ್ದಾನೆ. ಶಿಖರದ ಮೇಲೆ ಹಿತ್ತಾಳಿಯ ಕಳಸವಿರುತ್ತದೆ. ಸುತ್ತಲಿನ ಯೇಳು ಹಳ್ಳಿಗಳಿಗೆ ಈ ಹನುಮಂತನು ವೊಬ್ಬನೇ ದೇವರಾದ್ದರಿಂದ ಇವ ನಿಗೆ ಯೆಳಗುರದಪ್ಪ (ಯೇಳೂರಪ್ಪ) ಯೆಂಬ ಹೆಸರು ಬಂದದೆಂದು ಹೇಳುತ್ತಾರೆ.

ಕೃಷ್ಣೆಯ ದಂಡೆಯಲ್ಲಿ ಸೀತೀಮನಿ ಯೆಂಬ ಹಳ್ಳಿಯುಂಟು. ಅದರ ಬಳಿಯಲ್ಲಿ ಸೀ ತೀಗಿರಿ ಯೆಂಬ ಗುಡ್ಡದಲ್ಲಿ ರಾಮನು ಸೀತೆಯ ಸಹಿತ ಇದ್ದನಂತೆ.

# ಕಾನಡಾ ಜಿಲ್ಲೆ.

ಅಘನಾಶಿ.— ಗೋಕರ್ಣದ ಆಗ್ನೇಯಕ್ಕೆ ೩ ಮೈಲಿನ ಮೇಲೆ. ತದಡೀ ಹೊಳೆಯ ಮುಖದ ಬಳಿಯಲ್ಲಿ. ಹೈಗರು ಯೆಲ್ಲಕ್ಕೂ ಮೊದಲು ಇಲ್ಲಿ ಬಂದು ನಿಂತರೆಂದು ಹೇಳುತ್ತಾರೆ. ಕಾಮೇಶ್ವರ, ಮಹಾದೇವ ಗಣಪತಿ, ಯೆಂಬ ದೇವಸ್ಥಾನಗಳಿವೆ. ಈ ವೂರಿನ ಬಳಿಯಲ್ಲಿ ತದಡೀ ಹೊಳೆಯು ಯಾವತ್ತು ಪಾಪಗಳನ್ನು ನಾಶ ಮಾಡುತ್ತಿರುವ ಕಾರಣ ಇದಕ್ಕೆ ಅಘನಾಶಿ ಯೆಂಬ ಹೆಸರು ಬಂದದೆ ಯೆಂದು ಹೇಳುತ್ತಾರೆ.

ಅಲಿಗದ್ದೆ.— ಕಾರವಾಡದ ವರ್ಣನೆ ನೋಡು.

ಅಂಜದೀವ.— ಉತ್ತರ ಅಕ್ಷಾಂಶ ೧೪°, ೪೪′, ಪೂರ್ವ ರೇಖಾಂಶ ೭೪°, ೧೦′, ಜ. ಸ. (೧೮೭೧) ೫೦೭. ನಿವಾಸಿಗಳೆಲ್ಲ ಕ್ರಿಸ್ತೀ ಜನರು. ಈ ದ್ವೀಪವು ಕಾರವಾಡದ ಆಗ್ನೇಯಕ್ಕೆ ೫ ಮೈಲಿನ ಮೇಲೆ ಸಮುದ್ರದೊಳಗೆ ಪೋರ್ತುಗೀಸರ ವಶದಲ್ಲಿ ಇರುತ್ತದೆ. ಈ ದ್ವೀಪವು ಸುಮಾರು ವೊಂದು ಮೈಲು ಉದ್ದ, ೯೦೦ ಫೂಟು ಅಗಲು ಇರುತ್ತದೆ. ಪಶ್ಚಿಮ ದಂಡೆಯಲ್ಲಿ ಗರಸಿನ ಭೂಮಿ ಇರುತ್ತದೆ; ಪೂರ್ವ ದಂಡೆಯಲ್ಲಿ ಮಾತ್ರ ತೆಂಗು, ಹಲಸು ಮುಂತಾದ ಫಲವೃಕ್ಷಗಳ ಬನಗಳಿವೆ; ಬತ್ತದ ಭೂಮಿ ಇಲ್ಲ. ಹವೆಯು ರೋಗಕಾರಕ, ಜ್ವರೋಪದ್ರವ ಬಹಳ. ದ್ವೀಪದ ಮಧ್ಯ ಭಾಗದಲ್ಲಿ ಅತ್ಯುತ್ತಮವಾದ ಶೀ ನೀರಿನ ಕುಂಡವಿರುತ್ತದೆ. ಈ ನೀರಿನ ಸಲುವಾಗಿ ಅರಬಸ್ತಾನ, ಗ್ರೀಸ ಮುಂತಾದ ಪರನಾಡುಗಳಿಂದ ಬುನಾದಿಯಲ್ಲಿ ಬರುತ್ತಿದ್ದ ಹಡಗುಗಳು ಅಂಜದೀವದಲ್ಲಿ ನಿಲ್ಲುತ್ತಿದ್ದವು. ಸದ್ಯಕ್ಕೆ ಜನರ ವಸ್ತಿಯು ಪೂರ್ವ ದಂಡೆಯಲ್ಲಿ ಮಾತ್ರ ಇರುತ್ತದೆ. ಈ ಜನರು ವಾಡಿಕೆಯಾಗಿ ಮೀನು ಹಿಡಿದು ಜೀವಿಸುವರು. ಪೋರ್ತುಗೀಸರು ಇಲ್ಲಿ ವೊಂದು ಕೋಟೆಯನ್ನು ಕಟ್ಟಿದ್ದಾರೆ.

ಅಂಜದೀವೆಂಬ ಹೆಸರು ಆದ್ಯ ದ್ವೀಪ, ಅಜ್ಯ ದ್ವೀಪ, ಅಂಜೆ (ಪಂಚ) ದ್ವೀಪ, ಅಂಜನೀ ದ್ವೀಪ, ಈ ಬಗೆಯ ಕೆಲವೊಂದು ಬುನಾದಿಯ ಹೆಸರಿನಿಂದ ಹುಟ್ಟಿರುತ್ತದೆಂಬ ಬಗ್ಗೆ ಬೇರೆ ಬೇರೆ ಕಥೆಗಳಿರುತ್ತವೆ. ಇಜಿಪ್ತದ ತಾಲೆಮಿ ಯೆಂಬವನು ತನ್ನ ಗ್ರಂಥದಲ್ಲಿ (ಸನ್ ೧೫೦) ಈ ದ್ವೀಪವನ್ನು ಉಲ್ಲೇಖಿಸಿದ್ದಾನೆ. ಗ್ರೀಸ ದೇಶದ ಆರ್ಯನ್ನನೆಂಬವನು ತನ್ನ ಪೆರಿಪ್ಲಸವೆಂಬ ಗ್ರಂಥದಲ್ಲಿ (ಸನ್ ೨೪೭) ಇದನ್ನು ಉಲ್ಲೇಖಿಸಿದ್ದಾನೆ. ಆದ್ದರಿಂದ ಕ್ರಿಸ್ತೀ ಶಕದ ಪೂರ್ವಕಾಲದಿಂದ ಪಾಶ್ಚಿಮಾತ್ಯರು ಅಂಜದೀವದ ಮಾರ್ಗವಾಗಿ ಹಿಂದುಸ್ಥಾನದ ಪಶ್ಚಿಮ ದಂಡೆಗೆ ಬರುತ್ತಿದ್ದರೆಂದು ಸಿದ್ಧವಾಗುತ್ತದೆ. ಸನ್ ೧೩೪೨ರಲ್ಲಿ ಇಬನ್‌ಬತೂತನೆಂಬ ಆಫ್ರಿಕದ ಮುಸಲ್ಮಾನನು ಈ ದ್ವೀಪಕ್ಕೆ ಹೋಗಿದ್ದನು. ಆಗ ಇಲ್ಲಿ ವೊಂದು ಗುಡಿಯೂ ತೆಂಗಿನ ಬನವೂ ಇತ್ತು. ಗುಡಿಯಲ್ಲಿ ಯೆರಡು ಮೂರ್ತಿಗಳ ನಡುವೆ ವೊಬ್ಬ ಜೋಗಿಯು ಗೋಡೆಗೆ ಆತು ಕೊಂಡು ನಿಂತಿ

ದ್ದನು. ಬತೂತನು ಅವನನ್ನು ಮಾತಾಡಿಸಿದರೆ ಅವನು ಮಾತಾಡಲಿಲ್ಲ. ಅವನು ಯೇನು ತಿನ್ನುತ್ತಿರುತ್ತಾನೆಂದು ಬತೂತನು ಸುತ್ತು ಮುತ್ತು ನೋಡುವಷ್ಟರಲ್ಲಿ ಜೋಗಿಯು ಹೂಕರಿಸಲಾಗಿ ತೆಂಗಿನ ಮರದಿಂದ ಅವನ ಮೈ ಮೇಲೆ ವೊಂದು ಕಾಯಿ ಬಿತ್ತು! ಅದನ್ನು ನೋಡಿ ಬತೂತನಿಗೆ ಬಹು ಕೌತುಕವಾಯಿತು. ಬತೂತನು ಜೋಗಿಗೆ ಹಣ ಕೊಡಹೋಗಲಾಗಿ, ಜೋಗಿಯು ಅದನ್ನು ತಕ್ಕೊಳ್ಳದೆ, ಬತೂತನ ಮುಂದೆ ಹತ್ತು ದೀನಾರವೆಂಬ ನಾಣ್ಯಗಳನ್ನು ಚಲ್ಲಿದನು. ಬತೂತನು ನೀನು ಯಾವ ದೇವರಿಗೆ ನಡ ಕೊಳ್ಳುತ್ತೀ ಯೆಂದು ಸನ್ನೆಯಿಂದ ಕೇಳಿದಕ್ಕೆ ಜೋಗಿಯು ಆಕಾಶವನ್ನೂ ಪಶ್ಚಿಮ ದಿಕ್ಕನ್ನೂ ತೋರಿಸಿದನು. ಅದರಿಂದ ಅಲ್ಲಾನಿಗೂ ಮಕ್ಕಾ ಪಟ್ಟಣದ ಮಶೀದಿಗೂ ಇವನು ನಡಕೊಳ್ಳುತ್ತಾನೆಂದು ತಿಳಿದು ಬತೂತನು ಬಹು ಸಂತೋಷ ಪಟ್ಟನು. ಆದರೆ ಜೋಗಿಯ ಅಭಿಪ್ರಾಯವು ಸೂರ್ಯನಿಗೂ ಸಮುದ್ರಕ್ಕೂ ತಾನು ನಡಕೊಳ್ಳುತ್ತಾನೆಂದು ಇತ್ತೆಂದು ತೋರುತ್ತವೆ.

ವಿಜಯನಗರದ ರಾಜ್ಯವು ಪ್ರಬಲವಾದ ಬಳಿಕ ಅಂಜಿದೀವವು ಆ ರಾಜ್ಯಕ್ಕೆ ಕೆಲವು ದಿವಸ ಶೇರಿತ್ತು. ಆದರೆ ಅರಬಸ್ತಾನದಿಂದ ಬರುತ್ತಿದ್ದ ವ್ಯಾಪಾರಸ್ಥರು ದ್ವೀಪದಲ್ಲಿ ಇಳಿದು ನಿವಾಸಿಗಳನ್ನು ಬಹಳ ಪೀಡಿಸಿದ್ದರಿಂದ ನಿವಾಸಿಗಳು [illegible] ಹೋಗಿ ದ್ವೀಪವು ಹಾಳು ಬಿತ್ತು. ಮುಂದೆ ಪೋರ್ತುಗಾಲದ ವಾಸ್ಕೋದಿಗಾಮನು ಕಾಲಿಕತ್ತದಿಂದ ಯುರೋಪಕ್ಕೆ ತಿರಿಗಿ ಹೋಗುವಾಗ ಅಂಜದೀವದಲ್ಲಿ ಕೆಲವು ದಿವಸ ನಿಂತಿದ್ದನು. ಅಂದಿನಿಂದ ದ್ವೀಪವು ಪೋರ್ತುಗೀಸರ ವಶದಲ್ಲಿ ಇರುತ್ತದೆ. ಗೋವೆಯಿಂದಲೂ ದಿವೂ ದ್ವೀಪದಿಂದಲೂ ಪೋರ್ತುಗೀಸ ಅಧಿಕಾರಿಗಳು ಗುಪ್ಪೇಗಾರರನ್ನು ಅಂಜದೀವಕ್ಕೆ ಕಳಿಸುವರು. ಈಗಿರುವ ನಿವಾಸಿಗಳು ಅವರ ವಂಶದವರೆಂದು ತೋರುತ್ತವೆ.

**ಅಂಕೋಲಾ.**—ಕಾರವಾಡದ ಆಗ್ನೇಯಕ್ಕೆ ೧೫ ಮೈಲಿನ ಮೇಲೆ, ಜ. ಸ. (೮೧) ೪೪೭೭. ಇದು ತಾಲೂಕಿನ ಮುಖ್ಯ ಗ್ರಾಮವು; ತಾಲೂಕ ಕಚೇರಿಯಲ್ಲದೆ ಟಪಾಲ ಕಚೇರಿ, ಫೌಜದಾರ ಕಚೇರಿ, ಕಷ್ಟಮ್ ಕಚೇರಿ, ಇಂಗ್ರಜೀ ಶಾಲೆ, ಮುಶಾಫರೀ ಬಂಗಲೆ ಇರುತ್ತವೆ. ಬಾಜಾರಿನಲ್ಲಿ ೭೦ ಅಂಗಡಿಗಳಿವೆ. ಅಡಿಕೆ, ತೆಂಗು, ತಂಬಾಕ, ಕಿರಾಣಿ, ವಸ್ತ್ರಗಳ ವ್ಯಾಪಾರವಾಗುತ್ತದೆ. ಸನ್ ೧೮೮೧-೮೨ ವರೆಗೆ ೮ ವರ್ಷದಲ್ಲಿ ಸಮುದ್ರ ಮಾರ್ಗವಾಗಿ ಆಯಾತ ಮಾಲು ಸರಾಸರಿ ೫೩೧೮೮ ರೂಪಾಯದ್ದು, ನಿರ್ಗತ ಮಾಲು ಸರಾಸರಿ ೭೮೯೭೦ ರೂಪಾಯದ್ದು. ಅಂಕೋಲೆಯ ಹಾಳು ಕೋಟೆಯು ಊರಿಂದ ೪೦೦ ಯಾರ್ಡಿನ ಮೇಲೆ ೭೦೦ ಯಾರ್ಡು ಸುತ್ತಳತೆಯುಳ್ಳದ್ದಿರುತ್ತವೆ. ಇದರಲ್ಲಿ ರುದ್ರೇಶ್ವರನೆಂಬ ದೇವಸ್ಥಾನದ ಹೊರ್ತು ಬೇರೆ ಮನೆಮಾರುಗಳೇನು ಇಲ್ಲ. ಇದನ್ನು ಸ್ವಾದೆಯ ಅರಸನೊಬ್ಬನು ಅಂಕೋಲೆಯಲ್ಲಿ ಇರುತ್ತಿದ್ದ ತನ್ನ ಉಪಪತ್ನಿಗಾಗಿ ಕಟ್ಟಿಸಿದನೆಂದು ಹೇಳುತ್ತಾರೆ. ಸನ್ ೧೬೭೫ರಲ್ಲಿ ಶಿವಾಜಿಯು ಅಂಕೋಲೆಯನ್ನು ಸುಲಿದು ಸುಟ್ಟನು. ಆಗ ಇದು ವಿಜಾಪುರದ ರಾಜ್ಯಕ್ಕೆ ಶೇರಿತ್ತು. ಸನ್ ೧೭೮೩ರಲ್ಲಿ ಹೈದರನು ಅಂಕೋಲೆಯನ್ನು ತಕ್ಕೊಂಡಾಗ ೭೦೦೦ ಜನ ಕ್ರಿಸ್ತಿಯನ್ನರು ಇಲ್ಲಿ ಇರುತ್ತಿದ್ದರು.

ಟೀಪೂನು ಕ್ರಿಸ್ತೀ ಜನರ ಗುಡಿಯನ್ನು ಸುಲಿದು ಸುಟ್ಟು, ಯಾವತ್ತು ಕ್ರಿಸ್ತಿಗಳನ್ನು ಶರೆ ಹಿಡಿದು ತಕ್ಕೊಂಡು ಹೋದನು.

**ಅರಬೀತೆಂಬಿ.**—ಅನಶೀ ಘಟ್ಟದ ಉತ್ತರಕ್ಕೆ ಮೂರು ಮೈಲಿನ ಮೇಲೆ. ಒಂದು ಗುಡ್ಡದ ಮೇಲೆ ಸುಮಾರು ೧೦೦೦ ಫೂಟು ಸುತ್ತಳತೆಯುಳ್ಳ ಪೊಣ ಕಲ್ಲಿನ ಗೋಡೆಯುಂಟು. ಇದನ್ನು ವಿಜಯನಗರದವರ ಆಳಿಕೆಯಲ್ಲಿ ಅರಬ ಜಾತಿಯ ಕಳ್ಳರು ತಾವು ಇರುವದಕ್ಕೋಸ್ಕರ ಹಾಕಿದರೆಂದು ಹೇಳುತ್ತಾರೆ. ಇದು ಈಗ ಹಾಳು ಬಿದ್ದದೆ.

**ಅವರ್ಸೆ.**—ಅಂಕೋಲೆಯ ಉತ್ತರಕ್ಕೆ ೫ ಮೈಲಿನ ಮೇಲೆ. ಇಲ್ಲಿ ಹಡಗದ ಆಕಾರದ್ದೊಂದು ಶಂತ್ರಾದೇವಿ ಯೆಂಬ ದೇವತೆಯ ಗುಡಿಯುಂಟು. ಈ ದೇವತೆಗೆ ಕಾರ್ವಿ ಜನರೂ ಸಾತರದವರೂ ಬಹು ಭಕ್ತಿಯಿಂದ ನಡಕೊಳ್ಳುವರು. ನವರಾತ್ರಿಯಲ್ಲಿ ಉತ್ಸವವಾಗುತ್ತದೆ.

**ಬೈಲೂರು.**—ಹೊನ್ನಾವರದ ದಕ್ಷಿಣಕ್ಕೆ ೧೦ ಮೈಲಿನ ಮೇಲೆ, ಜ. ಸ. (೭೧) ೧೪೮೬. ಮಾರ್ಕಂಡೇಶ್ವರನ ಗುಡಿಯು ಪುರಾತನದ್ದಿರುತ್ತದೆ. ಪ್ರತಿ ವರ್ಷ ಸಣ್ಣ ಜಾತ್ರೆಯಾಗುತ್ತದೆ.

**ಬನವಾಸಿ.**—ಶಿರಶಿಯ ಆಗ್ನೇಯಕ್ಕೆ ೧೩ ಮೈಲಿನ ಮೇಲೆ ವರದಾ ನದಿಯ ದಂಡೆಯಲ್ಲಿ, ಜ. ಸ. (೭೧) ೨೦೦೦. ಇದು ಬಹು ಪುರಾತನ ಕಾಲದಲ್ಲಿ ಹೆಸರಾದ ಪಟ್ಟಣವು; ಬಹುತರ ಆನೇಗುಂದಿಯು ಸಮ ಕಾಲೀನವೆಂದು ಹೇಳ ಬಹುದು. ಋಸಾದಿಯಲ್ಲಿ ಇದಕ್ಕೆ ವೈಜಯಂತಿ ಯೆಂಬ ಹೆಸರಿತ್ತು. ಈಗ ಮಧುಕೇಶ್ವರನ ದೊಡ್ಡ ಗುಡಿಯು ನೋಡ ಕತ್ತಂಥಾದ್ದಿರುತ್ತದೆ. ಇದರಲ್ಲಿ ನಾನಾ ಪ್ರಕಾರದ ಚಿತ್ರಗಳನ್ನು ಕೊರಿದಿದ್ದಾರೆ. ಸುತ್ತಲಿನ ಅವಾರದ ಗೋಡೆಗೆ ಹೊಂದಿ ಕೆಲವು ದೇವಸ್ಥಾನಗಳಿವೆ. ಅವುಗಳೊಂದರಲ್ಲಿ ಬಹು ಸುಂದರವಾಗಿ ಮಾಡಿದ್ದೊಂದು ಕಲ್ಲಿನ ಮಂಚವಿರುತ್ತದೆ. ವಿಷ್ಣುವು ಮಧುಕೈಟಭರೆಂಬ ದೈತ್ಯರನ್ನು ಕೊಂದು ಈ ಗುಡಿಯನ್ನು ಕಟ್ಟಿದನೆಂದು ದಂತಕಥೆಯುಂಟು. ಈ ಗುಡಿಯಲ್ಲಿಯೂ ಇದರ ನೆರೆಯಲ್ಲಿಯೂ ೧೨ ಲಿಪಿಗಳಿರುತ್ತವೆ.

ಎಲ್ಲಕ್ಕೂ ಪುರಾತನದ ಲಿಪಿಯು ಮಧುಕೇಶ್ವರನ ಅಂಗಳಿನಲ್ಲಿ ವೊಂದು ಸಣ್ಣ ಗುಡಿಯೊಳಗೆ ಇರುತ್ತದೆ. ಲಿಪಿಯ ಕಲ್ಲಿನ ಮಧ್ಯ ಭಾಗದಲ್ಲಿ ೫ ಹೆಡೆಗಳುಳ್ಳ ಸರ್ಪನನ್ನು ಕೊರಿದು, ಅದರ ಯೆಡಕ್ಕೂ ಬಲಕ್ಕೂ ಲಿಪಿಯನ್ನು ಮೂರು ಸಾಲಾಗಿ ಪಾಲೀ ಭಾಷೆಯಿಂದ ಬರಿದಿದ್ದಾರೆ. ಈ ಲಿಪಿಯ ಭಾಷಾಂತರವನ್ನು ಕೆಳಗೆ ಕೊಡುತ್ತೇವೆ.

"**ಪರಾತ್ಪರನಿಗೆ.**—ವಿಷ್ಣುಕದ ದೂತವೆಂಬ ಮನೆತನವನ್ನು ಪ್ರೀತಿಸುವ ಹಾರಿತಿ ಪುತ್ರನಾದ ಶತಕರ್ಣಿಯು ಆಳುತ್ತಿರುವಾಗ ಶಕೆ ೧೨ನೇ ವರ್ಷ ಹೇಮಂತ ಋತುವಿನ

೭ ಪಕ್ಷದ ಮೊದಲನೇ ದಿವಸ ಮಹಾಭೋಜೆ ಯೆಂಬ ಅರಸನ ಮಗಳೂ ಜೀವಪುತ್ರನೆಂಬವನ ಹೆಂಡತಿಯೂ ಆದ ಶಿವಖಂಡನ ಶ್ರೀ ಯೆಂಬವಳು ಮಗನನ್ನು ಕರೆಕೊಂಡು ವೊಂದು ನಾಗವನ್ನೂ ವೊಂದು ಜಲಾಶಯವನ್ನೂ ವೊಂದು ವಿಹಾರವನ್ನೂ ದಾನ ಮಾಡಿದಳು. ಈ ನಾಗವನ್ನು ಜಯಂತಕನ ಮಗನೂ ದಾಮೋರಕನ ಶಿಷ್ಯನೂ ಆದ ನಟಕನೆಂಬವನು ಮಾಡಿದನು".

ಶಕೆ ೧೨ನೇ ವರ್ಷವೆಂದರೆ ಕ್ರಿಸ್ತೀ ಶಕದ ೯೦ನೇ ವರ್ಷವಾಗುತ್ತದೆ. ಶತಕರ್ಣಿಯೆಂಬ ಅರಸು ಈ ಕಾಲದ ಪೂರ್ವದಲ್ಲಿ ಆಳುತ್ತಿದ್ದನೆಂದು ತಿಳಿದದೆ. ಇಷ್ಟು ಪುರಾತನ ಕಾಲದ ಲಿಪಿಯು ಮುಂಬಯಿ ಕರ್ನಾಟಕದಲ್ಲಿ ಯೆಲ್ಲಿಯೂ ಇಲ್ಲ. ಲಿಪಿಯನ್ನು ಬರಿಯುವ ರೀತಿಯಾದರೂ ಕಾಡು ತರದ್ದಿರುತ್ತದೆ; ಕದಂಬ, ಚಲುಕ್ಯ, ಮುಂತಾದ ಅರಸರ ಲಿಪಿಗಳಂತೆ ಸುಧಾರಿಸಿದ್ದಿಲ್ಲ. ಇದರಲ್ಲಿ ವರ್ಷ, ತಿಂಗಳು, ವಾರಗಳ ಹೆಸರುಗಳು ಇಲ್ಲವೇ ಇಲ್ಲ. ಈ ಲಿಪಿಯನ್ನು ಬರಿದ ಕಾಲಕ್ಕೆ ವರ್ಷದೊಳಗೆ ಮೂರು ಋತುಗಳೆಂಬ ಭಾಗಗಳನ್ನು ಮಾತ್ರ ಮಾಡುತ್ತಿದ್ದರೆಂದು ತೋರುತ್ತದೆ. ಆದರೆ ಈ ಲಿಪಿಯ ಅಕ್ಷರಗಳು ಇಷ್ಟು ಹಳೇ ಕಾಲದವಲ್ಲೆಂದು ಕೆಲವರ ಆಕ್ಷೇಪವಿರುತ್ತದೆ. (ಮುಂದೆ ಇತಿಹಾಸದಲ್ಲಿ ನೋಡು).

ಉಳಿದ ೧೧ ಲಿಪಿಗಳೆಲ್ಲ ಹಳೆಗನ್ನಡದಲ್ಲಿ ಬರಿದಿರುತ್ತವೆ. ಇವುಗಳಲ್ಲಿ ಕೆಲವುಗಳಿಗೆ ಮಿತಿ ಇಲ್ಲ; ಮಿತಿಯುಳ್ಳವುಗಳೆಲ್ಲ ೧೦ನೇ ಶತಕದ ಈಚೆಯ ಕಾಲದವಿರುತ್ತವೆ.

ಶಿವರಾತ್ರಿಯಲ್ಲಿ ಮಧುಕೇಶ್ವರನ ಉತ್ಸವವಾಗುತ್ತದೆ. ಆಗ ಐದಾರು ಸಾವಿರ ಜನ ಕೂಡಿ ವ್ಯಾಪಾರವು ವೊಳಿತಾಗಿ ನಡಿಯುತ್ತದೆ. ಮಧುಕೇಶ್ವರನಿಗೆ ಸರಕಾರದಿಂದ ೪೦೦೭ ರೂಪಾಯಿಯ ನೇಮಣೂಕು ನಡಿಯುತ್ತದೆ.

ಇತಿಹಾಸ.—ಈ ಪಟ್ಟಣಕ್ಕೆ ಕೃತ, ತ್ರೇತಾ, ದ್ವಾಪರ, ಕಲಿಯುಗಗಳಲ್ಲಿ ಕ್ರಮವಾಗಿ ಕೌಮುದಿ, ಜಯಂತಿ, ಬೈಂದವಿ, ವನವಾಶಿ, ಯೆಂಬ ಹೆಸರುಗಳಾದವೆಂದು ಜನರ ನಂಬಿಗೆಯುಂಟು. ಇದರಿಂದ ಪಟ್ಟಣವು ಬಹು ಪುರಾತನಕಾಲದ್ದೆಂದು ಸಿದ್ಧವಾಗುತ್ತದೆ. ಗೋಕರ್ಣ, ಆನೇಗುಂದಿ, ಹಾನಗಲ್ಲು, ಬನವಾಸಿ, ಹಂಪಿ, ಇವ್ವೈದು ಕರ್ನಾಟಕದಲ್ಲಿ ಬಹು ಪ್ರಾಚೀನ ಸ್ಥಾನಗಳೆಂದು ಹೇಳುತ್ತಾರೆ. ಹೆಸರಾದ ಅಶೋಕ ರಾಜನ ಆಳಿಕೆಯಲ್ಲಿ ಕ್ರಿಸ್ತೀ ಶಕದ ಹಿಂದೆ ೨೪೦ನೇ ವರ್ಷ ಪಾಟಣಾ ಪಟ್ಟದಲ್ಲಿ ದೊಡ್ಡ ಧರ್ಮಸಬೆಯಾದ ಬಳಿಕ ಆ ಅರಸನು ರಕ್ಷಿತನೆಂಬ ಧರ್ಮೋಪದೇಶಕನನ್ನು ಬೌದ್ಧ ಧರ್ಮವನ್ನು ದಕ್ಷಿಣದಲ್ಲಿ ಹಬ್ಬುಗೊಳಿಸುವದಕ್ಕೋಸ್ಕರ ಬನವಾಸಿಗೆ ಕಳಿಸಿದನೆಂದು ಬೌದ್ಧ ಧರ್ಮ ಪುಸ್ತಕದಲ್ಲಿ ಲೇಖವದೆ. ಕ್ರಿಸ್ತೀ ಶಕಕ್ಕಿಂತ ೧೦೦ ವರ್ಷದ ಪೂರ್ವದಲ್ಲಿ ಕಾರ್ಲೆ ಯೆಂಬ ಗುಹಾಲಯವನ್ನು ಮಾಡಿಸಿದ ಭೂತ ಪಾಲನೆಂಬ ಅರಸು ವಿಜಯಂತಿಗೆ ಹೋಗಿ ಬಂದನೆಂದು ಆ ಗುಹಾಲಯದಲ್ಲಿ ಲೇಖವದೆ. ಕ್ರಿಸ್ತೀ ಶಕದ ಹಿಂದೆ ೫ನೇ ವರ್ಷ ನಾಸಿಕದ್ದೊಂದು ಗುಹಾಲಯದಲ್ಲಿ ಬರಿದ ಲಿಪಿಯಲ್ಲಿ ಗೋತಮಿಪುತ್ರ ಶತಕರ್ಣಿ ಯೆಂಬ ಅರಸನ ದಂಡಿಗೆ ವಿಜಯಂತಿಯ ದಂಡೆಂದು ಹೇಳಲ್ಪಟ್ಟದೆ. ಮೇಲೆ

ಭಾಷಾಂತರಿಸಿದ ಮಧುಕೇಶ್ವರನ ಗುಡಿಯೊಳಗಿನ ಲಿಪಿಯಿಂದ ಕ್ರಿಸ್ತೀ ಶಕದ ೯೦ನೇ ವರ್ಷದ ಸುಮಾರಿನಲ್ಲಿ ಹಾರಿತಿಪುತ್ರ ಶತಕರ್ಣಿ ಯೆಂಬ ಅರಸು ಬನವಾಸಿಯಲ್ಲಿ ಆಳುತ್ತಿದ್ದನೆಂದು ತಿಳಿಯುತ್ತದೆ. ಈ ಲೇಖದ ಆರಂಭವು, ವಿಹಾರವೆಂದರೆ ಮಠವನ್ನು ಮಾಡಿಸಿದ್ದು, ವರ್ಷ, ತಿಂಗಳು, ವಾರಗಳ ಹೆಸರುಗಳಿಲ್ಲದೆ ಋತು ಪಕ್ಷಗಳಿಂದ ಕಾಲವನ್ನು ಹೇಳುವದು, ಇವೆಲ್ಲ ಭೌದ್ಧ ಧರ್ಮದವರ ಲೇಖಗಳ ಪದ್ಧತಿಯಂತೆ ಇರುತ್ತವೆ. ಆದ್ದರಿಂದ ಹಾರಿತಿಪುತ್ರ ಶತಕರ್ಣಿಯು ಬೌದ್ಧನಿದ್ದನೆಂದು ಸ್ಪಷ್ಟವಾಗುತ್ತದೆ. ಕದಂಬ ಅರಸರಿಗೆ ಹಾರಿತಿಪುತ್ರರೆಂಬ ಬಿರುದಿತ್ತು, ಮತ್ತು ಇವರು ಆರಂಭದಲ್ಲಿ ಬೌದ್ಧ ಧರ್ಮಿಗಳೇ ಇದ್ದರು. ಆದ್ದರಿಂದ ಶತಕರ್ಣಿಯು ಕದಂಬರ ಪೂರ್ವಜನೆಂದು ತೋರುತ್ತದೆ. ಇಜಿಪ್ತದ ತಾಲೆಮಿಯು (ಕ್ರಿ. ಶ. ೧೫೦) ತನ್ನ ಗ್ರಂಥದಲ್ಲಿ ಬನವಾಸಿಯ ಉಲ್ಲೇಖ ಮಾಡಿದ್ದಾನೆ. ೪ನೇ ೫ನೇ ಶತಕಗಳಲ್ಲಿ ಬೌದ್ಧ ಧರ್ಮಿಗಳೂ ಹಾರಿತಿಪುತ್ರರೆನಿಸುವವರೂ ಆದ ೯ ಜನ ಕದಂಬ ಅರಸರು ಬನವಾಸಿಯಲ್ಲಿ ಆಳಿದರೆಂದು ವೊಂದು ಕದಂಬರ ಲಿಪಿಯು ಹೇಳುತ್ತದೆ. ಚಲುಕ್ಯರ ೨ನೇ ಪುಲಿಕೇಶಿಯು (೬೧೦-೬೩೪) ಬನವಾಸಿಯನ್ನು ಸುತ್ತುಗಟ್ಟಿ ಅದನ್ನು ತಕ್ಕೊಂಡನೆಂದು ವೊಂದು ಲಿಪಿಯಲ್ಲಿ ಬರಿದದೆ. ಇದೇ ಬನವಾಸಿಯ ಕದಂಬರು ಚಲುಕ್ಯರ ಮಾಂಡಲಿಕರಾದ ಮಿತಿಯು. ಚಾಲುಕ್ಯರ ಆಳಿಕೆಯ ಕಡೆಯಲ್ಲಿ ಕದಂಬರು ನಿರ್ನಾಮರಾದರೆಂದು ತೋರುತ್ತದೆ. ಚಾಲುಕ್ಯರು ಹಾಳಾದ ಬಳಿಕ ಬನವಾಸಿಯು ದೇವಗಿರಿಯ ಯಾದವರ ರಾಜ್ಯಕ್ಕೆ, ಅವರು ಹಾಳಾದ ಬಳಿಕ ವಿಜಯನಗರದವರ ರಾಜ್ಯಕ್ಕೆ, ಅವರು ಹಾಳಾದ ಬಳಿಕ ಸ್ವಾದೆಯ ಅರಸರ ರಾಜ್ಯಕ್ಕೆ, ಅವರ ತರುವಾಯ ಹೈದರನ ರಾಜ್ಯಕ್ಕೆ ಶೇರಿತ್ತೆಂದು ಇತಿಹಾಸದಿಂದ ತಿಳಿಯುತ್ತದೆ. ಬನವಾಸಿಯು ಮಧುಕೇಶ್ವರನು ಬುನಾದಿಯಿಂದ ಕದಂಬ ಅರಸರ ಕುಲದೇವತೆಯು.

ಬಸವರಾಜದುರ್ಗ.—ಹೊನ್ನಾವರದ ವರ್ಣನೇ ನೋಡು.

ಬೇಲಿಕೇರಿ.—ಅಂಕೋಲೆಯ ಉತ್ತರಕ್ಕೆ ನಾಲ್ಕು ಮೈಲಿನ ಮೇಲೆ, ಜ. ಸ. (೮೧) ೧೦೬೬. ಇದು ಸಣ್ಣ ಬಂದರವಿರುತ್ತದೆ. ಸರಕಾರೀ ಕಷ್ಟಮ್ ಕಚೇರಿಯುಂಟು. ಇಲ್ಲಿಯ ಹವೆಯು ಆರೋಗ್ಯದ್ದೆಂದು ಯೆಣಿಸಲ್ಪಡುತ್ತದೆ. ಸಮುದ್ರ ದಂಡೆಯಲ್ಲಿ ಅಲದ ಬನದೊಳಗೆ ಸರಕಾರೀ ಬಂಗಲೆಯುಂಟು.

ಭಟಕಳ ಅಥವಾ ಸೂಸಗಢ.—ಹೊನ್ನಾವರದ ದಕ್ಷಿಣಕ್ಕೆ ೨೫ ಮೈಲಿನ ಮೇಲೆ, ಜ. ಸ. (೮೧) ೫೬೧೪. ಇದು ಮುಂಬಯಿ ಇಲಾಖೆಯಲ್ಲಿ ಯೆಲ್ಲಕ್ಕೂ ದಕ್ಷಿಣದ ಬಂದರವು. ಹಿಂದೂ ಜನರಿಗಿಂತ ಮುಸಲ್ಮಾನರ ವಸ್ತಿಯು ಹೆಚ್ಚುಂಟು; ಅವರು ಬಹುತರ ಯೆಲ್ಲರು ನವಾಯತರೆಂಬ ಕುಲದವರು. ಇವರು ೮ನೇ ಶತಕದ ಈಚೆಯಲ್ಲಿ ಬಂದ ಅರಬ ಇರಾಣೀ ಜನರ ವಂಶದವರೆಂದು ತೋರುತ್ತದೆ. ನವಾಯತರಲ್ಲಿ ಬಹು ಜನರು ಸಂಪನ್ನರಿರುತ್ತಾರೆ. ಇವರು ಮುಖ್ಯವಾಗಿ ವ್ಯಾಪಾರದ ಹೋರೆಯನ್ನು ಮಾಡುತ್ತಾರೆ. ಭಟಕಳದ ಬಾಜಾರು, ಮನೆಗಳು, ತೋಟಗಳು, ಮುಂತಾದವುಗಳು ಪೂರ್ವ ಕಾಲದ ಪಟ್ಟಣದ ಸ್ವರೂಪವನ್ನು ತೋರಿಸುತ್ತವೆ.

ಭಟಕಳದಲ್ಲಿ ೧೫ನೇ ೧೬ನೇ ಶತಕಗಳಲ್ಲಿ ಕಟ್ಟಿದಂಥ ೧೩ ಬಸ್ತಿಗಳಿವೆ. ಪ್ರತಿ ಯೊಂದು ಬಸ್ತಿಯ ಮುಂಭಾಗದಲ್ಲಿ ಅಗ್ರ ಶಾಲೆಯೂ ಅದರ ಹಿಂದೆ ಗರ್ಭಾಗಾರವೂ ಉಂಟು. ಇವುಗಳಲ್ಲಿ ಸುಂದರವಾದ ಚಿತ್ರಗಳಿರುತ್ತವೆ. ಇವಲ್ಲದೆ ನಾರಾಯಣ, ನಾರಸಿಂಹ, ವೆಂಕಟರಮಣ, ಮುಂತಾದ ದೇವತೆಗಳ ಗುಡಿಗಳಿವೆ. ಈ ಬಸ್ತಿಗಳಲ್ಲಿಯೂ ಗುಡಿಗಳಲ್ಲಿಯೂ, ೧೦, ೧೨ ಲಿಪಿಗಳಿವೆ. ಅವೆಲ್ಲ ೧೫ನೇ ಶತಕದ ಈಚೆಯ ಕಾಲದವು. ಕೆಲವು ಬಸ್ತಿಗಳಲ್ಲಿ ಯೊಳಗಡೆಯಲ್ಲಿ ಹೊಸ ಮೂರ್ತಿಗಳನ್ನು ಕೂಡ್ರಿಸಿದ್ದಾರೆ. ಇವುಗಳಲ್ಲಿ ಹಾಳಾದಂಥವು ಬಹು ಸ್ವಲ್ಪವಿರುತ್ತವೆ. ಎಷ್ಟೋ ಗುಡಿಗಳಿಗೆ ಅಲ್ಪ ಸ್ವಲ್ಪ ಸರಕಾರೀ ನೇಮಣೂಕುಗಳು ಈಗ್ಯೂ ನಡಿಯುತ್ತವೆ. ವೆಂಕಟರಮಣನಿಗೆ ಕೆಲವು ಭೂಮಿ ಇನಾಮು ನಡಿಯುತ್ತದೆ.

ಜತ್ತಪ್ಪ ನಾಯಿಕನ ಚಂದ್ರನಾಥೇಶ್ವರನ ಗುಡಿಯು ಯೆಲ್ಲಕ್ಕೂ ದೊಡ್ಡದೂ ಹೆಚ್ಚು ಸುಂದರವಾದದ್ದೂ ಇರುತ್ತದೆ. ಇದರ ಉದ್ದಳತೆ ೧೧೨ ಫೂಟು, ಅಗಲು ೪೦ರಿಂದ ೫೦ ಫೂಟಿನ ವರೆಗೆ. ಇದರಲ್ಲಿ ಅಗ್ರಮಂಟಪ, ಸಭಾಮಂಟಪ, ಬಸ್ತಿ ಅಥವಾ ಗರ್ಭಾಗಾರ ಯೆಂಬ ಮೂರು ಭಾಗಗಳು ಯೆರಡಂತಸ್ತುಳ್ಳವಿರುತ್ತವೆ. ಈ ಮಂಟಪಗಳಲ್ಲಿ ಮೊದಲು ಕೂಡ್ರಿಸಿದ ಮೂರ್ತಿಗಳು ಈಗ ಯೊಡಿದಿರುತ್ತವೆ. ಈ ಗುಡಿಯೊಳಗಿನ ಧ್ವಜ ಸ್ತಂಭ, ಖಿಡಿಕಿಗಳು, ಮೂರ್ತಿಗಳು, ಚಿತ್ರಗಳು ನೋಡ ತಕ್ಕಂಥವಿರುತ್ತವೆ. ಈ ಗುಡಿಯಲ್ಲಿ ನಾಲ್ಕು ಲಿಪಿಗಳಿವೆ. ಇದನ್ನು ಕಟ್ಟಿಸಿದ ಜತ್ತಪ್ಪ ನಾಯಕನು ದೇವರಿಗೆ ಬಹಳ ಭೂಮಿಯನ್ನು ಇನಾಮು ಕೊಟ್ಟಿದ್ದನು. ಆದರೆ ಟೀಪೂ ಅದನ್ನೆಲ್ಲ ಕಸುಕೊಂಡನು. ಈಗ ಸರಕಾರದಿಂದ ವರ್ಷಕ್ಕೆ ಯೆರಡು ರೂಪಾಯಿಯ ನೇಮಣೂಕು ನಡಿಯುತ್ತದೆ. ಚೋಳೇಶ್ವರನ ಗುಡಿಯನ್ನು ಚೋಳಮಂಡಲದ ಅರಸು ಕಟ್ಟಿಸಿದನೆಂದು ಹೇಳುತ್ತಾರೆ. ಇದರಲ್ಲಿ ಯೆರಡು ತಮಿಳ ಲಿಪಿಗಳಿರುತ್ತವೆ. ಗುಡಿಯನ್ನು ಕರೆ ಕಲ್ಲಿನಿಂದ ಯೆರಡುಪ್ಪರಿಗೆಯಾಗಿ ಅಂದವಾಗಿಯೂ ಭದ್ರವಾಗಿಯೂ ಕಟ್ಟಿದ್ದಾರೆ. ದ್ವಾರ ಪಾಲಕರ ಮೂರ್ತಿಗಳನ್ನು ಹಾವಿನ ಮೇಲೆ ನಿಲ್ಲಿಸಿದ್ದಾರೆ. ಚೋಳಮಂಡಲದ ಅರಸನ ಮಕ್ಕಳು ಬಹು ಜನರು ಹಾವು ಕಡಿದು ಸತ್ತರಂತೆ. ಒಬ್ಬ ಮಗನಿಗೆ ಬಾಲ್ಯದಲ್ಲಿ ಹಾವು ಕಡಿಯಲಾಗಿ ಯೊಬ್ಬ ಬ್ರಾಹ್ಮಣನು ಮಂತ್ರ ಸಾಮರ್ಥ್ಯದಿಂದ ಆ ಹಾವನ್ನು ಯೆಳಿದು ತಂದು ಅದರ ಕೈಯಿಂದ ವಿಷವನ್ನು ಮರಳಿ ಹೀರಿಸಿದನು. ಅದರಿಂದ ಕೂಸು ಬದುಕಿತು. ಆದ್ದರಿಂದ ಆ ಅರಸು ಈ ಸಂಗತಿಯ ಸ್ಮಾರಕಕ್ಕಾಗಿ ಚೋಳೇಶ್ವರನ ಗುಡಿಯನ್ನು ಭಟಕಳದಲ್ಲಿ ಕಟ್ಟಿಸಿದನು. ಈ ಗುಡಿಗೆ ಸರಕಾರದಿಂದ ೪೧ ರೂಪಾಯಿಯ ನೇಮಣೂಕು ನಡಿಯುತ್ತದೆ.

ಭಟಕಳದಲ್ಲಿ ೪ ಮಶೀದಿಗಳಿವೆ. ಅವುಗಳಲ್ಲಿ ಜಾಮಾ ಮಶೀದಿ, ಸುಲ್ತಾನ ಮಶೀದಿ, ಇವೆರಡು ದೊಡ್ಡವಿರುತ್ತವೆ. ಜಾಮಾ ಮಶೀದಿ ಹಳೇದು; ಅದಕ್ಕೆ ಸರಕಾರದಿಂದ ೪೦೦ ರೂಪಾಯಿಯ ನೇಮಣೂಕು ನಡಿಯುತ್ತದೆ.

ಇತಿಹಾಸ.—ಸನ್ ೧೩೦೦ರಲ್ಲಿ ವೊಬ್ಬ ಅರಬ ಕುಲದ ಅರಸು ಭಟಕಳದಲ್ಲಿ ಆಳುತ್ತಿದ್ದನೆಂದು ತಿಳಿದದೆ. ಇಲ್ಲಿ ನವಾಯತರ ವಸ್ತಿಯ ಮೂಲವು ಈ ಅರಸೇ ಇರ ಬಹುದೆಂದು ತೋರುತ್ತದೆ. ಇದರ ಪೂರ್ವದಲ್ಲಿ ಭಟಕಳದ ವರ್ತಮಾನವು ತಿಳಿದಿಲ್ಲ. ಮುಂದೆ ಬೇಗ ವಿಜಯನಗರದ ರಾಜ್ಯವು ಬಲಿತ ಬಳಿಕ ಸಮುದ್ರ ತೀರವೆಲ್ಲ ಅವರ ರಾಜ್ಯಕ್ಕೆ ಶೇರಿತು. ವಾಸ್ಕೋಡಿಗಾಮನೂ ಅವನ ತರುವಾಯ ಬಂದ ಪೋರ್ತುಗೀಸ ಸರದಾರರೂ ಆಗಾಗ್ಗೆ ಭಟಕಳಕ್ಕೆ ಹೋಗಿ ಅಲ್ಲಿಯ ಅಧಿಕಾರಿಗಳ ಕೂಡ ಸ್ನೇಹವನ್ನೂ ಕಲಹವನ್ನೂ ನಡಿಸುವರು. ಆದರೆ ಪೋರ್ತುಗೀಸರು ಭಟಕಳದಲ್ಲಿ ನೆಲೆಗೊಂಡು ಯೆಂದೂ ನಿಲ್ಲಲಿಲ್ಲ. ವಿಜಯನಗರದ ತರುವಾಯ ಇಕ್ಕೇರಿಯ ಅರಸನ ರಾಜ್ಯಕ್ಕೆ ಭಟ ಕಳವು ಶೇರಿತು. ಆದರೆ ಈ ಸಂಧಿಯಲ್ಲಿ ಕಾರಿಕಲ್ಲಿನ ಬೈ ಅರಸನ ಮಗಳಾದ ಬೈರಾ ದೇವಿಯು ಭಟಕಳದ ರಾಣಿಯಾದಳು. ಮುಂದೆ ಹೈದರನೂ ಟೀಪೂನೂ ಸಮುದ್ರ ತೀರ ವನ್ನು ಆಕ್ರಮಿಸಿದರು. ಸನ್ ೧೬೭೦ರಲ್ಲಿ ಇಂಗ್ಲಿಷರ ಅಂಗಡಿಯು ಭಟಕಳದಲ್ಲಿ ಇತ್ತು. ಆ ಅಂಗಡಿಯವರದೊಂದು ಬುಲ್‌ಡಾಗ ಯೆಂಬ ಉಗ್ರವಾದ ನಾಯಿಯು ಊರೊಳಗೆ ಬಂದು ವೊಂದು ಗುಡಿಯ ಬಳಿಯಲ್ಲಿ ವೊಂದು ಆಕಳನ್ನು ಹಿಡಿದು ಕೊಂದದ್ದರಿಂದ ಊರವರು ಜೊತೆಗೂಡಿ ಇಂಗ್ಲಿಷ ವರ್ತಕರ ಅಂಗಡಿಯನ್ನು ಹಾಳು ಮಾಡಿ ೧೮ ಜನ ಇಂಗ್ಲಿಷರನ್ನು ಕೊಂದರು. ಅವರ ಗೋರಿಗಳು ಈಗ್ಯೂ ಇರುತ್ತವೆ.

ಭೇಡಸಗಾವೀ ಗುಡ್ಡ.—ಸಿರಶಿಯ ಪಶ್ಚಿಮಕ್ಕೆ ಭೇಡಸಗಾವಿಯ ಬಳಿಯಲ್ಲಿ ಇರುತ್ತದೆ. ಇದು ಕಲ್ಯಾಣಿ ಯೆಂಬ ಗುಡ್ಡ ಸಾಲಿನ ಯೆತ್ತರವಾದ ಶಿಖರವು. ಇದು ಸಮುದ್ರದಿಂದ ೨೫೦ ಫೂಟು ಯೆತ್ತರವಾಗಿ ಅನುಕೂಲವಾದ ಸ್ಥಳವಿರುವದರಿಂದ ತ್ರಿಕೋ ಣಮಿತಿಯ ಯೋಜಣೀ ಮಾಡುವವರ ಠಾಣ್ಯವು ಇಲ್ಲಿ ಇರುತ್ತದೆ.

ಬೀಳಗಿ.—ಸಿದ್ದಾಪುರದ ಪಶ್ಚಿಮಕ್ಕೆ ೫ ಮೈಲಿನ ಮೇಲೆ. ಇಲ್ಲಿ ಪಾರಸನಾಥ, ವಿರೂಪಾಕ್ಷ, ಹನುಮಂತ, ಯೆಂಬ ಮೂರು ದೇವಸ್ಥಾನಗಳಿರುತ್ತವೆ. ಪಾರಸನಾಥನ ಗುಡಿಯು ಸುಂದರವಾದ ಚಿತ್ರಗಳುಳ್ಳದ್ದಾಗಿಯೂ ಭವ್ಯವಾಗಿಯೂ ಇರುತ್ತದೆ. ಮೂರೂ ಗುಡಿಗಳಲ್ಲಿ ೧೬ನೇ ಶತಕದ ಲಿಪಿಗಳಿರುತ್ತದೆ. ಪಾರಸನಾಥನ ಗುಡಿಗೆ ೯ ಹಳ್ಳಿಗಳನ್ನೂ ೩೦೦ ಖಂಡಗ ಬತ್ತ ಬರುವಷ್ಟು ಭೂಮಿಯನ್ನೂ ಇನಾಮು ಕೊಟ್ಟ ಲೇಖವು ಆ ಗುಡಿ ಯಲ್ಲಿ ಇರುತ್ತದೆ. ಆದರೆ ಈಗ ಪಾರಸನಾಥನು ಪೂಜೆಯನ್ನು ಕಾಣುವದು ಅಪರೂಪವಾಗಿದೆ.

ಬಿಂಘಿ.—ಕಾರವಾಡದ ದಕ್ಷಿಣಕ್ಕೆ ೩ ಮೈಲಿನ ಮೇಲೆ, ಜ. ಸ. (೮೧) ೧೪೯೬. ಇಲ್ಲಿ ಬೇಕಾದಂಥ ದೊಡ್ಡ ಹಡಗಗಳು ನಿಲ್ಲಲಿಕ್ಕೆ ಅನುಕೂಲವಾದ ಬಂದರವಿರುತ್ತದೆ. ಇರಾಣೀ ಅರಬೀ ಜನರ ಹಡಗಗಳು ಈ ಬಂದರಕ್ಕೆ ಬರುತ್ತವೆ. ಸರಕಾರೀ ಕಷ್ಟಮ್ ಕಚೇರಿಯುಂಟು.

ಚಂದಾವರ.—ಕುಮಟೆಯ ಆಗ್ನೇಯಕ್ಕೆ ೫ ಮೈಲಿನ ಮೇಲೆ. ಇಲ್ಲಿ ವಿಜಾಪು

ರದವರ ಶೆರಿಫ ಉಲ್‌ಮುಲ್ಕನೆಂಬ ಸರದಾರನಿರುವಾಗ ಊರು ತುಂಬಿತ್ತು; ಈಗ ಹಾಳಾಗಿದೆ. ಇಕ್ಕೇರಿಯ ವೆಂಕಟನಾಯಕನು ಚಂದಾವರವನ್ನು ತಕ್ಕೊಂಡು ವಿಜಾಪುರದವರನ್ನು ದಕ್ಷಿಣಕ್ಕೆ ಹೋಗಗೊಡಲಿಲ್ಲ. ಇಲ್ಲಿ ರೋಮನ್ ಕ್ಯಾಥಲಿಕ್ ಮತದವರ ದೊಡ್ಡ ಚರ್ಚವಿರುತ್ತದೆ.

ಚಂಡಿಯ.—ಕಾರವಾಡದ ದಕ್ಷಿಣಕ್ಕೆ ೫ ಮೈಲಿನ ಮೇಲೆ ದೊಡ್ಡ ಗ್ರಾಮವು. ಸಮುದ್ರ ಮಾರ್ಗದ ವ್ಯಾಪಾರವು ವೊಳಿತಾಗಿ ನಡಿಯುತ್ತದೆ.

ಚಿತಾಕೂಲ.—ಕಾರವಾಡದ ಉತ್ತರಕ್ಕೆ ೪ ಮೈಲಿನ ಮೇಲೆ, ಸಮುದ್ರ ದಂಡೆಯಲ್ಲಿ. ಪೂರ್ವದಲ್ಲಿ ೯ನೇ ಶತಕದ ಸುಮಾರಿನಲ್ಲಿ ಅರಬರ ಹಡಗಗಳು ಈ ಬಂದರಕ್ಕೆ ಬರುತ್ತಿದ್ದವೆಂದು ತೋರುತ್ತದೆ.

ಧಾರೇಶ್ವರ.—ಕುಮಟೆಯ ಆಗ್ನೇಯಕ್ಕೆ ೫ ಮೈಲಿನ ಮೇಲೆ. ಇಲ್ಲಿಯ ಧಾರೇಶ್ವರನ ಸುಂದರವಾದ ಗುಡಿಯನ್ನು ೮೦೦ ವರ್ಷಗಳ ಹಿಂದೆ ರುದ್ರೋಜೀ ಪಂಡಿತನೆಂಬವನು ಕಟ್ಟಿಸಿದನೆಂದು ಹೇಳುತ್ತಾರೆ. ಈ ಈಶ್ವರನಿಗೆ ಸರಕಾರದಿಂದ ೧೪೪೦ ರೂಪಾಯಿಯ ನೇಮಣೂಕು ನಡಿಯುತ್ತದೆ. ಮಕರ ಸಂಕ್ರಾಂತಿಯಲ್ಲಿ ಜಾತ್ರೆಯಾಗಿ ರಥೋತ್ಸವವಾಗುತ್ತದೆ.

ದರ್ಶನ ಗುಡ್ಡ.—ತಿನಯಿಘಟ್ಟದ ಉತ್ತರಕ್ಕೆ ೪ ಮೈಲಿನ ಮೇಲೆ, ಕಾನಡಾ ಜಿಲ್ಲೆಯ ಉತ್ತಾರ ಮೇರೆಯಲ್ಲಿ ಇದು ಸಮುದ್ರದಿಂದ ೩೦೦೦ ಫೂಟು ಯೆತ್ತರವಿರುವದರಿಂದ ಕಾನಡಾ ಜಿಲ್ಲೆಯಲ್ಲಿ ಯೆಲ್ಲಕ್ಕೂ ಯೆತ್ತರವಾದ ಶಿಖರವೆನಿಸುತ್ತದೆ.

ಗಂಗಾವಳಿ.—ಅಂಕೋಲೆಯ ಉತ್ತರಕ್ಕೆ ೫ ಮೈಲಿನ ಮೇಲೆ. ಸರಕಾರೀ ಕಷ್ಟಮ್ ಕಚೇರಿಯುಂಟು. ಗಂಗಾವಳಿಯ ದಂಡೆಯಲ್ಲಿ ಗಂಗೆಯ ಗುಡಿಯುಂಟು. ಆಶ್ವಿನ ವದ್ಯ ಅಷ್ಟಮಿಯಲ್ಲಿ ಈ ಗುಡಿಯ ಯೆದುರಿಗೆ ಜನರು ಗಂಗಾವಳಿಯಲ್ಲಿ ಸ್ನಾನ ಮಾಡುವರು. ಆ ದಿವಸ ಗೋಕರ್ಣದಿಂದ ಮಹಾ ಬಳೇಶ್ವರನ ಮೂರ್ತಿಯನ್ನು ಪಲ್ಲಕ್ಕಿಯೊಳಗೆ ಕುಳ್ಳಿರಿಸಿ ಕೊಂಡು ಇಲ್ಲಿಗೆ ಸ್ನಾನಕ್ಕೆ ತರುವರು.

ಗೆರಸಪ್ಪೆ.—ಹೊನ್ನಾವರದ ಪೂರ್ವಕ್ಕೆ ೧೬ ಮೈಲಿನ ಮೇಲೆ ಶರಾವತಿಯ ದಂಡೆಯಲ್ಲಿ. ಈ ಹಳ್ಳಿಯಲ್ಲಿ ಈಗ ೫೦ಕ್ಕಿಂತ ಹೆಚ್ಚು ಮನೆಗಳಿಲ್ಲ. ಆದರೆ ಇಲ್ಲಿಂದ ಸುಮಾರು ವೊಂದುವರೆ ಮೈಲಿನ ಮೇಲೆ ನಗರ ಬಸ್ತೀಕೇರಿ ಯೆಂಬ ಬಹು ವಿಸ್ತಾರವಾದ ಹಾಳು ಪ್ರದೇಶವಿರುತ್ತದೆ. ಆ ಪಟ್ಟಣವು ತುಂಬಿದ್ದಾಗ ಅದರಲ್ಲಿ ವೊಂದು ಲಕ್ಷ ಮನೆಗಳಿದ್ದವೆಂದು ಹೇಳುತ್ತಾರೆ. ಈ ಹಾಳು ಪ್ರದೇಶದಲ್ಲಿ ಕೆಲವು ಗುಡಿಗಳು ಮಾತ್ರ ಇನ್ನೂ ಉಳಿದಿರುತ್ತವೆ. ಅವುಗಳಲ್ಲಿ ಚತುರ್ಮುಖಿ, ಅಂದರೆ ನಾಲ್ಕು ಮೋರೆಯ ದೇವತೆ, ವರ್ಧಮಾನ ಅಥವಾ ಮಹಾವೀರ, ಪಾರಸನಾಥ, ಯೆಂಬ ದೇವಸ್ಥಾನಗಳು ಮುಖ್ಯವುಂಟು. ಇವುಗಳಲ್ಲಿ ಚತುರ್ಮುಖಿಯ ಗುಡಿಯು ಕರೆಕಲ್ಲಿನಿಂದ ವಿಸ್ತಾರವಾಗಿ ಕಟ್ಟಿದ್ದಿರುತ್ತದೆ. ಉಳಿದ ಗುಡಿಗಳೆಲ್ಲ ಜಂಬೂರೀ ಇಟ್ಟಂಗಿಯಿಂದ ಕಟ್ಟಿರುತ್ತವೆ.

ಮಹಾ ವೀರನ ಗುಡಿಯಲ್ಲಿ ೪ ಲಿಪಿಗಳಲ್ಲದೆ ಬೇರೆ ಕಡೆಯಲ್ಲಿ ಕೆಲವು ಸವಿದ ಲಿಪಿಗಳಿವೆ.

ಗೆರಸಪ್ಪೆಯ ತಡಸಲು.—ಇದು ಜೋಗವೆಂಬ ಹಳ್ಳಿಯ ಬಳಿಯಲ್ಲಿ ಇರುವ ಕಾರಣ ಇದಕ್ಕೆ ಜೋಗದ ತಡಸಲೆಂತಲೂ ಅನ್ನುವರು. ಇದು ಕಾನಡಾ ಜಿಲ್ಲೆಗೂ ಮೈಸೂರಿನ ಶೀಮೆಗೂ ನಡುವಿನ ಮೇರೆಯಲ್ಲಿ, ಉತ್ತರ ಅಕ್ಷಾಂಶ ೧೪°, ೧೪′, ಪೂರ್ವ ರೇಖಾಂಶ ೭೪°, ೫೦′ ಈ ಪ್ರದೇಶದಲ್ಲಿ ಗೆರಸಪ್ಪೆಯ ಪೂರ್ವಕ್ಕೆ ೧೮ ಮೈಲಿನ ಮೇಲೆ ಇರುತ್ತದೆ. ಶರಾವತಿ ಯೆಂಬ ೨೫೦ ಪೂಟು ಅಗಲಾದ ಹೊಳೆಯು ಸಹ್ಯಾದ್ರಿಯ ನೆತ್ತಿಯ ಮೇಲಿಂದ ೮೫೦ ಪೂಟು ಕಡಿದಾಗ ಕಣಿವೆಯ ಕೆಳಗೆ ಬೀಳುವದರಿಂದ ಇದು ಉಂಟಾಗಿದೆ. ಈ ತಡಸಲು ದಿಜೆಂಬರಿನಲ್ಲಿ ಬಹು ಸರಸಾಗಿ ಕಾಣಿಸುತ್ತದೆ; ಮಳೆಗಾಲದಲ್ಲಿ ತುಷಾರ ಧೂಮ್ರದಿಂದ ಮುಚ್ಚುವ ಕಾರಣ ಸ್ಪಷ್ಟವಾಗಿ ಕಾಣಿಸುವದಿಲ್ಲ, ಬೇಸಿಗೆಯಲ್ಲಿ ಪ್ರವಾಹವು ಸಣ್ಣಾಗುವ ಕಾರಣ ಅಷ್ಟು ಭವ್ಯವಾಗಿ ಕಾಣಿಸುವದಿಲ್ಲ. ಈ ಹೊಳೆ ಬೀಳುವ ಗುಡ್ಡದ ನೆತ್ತಿಯು ಕುಡಗೋಲಿನ ಆಕಾರದ ಹಾಗೆ ಇರುತ್ತದೆ; ಹಿಡಿಕೆಯಂಥ ಭಾಗವು ಮೈಸೂರಿನ ಶೀಮೆಯ ಕಡೆಗೆ ಇರುತ್ತದೆ. ಹೊಳೆಯು ಬೀಳುವ ಪೂರ್ವದಲ್ಲಿ ನಾಲ್ಕು ಯೆಸಳುಗಳಾಗಿ, ಕುಡಗೋಲಿನ ಮಣಿದ ಬಾಯಿಯಂಥ ಭಾಗದಲ್ಲಿ ಯೆರಡು ಯೆಸಳುಗಳೂ ಹಿಡಿಕೆಯಂಥ ನೆಟ್ಟಗಿನ ಭಾಗದಲ್ಲಿ ಯೆರಡು ಯೆಸಳುಗಳೂ ಬೀಳುತ್ತವೆ. ಕಾನಡಾ ಜಿಲ್ಲೆಯ ಕಡೆಯ ಮೊದಲನೇ ದೊಡ್ಡ ಯೆಸಳು ಬಹು ಗಾಂಭೀರ್ಯದಿಂದ ಭವ್ಯವಾಗಿ ಬೀಳುತ್ತಿರುವ ಕಾರಣ ಅದಕ್ಕೆ ಯುರೋಪಿಯನ್ ಪ್ರೇಕ್ಷಕರು "ರಾಜಾ" ಯೆಂಬ ಹೆಸರು ಇಟ್ಟಿದ್ದಾರೆ. ಈ ರಾಜಾ ಯೆಸಳಿನ ದಕ್ಷಿಣಕ್ಕೆ ೧೦೦೦ ಪೂಟಿನ ಅಂತರದಲ್ಲಿ ಮಣಿದ ಪ್ರದೇಶದೊಳಗೇ ಯೆರಡನೇ ಯೆಸಳು ಬೀಳುತ್ತದೆ. ಅದರ ಅಬ್ಬರ ಬಹಳ ಇರುವ ಕಾರಣ ಅದಕ್ಕೆ "ಗರ್ಜಕ"ವೆಂದೆನ್ನುವರು. ಇದು ಕೆಳಗೆ ಬೀಳುವಾಗ ನಡುದಾರಿಯಲ್ಲಿ ರಾಜಾ ಯೆಂಬ ಯೆಸಳಿಗೆ ಕೂಡುತ್ತದೆ. ಗರ್ಜಕದ ದಕ್ಷಿಣಕ್ಕೆ ೭೦೦ ಪೂಟಿನ ಅಂತರದಲ್ಲಿ ಹಿಡಿಕೆಯಂಥ ನೆಟ್ಟಗಿನ ಭಾಗದ ಮೇಲಿಂದ ಮೂರನೇ ಯೆಸಳು ಬೀಳುತ್ತದೆ. ಇದು ಮೊದಲು ಸುಮಾರು ೧೦೦ ಪೂಟಿನ ಕೆಳಗೆ ವೊಂದು ದೊಡ್ಡ ಪಡೆಯ ಮೇಲೆ ಬಿದ್ದು, ಅಲ್ಲಿಂದ ಬಹು ರಮಣೀಯವಾಗಿ ಬಾಣದಂತೆ ಮೇಲಕ್ಕೆ ಹಾರಿ ಮರಳಿ ಕೆಳಗೆ ಬೀಳುವ ಕಾರಣ ಇದಕ್ಕೆ "ಬಾಣ"ವೆಂಬ ಹೆಸರು ಇಟ್ಟಿದ್ದಾರೆ. ಬಾಣದ ದಕ್ಷಿಣಕ್ಕೆ ೫೦೦ ಪೂಟಿನ ಅಂತರದಲ್ಲಿ ನಾಲ್ಕನೇ ಯೆಸಳು ಸಪ್ಪಳಿಲ್ಲದೆ ಬೆಳ್ಳಗಿನ ನೊರೆಯ ಹಾಗೆ ಸಾವಕಾಶವಾಗಿ ಬೀಳುತ್ತಿರುವ ಕಾರಣ ಅದಕ್ಕೆ "ಬಿಳಿ ಮುದಿಕೆ" ಯೆಂಬ ಹೆಸರಿಟ್ಟಿದ್ದಾರೆ. ಈ ನಾಲ್ಕೂ ಪ್ರವಾಹಗಳು ಕೆಳಗೆ ಸುಮಾರು ೧೫೦ ಪೂಟು ಆಳವಾದಂಥ ವೊಂದೇ ಮಡುವಿನಲ್ಲಿ ಬಿದ್ದು, ಅಲ್ಲಿಂದ ಮುಂದೆ ವೊಂದು ದೊಡ್ಡ ಪ್ರವಾಹವಾಗಿ ಹರಿಯುತ್ತವೆ. ಭೂಮಿಯಲ್ಲಿ ಗೆರಸಪ್ಪೆಯ ತಡಸಲಿನಷ್ಟು ಭವ್ಯವಾದ ತಡಸಲು ಯೆಲ್ಲಿಯೂ ಇಲ್ಲೆಂದು ಹೇಳ ಬಹುದು. ಯುರೋಪ ಖಂಡದಲ್ಲಿ ಶಿರಸೋಲಿ, ಇವಾನ್‌ಸನ್, ಅರ್ವ, ಯೆಂಬ ತಡಸಲುಗಳು ಇದಕ್ಕಿಂತ

ಬಹಳ ಯೆತ್ತರದಿಂದ, ಅಂದರೆ ಕ್ರಮವಾಗಿ ೨೪೦೦, ೧೨೦೦, ೧೧೦೦ ಫೂಟುಗಳ ಯೆತ್ತರದಿಂದ ಬೀಳುತ್ತವೆ; ಆದರೆ ಅವುಗಳ ಪ್ರವಾಹಗಳು ಬಹಳ ಸಣ್ಣವಿರುತ್ತವೆ. ಅಮೇರಿಕದ ನಯಾಗರಾ ಯೆಂಬ ಹೊಳೆಯ ಹೆಸರಾದ ತಡಸಲಿನ ಪ್ರವಾಹವು ಗೆರಸಪ್ಪೆಯ ಪ್ರವಾಹದ ೧೦ ಪಾಲಿನಷ್ಟು ದೊಡ್ಡದಿರುತ್ತದೆ; ಆದರೆ ಆ ತಡಸಲಿನ ಯೆತ್ತರವು ಗೆರಸಪ್ಪೆಯ ತಡಸಲಿನ ೫ನೇ ಪಾಲಷ್ಟು ಮಾತ್ರ, ಅಂದರೆ ೧೬೪ ಫೂಟು ಇರುತ್ತದೆ. ಆದ್ದರಿಂದ ಪ್ರವಾಹದ ವಿಸ್ತಾರ, ಯೆತ್ತರ, ಈ ಯೆರಡರಲ್ಲಿಯೂ ಗೆರಸಪ್ಪೆಯ ತಡಸಲನ್ನು ಹೋಲುವಂಥಾದು ಬೇರೆ ಯೆಲ್ಲಿಯೂ ಇಲ್ಲೆಂದೆನ್ನಲಿಕ್ಕೆ ಅಡ್ಡಿ ಇಲ್ಲ.

ಗೋಕರ್ಣ.—ಕುಮಟೆಯ ಉತ್ತರಕ್ಕೆ ೧೦ ಮೈಲಿನ ಮೇಲೆ ಪ್ರಖ್ಯಾತವಾದ ಕ್ಷೇತ್ರವು, ಜ. ಸ. (೮೧) ೪೨೦೭. ಇಲ್ಲಿ ಪೋಲೀಸ ಚೌಕಿ, ವೊಂದು ಕನ್ನಡ ಶಾಲೆ, ಮುಸಾಫರೀ ಬಂಗಲೆ, ಮೂರು ತಿಂಗಳಿನ ಪೂರ್ತೆ ಮ್ಯುನಿಸಿಪಾಲಿಟಿ ಉಂಟು. ಈ ವೂರು ಸಮುದ್ರ ದಂಡೆಯಲ್ಲಿ ಇದ್ದು, ಉಳಿದ ಮೂರು ದಿಕ್ಕುಗಳಲ್ಲಿ ಕಿರಿ ಗುಡ್ಡಗಳಿರುತ್ತವೆ. ಸಮುದ್ರತೀರದಲ್ಲಿ ಗೋಕರ್ಣದ ಬೈಲು ಉದ್ದಕ್ಕೆ ಆಕಳ ಕಿವಿಯ ಹಾಗೆ ಇರುವ ಕಾರಣ ಇದಕ್ಕೆ ಗೋಕರ್ಣವೆಂಬ ಹೆಸರು ಬಂದದೆ ಯೆಂದು ತೋರುತ್ತದೆ. ಈ ವೂರಿನ ಬಾಜಾರು ತಕ್ಕಮಟ್ಟಿಗೆ ದೊಡ್ಡದಿರುತ್ತದೆ; ಆದರೆ ಅದು ಜಾತ್ರೆಯಲ್ಲಿ ಮಾತ್ರ ತುಂಬುತ್ತದೆ.

ಗೋಕರ್ಣದಲ್ಲಿ ಮಹಾಬಳೇಶ್ವರನ ಗುಡಿಯು ಮುಖ್ಯ ಸ್ಥಾನವಿರುತ್ತದೆ. ಗರ್ಭಾಗಾರವು ೩೦ ಫೂಟು ಚಚ್ಚೌಕು ಇರುವದು. ಇದರ ಛಾವಣಿಯು ಕಂಸಾಕಾರವಾಗಿದ್ದು, ಅದರ ಮೇಲೆ ತಾಮ್ರದ ಕಳಸವಿರುತ್ತದೆ. ಸಭಾಮಂಟಪವು ೬೦ ಫೂಟು ಉದ್ದ, ೩೦ ಫೂಟು ಅಗಲು ಇರುವದು. ಸಭಾಮಂಟಪದ ಮುಂಭಾಗದಲ್ಲಿ ಚಂದ್ರಶಾಲೆ ಇರುವದು. ಗರ್ಭಾಗಾರವನ್ನೂ ಸಭಾಮಂಟಪವನ್ನೂ ಕಣಶಿಲೆಯಿಂದ ಕಟ್ಟಿದ್ದಾರೆ; ಚಂದ್ರಶಾಲೆಯನ್ನು ಜಂಬೂರಿ ಇಟ್ಟಂಗಿಗಳಿಂದ ಕಟ್ಟಿದ್ದಾರೆ. ಗರ್ಭಾಗಾರವನ್ನು ವಿಶ್ವಕರ್ಮ ಕಟ್ಟಿದನೆಂತಲೂ, ಸಭಾಮಂಟಪ ಚಂದ್ರಶಾಲೆಗಳನ್ನು ಕುಂದಾಪುರದವನೊಬ್ಬ ಬ್ರಾಹ್ಮಣನು ಕಟ್ಟಿಸಿದನೆಂತಲೂ ಹೇಳುತ್ತಾರೆ. ಮಹಾಬಳೇಶ್ವರನ ಲಿಂಗವು ನೆಲದ ಮೇಲೆ ಯೆರಡು ಇಂಚಿಗಿಂತ ಹೆಚ್ಚು ಯೆತ್ತರವಿಲ್ಲ. ಈ ಲಿಂಗವನ್ನು ಶಿವನು ತನ್ನ ಆತ್ಮದಿಂದ ಮಾಡಿದ್ದಾನೆಂದು ಹೇಳುತ್ತಾರೆ. ಇದರ ಬೇರುಗಳು ಪಾತಾಳಕ್ಕೆ ಇಳಿದವಂತೆ. ಸಭಾಮಂಟಪದಲ್ಲಿ ಪಾರ್ವತಿ ಗಣಪತಿಗಳ ಮೂರ್ತಿಗಳೂ ಮಧ್ಯ ಭಾಗದಲ್ಲಿ ನಂದಿಯೂ ಉಂಟು. ದೇವರ ಮುಂದೆ ನೂರಕ್ಕಿಂತ ಹೆಚ್ಚು ದೀಪಗಳು ಯಾವಾಗಲೂ ಉರಿಯುತ್ತಿರುತ್ತವೆ. ಪ್ರತಿ ನಿತ್ಯದಲ್ಲಿ ದೇವರಿಗೆ ಪಂಚಾಮೃತದ ಅಭಿಷೇಕವಾಗಿ ೬೦ ಶೇರು ಅಕ್ಕಿಯ ಅನ್ನದ ನೈವೇದ್ಯವಾಗುತ್ತದೆ. ಈ ಅನ್ನವನ್ನು ಗುಡಿಯ ಪರಿಚಾರಕರು ಉಣ್ಣುವರು. ಯಾತ್ರಿಕರು ದೇವರಿಗೆ ಪಂಚಾಮೃತದ ಅಭಿಷೇಕ ಮಾಡಿಸಲಿಕ್ಕೆ ೧೨ ಆಣೆ, ಏಕಾದಶರುದ್ರದ ಅಭಿಷೇಕ ಮಾಡಿಸಲಿಕ್ಕೆ ೧ ರೂಪಾಯಿ, ಲಘುರುದ್ರದ ಅಭಿಷೇಕಕ್ಕೆ ೫ ರೂಪಾಯಿ, ಮಹಾರುದ್ರದ ಅಭಿಷೇಕಕ್ಕೆ ೬೦ ರೂಪಾಯಿ ಪೂಜಾರಿಗಳಿಗೆ ಕೊಡ ಬೇಕಾಗುತ್ತದೆ.

ಅರವತ್ತು ವರ್ಷಕ್ಕೊಮ್ಮೆ ದೇವರ ಸುತ್ತು ಮುತ್ತಲಿನ ನೆಲವನ್ನು ಅಗಿದು ಅದರೊಳಗೆ ಮುತ್ತು ರತ್ನಗಳ ಪುಡಿಗಳನ್ನು ಹಾಕಿ ಮುಚ್ಚುವರು. ಈ ವಿಧಾನಕ್ಕೆ ಅಷ್ಟ ಬಂಧನವೆನ್ನುವರು.

ಈ ದೇವಸ್ಥಾನಕ್ಕೆ ಸರಕಾರದಿಂದ ನಗದು ೭೯೧ ರೂಪಾಯಿ ಸಲ್ಲುವದಲ್ಲದೆ ೧೦೦೦ ರೂಪಾಯಿಯ ಭೂಮಿಯು ನಡಿಯುತ್ತದೆ. ವರ್ಷಕ್ಕೆ ದೇವರ ಆದಾಯವು ಯೆಲ್ಲ ಕೂಡಿ ಸುಮಾರು ೪೦೦೦ ರೂಪಾಯಿಯಾಗುತ್ತದೆ. ಈ ಹಣದ ವ್ಯವಸ್ಥೆಯನ್ನು ಸರಕಾರದಿಂದ ನೇಮಿಸಲ್ಪಟ್ಟ ಕಮಿಟಿಯವರು ಮಾಡುತ್ತಾರೆ. ಮಹಾಶಿವರಾತ್ರಿಯಲ್ಲಿ ಮಾಘ ವದ್ಯ ದಶಮಿಯಿಂದ ಫಾಲ್ಗುಣ ಶುದ್ಧ ದ್ವಿತೀಯದ ವರೆಗೆ ಜಾತ್ರೆಯಾಗುತ್ತದೆ. ಈ ಜಾತ್ರೆಯಲ್ಲಿ ಸುಮಾರು ೧೫ರಿಂದ ೨೦ ಸಾವಿರದ ವರೆಗೆ ಜನ ಕೂಡಿ, ೧ ಲಕ್ಷ ರೂಪಾಯಿಯ ವರೆಗೆ ವ್ಯಾಪಾರವಾಗುತ್ತದೆ. ಫಾಲ್ಗುಣ ಶುದ್ಧ ಪ್ರತಿಪದೆಯಲ್ಲಿ ರಥೋತ್ಸವವಾಗುತ್ತದೆ. ದೇವರ ರಥವು ತಕ್ಕಮಟ್ಟಿಗೆ ಸುಶೋಭಿತವಾದದ್ದಿರುತ್ತದೆ.

ಗೋಕರ್ಣವು ಇಂದ್ರಾದಿ ದೇವತೆಗಳು, ಮುಖ್ಯವಾಗಿ ಬ್ರಹ್ಮ, ವಿಷ್ಣು, ಮಹೇಶ್ವರ, ಅಗಸ್ತ್ಯ, ರಾಮ, ರಾವಣ, ಮುಂತಾದವರು ತಪಶ್ಚರ್ಯ ಮಾಡಿದ ಸ್ಥಳವೆಂದು ಹೇಳಲ್ಪಡುತ್ತದೆ. ಇಲ್ಲಿ ಮಹಾಬಳೇಶ್ವರನ ಗುಡಿಯ ಹೊರ್ತು ಬೇರೆ ಸಣ್ಣ ಗುಡಿಗಳೂ, ಮೂವತ್ತು ಲಿಂಗಗಳೂ ಮೂವತ್ತು ತೀರ್ಥಗಳೂ ಇರುತ್ತವೆ. ಇವುಗಳಲ್ಲಿ ಮುಖ್ಯವಾದವುಗಳನ್ನು ಕೆಳಗೆ ವಿವರಿಸುತ್ತೇವೆ. ಮಹಾಬಳೇಶ್ವರನ ಸಭಾಮಂಟಪಕ್ಕೂ ಚಂದ್ರಶಾಲೆಗೂ ನಡುವೆ ಶಾಸ್ತ್ರೇಶ್ವರ, ಆದಿಗೋಕರ್ಣ, ಯೆಂಬ ಲಿಂಗಗಳಿರುತ್ತವೆ. ಇವು ವೊಂದು ವೊಳ ಯೆತ್ತರವಾಗಿಯೂ ಯೆರಡು ಪೂಟು ಸುತ್ತಳತೆಯುಳ್ಳವಾಗಿಯೂ ಇರುತ್ತವೆ. ಮಹಾಬಲೇಶ್ವರನ ಹಿಂದೆ ೪೦ ಹೆಜ್ಜೆಯ ಮೇಲೆ ಗಣಪತಿಯ ಗುಡಿಯುಂಟು. ಈ ಗಣಪತಿಯನ್ನು ಕರೆಕಲ್ಲಿನಿಂದ ಮಾಡಿದ್ದಾರೆ. ಗಣಪತಿಯ ತಲೆಗೆ ಪೆಟ್ಟು ತಾಗಿ ಬಿದ್ದಂತೆ ವೊಂದು ನೆಗ್ಗು ಬಿದ್ದದೆ. ಈ ಗಣಪತಿಯ ಕಥೆಯನ್ನು ಜನರು ಹೇಳುವದು ಹ್ಯಾಗಂದರೆ—ರಾವಣನ ತಾಯಿಯಾದ ಕೈಕಸಿಗೆ ಕೋಟಿ ಲಿಂಗಗಳ ಪೂಜೆ ಮಾಡುವ ಅಪೇಕ್ಷೆಯಾಯಿತು. ಆದರೆ ಲಂಕೆಯಲ್ಲಿ ಅಷ್ಟು ಲಿಂಗಗಳಿದ್ದಿಲ್ಲ. ಶಿವನು ಮಾಡಿದ ಆತ್ಮಲಿಂಗಕ್ಕೆ ನಿತ್ಯದಲ್ಲಿ ಬೆಲಪತ್ರಿಯನ್ನು ಯೇರಿಸಿದರೆ ಕೋಟಿ ಲಿಂಗಗಳ ಪೂಜೆ ಮಾಡಿದ ಫಲ ಬರುತ್ತದೆಂದು ಋಷಿಗಳು ಹೇಳಿದ್ದರಿಂದ ರಾವಣನು ಆ ಲಿಂಗವನ್ನು ಸಂಪಾದಿಸುವದಕ್ಕೋಸ್ಕರ ತಪಶ್ಚರ್ಯ ಮಾಡಿದನು. ಶಿವನು ಪ್ರಸನ್ನನಾಗಿ ಯೇನು ಬೇಕೆಂದು ಕೇಳಲು ರಾವಣನು ನಿನ್ನ ಆತ್ಮ ಲಿಂಗವನ್ನು ಕೊಡೆಂದು ಬೇಡಿದನು. ಶಿವನು ಹಾಗೇ ಆಗಲೆಂದು ಹೇಳಿ ರಾವಣನಿಗೆ ಆತ್ಮ ಲಿಂಗವನ್ನು ಕೊಟ್ಟು, ಲಂಕೆಯ ವರೆಗೆ ಮಾರ್ಗದಲ್ಲಿ ಇದನ್ನು ಯೆಲ್ಲಿಯೂ ಇಡ ಬೇಡೆಂದು ಅಪ್ಪಣೇ ಮಾಡಿದನು. ಈ ಲಿಂಗವನ್ನು ಮೂರು ವರ್ಷ ಪೂಜಿಸಿದವರು ಮಹಾದೇವನಿಗೆ ಸರಿಯಾಗತಕ್ಕವರೆಂದು ನಿಯಮವಿತ್ತು. ಆದ್ದರಿಂದ ದೇವತೆಗಳು ಹೆದರಿ ವಿಷ್ಣುವಿನ ಬಳಿಗೆ ಹೋಗಿ ಈ ಸಂಗತಿಯನ್ನು ತಿಳಿಸಿದರು. ವಿಷ್ಣುವು ಗಣಪತಿಯನ್ನು ಕರಿದು, ನೀನು ಬ್ರಾಹ್ಮಣ

ಬಾಲಕನಾಗಿ ಗೋಕರ್ಣಕ್ಕೆ ಹೋಗಿ ಅಲ್ಲಿ ರಾವಣನಿಗೆ ಯೆದುರಾಗೆಂದು ಹೇಳಿ ಕಳುಹಿಸಿದನು. ಆ ಪ್ರಕಾರ ಗಣಪತಿಯು ಹೋಗಲು ದೇವತೆಗಳು ಗೋಕರ್ಣದ ಬಳಿಯಲ್ಲಿಯ ಗುಡ್ಡದ ಹಿಂದೆ ಬಂದು ಅಡಗಿ ನಿಂತರು. ರಾವಣನು ಗೋಕರ್ಣಕ್ಕೆ ಬಂದ ಕೂಡಲೆ ವಿಷ್ಣುವು ತನ್ನ ಚಕ್ರವನ್ನು ಸೂರ್ಯನಿಗೆ ಅಡ್ಡ ಹಿಡಿಯಲಾಗಿ ರಾವಣನಿಗೆ ಸಂಜೆಯಾದಂತೆ ಕಂಡಿತು. ಅದರಿಂದಲವನು ಸಮುದ್ರಕ್ಕೆ ಸಂಧ್ಯಾವಂದನಕ್ಕೆ ಹೋಗುವದಕ್ಕೋಸ್ಕರ ಲಿಂಗವನ್ನು ಯಾರ ಕೈಯಲ್ಲಿ ಕೊಡ ಬೇಕೆಂದು ಅತ್ತಿತ್ತ ನೋಡುವಷ್ಟರಲ್ಲಿ ಬ್ರಾಹ್ಮಣ ಬಾಲಕನಾದ ಗಣಪತಿಯು ಬಂದನು. ರಾವಣನು ಲಿಂಗವನ್ನು ಅವನ ಕೈಯಲ್ಲಿ ಕೊಟ್ಟು, ನಾನು ಸಂಧ್ಯಾವಂದನ ಮಾಡಿ ಬರುವ ವರೆಗೆ ಇದನ್ನು ಕೈಯಲ್ಲಿ ಹಿಡಿದಿರು, ನೆಲದ ಮೇಲೆ ಇಡ ಬೇಡೆಂದು ಹೇಳಿದನು. ಗಣಪತಿಯು ಲಿಂಗವನ್ನು ತಕ್ಕೊಂಡನು; ಆದರೆ ನಾನು ಮೂರು ಸಾರಿ ನಿನ್ನನ್ನು ವೊದರುವದರೊಳಗೆ ನೀನು ಬರದಿದ್ದರೆ ಲಿಂಗವನ್ನು ಇಲ್ಲಿ ಇಟ್ಟು ಹೊರಟು ಹೋಗುವೆನೆಂದು ಗಣಪತಿಯು ಶರತು ಮಾಡಿದನು. ರಾವಣನು ಅದಕ್ಕೆ ವೊಪ್ಪಿ ಕೊಂಡು, ಸಂಧ್ಯಾವಂದನಕ್ಕೆ ಹೋದ ಕೂಡಲೆ ಗಣಪತಿಯು ವೊಂದೇ ಸವನಾಗಿ ಮೂರು ಸಾರಿ ಅವನನ್ನು ವೊದರಿ, ಲಿಂಗವನ್ನು ನೆಲದ ಮೇಲೆ ಇಟ್ಟು, ೪೦ ಹೆಜ್ಜೆ ಹಿಂದಕ್ಕೆ ಓಡಿ ಹೋಗಿ ಅಡಗಿ ಕೊಂಡನು. ರಾವಣನು ಬಂದು ತನ್ನ ಮೈಯೊಳಗಿನ ಯಾವತ್ತು ಕಸುವು ಹಾಕಿ ಲಿಂಗವನ್ನು ಯೆತ್ತಲಿಕ್ಕೆ ಪ್ರಯತ್ನ ಮಾಡಿದಾಗ್ಯೂ ಲಿಂಗವು ಯೇಳಲಿಲ್ಲ; ಅದರ ಬೇರು ಪಾತಾಳಕ್ಕಿಳಿದಿದ್ದವು. ಆದ್ದರಿಂದ ರಾವಣನು ಸಂತಾಪದಿಂದ ಮೂರ್ಛೆ ಹೊಂದಿ ಕೆಲ ವೇಳೆ ಬಿದ್ದು ಕೊಂಡು ಯೆಚ್ಚತ್ತು ಬಳಿಕ ಗಣಪತಿಯನ್ನು ಹುಡಿಕಿ ಅವನ ತಲೆಯ ಮೇಲೆ ಗುದ್ದಿದನು. ಆದ್ದರಿಂದ ಅವನ ತಲೆಗೆ ನೆಗ್ಗು ಬಿತ್ತು. ತರುವಾಯ ರಾವಣನು ಲಿಂಗದ ಆವರಣವನ್ನು ಬೀಸಾಡಿ ಚಲ್ಲಿದ್ದರಿಂದ ಅದರಲ್ಲಿ ನಾಲ್ಕು ತುಂಡುಗಳಾಗಿ, ಅವು ಮುರುಡೇಶ್ವರ, ಗುಣವಂತಿ, ಧಾರೇಶ್ವರ, ಶೇಜವಾಡ, ಯೆಂಬಲ್ಲಿ ಹೋಗಿ ಬಿದ್ದು ಸ್ವಯಂಭು ಲಿಂಗಗಳಾದವು. ಗಣಪತಿಯು ಈ ಮಹತ್ಕಾರ್ಯವನ್ನು ಸಾಧಿಸಿದ್ದರಿಂದ ಶಿವನು, ತನ್ನ ಪೂಜೆಯನ್ನು ಮಾಡುವ ಪೂರ್ವದಲ್ಲಿ ಯಾತ್ರಿಕರು ನಿನ್ನ ಪೂಜೆಯನ್ನು ಮಾಡದಿದ್ದರೆ ಅವರ ಯಾತ್ರೆಯು ಸಫಲವಾಗಲಿಕ್ಕಿಲ್ಲೆಂದು ಗಣಪತಿಗೆ ವರ ಕೊಟ್ಟನು. ಆ ಪ್ರಕಾರ ಈಗ್ಯೂ ಯಾತ್ರಿಕರು ಮೊದಲು ಗಣಪತಿಯ ಪೂಜೆಯನ್ನು ಮಾಡುತ್ತಾರೆ.

ಮಹಾಬಲೇಶ್ವರನ ಆಗ್ನೇಯಕ್ಕೆ ಕೋಟಿ ತೀರ್ಥವೆಂಬದೊಂದು ಕೊಳಚಿ ನೀರಿನ ದೊಡ್ಡ ಹೊಂಡವಿರುತ್ತದೆ. ಇದು ಆರಂಭದಲ್ಲಿ ಅಂದವಾಗಿ ಕಟ್ಟಿದ್ದಿರುತ್ತದೆ. ಆದರೆ ಈಗ ಪಾವಟಗೆಗಳು ವೊಡಿದು ನೀರು ಕಶ್ಮಲವಾಗಿದೆ. ಈ ಹೊಂಡದ ಮಧ್ಯ ಭಾಗದಲ್ಲಿ ವೊಂದು ಛತ್ರಿಯೊಳಗೆ ಸಪ್ತಕೋಟೀಶ್ವರವೆಂಬ ಲಿಂಗವೂ ಅದರ ಮುಂದೆ ನಂದಿಯೂ ಉಂಟು. ಹೊಂಡದ ದಂಡೆಯಲ್ಲಿ ಕಾಳಭೈರವ, ಗರುಡ, ಅನಿರುದ್ಧ, ಅಗಸ್ತ್ಯೇಶ್ವರ, ಕದಂಬೇಶ್ವರ, ವಸಿಷ್ಠೇಶ್ವರ, ಮುಂತಾದ ಸಣ್ಣ ಸಣ್ಣ ದೇವಸ್ಥಾನಗಳುಂಟು. ಈ ಹೊಂಡದಲ್ಲಿ ಸ್ನಾನ ಮಾಡಿದವರಿಗೆ ಕೋಟಿ ತೀರ್ಥಗಳಲ್ಲಿ ಸ್ನಾನ ಮಾಡಿದ ಫಲ

ಬರುತ್ತವೆಂದು ತಿಳಿದು ಯಾತ್ರೆಗೆ ಬಂದವರೆಲ್ಲರು ಇದರಲ್ಲಿ ಸ್ನಾನ ಮಾಡುವರು. ಆದ್ದರಿಂದ ನೀರು ಕೆಟ್ಟು ಹೊಲಸು ನಾರುತ್ತದೆ. ಗರುಡನು ದುರ್ಮುಖಿವೆಂಬ ಸರ್ಪನನ್ನು ಹಿಡುಕೊಂಡು ಬ್ರಹ್ಮನ ವಾಸಸ್ಥಾನವಾದ ಶತಶೃಂಗವೆಂಬ ಪರ್ವತದ ಮೇಲೆ ಹಾರುತ್ತಿರಲಾಗಿ ಸರ್ಪವು ಕೊಸರಿಕೊಂಡು ಆ ಪರ್ವತದ ಮೇಲೆ ಬಿದ್ದು ವೊಂದು ಬಿಲದೊಳಗೆ ಶೇರಿತು. ಆದ್ದರಿಂದ ಗರುಡನು ಕೋಪಿಸಿ ಆ ಪರ್ವತವನ್ನೇ ಯೆತ್ತಿ ಸಮುದ್ರದೊಳಗೆ ಚಲ್ಲಲಿಕ್ಕೆ ತರುವಪ್ಪರಲ್ಲಿ ಬ್ರಹ್ಮನು ಶಿಟ್ಟಾಗಿ ಪರ್ವತದ ಮೇಲೆ ಮೂರು ಲೋಕಗಳ ಭಾರವನ್ನು ಹಾಕಿದನು. ಆಗ ಗರುಡನು ಭಾರಾಕ್ರಾಂತನಾಗಲು, ಅಗಸ್ತ್ಯ ಮುನಿಯು ದಯದಿಂದ ಆ ಪರ್ವತವನ್ನು ತನ್ನ ಅಂಗೈಯಲ್ಲಿ ತಕ್ಕೊಂಡು ಗೋಕರ್ಣದ ಬಳಿಯಲ್ಲಿ ಇಟ್ಟನು. ಬ್ರಹ್ಮನು ಹಾಕಿದ ಭಾರದಿಂದ ಪರ್ವತದೊಳಗಿನ ಕೋಟಿ ತೀರ್ಥಗಳು ಹೊರ ಚಲ್ಲಿ ಈ ಕೋಟಿ ತೀರ್ಥವೆಂಬ ಕುಂಡವಾಯಿತು.

ಕೋಟಿ ತೀರ್ಥದ ಪೂರ್ವಕ್ಕಿರುವ ಶಂಕರನಾರಾಯಣನ ಗುಡಿಯೊಳಗಿನ ಮೂರ್ತಿಯು ಅರ್ಧ ಶಿವನ ಆಕಾರವಾಗಿಯೂ ಅರ್ಧ ನಾರಾಯಣನ ಆಕಾರವಾಗಿಯೂ ಇರುತ್ತದೆ. ಶಿವನು ಭಸ್ಮಾಸುರನಿಗೆ, ನೀನು ಯಾರ ತಲೆಯ ಮೇಲೆ ಕೈ ಇಡುವಿಯೋ ಅವರು ಬೂದಿಯಾಗುವದೆಂದು ವರ ಕೊಟ್ಟ ಬಳಿಕ ಭಸ್ಮಾಸುರನು ಶಿವನ ತಲೆಯ ಮೇಲೆಯೇ ಕೈ ಇಡಲಿಕ್ಕೆ ಹವಣಿಸಲು, ಶಿವನು ವೈಕುಂಠಕ್ಕೆ ಓಡಿ ಹೋದನು. ನಾರಾಯಣನು ತನ್ನ ದೇಹದಿಂದ ಮೋಹಿನಿ ಯೆಂಬ ಸುಂದರಿಯನ್ನು ಹುಟ್ಟಿಸಿ ಭಸ್ಮಾಸುರನನ್ನು ಕೊಲ್ಲೆಂದು ಹೇಳಿ ಕಳುಹಿ ಶಿವನೂ ತಾನೂ ಕೂಡಿ ವೊಂದೇ ದೇಹವನ್ನು ಧರಿಸಿಕೊಂಡು ಪಾತಾಳಕ್ಕೆ ಹೋದನು. ಮೋಹಿನಿಯು ಭಸ್ಮಾಸುರನನ್ನು ಮೋಹಗೊಳಿಸಿ, ನಾನಾ ಪ್ರಕಾರದ ಹಾವ ಭಾವಗಳಿಂದ ತಾನು ಕುಣಿದು ಅವನನ್ನು ಹಾಗೇ ಕುಣಿಯ ಹಚ್ಚಿದಳು. ಕಡೆಯಲ್ಲಿ ಮೋಹಿನಿಯು ತನ್ನ ಕೈಯನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡದ್ದು ನೋಡಿ ಬೆರಗಾದ ಭಸ್ಮಾಸುರನು ಅರುವುಗೆಟ್ಟು ತನ್ನ ಕೈಯನ್ನು ತನ್ನ ತಲೆಯ ಮೇಲೆ ಇಟ್ಟು ಕೊಂಡ ಕೂಡಲೆ ಸುಟ್ಟು ಭಸ್ಮವಾದನು. ತರುವಾಯ ಮೇಲೆ ಹೇಳಿದ ಹರಿಹರರ ಸಂಯುಕ್ತ ರೂಪವು ಶಂಕರನಾರಾಯಣನೆಂಬ ಹೆಸರಿನಿಂದ ಈ ಗುಡಿಯಲ್ಲಿ ಬಂದು ನಿಂತಿತು. ಈ ಗುಡಿಯ ಬಳಿಯಲ್ಲಿ ಇರುವ ಉನ್ಮಜ್ಜನಿ ಯೆಂಬ ತೀರ್ಥದೊಳಗಿಂದ ಶಂಕರನಾರಾಯಣನು ಪಾತಾಳದಿಂದ ಮೇಲಕ್ಕೆ ಬಂದನೆಂದು ಹೇಳುತ್ತಾರೆ. ಉನ್ಮಜ್ಜನಿಯ ಬಳಿಯಲ್ಲಿ ವೈತರಣಿ ಯೆಂಬ ತೀರ್ಥವಿರುತ್ತದೆ.

ಶಂಕರನಾರಾಯಣನ ಗುಡಿಯ ಯೆದುರಿಗೆ ಜ್ಞಾನ ಮಂಟಪ, ವೈರಾಗ್ಯ ಮಂಟಪ, ಮುಕ್ತಿ ಮಂಟಪ, ಯೆಂಬ ಮೂರು ಮಂಟಪಗಳಿರುತ್ತವೆ. ಕೋಟಿ ತೀರ್ಥದ ಆಗ್ನೇಯ ಮೂಲೆಯ ಯೆದುರಿಗೆ. ಮೇಲೆ ಹೇಳಿದ ಶತಶೃಂಗಿ ಯೆಂಬ ಗುಡ್ಡದ ಉತ್ತರದ ಇಳಕಲಿನ ಮೇಲೆ ನಾರಸಿಂಹನ ಗುಡಿಯುಂಟು. ಕೋಟಿ ತೀರ್ಥದ ದಕ್ಷಿಣಕ್ಕೆ ಅಗಸ್ತ್ಯನ ಗವಿ, ಸುಮಿತ್ರನ ಗವಿ, ಗಂಗಾ ತೀರ್ಥ, ಇರುತ್ತವೆ. ಶತಶೃಂಗಿಯ ಮೇಲೆ ಗೋಗರ್ಭ ತೀರ್ಥ, ಬ್ರಹ್ಮಕಮಂಡಲು ತೀರ್ಥ, ಮಹೇಶ್ವರ ವನಗಳು ಇರುತ್ತವೆ;

ಮತ್ತೂ ಆ ಗುಡ್ಡದ ಅಡಿಯಲ್ಲಿ ಮಾಲಿನಿ, ಸುಮಾಲಿನಿ, ಸೂರ್ಯ, ಚಂದ್ರ, ಅನಂತ, ಯೆಂಬ ತೀರ್ಥಗಳಿವೆ. ಗೋಕರ್ಣದಲ್ಲಿ ಅಹಲ್ಯಾ ಬಾಯಿಯು ಕಟ್ಟಿಸಿದ್ದೊಂದು ಗುಡಿ (ಛತ್ರ?) ಉಂಟು.

ಲಿಪಿಗಳು.—ಮಹಾಬಲೇಶ್ವರ, ನಾರಸಿಂಹ, ಹನುಮಂತ, ವಿಠ್ಠಲ, ತಾಮ್ರ ಗೌರಿ, ಯೆಂಬ ದೇವಸ್ಥಾನಗಳಲ್ಲಿ ವೊಂದೊಂದು, ಮೂವರು ಬ್ರಾಹ್ಮಣರ ಮನೆಗಳಲ್ಲಿ ವೊಂದೊಂದು, ಅಂತು ಯೆಂಟು ಲಿಪಿಗಳು ಗೋಕರ್ಣದಲ್ಲಿ ಇರುತ್ತದೆ. ಕಾಮೇಶ್ವರ ವೆಂಬ ಮಠದಲ್ಲಿ ಇರುವ ಬಹು ಪುರಾತನ ಕಾಲದ ಲಿಪಿಯು ಕಲಿ ಕಾಲದ ೧೧೦ನೇ ವರ್ಷ, ಅಂದರೆ ಕ್ರಿಸ್ತೀ ಶಕದ ಪೂರ್ವದಲ್ಲಿ ೯೯೬೦ನೇ ವರ್ಷ, ಕದಂಬ ಚಕ್ರವರ್ತಿ ಯೆಂಬ ಅರಸು ಬರಿಸಿದ್ದಿರುತ್ತದೆ. ಇದರ ಮಿತಿಯನ್ನು ಓದುವದರಲ್ಲಿ ತಪ್ಪಾಗಿರ ಬಹುದು, ಅಥವಾ ಈ ಲೇಖವು ಖೊಟ್ಟಿ ಇರ ಬಹುದೆಂದು ತೋರುತ್ತದೆ. ಆದರೆ ಈ ಕದಂಬ ಚಕ್ರವರ್ತಿಯ ಲಿಪಿಯು ಶಾಲಿವಾಹನ ಶಕದ ೯೦ನೇ ವರ್ಷದಲ್ಲಿ ಬರಿಸಿದ್ದಿರು ತ್ತದೆಂದು ಬೇರೊಬ್ಬ ಶೋಧಕನು ತಿಳಿಸುತ್ತಾನೆ. ಈ ಮಿತಿಯು ನಿಜವಾದರೆ ಬನವಾ ಸಿಯ ಶತಕರ್ಣಿಯ ಲಿಪಿಗೆ ಈ ಕದಂಬ ಚಕ್ರವರ್ತಿಯ ಲಿಪಿಯು ಬಲ ಕೊಡುತ್ತದೆ; ಅಂದರೆ ಶಾಲಿವಾಹನ ಶಕದ ಆರಂಭದಲ್ಲಿ ಬನವಾಸಿಯಲ್ಲಿ ಕದಂಬ ಅರಸರು ಸಾಮ್ರಾಜ್ಯ ಪದವನ್ನು ಆಳುತ್ತಿದ್ದರೆಂದು ಸಿದ್ಧವಾಗುತ್ತದೆ. ಮಿಕ್ಕ ಲಿಪಿಗಳು ಬಹುತರ ಯಾವತ್ತು ವಿಜಯನಗರದ ಅರಸರು ಬರಿಸಿದವು; ಅಂದರೆ ೧೪ನೇ ಶತಕದ ಈಚೆಯಲ್ಲಿ ಆದಂಥವು ಇರುತ್ತವೆ.

ಇತಿಹಾಸ.—ಗೋಕರ್ಣದ ಹೆಸರು ರಾಮಾಯಣದಲ್ಲಿ ಇರುತ್ತದೆ. ಭಗೀ ರಥ ರಾಜನು ಗೋಕರ್ಣದಲ್ಲಿ ತಪಶ್ಚರ್ಯ ಮಾಡಿದನೆಂತಲೂ, ರಾವಣನು ಜನಸ್ಥಾನ ದಿಂದ ಗೋಕರ್ಣದ ಮಾರ್ಗವಾಗಿ ವೊಮ್ಮೆ ಲಂಕೆಗೆ ಹೋದನೆಂತಲೂ ಬರಿದದೆ. ಇದ ರಿಂದ ರಾವಣನು ಮಹಾಬಲೇಶ್ವರನನ್ನು ಸ್ಥಾಪಿಸಿದನೆಂಬ ಮಾತು ನಿಜವಿರ ಬಹುದೆಂದು ತೋರುತ್ತದೆ. ಮಹಾಭಾರತದಲ್ಲಿ ಗೋಕರ್ಣವು ಅತಿ ವಿಖ್ಯಾತವಾದ ಕ್ಷೇತ್ರವೆಂದು ಹೇಳಲ್ಪಟ್ಟದೆ. ಕ್ರಿಸ್ತೀ ಶತಕದ ೮ನೇ ಶತಕದಲ್ಲಿ ಲೋಕಾದಿತ್ಯನೆಂಬ ಅರಸು ಗೋಕ ರ್ಣದ ಶೀಮೆಯನ್ನು ಆಳುತ್ತಿದ್ದನೆಂದು ತಿಳಿದದೆ. ವಿಜಯನಗರದ ಅರಸರು ಗೋಕರ್ಣ ದೊಳಗಿನ ಹಲವು ದೇವಸ್ಥಾನಗಳಿಗೆ ಇನಾಮುಗಳನ್ನು ಕೊಟ್ಟ ಲೇಖಗಳು ಇರುತ್ತವೆ. ಸನ್ ೧೬೭೭ರಲ್ಲಿ ಫ್ರಾಯರನೆಂಬ ಇಂಗ್ಲಿಷ ಪ್ರವಾಸಿಯು ಅರಬರ ವೇಷ ಹಾಕಿಕೊಂಡು ಗೋಕರ್ಣದ ರಥೋತ್ಸವವನ್ನು ನೋಡಿ ವಿಸ್ತಾರವಾಗಿ ವರ್ಣಿಸಿದ್ದಾನೆ. ದೇವರ ರಥದ ಮುಂದೆ ಬಹು ಜನ ಭಕ್ತರು ತಮ್ಮನ್ನು ತಾವೇ ಟೊಣ್ಣೆಗಳಿಂದ ಬಡಿದು ಕೊಳ್ಳುತ್ತಲೂ ತಮ್ಮ ಮೈಗೆ ನಾನಾ ಪ್ರಕಾರದ ವ್ಯಥೆಗಳನ್ನು ಮಾಡಿ ಕೊಳ್ಳುತ್ತಲೂ ನಡಿಯುತ್ತಿದ್ದ ರೆಂತಲೂ ಇವನು ಬರಿದಿದ್ದಾನೆ. ಸನ್ ೧೮೦೧ರಲ್ಲಿ ಬುಕ್ಯಾನನ್ ಧೊರೆಯು ಗೋಕರ್ಣಕ್ಕೆ ಹೋದಾಗ ಅಲ್ಲಿ ೫೦೦ ಮನೆಗಳಿದ್ದವು; ವ್ಯಾಪಾರವು ತಕ್ಕಮಟ್ಟಿಗೆ ನಡಿಯುತ್ತಿತ್ತು.

ಊರಿನ ಸುತ್ತು ಮುತ್ತು ಬತ್ತದ ಗದ್ದೆಗಳೂ ತೆಂಗಿನ ಬನಗಳೂ ವಿಸ್ತಾರವಾಗಿ ಹಬ್ಬಿದ್ದವು.

ಗುಡ್ಡೇಹಳ್ಳಿಯ ಗುಡ್ಡ.—ಕಾರವಾಡದ ಆಗ್ನೇಯಕ್ಕೆ ಮೂರು ಮೈಲಿನ ಮೇಲೆ ೧೮೦೦ ಫೂಟು ಯೆತ್ತರವಾದ ಶಿಖರವು. ಇದರ ನೆತ್ತಿಯ ವರೆಗೆ ದಟ್ಟಾದ ಅಡವಿಯು ಹಬ್ಬಿರುತ್ತದೆ. ಒಬ್ಬ ಸಾಹೇಬನು ಈ ಗುಡ್ಡದ ಮೇಲೆ ಮನೆ ಕಟ್ಟಿದ್ದಾನೆ.

ಹಾಡವಳ್ಳಿ.—ಭಟಕಳದ ಈಶಾನ್ಯಕ್ಕೆ ೧೧ ಮೈಲಿನ ಮೇಲೆ. ಇಲ್ಲಿ ಪುರಾತನದ್ದೊಂದು ಜೈನ ದೇವಸ್ಥಾನವೂ ಕೆಲವು ಶಿಲಾಲಿಪಿಗಳೂ ಇರುತ್ತವೆ. ಇದಕ್ಕೆ ಪೂರ್ವದಲ್ಲಿ ಸಂಘಿತಪುರವೆಂಬ ಹೆಸರಿತ್ತು; ಸನ್ ೧೫೨೩ರಲ್ಲಿ ಇಲ್ಲಿ ದೇವರಸೆಂಬ ವಿಜಯನಗರದವ ಮಾಂಡಲಿಕ ರಾಜನು ಆಳುತ್ತಿದ್ದನು.

ಹೈಗುಂಡ.—ಹೊನ್ನಾವರದ ಪೂರ್ವಕ್ಕೆ ೧೨ ಮೈಲಿನ ಮೇಲೆ. ಇಲ್ಲಿ ಶರಾವತಿಯ ಪ್ರವಾಹದೊಳಗಿರುವದೊಂದು ನಡುಗಡ್ಡೆಯಲ್ಲಿ ಕೆಲವು ಯಜ್ಞ ಕುಂಡಗಳ ಕುರುಹುಗಳಿರುತ್ತವೆ. ಇವನ್ನು ಘಟ್ಟದ ಮೇಲಿನ ಹೈಗ ಬ್ರಾಹ್ಮಣರಿಗೆ ಆಶ್ರಯ ಕೊಟ್ಟವನಾದ ವೊಬ್ಬ ಬೇಡ ಜಾತಿಯ ಅರಸು ಕಟ್ಟಿಸಿದನೆಂದು ಹೇಳುತ್ತಾರೆ.

ಹಳದೀಪುರ.—ಹೊನ್ನಾವರದ ಉತ್ತರಕ್ಕೆ ೫ ಮೈಲಿನ ಮೇಲೆ. ಘಟ್ಟದ ಕೆಳಗೆ ಹೈಗ ಬ್ರಾಹ್ಮಣರ ಮುಖ್ಯ ನಿವಾಸಸ್ಥಾನವು. ಇಲ್ಲಿ ಅಂಗ್ಲೋವರ್ನ್ಯಾಕ್ಯುಲರ ಶಾಲೆಯುಂಟು. ಈ ಊರಲ್ಲಿ ಗುಡಿಗಳು ಬಹಳ ಇರುತ್ತವೆ. ಮೂರು ಗುಡಿಗಳಲ್ಲಿ ಪ್ರತಿ ವರ್ಷ ರಥೋತ್ಸವವಾಗುತ್ತದೆ. ಮಾರ್ಚ ತಿಂಗಳಲ್ಲಿ ಐದಾರು ಸಾವಿರ ಜಾತ್ರೆ ಕೂಡುವದು. ಈ ವೂರಲ್ಲಿ ಸನ್ ೧೮೦೧ರಲ್ಲಿ ೩೫೨ ಮನೆಗಳಿದ್ದವು. ಆದರೆ ಈಗ ವಸ್ತಿಯು ಬಹಳ ಬೆಳಿದದೆ. ಪೂರ್ವದಲ್ಲಿ ಹಳದೀಪುರವು ಹೊನ್ನಾವರ ಶೀಮೆಯ ಮುಖ್ಯ ಗ್ರಾಮವಿತ್ತು.

ಹಲ್ಯಾಳ.—ಯಲ್ಲಾಪುರದ ಉತ್ತರಕ್ಕೆ ೨೫ ಮೈಲಿನ ಮೇಲೆ, ಸುಪಾ ತಾಲೂಕಿನ ಮುಖ್ಯ ಗ್ರಾಮವು, ಜ. ಸ. (೮೧) ೬೬೫೮. ಮಾಮಲೇದಾರ ಫೌಜದಾರರ ಕಚೇರಿಗಳಲ್ಲದೆ ಟಪಾಲ ಕಚೇರಿ, ಆಸಪತ್ರಿ, ಮ್ಯುನಿಸಿಪಾಲಿಟಿ, ಮೂರು ಶಾಲೆಗಳು ಇರುತ್ತವೆ. ಮ್ಯುನಿಸಿಪಾಲಿಟಿಯ ಆದಾಯವು ೧೮೮೧-೮೨ರಲ್ಲಿ ೪೯೦೦ ರೂಪಾಯಿ ಇತ್ತು. ಈ ವೂರಲ್ಲಿ ಜ್ವರದ ಉಪದ್ರವವು ನಿರಂತರವಿರುತ್ತದೆ; ವೈಲಿ, ಪಟಕಿಗಳು ಆಗಾಗ್ಗೆ ಬರುತ್ತಿರುತ್ತವೆ; ಮೇ ತಿಂಗಳಿನಿಂದ ನಾರಿನ ಉಪದ್ರವಕ್ಕೆ ಆರಂಭವಾಗುತ್ತದೆ. ಆದರೂ ಹಲ್ಯಾಳದ ವಸ್ತಿಯು ಬೆಳಿಯುತ್ತ ನಡಿದದೆ. ಸನ್ ೧೮೬೪ರಲ್ಲಿ ೩೬೮೮, ೧೮೭೨ರಲ್ಲಿ ೫೦೭೧, ೧೮೮೧ರಲ್ಲಿ ೫೫೨೭. ಇಲ್ಲಿ ಸರಕಾರೀ ತೊಲೆಗಳ ವ್ಯಾಪಾರವು ಬಹಳ ನಡಿಯುತ್ತದೆ. ಕಾನಡಾ ಜಿಲ್ಲೆಯ ಕಟ್ಟಿಗೆಯ ಮಾರಾಟವು ಮುಖ್ಯವಾಗಿ ಇದೇ ವೂರಲ್ಲಿ ಆಗುತ್ತದೆ.

ಹೊನ್ನಾವರ.—ಕುಮಟೆಯ ದಕ್ಷಿಣಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧)

೫೪೧೩. ಈ ವೂರು ಶರಾವತಿಯ ಮುಖದ ಹತ್ತರ ಸಮುದ್ರ ದಂಡೆಯಿಂದ ೨ ಮೈಲು ವೊಳಗೆ ಇರುತ್ತದೆ. ಶರಾವತಿಯ ಮುಖದಲ್ಲಿ ಸಮುದ್ರದೊಳಗೆ ಸುಮಾರು ೫ ಮೈಲು ಉದ್ದ, ಯೆರಡು ಮೈಲು ಅಗಲು ಇರುವದೊಂದು ದೊಡ್ಡ ಸರೋವರ ವುಂಟಾಗಿದೆ. ಈ ಸರೋವರದಿಂದ ಸಮುದ್ರಕ್ಕೆ ಹೋಗುವ ಜಲ ಸಂದು ೩೦೦ ಯಾರ್ಡು ಮಾತ್ರ ಅಗಲಾದದ್ದಾಗಿ ಹಡಗಗಳಿಗೆ ಬಹು ಅಪಾಯಕರವಾಗಿರುತ್ತದೆ. ಈ ಸರೋವರದೊಳಗೆ ಮಾವಿನ ಕುರ್ವೆ ಯೆಂಬದೊಂದು ನಡು ಗಡ್ಡೆಯು ೩ ಮೈಲು ಉದ್ದ ಇರುವದು. ಅದರಲ್ಲಿ ಬತ್ತದ ಗದ್ದೆಗಳೂ ತೆಂಗು ಮಾವುಗಳ ಬನಗಳೂ ಬಹು ರಮಣೀಯವಾಗಿ ಹಬ್ಬಿರುತ್ತವೆ. ಮೇಲೆ ಹೇಳಿದ ಜಲ ಸಂದಿನ ಹೊರಗೆ ಉತ್ತರಕ್ಕೆ ೩ ಮೈಲಿನ ಮೇಲೆ ಬಸವ ರಾಜದುರ್ಗವೆಂಬ ಕೋಟೆಯುಳ್ಳ ನಡುಗಡ್ಡೆಯುಂಟು. ಇದರ ಸುತ್ತಳತೆ ಸುಮಾರು ೬ ಮೈಲು ಇರುವದು. ದಕ್ಷಿಣ ಅಂಚಿನಲ್ಲಿ ಕೋಟೆಯುಂಟು. ಅದರ ಮೇಲೆ ೮ ತೋಫುಗಳು ಈಗ್ಯೂ ಇರುತ್ತವೆ. ಭೂಮಿಯು ವೊಳಿತಾಗಿ ಸವನೆಲದ್ದಿರುತ್ತದೆ; ಅದರಲ್ಲಿ ತೆಂಗು ಬಾಳೆಗಳ ಬನಗಳೂ ಶೀ ನೀರಿನ ಶಲೆಗಳೂ ಬಹಳ ಉಂಟು. ಬೇದನೂರಿನ ಸದಾಶಿವ ನಾಯಕನೆಂಬ ಅರಸು (೧೬೪೮-೧೬೭೦) ಇಲ್ಲಿಯ ದುರ್ಗ ಕೋಟೆಯನ್ನು ಕಟ್ಟಿಸಿದನು.

**ಮಾವಿನ ಕುರ್ವೆ.**

**ಬಸವರಾಜದುರ್ಗ.**

ಹೊನ್ನಾವರವು ಪುರಾತನ ಕಾಲದಿಂದ ಹೆಸರಾದ್ದದ್ದಿರುತ್ತದೆ. ಈ ವೂರಲ್ಲಿ ಯೆರಡು ಭಾಗಗಳಿವೆ. ಸಣ್ಣ ಭಾಗವು ವೊಂದು ಗುಡ್ಡದ ಬುಡದಲ್ಲಿ ಇರುವದು; ದೊಡ್ಡದು ಅದರ ಉತ್ತರಕ್ಕೆ ಇರುತ್ತದೆ. ಕಾನಡಾ ಜಿಲ್ಲೆಯು ಮದ್ರಾಸ ಇಲಾಖೆಗೆ ಶೇರಿದ್ದಾಗ ಹೊನ್ನಾವರದಲ್ಲಿ ಸಬ್ಬ ಕಲೆಕ್ಟರನ ಕಚೇರಿ, ಜಡಜ ಕಚೇರಿ, ದಂಡಿನ ಯೆರಡು ಕಂಪನಿಗಳು ಇರುತ್ತಿದ್ದವು. ಸನ್ ೧೮೫೫ರಲ್ಲಿ ಇಲ್ಲಿಯ ವಸ್ತಿಯು ೧೧೯೬೮ ಇತ್ತು. ಸನ್ ೧೮೬೨ರಲ್ಲಿ ಕಾನಡಾ ಜಿಲ್ಲೆಯು ಮುಂಬಯಿಗೆ ಶೇರಿದ ಬಳಿಕ ಸದರೀ ಕಚೇರಿಗಳೂ ದಂಡೂ ಹೋದ್ದರಿಂದ ಹೊನ್ನಾವರದ ವಸ್ತಿಯು ಕರಗಿತು. ಈಗ ಮಾಮಲೇದಾರ ಫೌಜದಾರರ ಕಚೇರಿಗಳಲ್ಲದೆ ಮುನಸಿಫ ಕಚೇರಿ, ಟಪಾಲ ಕಚೇರಿ, ಕಸ್ಟಮ್ ಕಚೇರಿ, ಆಸಪತ್ರಿ, ಇಂಗ್ಲಿಷ ಶಾಲೆ, ಇರುತ್ತವೆ. ಸನ್ ೧೮೪೧-೪೨ರ ಹಿಂದಿನ ೮ ವರ್ಷಗಳಲ್ಲಿ ಹೊನ್ನಾವರದ ಬಂದರಕ್ಕೆ ಸರಾಸರೀ ಮಾನದಿಂದ ಪ್ರತಿ ವರ್ಷ ೫೬೩೨೪೦ ರೂಪಾಯಿಯ ಮಾಲು ಹೊರಗಿಂದ ಬಂತು, ೫೫೧೯೯೦ ರೂಪಾಯ ಮಾಲು ಈ ಬಂದರದಿಂದ ಹೊರಗೆ ಹೋಯಿತು. ಈ ವೂರಲ್ಲಿ ತಾಮ್ರದ ಪಾತ್ರೆಗಳೂ, ಬಹು ಸರಸಾಗಿ ಚಿತ್ರ ಕೊರಿದಂಥ ಗಂಧದ ಪೆಟ್ಟಿಗೆ ಮುಂತಾದ ಪದಾರ್ಥಗಳೂ ಹುಟ್ಟುತ್ತವೆ. ಮೇಲೆ ಹೇಳಿದ ಗುಡ್ಡದ ಮೇಲೆ ಪೂರ್ವದಲ್ಲಿ ವೊಂದು ಕೋಟೆ ಇತ್ತು.

ಹೊನ್ನಾವರದ ಉತ್ತರಕ್ಕೆ ಯೆರಡು ಮೈಲಿನ ಮೇಲೆ ರಾಮತೀರ್ಥವೆಂಬ ದೇವ ಸ್ಥಾನವಿರುತ್ತದೆ. ರಾಮಲಿಂಗನ ಗುಡಿಯ ಬಳಿಯಲ್ಲಿ ರಾಮ ತೀರ್ಥವೆಂಬ ಬಹು ರಮಣೀಯವಾದ ಕುಂಡವಿರುತ್ತದೆ.

**ರಾಮತೀರ್ಥ.**

ಈ ಕುಂಡದ ಮೇಲಿರುವ ಯೆತ್ತರವಾದ ಗುಡ್ಡದೊಳಗಿಂದ ಗಡುತರವಾದದ್ದೊಂದು ಶಲೆಯು ಹರಿದು ಬಂದು ಕುಂಡವೊಳಗೆ ಬೀಳುತ್ತದೆ. ಕುಂಡದೊಳಗೆ ಸುಮಾರು ಆಳುದ್ದ ಬಹು ನಿರ್ಮಲವೂ ಆರೋಗ್ಯಕರವೂ ಆದ ನೀರು ಯಾವಾಗಲೂ ಇರುತ್ತದೆ. ಪೂರ್ವದಲ್ಲಿ ರಾಮಲಿಂಗನ ರಥೋತ್ಸವವೂ ಜಾತ್ರೆಯೂ ಆಗುತ್ತಿದ್ದವು.

ಇತಿಹಾಸ.—ಗ್ರೀಸ ದೇಶದ ಆರ್ಯನ್ನನೆಂಬವನು (ಕ್ರಿ. ಶ. ೨೪೭) ಪೆರಿಪ್ಲಸ ವೆಂಬ ಗ್ರಂಥದಲ್ಲಿ ಹೊನ್ನಾವರವನ್ನು "ನಾವರ" ವೆಂಬ ಹೆಸರಿನಿಂದ ಉಲ್ಲೇಖಿಸಿ, ಇದು "ಲಿಮುರ್ೈಕ" ಅಂದರೆ ತಮಿಳ ದೇಶದ (?) ಮುಖ್ಯ ಬಂದರವಿರುತ್ತದೆಂದು ಬರಿದಿದ್ದಾನೆ. ಪಂಪರಾಮಾಯಣದಲ್ಲಿ ಬುನಾದಿಯಲ್ಲಿ ಹೊನ್ನಾವರದಲ್ಲಿ (ಹನುವರದಲ್ಲಿ) ವೊಬ್ಬ ಅರಸನು ಆಳುತ್ತಿದ್ದನೆಂದು ಬರಿದದೆ. ಸನ್ ೧೩೪೨ರಲ್ಲಿ ಇಬನ್ ಬತೂತನೆಂಬ ಆಫ್ರಿಕದ ಪ್ರವಾಸಿಯು ಹೊನ್ನಾವರದ ಬಂದರವು ವೊಂದು ವೊತ್ತಿನ (ಶರಾವತಿಯ ಮುಖದ) ಮೇಲೆ ಇರುತ್ತದೆಂತಲೂ ಇಲ್ಲಿ ಅರಬ ಜನರು ಮುಖ್ಯವಾಗಿ ವಾಸಿಸುತ್ತಿದ್ದರೆಂತಲೂ ಬರಿದ್ದಾನೆ. ಆಗಿನ ಮುಸಲ್ಮಾನರಿಗೆ ಕುರಾಣವು ಬಾಯಿಪಾಠ ಬರುತ್ತಿತ್ತು; ಈ ವೂರಲ್ಲಿ ೨೩ ಗಂಡು ಹುಡುಗರ ಶಾಲೆಗಳೂ ೧೩ ಹೆಣ್ಣು ಮಕ್ಕಳ ಶಾಲೆಗಳೂ ಇದ್ದವು. ಆಗಿನ ಮುಖ್ಯಾಧಿಕಾರಿಯ ಹೆಸರು ಜಮಾಲ ಉದ್ದೀನ ಮಹಮ್ಮದನು; ಅವನು "ಹರಿಯಬ" (ಹರಿಹರ?) ನೆಂಬ ಅರಸನಿಗೆ ಅಂಕಿತನಾಗಿ ಆಳುತ್ತಿದ್ದನು. ಅವನ ಕೈ ಕೆಳಗೆ ೬೦೦೦ ದಂಡು ಇತ್ತು. ಸನ್ ೧೪೪೪ರಲ್ಲಿ ಇರಾಣದ ಅಬ್ದುರರಝಾಕನೆಂಬ ವಕೀಲನು ಹೊನ್ನಾವರಕ್ಕೆ ಬಂದು, ಅಲ್ಲಿಂದ ವಿಜಯನಗರದ ಅರಸನ ಭೇಟಿಗೆ ಹೋಗಿದ್ದನು. ೧೫ನೇ ಶತಕದಲ್ಲಿ ಹೊನ್ನಾವರವು ವಿಖ್ಯಾತವಾದ ಬಂದರವೆನಿಸುತ್ತಿತ್ತು. ಸನ್ ೧೫೦೩ರಲ್ಲಿ ವಾಸ್ಕೋಡೀಗಾಮನ ದಂಡಿನವರು ಹೊನ್ನಾವರವನ್ನು ಹಾಳು ಮಾಡಿ ಸುಟ್ಟರು; ಆಗ ಈ ಪಟ್ಟಣವು ವಿಜಯನಗರದವರ ರಾಜ್ಯಕ್ಕೆ ಶೇರಿತ್ತು. ವಿಜಯನಗರದವರ ಆಳಿಕೆಯಲ್ಲಿ ಪೋರ್ತುಗೀಸರು ಹೊನ್ನಾವರದ ಸುಭೇದಾರನ ಕೂಡ ಆಗಾಗ್ಗೆ ಜಗಳ ತೆಗಿಯುವರು; ಆದರೆ ಅವರ ಅಮಲು ಕೂಡ್ರಲಿಲ್ಲ. ಬರ ಬರುತ್ತ ಹೊನ್ನಾವರದಲ್ಲಿ ಪೋರ್ತುಗೀಸರು ವೊಂದು ಅಂಗಡಿಯನ್ನು ಹಾಕಿದರು. ವಿಜಯನಗರವು ಹಾಳಾದ ಬಳಿಕ ಹೊನ್ನಾವರವು ಭಟಕಳದ ರಾಣಿಯ ರಾಜ್ಯಕ್ಕೆ ಶೇರಿತು; ಆಕೆಯ ತರುವಾಯ ಬೇದನೂರಿನ (ಇಕ್ಕೇರಿಯ) ರಾಜ್ಯಕ್ಕೆ ಶೇರಿತು. ಸನ್ ೧೬೨೩ರಲ್ಲಿ ಇಕ್ಕೇರಿಯ ವೆಂಕಟ ನಾಯಕನಿಗೂ ಪೋರ್ತುಗೀಸರಿಗೂ ಹೊನ್ನಾವರದ ಬಂದರದ ಸಂಬಂಧದಿಂದ ವೊಪ್ಪಂದವಾಗಿತ್ತು. ಸನ್ ೧೭೫೧ರಲ್ಲಿ ಇಂಗ್ಲಿಷರು ಹೊನ್ನಾವರದಲ್ಲಿ ಅಂಗಡಿಯನ್ನು ಹಾಕಿದರು. ಮುಂದೆ ಸ್ವಲ್ಪ ಕಾಲದೊಳಗೆ ಹೈದರನು ಬೇದನೂರಿನ ಸಂಸ್ಥಾನವನ್ನು ಆಕ್ರಮಿಸಿದ್ದರಿಂದ ಹೊನ್ನಾವರವು ಅವನ ಅಧಿಕಾರಕ್ಕೆ ಶೇರಿತು, (೧೭೬೨). ಮುಂದೆ ಟೀಪೂನ ಮರಣದ ತರುವಾಯ ಮಂಗಳೂರಿನ ಶೀಮೆಯು ಇಂಗ್ಲಿಷ ಸರಕಾರಕ್ಕೆ ಶೇರಿದ್ದರಿಂದ ಹೊನ್ನಾವರವು ಮದ್ರಾಸ ಇಲಾಖೆಗೆ ಶೇರಿತು. ಆದರೆ ಸನ್ ೧೮೦೦ರಲ್ಲಿ ಈ ವೂರಲ್ಲಿ ವೊಂದು ಮನೆ ಸಹ ಉಳಿದಿದ್ದಿಲ್ಲ. ಯಾಕಂದರೆ ವ್ಯಾಪಾ

ರದ ನಿಮಿತ್ತದಿಂದ ಪರಸ್ಥರಿಗೆ (ಇಂಗ್ಲಿಷರಿಗೆ) ಆಶ್ರಯವಾಗುತ್ತದೆಂದು ನೋಡಿ ಟೀಪೂನು ಈ ವೂರನ್ನು ಬುದ್ಧಿ ಪೂರ್ವಕವಾಗಿ ಹಾಳು ಮಾಡಿದ್ದನು. ಇದೇ ವರ್ಷದಿಂದ ಹೊಸ ವಸ್ತಿಯು ಆರಂಭವಾಗಿ ಸನ್ ೧೮೭೦ರಲ್ಲಿ ೨೦೦೦ಕ್ಕಿಂತ ಹೆಚ್ಚು ಬೆಳೆದಿತ್ತು.

ಹೊಸೂರು.—ಸಿದ್ದಾಪುರದ ಪಶ್ಚಿಮಕ್ಕೆ ವೊಂದು ಮೈಲಿನ ಮೇಲೆ. ಇಲ್ಲಿ ವೊಂದು ಸಣ್ಣ ಗುಡಿಯಲ್ಲಿ ಯೆರಡು, ಬೇರೆ ಕಡೆಯಲ್ಲಿ ಯೆರಡು, ಹೀಗೆ ನಾಲ್ಕು ಅಂದವಾದ ಚಿತ್ರಗಳನ್ನು ಕೊರಿದ ಕಲ್ಲುಗಳಿರುತ್ತವೆ. ಇವು ವೀರಗಲ್ಲುಗಳಿರ ಬಹುದು.

ಇಟಗಿ.—ಬೀಳಗಿಯ ಪಶ್ಚಿಮಕ್ಕೆ ೩ ಮೈಲಿನ ಮೇಲೆ. ಇಲ್ಲಿಯ ರಾಮೇಶ್ವರನ ದೇವಸ್ಥಾನಕ್ಕೆ ಸರಕಾರದಿಂದ ೧೦೦೦ ರೂಪಾಯಿಯ ನೇಮಣೂಕು ನಡಿಯುತ್ತದೆ. ಶಿವರಾತ್ರಿಯಲ್ಲಿ ಈ ದೇವರ ಜಾತ್ರೆಯಲ್ಲಿ ಯೇಳೆಂಟು ಸಾವಿರ ಜನ ಕೂಡಿ ೨೦೦೦ ರೂಪಾಯಿಯ ವರೆಗೆ ವ್ಯಾಪಾರವಾಗುತ್ತದೆ. ಮಂಗಳವಾರ ಸಂತೆಯಾಗುತ್ತದೆ.

ಜಾಲೀಕುಂಡ.—ಭಟಕಳದ ವಾಯವ್ಯಕ್ಕೆ ೪ ಮೈಲಿನ ಮೇಲೆ ಸಮುದ್ರದ ವೊತ್ತಿನೊಳಗೆ ನಡುಗಡ್ಡೆ ಇರುತ್ತದೆ. ಇದರ ಪಶ್ಚಿಮಕ್ಕೆ ೯ ಮೈಲಿನ ಮೇಲೆ ನೇತ್ರಾಣಿಯೆಂಬ ನಡುಗಡ್ಡೆ ಇರುತ್ತದೆ. ಜಾಲೀಕುಂಡಕ್ಕೆ ಮಲಿಯಾಳದ ಜನರು ಕರೇ ನೇತ್ರಾಣಿಯೆನ್ನುವರು. ಈ ಯೆರಡೂ ದ್ವೀಪಗಳು ಬುನಾದಿಯಲ್ಲಿ ಪರದೇಶದವರ ವ್ಯಾಪಾರ ಸ್ಥಳಗಳಾಗಿದ್ದವು. ಜಾಲೀಕುಂಡಕ್ಕೆ ಇಂಗ್ಲಿಷದಲ್ಲಿ ಹಾಗ್ ಐಲಂಡೆಂತಲೂ, ನೇತ್ರಾಣಿಗೆ ಪಿಜಿಯನ್ ಐಲಂಡೆಂತಲೂ ಅನ್ನುವರು.

ಕಾರವಾಡ.—ಉತ್ತರ ಅಕ್ಷಾಂಶ ೧೪°, ೫೦′, ಪೂರ್ವ ರೇಖಾಂಶ ೭೪°, ೧೫′, ಜಿಲ್ಲೆಯ ಮುಖ್ಯ ಗ್ರಾಮವು, ಜನಸಂಖ್ಯೆ (೮೧) ೧೩೭೬೧. ಕಾನಡಾ ಜಿಲ್ಲೆಯು ಮುಂಬಯಿಗೆ ಶೇರಿದ ನಂತರ ಬೈತಕೋಲ, ಅಲೀಗಡ್ಡೆ, ಕೋಣೆ, ಕಾಜುಬಾಗ, ಕೋಡಿಬಾಗ, ಬಾಡ, ಕಡವಾಡ, ಯೆಂಬ ಸಣ್ಣ ಸಣ್ಣ ಹಳ್ಳಿಗಳಿಗೆ ಕೂಡಿ ಕಾರವಾಡವೆಂಬ ಹೆಸರಿಟ್ಟು ಜಿಲ್ಲೆಯ ಮುಖ್ಯ ಗ್ರಾಮವನ್ನು ಮಾಡಿದರು. ಕಾರವಾಡದ ಬಳಿಯಲ್ಲಿ ದೊಡ್ಡ ದೊಡ್ಡ ಹಡಗಗಳಿಗೆ ನಿಲ್ಲಲಿಕ್ಕೆ ನಿರ್ಭಯವಾದ ಸ್ಥಳವಿರುವ ಕಾರಣ ಸರಕಾರದವರು ಈ ವೂರು ಬಲಿಸಿದರು. ಈ ಬಂದರದಲ್ಲಿ ದಂಡೆಯ ಬಳಿಯಲ್ಲಿ ಸಹ ನೀರು ೨ ಫೂಟಗಿಂತ ಕಡಿಮೆ ಆಳವು ಯೆಂದೂ ಇರುವದಿಲ್ಲ, ಬಿರುಗಾಳಿಯ ಭಯವಿಲ್ಲ. ಬಂದರದ

ದೇವಗಡ.

ಮುಖದಲ್ಲಿ ದೇವಗಡವೆಂಬ ಸಣ್ಣ ನಡುಗಡ್ಡೆ ಇರುವ ಕಾರಣ ದೊಡ್ಡ ತೆರೆಗಳು ಅದನ್ನು ದಾಟ ಬಂದರದೊಳಗೆ ಬರುವದಿಲ್ಲ. ಈ ನಡುಗಡ್ಡೆಯಲ್ಲಿ ದೀಪಸ್ತಂಭವನ್ನು ಕಟ್ಟಿದ್ದಾರೆ. ಆದ್ದರಿಂದ ಪಶ್ಚಿಮ ಸಮುದ್ರತೀರದಲ್ಲಿ ಮುಂಬಯಿಯ ಕೆಳಗೆ ಕಾರವಾಡವೇ ಮೇಲಾದ ಬಂದರವೆನಿಸುತ್ತದೆ.

ಕಾರವಾಡದ ವಸ್ತಿಯ ಪ್ರದೇಶವು ೭೫೩೧ ಯೆಕರು ವಿಸ್ತಾರವಾದದ್ದಿರುತ್ತದೆ; ಆದರಿಂದ ಯೆಕರಿಗೆ ಇಬ್ಬರಿಗಿಂತ ಕಡಿಮೆ ಜನಸಂಖ್ಯೆ ಬೀಳುತ್ತದೆ. ಸನ್ ೧೮೮೧-೮೨ರ

ಹಿಂದಿನ ೮ ವರ್ಷಗಳಲ್ಲಿ ಸರಾಸರೀ ಮಾನದಿಂದ ಪ್ರತಿ ವರ್ಷ ೯೩೪೫೦೦೦೦ ರೂಪಾಯಿಯ ಮಾಲು ಕಾರವಾಡದ ಬಂದರದಿಂದ ಹೊರಗೆ ಹೋಯಿತು, ೨೩೩೬೦೦೦ ರೂಪಾಯಿಯ ಮಾಲು ಹೊರಗಿಂದ ಈ ಬಂದರಕ್ಕೆ ಬಂತು. ಹೊಗೆ ಹಡಗಗಳು ವಾರಕ್ಕೊಮ್ಮೆ ಕಾರವಾಡಕ್ಕೆ ಬರುತ್ತವೆ.

ಮೇಲೆ ಹೇಳಿದಂತೆ ಕಾರವಾಡದ ಬಂದರವು ಅತ್ಯುತ್ತಮವಿರುವ ಕಾರಣ ಕಾರವಾಡವನ್ನು ಜಿಲ್ಲೆಯ ಮುಖ್ಯ ಗ್ರಾಮವನ್ನು ಮಾಡಿದ್ದಲ್ಲದೆ ಕಾರವಾಡಕ್ಕೆ ಹೊಗೆ ಬಂಡಿಯ ಮಾರ್ಗ ವೊಯ್ಯುವ ಆಲೋಚನೆಯನ್ನು ಸಹ ಸರಕಾರದವರು ಮಾಡಿದ್ದರು. ಅರಬೈಲೀ ಘಟ್ಟದ ಮಾರ್ಗವಾಗಿ ಹೊಗೆ ಬಂಡಿಯನ್ನು ವೊಯ್ಯುವದು ಗೊತ್ತಾಗಿ ಸನ್ ೧೮೬೯ರಿಂದ ೧೮೭೪ರ ವರೆಗೆ ಸರಕಾರದವರು ಬಹಳ ಹಣ ವೆಚ್ಚ ಮಾಡಿ ಮಾರ್ಗವನ್ನು ಅಳಿದರು. ಈ ಪ್ರಕಾರ ಕಾರವಾಡವನ್ನು ಬೆಳಿಸುವ ಬಗ್ಗೆ ಸರಕಾರದವರ ಆಲೋಚನೆಯು ಮೊದಲಿನಿಂದಲೇ ಮುಂಬಯಿಯ ವ್ಯಾಪಾರಸ್ಥರಿಗೆ ತಿಳಿದದ್ದರಿಂದ ಬಹುಜನರು ಬಹಳ ಬೆಲೆ ಕೊಟ್ಟು ಭೂಮಿಯನ್ನು ಕಾರವಾಡದಲ್ಲಿ ಕೊಂಡು ದೊಡ್ಡ ದೊಡ್ಡ ಇಮಾರತುಗಳನ್ನು ಕಟ್ಟಿಸಿದರು. ಆದರೆ ಮುಂದೆ ೧೮೭೬-೭೭ರ ಬರಗಾಲ ಬಂದದ್ದರಿಂದ ಹೊಗೆಬಂಡಿಯ ಆಲೋಚನೆಯು ಹಿಂದಕ್ಕೆ ಬಿತ್ತು. ಅಷ್ಟರೊಳಗೆ ಗೋವೆಯ ಸರಕಾರಕ್ಕೂ ಇಂಗ್ಲಿಷ ಸರಕಾರಕ್ಕೂ ಹೊಸ ವೊಡಂಬಡಿಕೆಯಾದದ್ದರಿಂದ ಕಾರವಾಡಕ್ಕೆ ಬದಲಾಗಿ ಮಾರ್ಮುಗಾವಕ್ಕೆ ಹೊಗೆಬಂಡಿಯನ್ನು ವೊಯ್ಯುವದು ಗೊತ್ತಾಯಿತು, ೧೮೭೯. ಈ ಪ್ರಕಾರ ಕಾರವಾಡಕ್ಕೆ ಹೋಗತಕ್ಕ ಹೊಗೆಬಂಡಿಯ ಆಲೋಚನೆ ಮುರಿದದ್ದರಿಂದ ಕಾರವಾಡವು ಹಿಂದಕ್ಕೆ ಬಿತ್ತು. ಆದರೂ ಗೋವೇ ಸರಕಾರಕ್ಕೂ ಇಂಗ್ಲಿಷ ಸರಕಾರಕ್ಕೂ ಆದ ವೊಡಂಬಡಿಕೆಯು ಅಥವಾ ಕರಾರು ವೊಳಗಡೆಯಲ್ಲಿ ಮುರಿದದ್ದರಿಂದ ಕಾರವಾಡಕ್ಕೆ ಹೊಗೆಬಂಡಿಯ ಮಾರ್ಗವು ಸ್ವಲ್ಪ ಕಾಲದೊಳಗೆ ಆಗುವ ಸಂಭವವಿರುತ್ತದೆ.

ಜಿಲ್ಲೆಯಲ್ಲಿ ಇರತಕ್ಕ ಕಚೇರಿಗಳೆಲ್ಲ ಕಾರವಾಡದಲ್ಲಿ ಇರುವದಲ್ಲದೆ ಜಿಲ್ಲೆಯ ಮುಖ್ಯ ಕಷ್ಟಮ್ ಕಚೇರಿಯೂ ದೀಪಸ್ತಂಭವೂ ಉಂಟು. ಇಲ್ಲಿಯ ಮ್ಯುನಿಸಿಪಾಲಿಟಿಯ ಆದಾಯವು ಸನ್ ೧೮೮೧-೮೨ರಲ್ಲಿ ೧೦೩೬೦ ರೂಪಾಯಿ ಇತ್ತು.

ಇತಿಹಾಸ.—ಕಾರವಾಡವು ವೊಳಗಡೆಯಲ್ಲಿ ಉಂಟಾದ ಗ್ರಾಮವೆಂದು ಆರಂಭದಲ್ಲಿ ಹೇಳಿದ್ದೇವೆ. ಆದರೆ ಈ ವೂರೊಳಗೆ ಶೇರಿದ ಕಡವಾಡವೆಂಬ ಗ್ರಾಮವು ೧೬ನೇ ಶತಕದಲ್ಲಿ ತಕ್ಕಮಟ್ಟಿಗೆ ಹೆಸರಾಗಿತ್ತು. ಸನ್ ೧೬೩೮ರಲ್ಲಿ ಇಂಗ್ಲಿಷರು ಕಡವಾಡದಲ್ಲಿ ವೊಂದು ಅಂಗಡಿಯನ್ನು ಹಾಕಿದರು. ಸನ್ ೧೬೬೦ರ ಸುಮಾರಿನಲ್ಲಿ ಈ ಅಂಗಡಿಯ ವ್ಯಾಪಾರವು ಬಹಳ ಬೆಳೆದಿತ್ತು. ಈ ಅಂಗಡಿಯವರು ಹುಬ್ಬಳ್ಳಿಯ ಶೀಮೆಯಲ್ಲಿ ೫೦೦೦ ಜನ ಜೇಡರ ಕೈಯಿಂದ ಮಸ್ಲಿನ್ನೆಂಬ ಜಿಣುಗು ವಸ್ತ್ರವನ್ನು ಮಾಡಿಸಿ ಯುರೋಪಕ್ಕೆ ಕಳಿಸುವರು. ಸನ್ ೧೬೬೫ರಲ್ಲಿ ಶಿವಾಜಿಯು ಈ ಅಂಗಡಿಯವರ ಕೈಯಿಂದ ೧೧೨೦ ರೂಪಾಯಿ ಕಪ್ಪ ತಕ್ಕೊಂಡನು. ಆಗ ಕಡವಾಡವು ವಿಜಾಪುರದ ರಾಜ್ಯಕ್ಕೆ

ಶೇರಿತು. ಸನ್ ೧೬೭೪ರಲ್ಲಿ ಶಿವಾಜಿಯು ಕಡವಾಡವನ್ನು ಸುಟ್ಟಾಗ್ಯೂ ಇಂಗ್ಲಿಷರ ಅಂಗಡಿಗೆ ಕೈ ಹಚ್ಚಲಿಲ್ಲ. ಸನ್ ೧೭೦೦ರಲ್ಲಿ ಸ್ವಾದೆಯ ಅರಸನಿಗೂ ಕಡವಾಡದ ಅಂಗಡಿಯವರಿಗೂ ವ್ಯಾಜ್ಯ ಹುಟ್ಟಿದ್ದರಿಂದ ಆ ಅರಸನು ಇಂಗ್ಲಿಷರ ಅಂಗಡಿಯನ್ನು ಅಲ್ಲಿಂದ ತೆಗಿಸಿದನು. ಸನ್ ೧೭೫೦ರ ಸುಮಾರಿನಲ್ಲಿ ಪೋರ್ತುಗೀಸರು ಪ್ರಬಲರಾಗಿ ಕಡವಾಡದ ವ್ಯಾಪಾರವನ್ನು ಆಕ್ರಮಿಸಿದರು. ಮುಂದೆ ಹೈದರ, ಟೀಪೂ, ಇವರ ದಾಳಿಗಳಲ್ಲಿ ಕಡವಾಡವು ಹಾಳಾಯಿತೆಂದು ತೋರುತ್ತದೆ. ಸನ್ ೧೮೦೧ರಲ್ಲಿ ಕಡವಾಡದಲ್ಲಿ ಜನರ ವಸ್ತಿಯು ಬಹು ಸ್ವಲ್ಪವಿತ್ತು, ಊರು ಹಾಳಾಗಿತ್ತು.

ಕೋಡಿಬಾಗ.—ಕಾರವಾಡದ ಉತ್ತರಕ್ಕೆ ೨ ಮೈಲಿನ ಮೇಲೆ. ಇಲ್ಲಿ ಸರಕಾರೀ ತೊಲೆಗಳ ಕೋಠಿಯುಂಟು. ಉದ್ದುದ್ದವಾದ ತೊಲೆಗಳನ್ನು ಆನೆಗಳು ಕ್ರಮ ಪಡಿಸಿ ಇಡುತ್ತವೆ. ಒಂದು ಆನೆಯು ಗಡುತರವಾದದ್ದೊಂದು ಹಗ್ಗವನ್ನು ಸೊಂಡೆಯಲ್ಲಿ ತಕ್ಕೊಂಡು ಹೋಗಿ ತೊಲೆಗಳ ಬಳಿಯಲ್ಲಿ ನಿಂತ ಮನುಷ್ಯನ ಮುಂದೆ ಹಗ್ಗವನ್ನು ಚಲ್ಲುತ್ತದೆ. ಅವನು ಹಗ್ಗದ ನಡುಭಾಗವನ್ನು ತೊಲೆಗೆ ಕಟ್ಟಿ ಬಿಡುತ್ತಾನೆ. ಬಳಿಕ ಯೆರಡು ಆನೆಗಳು ಆ ಹಗ್ಗದ ಯೆರಡು ತುದಿಗಳನ್ನು ಬಾಯೊಳಗೆ ಹಿಡಿದು ಕೊಂಡು ಸಣ್ಣದೊಂದು ಕಟ್ಟಿಗೆಯನ್ನು ಯೆಳಿದೊಯಿದಂತೆ ತೊಲೆಯನ್ನು ಯೆಳಿದು ಕೊಂಡು ಹೋಗಿ ಹೇಳಿದಲ್ಲಿ ;ಚಲ್ಲಿ ಬಿಡುತ್ತವೆ.

ಕೊಂಡ್ಲಿ.—ಸಿದ್ದಾಪುರದ ಉತ್ತರಕ್ಕೆ ೨ ಮೈಲಿನ ಮೇಲೆ. ಇಲ್ಲಿ ಪೂರ್ವದಲ್ಲಿ ವೊಬ್ಬ ಪಾಳೇಗಾರನು ಇರುತ್ತಿದ್ದನೆಂದು ಹೇಳುತ್ತಾರೆ. ಊರಿನ ಸುತ್ತು ಮುತ್ತು ಭದ್ರವಾದ ಕೋಟೆಯೂ ಅದರ ಸುತ್ತು ಮುತ್ತು ಕಂದಕವೂ ಉಂಟು. ಕೋಟೆಯ ಕ್ಷೇತ್ರವು ಸುಮಾರು ಒಂದು ಚಚ್ಚೌಕು ಮೈಲಾಗುವದು. ಕೋಟೆಯ ಹೊರಗೆ ನಾಲ್ಕು ದೊಡ್ಡ ಕೆರೆಗಳೂ ಕಾಳಮ್ಮನ ದೊಡ್ಡ ಗುಡಿಯೂ ಉಂಟು.

ಕುಮಟಾ.—ಹೊನ್ನಾವರದ ಉತ್ತರಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೧೦೬೭೯. ತಾಲೂಕಿನ ಮುಖ್ಯ ಗ್ರಾಮ, ಕಾನಡಾ ಜಿಲ್ಲೆಯ ಯೆರಡು ಮುಖ್ಯ ಬಂದರಗಳಲ್ಲಿ ವೊಂದು. ದಕ್ಷಿಣ ಮಹಾರಾಷ್ಟ್ರ, ಬಳ್ಳಾರಿ ಶೀಮೆಗಳ ಅರಳೆಯು ಕುಮಟೆಯ ಬಂದರಕ್ಕೆ ಹೋಗಿ ಅಲ್ಲಿಂದ ಮುಂಬಯಿಗೆ ರವಾನೆಯಾಗುತ್ತದೆ. ಕುಮಟೆಯು ಸಣ್ಣದೊಂದು ವೊತ್ತಿನ ದಂಡೆಯಲ್ಲಿ ಇರುತ್ತದೆ. ದೊಡ್ಡ ಹಡಗಗಳು ಈ ವೊತ್ತಿನ ಮುಖದ ಹೊರಗೆ ಸುಮಾರು ಅರ್ಧ ಮೈಲಿನ ಅಂತರದಲ್ಲಿ ನಿಲ್ಲುತ್ತವೆ. ಒತ್ತಿನ ಮುಖದಲ್ಲಿ ನೀರು ಕಿರಿದು ಇದ್ದದರಿಂದ ದೊಡ್ಡ ಹಡಗಗಳಿಗೆ ವೊತ್ತಿನೊಳಗೆ ಬರಲಿಕ್ಕೆ ಅಡ್ಡಿಯಾಗುತ್ತದೆ. ಬಂದರದಿಂದ ಯಾವತ್ತು ಮಾಲು ಡೋಣಿಗಳಲ್ಲಿ ಹೇರಿ ಕೊಂಡು ಹಡಗ ನಿಂತಲ್ಲಿಗೆ ತಕ್ಕೊಂಡು ಹೋಗುತ್ತಾರೆ.

ಒತ್ತಿನ ಹೊರಗೆ ಉತ್ತರಕ್ಕೆ ಸಮುದ್ರದ ಮೇಲಕ್ಕೆ ಬಂದ ಗುಡ್ಡದಂಥಾದೊಂದು ನಡುಗಡ್ಡೆಯಲ್ಲಿ ದೀಪಸ್ತಂಭವಿರುತ್ತದೆ. ಆ ನಡುಗಡ್ಡೆಯ ಸುತ್ತು ಮುತ್ತು ಪೂರ್ವಕಾಲದಲ್ಲಿ ಕಟ್ಟಿದ ಕೋಟೆಯ ಕುರುಹುಗಳಿರುತ್ತವೆ. ಕುಮಟೆಯ ಊರು ವೊಂದು

ಗುಡ್ಡದ ಇಳಕಲಿನ ಮೇಲೆ ಇರುತ್ತದೆ. ಮನೆಗಳ ಸುತ್ತು ಮುತ್ತು ಕೊಂಕಣದ ಪದ್ಧತಿಯಂತೆ ಕಿರಿದಾದ ಅವಾರದ ಗೋಡೆಗಳೂ ಉನ್ನತವಾದ ಫಲವೃಕ್ಷಗಳೂ ಇರುತ್ತವೆ. ಆದ್ದರಿಂದ ಮನೆಗಳು ಪೊಳಿತಾಗಿ ತಂಪಾಗಿರುತ್ತವೆ. ಮನೆಗಳ ಮೇಲೆ ವಾಡಿಕೆಯಾಗಿ ಹುಲ್ಲಿನ ಚಪ್ಪರಿರುವದು. ಆದರೆ ಹಂಚಿನ ಮನೆಗಳೂ ಯೆರಡು ಮೂರು ಅಂತಸ್ತುಗಳುಳ್ಳ ಮನೆಗಳೂ ಬಾಜಾರಿನಲ್ಲಿಯೂ ಬೇರೆ ಕಡೆಯಲ್ಲಿಯೂ ಇರುತ್ತವೆ. ಊರಿನ ಸುತ್ತು ಮುತ್ತು ದಟ್ಟವಾದ ತೆಂಗಿನ ಬನಗಳೂ ಬತ್ತದ ಗದ್ದೆಗಳೂ ಇರುವದರಿಂದ ಸಮುದ್ರದಲ್ಲಿ ಊರು ಕಾಣಿಸುವದಿಲ್ಲ. ಊರಿನ ಕ್ಷೇತ್ರವು ೪೭೦೫ ಯೆಕರು ಇರುತ್ತದೆ. ಆದ್ದರಿಂದ ಸರಾಸರೀ ಯೆಕರಿಗೆ ಇಬ್ಬರಂತೆ ಜನ ವಸ್ತಿಯಾಗುತ್ತದೆ.

ಸನ್ ೧೮೮೧-೮೨ರ ಹಿಂದಿನ ೮ ವರ್ಷಗಳಲ್ಲಿ ಸರಾಸರೀ ಮಾನದಿಂದ ಪ್ರತಿ ವರ್ಷ ೨೫೪೨೭೧೦ ರೂಪಾಯಿಯ ಮಾಲು ಹೊರಗಿಂದ ಕುಮಟೆಯ ಬಂದರಕ್ಕೆ ಬಂತು, ೫೧೬೫೯೦ ರೂಪಾಯಿಯ ಮಾಲು ಕುಮಟೆಯಿಂದ ಹೊರಗೆ ಹೋಯಿತು. ಹೊರಗೆ ಹೋಗುವ ಮಾಲಿನಲ್ಲಿ ಅರಳೆಯೇ ಮುಖ್ಯ. ಹೊಗೆ ಹಡಗಗಳು ಮಳೆಗಾಲ ಹೊರ್ತಾಗಿ ೮ ತಿಂಗಳು ಕುಮಟೆಯ ಬಂದರಕ್ಕೆ ಹೋಗುತ್ತವೆ. ಅಗಟಂಬರಿನಿಂದ ಮೇ ವರೆಗೆ ಅರಬಸ್ತಾನದ ಹಡಗಗಳು ಉತ್ತತ್ತಿ, ಡಾಳಿಂಬ, ನಾನಾ ಪ್ರಕಾರದ ಅಂಟುಗಳು, ಮುಂತಾದ ಸರಕುಗ್ಗಳನ್ನು ತಕ್ಕೊಂಡು ಕುಮಟೆಗೆ ಬರುತ್ತವೆ; ಕುಮಟೆಯಿಂದ ಅಕ್ಕಿಯನ್ನು ಹೇರಿ ಕೊಂಡು ಹೋಗುತ್ತವೆ.

ಕುಮಟೆಯಲ್ಲಿ ತಾಲೂಕ ಕಚೇರಿ, ಫೌಜದಾರ ಕಚೇರಿಗಳಲ್ಲದೆ ಮುನಸೀಫ ಕಚೇರಿ, ಕಷ್ಟಮ್ ಕಚೇರಿ, ಟಪಾಲ ಕಚೇರಿ, ತಂತಿಟಪಾಲು, ಆಸಪತ್ರಿ, ಮ್ಯುನಿಸಿಪಾಲಿಟಿ, ಇಂಗ್ಲಿಷ ಶಾಲೆ, ಉತ್ತಮ ಪ್ರತಿಯ ಮುಶಾಫರೀ ಬಂಗಲೆ, ನಾಲ್ಕು ಧರ್ಮ ಶಾಲೆಗಳು ಇರುತ್ತವೆ. ಮ್ಯುನಿಸಿಪಾಲಿಟಿಯ ಆದಾಯವು ಸನ್ ೧೮೮೧-೮೨ರಲ್ಲಿ ೧೧೦೭೦ ರೂಪಾಯಿ ಇತ್ತು. ಗುಡ್ಡದ ಮೇಲೆ ಹಳೆದೊಂದು ಕೋಟೆಯುಂಟು.

ಇತಿಹಾಸ.—ಕುಮಟೆಯಲ್ಲಿ ಪೊಬ್ಬ ಜೈನ ಅಧಿಕಾರಿಯು ಇರುತ್ತಿದ್ದನೆಂದು ಹೇಳುತ್ತಾರೆ. ಸನ್ ೧೫೩೧ರಲ್ಲಿ ಪೋರ್ತುಗೀಸರು ಕುಮಟೆಯ ನಿವಾಸಿಗಳ ಮೇಲೆ ೨೦೦ ಮುಡಿ ಅಕ್ಕಿಯ ಕಪ್ಪವನ್ನು ಕೂಡ್ರಿಸಿದರೆಂದು ತಿಳಿದದೆ. ಸನ್ ೧೭೫೮ರಲ್ಲಿ ಕುಮಟೆಯಲ್ಲಿ ಪೋರ್ತುಗೀಸರ ಚರ್ಚವಿತ್ತು. ಆಗ ಈ ಪೂರು ಬೇದನೂರಿನ ರಾಜ್ಯಕ್ಕೆ ಶೇರಿತ್ತು. ಟೀಪೂನ ದಂಡಿನವರು ಕುಮಟೆಯನ್ನು ಯೆರಡು ಸಾರಿ ಸುಟ್ಟರು.

ಕೂರ್ಮಗಡ.—ಕಾರವಾಡದ ಪಶ್ಚಿಮಕ್ಕೆ ಸಮುದ್ರದೊಳಗೆ ನಡುಗಡ್ಡೆಯುಂಟು. ಇದು ಸಮುದ್ರದ ನೀರಿನಿಂದ ೧೮೦ ಫೂಟು ಯೆತ್ತರವಾಗಿ ಭದ್ರವಾದ ಕೋಟೆಯುಳ್ಳದ್ದಿರುತ್ತದೆ. ಇದರ ಪೂರ್ವ ಭಾಗದಲ್ಲಿ ಕೋಟೆಯೊಳಗೆ ಶೀ ನೀರಿನ ಬಾವಿಯೂ ನಾರಸಿಂಹನ ಗುಡಿಯೂ ಉಂಟು. ದಿಜಂಬರಿನಲ್ಲಿ ಈ ದೇವರ ಜಾತ್ರೆಗೆ ಕಾರವಾಡ, ಸದಾಶಿವಗಡ, ಮುಂತಾದ ಕಡೆಯಿಂದ ಜನರು ಬಂದು ಪೊಂದು ರಾತ್ರಿ ಇಲ್ಲಿ

ನಿಲ್ಲುವರು. ಈ ದ್ವೀಪದಲ್ಲಿಯ ಕೋಟೆಯನ್ನು ಶಿವಾಜಿಯು ಕಟ್ಟಿಸಿದನೆಂದು ವೊಂದು ಲೇಖದಿಂದ ತಿಳಿಯುತ್ತದೆ. ಶಿವಾಜಿಯು ಇದಕ್ಕೆ ಸಿದ್ಧಗಡವೆಂಬ ಹೆಸರಿಟ್ಟಿದ್ದನು. ಮುಂಗೆ ಸನ್ ೧೭೧೫ರಲ್ಲಿ ಕಾದ್ರಾ ಯೆಂಬ ಕೋಟೆಯ ಕಲ್ಲು ವೊಯ್ದು ಶಿವಾಜಿಯು ಆರಂಭ ಮಾಡಿದ ಕೋಟೆಯನ್ನು ಮುಗಿಸಿ, ಅದಕ್ಕೆ ಕೂರ್ಮಗಡವೆಂಬ ಹೆಸರಿಟ್ಟರೆಂದು ತಿಳಿದದೆ. ಟೀಪುನ ಕಾಲಕ್ಕೆ ಈ ಕೋಟೆಯಲ್ಲಿ ಯುದ್ಧಗಳಾದವು.

ಲಾಳಗುಳಿ.—ಯಲ್ಲಾಪುರದ ಉತ್ತರಕ್ಕೆ ೮ ಮೈಲಿನ ಮೇಲೆ ಕಾಳೀ ನದಿಯ ದಂಡೆಯಲ್ಲಿ. ಈ ವೂರಿನ ಬಳಿಯಲ್ಲಿ ಕಾಳೀ ನದಿಯಿಂದ ಬಹು ರಮಣೀಯವಾದ ಅಸಂಖ್ಯ ಸಣ್ಣ ಸಣ್ಣ ತಡಸಲುಗಳಾಗಿರುತ್ತವೆ, (೧ನೇ ಭಾಗ ನೋಡು).

ಮಾಗೋಡದ ತಡಸಲುಗಳು.—ಯಲ್ಲಾಪುರದ ನೈರುತ್ಯಕ್ಕೆ ೨೦ ಮೈಲಿನ ಮೇಲೆ ಮಾಗೋಡವೆಂಬ ಹಳ್ಳಿಯ ಬಳಿಯಲ್ಲಿ ಗಂಗಾವಳಿಯಿಂದ ಹಲವು ತಡಸಲುಗಳುಂಟಾಗಿರುತ್ತವೆ. ನೂರರಿಂದ ಇನ್ನೂರು ಫೂಟಿನ ವರೆಗೆ ಯೆತ್ತರವಾದ ಕಣಿವೆಗಳಿಂದ ಹೊಳೆಯ ಪ್ರವಾಹವು ಹಲವು ಕಡೆಯಲ್ಲಿ ಬೀಳುತ್ತದೆ. ಈ ಯಾವತ್ತು ತಡಸಲುಗಳಲ್ಲಿ ಕೂಡಿ ಪ್ರವಾಹವು ೮೦೦ ಫೂಟು ಕೆಳಗಿಳಿದು ಹೋಗುತ್ತದೆ. (೧ನೇ ಭಾಗ ನೋಡು).

ಮಂಕಿ.—ಹೊನ್ನಾವರದ ಉತ್ತರಕ್ಕೆ ೩ ಮೈಲಿನ ಮೇಲೆ. ಇದೇ ಹೆಸರಿನ ಗುಡ್ಡದ ಮೇಲೆ ಹಾಳು ಕೋಟೆಯುಂಟು. ಈ ವೂರಲ್ಲಿ ಮುಖ್ಯವಾಗಿ ನವಾಯತ ಮುಸಲ್ಮಾನರು ವಾಸಿಸುತ್ತಾರೆ. ಇಲ್ಲಿ ಸರಕಾರೀ ಕಷ್ಟಮ್ ಕಚೇರಿಯುಂಟು.

ಮಾಝಾಲಿ.—ಸದಾಶಿವಗಡದ ಉತ್ತರಕ್ಕೆ ೬ ಮೈಲಿನ ಮೇಲೆ, ಗೋವೆಯ ಮೇರೆಯಲ್ಲಿ, ಜ. ಸ. (೮೧) ೩೭೧೬. ಇಲ್ಲಿ ವೊಂದು ಕನ್ನಡ ಶಾಲೆ, ಧರ್ಮ ಶಾಲೆ, ಪೋಲೀಸ ಚೌಕಿ ಇರುತ್ತವೆ. ಊರಿನ ಬಳಿಯಲ್ಲಿ ಗುಡ್ಡದ ಮೇಲೆ ಮಾರ್ಕಿಯಮ್ಮನ ಗುಡಿಯುಂಟು. ಜನವರಿಯಲ್ಲಿ ಈ ಅಮ್ಮನ ಜಾತ್ರೆಯಲ್ಲಿ ೩೦೦೦ದ ವರೆಗೆ ಜನ ಕೂಡಿ ೪೦೦ ರೂಪಾಯಿಯ ವರೆಗೆ ವ್ಯಾಪಾರವಾಗುತ್ತದೆ.

ಮಿರ್ಜಾನ.—ಕುಮಟೆಯ ಉತ್ತರಕ್ಕೆ ೫ ಮೈಲಿನ ಮೇಲೆ ತದಡೀ ಹೊಳೆಯ ಮುಖದ ದಂಡೆಯಲ್ಲಿ, ಜ. ಸ. (೮೧) ೧೦೫೯. ಇದು ಪುರಾತನ ಕಾಲದಲ್ಲಿ ಹೆಸರಾದ ಬಂದರವು; ಆದರೆ ಈಗ ಮೂರು ಸಣ್ಣ ಸಣ್ಣ ಹಳ್ಳಿಗಳು ಕೂಡಿ ಈ ಗ್ರಾಮವಾಗಿದೆ. ಈ ಮೂರು ಹಳ್ಳಿಗಳ ನಡುವೆ ವೃಕ್ಷಗಳ ಬನದೊಳಗೆ ಕೋಟೆಯುಂಟು. ಇದನ್ನು ವಿಜಾಪುರದವರ ಸರದಾರನೊಬ್ಬನು ಕಟ್ಟಿಸಿದನೆಂದು ಹೇಳುತ್ತಾರೆ. ಸರ್ಪನ ಮಲಿಖನೆಂಬ ಮುಸಲ್ಮಾನನು ಇದನ್ನು ಕಟ್ಟಿಸಿದನೆಂದು ಕೆಲವರು ಹೇಳುತ್ತಾರೆ. ಇವನು ಚಿಕ್ಕವನಿದ್ದಾಗ ಹೆಬ್ಬಾರನೆಂಬ ಹೈಗ ಬ್ರಾಹ್ಮಣನ ದನ ಕಾಯುತ್ತಿದ್ದನಂತೆ. ಒಂದು ದಿನ ದನಗಳು ವ್ಯಾಳ್ಯಕ್ಕೆ ಮನೆಗೆ ಬಾರದ್ದರಿಂದ ಹೆಬ್ಬಾರನು ಮಲಿಖನನ್ನು ಹುಡುಕುತ್ತಿರಲಾಗಿ, ಅವನು ವೊಂದು ಅರಳೆಯ ಮರದ ಕೆಳಗೆ ನಿದ್ರೆ ಹತ್ತಿ ಮಲಗಿದ್ದು, ಅವನ ತಲೆಗೆ ವೊಂದು ನಾಗರ ಹಾವು ಸುತ್ತಿ ಕೊಂಡು ಹೆಡೆ ತೆಗೆದು ಆಡುತ್ತಿದ್ದದನ್ನು ಕಂಡನು.

ಹೆಬ್ಬಾರನನ್ನು ನೋಡಿ ಹಾವು ಹೊರಟು ಹೋಯಿತು. ಹೆಬ್ಬಾರನು ಮಲಿಖನನ್ನೂ ದನಗಳನ್ನೂ ಕರೆ ಕೊಂಡು ಮನೆಗೆ ಹೋದನು. ಮಲಿಖನು ಬರ ಬರುತ್ತಾ ಪ್ರಬಲನಾಗಿ ಮೈಸೂರಿನ ಶೀಮೆಗೆ ಹೋಗಿ ಕೆಲವು ದಂಡು ತಕ್ಕೊಂಡು ಬಂದು ಮಿರ್ಜಾನದ ನೆರೆ ಹೊರೆಯ ಶೀಮೆಯನ್ನು ಆಕ್ರಮಿಸಿದನು. ಇವನು ಮಿರ್ಜಾನದ ಕೋಟೆಯನ್ನೂ ಅಂಕೋಲೆಯ ಕೋಟೆಯನ್ನೂ ಕಟ್ಟಿಸಿ, ಮಿರ್ಜಾನದಲ್ಲಿ ಆಳಿದನು. ಈ ಸರ್ಪನ ಮಲಿಖನು ತನ್ನ ಮೊದಲಿನ ಒಡೆಯನಾದ ಹೆಬ್ಬಾರನಿಗೆ ಅಚವೆ ಯೆಂಬ ಹಳ್ಳಿಯನ್ನು ಇನಾಮು ಕೊಟ್ಟನು. ಹೆಬ್ಬಾರನು ಮಲಿಖನು ಮಲಗಿದ ಅರಳಿಯ ಮರಕ್ಕೆ ಕಟೆಯನ್ನು ಕಟ್ಟಿಸಿ, ಅಲ್ಲಿ ಪ್ರತಿ ವರ್ಷ ದಸರೆಯಲ್ಲಿ ಕತ್ತಿ ಮುಂತಾದ ಆಯುಧಗಳನ್ನು ಪೂಜಿಸಿ ಉತ್ಸವ ಮಾಡ ಹತ್ತಿದನು.

ಇತಿಹಾಸ.—ಕ್ರಿಸ್ತೀ ಶಕದ ಮೊದಲಿನ ಮೂರು ಶತಕಗಳಲ್ಲಿ ಗ್ರೀಸ ದೇಶದಿಂದಲೂ ರೋಮ ಪಟ್ಟಣದಿಂದಲೂ ವರ್ತಕರು ಹಿಂದುಸ್ತಾನದ ಪಶ್ಚಿಮ ದಂಡೆಯಲ್ಲಿ ಮುರ್ಝುರಿಸ ಯೆಂಬ ಹೆಸರಾದ ಬಂದರಕ್ಕೆ ಬರುತ್ತಿದ್ದರೆಂದು ಹೇಳಿ, ಪ್ಲಿನೀ, ಪುಟಂಜರ, ತಾಲೆಮಿ, ಆರ್ಯನ್, ಯೆಂಬ ಪ್ರಾಚೀನ ಗ್ರಂಥಕರ್ತರು ಆ ಮುರ್ಝುರಿಸ ಬಂದರವನ್ನು ಬಹಳವಾಗಿ ವರ್ಣಿಸಿದ್ದಾರೆ. ಈ ಗ್ರಂಥಕರ್ತರು ಕ್ರಮವಾಗಿ ಕ್ರಿಸ್ತೀ ಶಕದ ೭೭ನೇ, ೧೦೦ನೇ, ೧೫೦ನೇ, ೨೪೭ನೇ ವರ್ಷಗಳಲ್ಲಿ ತಮ್ಮ ಗ್ರಂಥಗಳನ್ನು ಬರಿದಿದ್ದಾರೆ. ಈ ಮುರ್ಝುರಿಸ ಬಂದರವೇ ಮಿರ್ಜಾನವೆಂದು ಶೋಧಕರು ತರ್ಕಿಸುತ್ತಾರೆ. ಆದರೆ ೩ನೇ ಶತಕದ ಈಚೆಯಲ್ಲಿ ವಿಜಯನಗರದ ಬೆಳುವಣಿಗೆಯ ಕಾಲದ ವರೆಗೆ ಮಿರ್ಜಾನದ ಬಂದರವು ಯಾವ ಬಗೆಯಿಂದಲೂ ಹೆಸರಿಗೆ ಬಂದಂತೆ ತೋರುವದಿಲ್ಲ. ವಿಜಯನಗರದವರ ಆಳಿಕೆಯಲ್ಲಿ ಹೊನ್ನಾವರದ ಸುಭೇದಾರನ ಕೈ ಕೆಳಗೆ ಮಿರ್ಜಾನವಿತ್ತು. ಪೋರ್ತುಗೀಸರು ಆಗಾಗ್ಗೆ ಮಿರ್ಜಾನದಲ್ಲಿ ಜಗಳವನ್ನು ಹೂಡುವರು. ಮಿರ್ಜಾನವು ವಿಜಾಪುರದ ರಾಜ್ಯಕ್ಕೂ ಕೆಲವು ದಿವಸ ಶೇರಿತ್ತೆಂದು ತೋರುತ್ತದೆ. ಸನ್ ೧೬೭೦ರಲ್ಲಿ ಇದು ಬೇದನೂರಿನ ರಾಜ್ಯಕ್ಕೆ ಶೇರಿತ್ತು. ಬೇದನೂರು ಹಾಳಾದ ಬಳಿಕ ಇದು ಹೈದರನ ಕೈ ಶೇರಿತು.

ಮುದುಗಿರಿ.—ಸದಾಶಿವಗಡದ ಈಶಾನ್ಯಕ್ಕೆ ೩ ಮೈಲಿನ ಮೇಲೆ, ಜ. ಸ. (೮೧) ೧೯೯೦. ಇಲ್ಲಿ ನಾಗನಾಥನೆಂಬ ಪ್ರಸಿದ್ಧವಾದ ದೇವಸ್ಥಾನವಿರುತ್ತದೆ. ವೈಶಾಖ ಮಾಸದಲ್ಲಿ ಈ ದೇವರ ರಥೋತ್ಸವಕ್ಕೆ ಐದಾರು ಸಾವಿರ ಜನ ಕೂಡಿ ೪೦೦೦ ರೂಪಾಯಿ ವರೆಗೆ ವ್ಯಾಪಾರವಾಗುತ್ತದೆ. ಮುದುಗಿರಿಯಲ್ಲಿ ಪಾತರದವರು ಬಹು ಜನರುಂಟು. ಜಾತ್ರೆಯಲ್ಲಿ ಇವರೂ ಗೋಮಂತಕ ಶೀಮೆಯಿಂದ ಬಂದ ಪಾತರದವರೂ ರಥದ ಮುಂದೆ ಮೂರು ಸಂಜೆಯಿಂದ ಬೆಳ ತನಕ ಕುಣಿಯುತ್ತಾರೆ.

ಮುಂಡಗೋಡ.—ಯಲ್ಲಾಪುರದ ಪೂರ್ವಕ್ಕೆ ೨೦ ಮೈಲಿನ ಮೇಲೆ ಧಾರವಾಡದ ಮೇರೆಯಲ್ಲಿ ಮಹಾಲಿನ ಮುಖ್ಯ ಗ್ರಾಮವು, ಜ. ಸ. (೮೧) ೧೪೮೪. ಮಹಾಲ

ಕಚೇರಿ, ಫೌಜದಾರ ಕಚೇರಿ, ಟಪಾಲ ಕಚೇರಿ, ಆಸಪತ್ರಿ, ಮುಶಾಫರೀ ಬಂಗಲೆ ಇರುತ್ತವೆ. ಈ ವೂರಿನ ಬಳಿಯಲ್ಲಿ ತಕ್ಕಮಟ್ಟಿಗೆ ಭದ್ರವಾದದ್ದೊಂದು ಕೋಟೆಯುಂಟು. ಅದು ಈಗ ಹಾಳು ಬಿದ್ದದೆ.

ಮುರುಡೇಶ್ವರ.—ಹೊನ್ನಾವರದ ದಕ್ಷಿಣಕ್ಕೆ ೧೪ ಮೈಲಿನ ಮೇಲೆ, ಜ. ಸ. (೮೧) ೨೧೪೫. ಊರ ಬಳಿಯಲ್ಲಿ ಕಂದುಗಿರಿ ಯೆಂಬ ಗುಡ್ಡದ ಮೇಲೆ ಮುರುಡೇಶ್ವರನ ದೊಡ್ಡ ಗುಡಿಯುಂಟು. ಇದನ್ನು ಕೈಕಿಣಿಯ ಜೈನ ವೊಡಿಯರು ಕಟ್ಟಿಸಿದರೆಂದು ಹೇಳುತ್ತಾರೆ. ಈ ದೇವಸ್ಥಾನಕ್ಕೆ ಸರಕಾರದಿಂದ ೧೪೪೦ ರೂಪಾಯಿಯ ನೇಮಣೂಕು ನಡಿಯುತ್ತದೆ. ಈ ದೇವರ ಜಾತ್ರೆಯಲ್ಲಿ ೫೦೦೦ ಜನ ಕೂಡಿ ೨೦೦೦ ರೂಪಾಯಿಯ ವರೆಗೆ ವ್ಯಾಪಾರವಾಗುತ್ತದೆ. ಮುರುಡೇಶ್ವರದ ಬಳಿಯಲ್ಲಿ ೩೦ ವೀರಗಲ್ಲುಗಳಿರುತ್ತವೆ. ಅವುಗಳ ಮೇಲೆ ಸುಂದರವಾದ ಚಿತ್ರಗಳೂ ಲಿಪಿಗಳೂ ಇರುತ್ತವೆ. ಎರಡು ಕಲ್ಲುಗಳ ಮೇಲಿನ ಲಿಪಿಗಳು ೧೫ನೇ ಶತಕದವಿರುತ್ತದೆ.

ನೇತ್ರಾಣಿ.—ಜಾಲೀಕುಂಡ ನೋಡು. ಇಲ್ಲಿ ಸಮುದ್ರಗಳ್ಳರ ಉಪದ್ರವವು ೧೭ನೇ ಶತಕದ ವರೆಗೆ ಇತ್ತು. ಬುನಾದಿಯಲ್ಲಿಯೂ ಗ್ರೀಸದ ಹಡಗಗಳಿಗೆ ಈ ಕಳ್ಳರ ಉಪದ್ರವವು ಬಹಳ ಆಗುತ್ತಿತ್ತೆಂದು ಪ್ಲಿನೀ (ಕ್ರಿ. ಶ. ೭೭) ಯೆಂಬ ಗ್ರಂಥಕರ್ತನು ಬರಿದಿದ್ದಾನೆ.

ಸದಾಶಿವಗಡ.—ಕಾರವಾಡದ ಉತ್ತರಕ್ಕೆ ೩ ಮೈಲಿನ ಮೇಲೆ, ಜ. ಸ. (೮೧) ೩೯೩೯. ಈ ಬಂದರವು ಕಾಳೀ ನದಿಯ ಮುಖದ ದಂಡೆಯಲ್ಲಿ ಇರುತ್ತದೆ. ಇದರ ಪಶ್ಚಿಮಕ್ಕೆ ಸಮುದ್ರದೊಳಗೆ ಸಣ್ಣ ಸಣ್ಣ ಗುಡ್ಡಗಳಂಥ ನಡುಗಡ್ಡೆಗಳಿರುತ್ತವೆ; ಅವುಗಳಲ್ಲಿ ದೇವಗಡ, ಕೂರ್ಮಗಡ, ಇವೆರಡು ಮುಖ್ಯ. ಈ ವೂರಲ್ಲಿ ಮದ್ರಾಸ ಸರಕಾರದವರು ಮೊದಲು ಮಹಾಲ ಕಚೇರಿಯನ್ನೂ ದಂಡಿನ ವೊಂದು ಕಂಪನಿಯನ್ನೂ ಇಟ್ಟಿದ್ದರು. ಕೆಲವು ಮನೆಗಳು ಯೆರಡಂತಸ್ತಿನವಿರುತ್ತವೆ. ಸನ್ ೧೮೮೧-೮೨ರ ಹಿಂದಿನ ೮ ವರ್ಷಗಳಲ್ಲಿ ಸರಾಸರಿಯಿಂಥ ಪ್ರತಿ ವರ್ಷ ೯೯೪೫೬೦ ರೂಪಾಯಿಯ ಮಾಲು ಈ ಬಂದರದಿಂದ ಹೊರಗೆ ಹೋಯಿತು, ೧೨೪೬೦ ರೂಪಾಯಿಯ ಮಾಲು ಹೊರಗಿಂದ ಬಂತು.

ಈ ವೂರಿನ ಬಳಿಯಲ್ಲಿ ಯೆರಡು ಗುಡ್ಡಗಳ ಮೇಲೆ ಕೋಟೆಗಳಿರುತ್ತದೆ. ಪಶ್ಚಿಮದ ಹೆಚ್ಚು ಯೆತ್ತರವಾದ (೨೨೦ ಫೂಟು) ಗುಡ್ಡದ ಮೇಲಿನ ಕೋಟೆಗೆ ಸದಾಶಿವಗಡವೆನ್ನುವರು. ಈ ಕೋಟೆಯ ಗೋಡೆಯನ್ನು ಕಲ್ಲು ಗಚ್ಚಿನಿಂದ ೨೦ ಫೂಟು ಯೆತ್ತರವಾಗಿಯೂ ೬ ಫೂಟು ದಿಪ್ಪಾಗಿಯೂ ಕಟ್ಟಿದ್ದಾರೆ. ಕೋಟೆಯ ಸುತ್ತು ಮುತ್ತು ಕಂದಕವೂ ಅಲ್ಲಲ್ಲಿಗೆ ಕೊತ್ತಳಗಳೂ ಇರುತ್ತವೆ; ಒಳಗಿನ ಕ್ಷೇತ್ರವು ಸುಮಾರು ೧೦ ಯೆಕರು ಆಗುವದು. ಇದಕ್ಕೆ ಬಾಲೇಕಿಲ್ಲೆಯೆನ್ನುವರು. ಇದರ ಹೊರಗೆ ಆಯಕಟ್ಟಿನ ಸ್ಥಳದಲ್ಲಿ ಮೂರು ಸುತ್ತು ಗೋಡೆಗಳಿರುತ್ತವೆ. ಯೆಲ್ಲಕ್ಕೂ ಹೊರಗಿನ ಗೋ

ಡೆಯು ನೀರೊಳಗೆ ಇರುತ್ತದೆ. ಕೋಟೆಯ ಮೇಲೆ ಹಲ ಕೆಲವು ತೋಫುಗಳಿರುತ್ತವೆ. ಆದರೆ ಅವಕ್ಕೆಲ್ಲ ಜಂಗು ಹತ್ತಿರುತ್ತದೆ. ಕೋಟೆಯು ಬಹಳವಾಗಿ ಕೆಟ್ಟಿಲ್ಲ. ಕೋಟೆಯೊಳಗೆ ಮೇಲಾದ ಶೀ ನೀರಿನ ದೊಡ್ಡ ಬಾವಿಯುಂಟು. ಈ ಕೋಟೆಯನ್ನು ಸ್ವಾದೆಯ ಸದಾಶಿವ ನಾಯಕನೆಂಬ ಅರಸು ಕಟ್ಟಿಸಿದನೆಂದು ಕೆಲವರು ಹೇಳುತ್ತಾರೆ; ಬೇರೆ ಕೆಲವರು ಅವನ ಮಗ ಬಸವಲಿಂಗ ರಾಯನು ಕಟ್ಟಿಸಿದನೆಂದು ಹೇಳುತ್ತಾರೆ. ಈ ಕೋಟೆಗೂ ಯೆರಡನೇ ಸಣ್ಣ ಕೋಟೆಗೂ ನಡುವೆ ವೊಬ್ಬ ಪೀರನ ಗೋರಿಯುಂಟು. ಅದರಿಂದ ಫೋರ್ತುಗೀಸರು ಇದಕ್ಕೆ ಪೀರನ ಕೋಟೆಯೆಂದೆನ್ನುವರು.

ಸದಾಶಿವಗಡವು ವೊದಲಿನಿಂದ ಸ್ವಾದೆಯ ರಾಜ್ಯಕ್ಕೆ ಶೇರಿತ್ತು. ಸನ್ ೧೭೫೨ರಲ್ಲಿ ಫೋರ್ತುಗೀಸರು ಇದನ್ನು ತಕ್ಕೊಂಡು ಭದ್ರ ಪಡಿಸಿದರು; ಆದರೆ ಮುಂದೆ ಯೆರಡು ವರ್ಷದ ಮೇಲೆ ಸ್ವಾದೆಯ ಅರಸನಿಗೆ ತಿರಿಗಿ ಕೊಟ್ಟರು. ಸನ್ ೧೭೬೩ರಲ್ಲಿ ಹೈದರನ ಸರದಾರನೊಬ್ಬನು ಇದನ್ನು ತಕ್ಕೊಂಡನು.

**ಸಾಂಬ್ರಾಣಿ.**—ಹಲ್ಯಾಳದ ದಕ್ಷಿಣಕ್ಕೆ ೫ ಮೈಲಿನ ಮೇಲೆ ದೊಡ್ಡ ಹಳ್ಳಿಯು. ಸ್ವಾದೆಯ ಅರಸು ಈ ವೂರಲ್ಲಿ ಇರುತ್ತಿದ್ದನು. ಇದೊಂದೇ ಊರಿನಿಂದ ಆ ಅರಸನಿಗೆ ೩೦೦೦೦ ರೂಪಾಯಿಯ ಆದಾಯವಾಗುತ್ತಿತ್ತೆಂದು ವೊಬ್ಬ ಪ್ರವಾಸಿಯು ಬರಿದಿದ್ದಾನೆ.

**ಸಾಣೀಕಟ್ಟೆ.**—ಕುಮಟೆಯ ಉತ್ತರಕ್ಕೆ ೧೦ ಮೈಲಿನ ಮೇಲೆ. ಕಾನಡಾ ಜಿಲ್ಲೆಯಲ್ಲಿ ಈಗ ಉಪ್ಪು ಮಾಡುವ ಕಾರಖಾನೆಯು ಇದೊಂದೇ ಊರಲ್ಲಿ ಇರುತ್ತದೆ. ಇಲ್ಲಿ ೧೨೪ ಆಗರಗಳಲ್ಲಿ ಕೂಡಿ ೯೪೦೦ ಮೆಳೆಗಳಲ್ಲಿ ಉಪ್ಪು ಮಾಡುತ್ತಾರೆ. ಉಪ್ಪು ಮಾಡುವ ನಾಡೋರರು ಮುಂತಾದ ಜಾತಿಯವರು ತಮ್ಮ ಆಗರಗಳು ಆಕ್ರಮಿಸಿದ ಸ್ಥಳಕ್ಕಾಗಿ ಸರಕಾರಕ್ಕೆ ಯೆಕರಿಗೆ ಸುಮಾರು ೩ ರೂಪಾಯಿಯಂತೆ ತೆರಿಗೆಯನ್ನು ಕೊಡುತ್ತಾರೆ. ಈ ೧೨೪ ಆಗರಗಳಲ್ಲಿ ಪ್ರತಿ ವರ್ಷ ೬೫೫೫ ಟನ್ನು ಅಂದರೆ ೨೬೨೦ ಖಂಡಗ ಉಪ್ಪು ಹುಟ್ಟುತ್ತದೆ.

**ಶಿರಾಳಿ.**—ಭಟಕಳದ ಉತ್ತರಕ್ಕೆ ೪ ಮೈಲಿನ ಮೇಲೆ. ಇಲ್ಲಿ ಸಾರಸ್ವತ ಬ್ರಾಹ್ಮಣರ ಗುರು ಇರುತ್ತಾನೆ. ಊರಿನ ಮುಖ್ಯ ನಿವಾಸಿಗಳು ಸಾರಸ್ವತರೇ.

**ಶಿರ್ವೇಗುಡ್ಡ.**—ಕಾರವಾಡದ ಈಶಾನ್ಯಕ್ಕೆ ೧೦ ಮೈಲಿನ ಮೇಲೆ, ೧೫೦ ಫೂಟು ಯೆತ್ತರವಾದ ಗುಡ್ಡವು. ಇದರ ಮೇಲೆ ಬಸವಣ್ಣನ ಗುಡಿಯೂ ಶೀ ನೀರಿನ ಕುಂಡವೂ ಉಂಟು. ಈ ಬಸವಣ್ಣನ ಜಾತ್ರೆಯಲ್ಲಿ ವೊಕ್ಕಲಿಗರು ನಿಚ್ಚಣಿಕೆಯ ಹಚ್ಚಿ ಗುಡ್ಡದ ಮೇಲೆ ಯೇರಿ ಹೋಗುವರು. ನೀರಿನ ಹೊಂಡದ ಬಳಿಯಲ್ಲಿ ವೊಂದು ಬಂಡೆಯೊಳಗೆ ಯೆಣ್ಣೆ ಗೊಂಡವನ್ನು ಮಾಡಿದ್ದಾರೆ. ಜಾತ್ರೆಯಲ್ಲಿ ಅದರೊಳಗೆ ಯೆಣ್ಣೆಯ ತುಂಬಿ ಅದರೊಳಗೆ ವೊಂದು ಹೊಸ ಹಚ್ಚಡದ ಹೋಳನ್ನು ಬತ್ತಿಯ ಹಾಗೆ ಹೊಸಿದು ಹಾಕಿ ವೊಂದು ತುದಿಯನ್ನು ಅಂಚಿನ ಮೇಲೆ ಇಟ್ಟು ಅದಕ್ಕೆ ಉರಿ ಹಚ್ಚುವರು. ಈ ಕಕ್ಕಡವು ಬೆಳತನಕ ಉರಿಯುತ್ತದೆ.

ಶಿವೇಶ್ವರ.—ಸದಾಶಿವಗಡದ ಉತ್ತರಕ್ಕೆ ೪ ಮೈಲಿನ ಮೇಲೆ. ಇಲ್ಲಿ ಕೆಲವು ಈಶ್ವರನ ಗುಡಿಗಳೂ ವೊಂದು ಸರಕಾರೀ ಶಾಲೆಯೂ ಉಂಟು. ಊರಿನ ಉತ್ತರಕ್ಕೆ ಗುಡ್ಡದ ಮೇಲೆ ಕೋಟೆ ಇತ್ತು. ಈ ಕೋಟೆಯನ್ನು ಸ್ವಾದೆಯ ಸದಾಶಿವನಾಯಕನ ಕೈಯಿಂದ ಹೈದರನು ಕಸುಕೊಂಡ ಬಳಿಕ ಮಹಾರಾಷ್ಟ್ರರಿಗೂ ಹೈದರನ ದಂಡಿನವರಿಗೂ ಇದರಲ್ಲಿ ಯುದ್ಧಗಳಾದವು. ಇಂಗ್ಲಿಷ ಸರಕಾರದ ದಂಡಿನವರು ಸನ್ ೧೭೮೩ರಲ್ಲಿ ಈ ಕೋಟೆಯನ್ನು ಕೆಡಹಿಸಿದರು. ಈಗ ಗೋಡೆ ಕಂದಕಗಳ ಗುರ್ತುಗಳು ಮಾತ್ರ ಉಳಿದವೆ.

ಸಿದ್ದಾಪುರ.—ಕಾನಡಾ ಜಿಲ್ಲೆಯ ದಕ್ಷಿಣ ಮೇರೆಯ ಉತ್ತರಕ್ಕೆ ೩ ಮೈಲಿನ ಮೇಲೆ, ಜ. ಸ. (೮೧) ೧೯೨೦. ತಾಲೂಕಿನ ಮುಖ್ಯ ಗ್ರಾಮವು; ಜನರ ವಸ್ತಿ ಬಾಜಾರಿನ ಬಳಿಯಲ್ಲಿ ಮಾತ್ರ ಸ್ವಲ್ಪ ದಟ್ಟಾಗಿರುತ್ತದೆ. ಬೇರೆ ಕಡೆಯಲ್ಲಿ ಕೊಂಕಣದಂತೆ ಮನೆಗಳು ದೂರದೂರಾಗಿ ಅವಾರದ ಗೋಡೆಯ ಮಧ್ಯದಲ್ಲಿ ಕಟ್ಟಿರುವವು. ಈ ವೂರಿಂದ ದಕ್ಷಿಣಕ್ಕೆ ಮೈಸೂರು ಶೀಮೆಗೆ ಹೋಗುವ ಮಾರ್ಗದಲ್ಲಿ ಬಹು ರಮಣೀಯವಾದ ಬಕುಲ ವೃಕ್ಷಗಳ ಬನಗಳಿರುತ್ತವೆ.

ಸಿದ್ದಾಪುರ.—ಕಾರವಾಡದ ಪೂರ್ವಕ್ಕೆ ೩ ಮೈಲಿನ ಮೇಲೆ. ಇಲ್ಲಿ ಪೂರ್ವದಲ್ಲಿ ವೊಬ್ಬ ಹಬ್ಬೂ ಜಾತಿಯ ಜಮೇದಾರನು ಇರುತ್ತಿದ್ದನೆಂದು ಹೇಳುತ್ತಾರೆ. ಈ ವೂರಿನ ಬಳಿಯಲ್ಲಿ ಹಳೆ ಕೋಟೆ ಯೆಂತಲೂ, ಲಕಡೀ ಕೋಟೆ ಯೆಂತಲೂ ಯೆರಡು ಹಾಳು ಕೋಟೆಗಳಿವೆ. ಈ ವೂರಿನ ಬಳಿಯಲ್ಲಿ ಕಾಳೀ ನದಿಯೊಳಗೆ ಮೊಸಳೆಗಳು ಬಹಳ.

ಸಿರಶಿ.—ತಾಲೂಕಿನ ಮುಖ್ಯ ಗ್ರಾಮವೂ, ಕಾನಡಾ ಜಿಲ್ಲೆಯಲ್ಲಿ ಘಟ್ಟದ ಮೇಲೆ ಹೆಸರಾದ ಪೇಟೆಯೂ, ಜ. ಸ. (೮೧) ೫೮೩೩. ಊರಿನ ಕ್ಷೇತ್ರವು ೨೪೩೭ ಯೆಕರು. ಆದ್ದರಿಂದ ಯೆಕರಿಗೆ ಇಬ್ಬರಂತೆ ವಸ್ತಿ ಇರುತ್ತದೆ. ಸಿರಶಿಯು ಸಮುದ್ರಕ್ಕಿಂತ ೨೫೦೦ ಫೂಟು ಯೆತ್ತರವಿರುತ್ತದೆ. ಇಲ್ಲಿ ಮಾಮಲೇದಾರ ಫೌಜದಾರರ ಕಚೇರಿಗಳಲ್ಲದೆ ಸಬ ಜಡಜ ಕಚೇರಿ, ಟಪಾಲ ಕಚೇರಿ, ತಂತಿ ಟಪಾಲು, ಆಸಪತ್ರಿ, ಇಂಗ್ಲಿಷ ಶಾಲೆ, ಅಶಿಸ್ಟಾಂಟ ಕಲೆಕ್ಟರನ ಬಂಗಲೆ, ಮುಶಾಫರಿ ಬಂಗಲೆ, ಮ್ಯುನಿಸಿಪಾಲಿಟಿ ಇರುತ್ತವೆ. ಊರಿನ ವಸ್ತಿಯು ಕೊಂಕಣದ ವಸ್ತಿಯಂತೆ ತಿಳುವಾಗಿರುವದು. ಒಟ್ಟು ದಕ್ಷಿಣೋತ್ತರ ಉದ್ದಳತೆ ಯೆರಡು ಮೈಲು, ಪೂರ್ವ ಪಶ್ಚಿಮ ಅಗಲು ವೊಂದುವರೆ ಮೈಲು. ಈ ಕ್ಷೇತ್ರದ ನಡುವೆ ವೊಂದು ಸಣ್ಣ ಗುಡ್ಡವಿರುವದು. ಈ ಗುಡ್ಡದ ಈಶಾನ್ಯದ ಇಳಕಲಿನ ಮೇಲೆ ಬಾಜಾರು ಇರುತ್ತದೆ; ಗುಡ್ಡದ ನೆತ್ತಿಯ ಮೇಲೆ ಆಸಪತ್ರಿಯುಂಟು. ಸಿರಶಿಯಲ್ಲಿ ಮುಖ್ಯವಾಗಿ ಅಡಿಕೆ, ಯಾಲಕ್ಕಿ, ಮೆಣಸು, ತೆಂಗಿನ ಕಾಯಿ, ಕೊಬ್ಬರಿ, ಇವುಗಳ ವ್ಯಾಪಾರವು ಬಹಳ ನಡಿಯುತ್ತದೆ. ಇಲ್ಲಿಯ ಮ್ಯುನಿಸಿಪಾಲಿಟಿಯ ಆದಾಯವು ಸನ್ ೧೮೮೧-೮೨ರಲ್ಲಿ ೧೧೩೦೦ ರೂಪಾಯಿ ಇತ್ತು. ಆಸಪತ್ರಿಯಲ್ಲಿ ಆ ವರ್ಷ ವೊಟ್ಟಿಗೆ ಸುಮಾರು ೬೬೦೦ ಜನರು ಔಷಧ ತಕ್ಕೊಂಡರು. ಇದರಿಂದ ಸಿರಶಿಯಲ್ಲಿ ರೋಗೋಪದ್ರವವು ಬಹಳ ಇರುತ್ತದೆಂದು ಸಿದ್ಧವಾಗುತ್ತದೆ. ಈ ವೂರಲ್ಲಿ ಜನನಕ್ಕಿಂತ ಮರಣದ ಸಂಖ್ಯವು ಹೆಚ್ಚಿರುತ್ತದೆಂದು ಹೇಳುತ್ತಾರೆ. ಜನರು ಕುಡಿಯುವ ನೀರೊಳಗೆ ವೃಕ್ಷಾವ

ಯವಗಳು ಕೊಳಿಯುವದರಿಂದ ಮುಖ್ಯವಾಗಿ ಜ್ವರ ಬರುತ್ತದೆ. ಯಕೃತ್ ಪ್ಲೀಹಗಳ ರೋಗವಿಲ್ಲದವರು ಈ ವೂರಲ್ಲಿ ದೊರಿಯುವದು ಅಪರೂಪ.

ಸಿರಶಿಯಲ್ಲಿ ಮರಿಯಮ್ಮನ ಜಾತ್ರೆಯು ಯೆರಡು ವರ್ಷಕ್ಕೊಮ್ಮೆ ಆಗುತ್ತದೆ. ಈ ಜಾತ್ರೆಯಲ್ಲಿ ಸುಮಾರು ೧೦೦೦೦ ಜನ ಕೂಡಿ ೬೫೦೦೦ ರೂಪಾಯಿಯ ವರೆಗೆ ಸರಕುಗಳ ಮಾರಾಟವಾಗುತ್ತದೆ. ನೀಚ ಜಾತಿಗಳ ಜನರೇ ಬರುವದು ಬಹಳ. ಮರಿಯಮ್ಮನ ಮೂರ್ತಿಯನ್ನು ದ್ಯಾಮವ್ವನಂತೆ ಕಟ್ಟಿಗೆಯಿಂದ ಮಾಡಿ ಬಣ್ಣ ಕೊಟ್ಟಿದ್ದಾರೆ. ಜಾತ್ರೆಯಲ್ಲಿ ಕೋಣ, ಕುರಿ, ಕೋಳಿಗಳನ್ನು ಕಡಿಯುವರು. ದ್ಯಾಮವ್ವನ ಕಥೆಯು ಪ್ರಸಿದ್ಧವಿರುತ್ತದೆ. (ಅ ಪರಿಶಿಷ್ಟ ನೋಡು). ಅದೇ ಮರಿಯಮ್ಮನ ಕಥೆಯುಂಟು. ಆದ್ದರಿಂದ ಸಿರಶಿಯಲ್ಲಿ ದ್ಯಾಮವ್ವನಿಗೇ ಮರಿಯಮ್ಮನೆನ್ನುವರೆಂದು ತೋರುತ್ತದೆ.

ಸಿರಶಿಯ ಕೋಟೆಯನ್ನು ರಾಮಚಂದ್ರನಾಯಕನೆಂಬ ಸ್ವಾದೆಯ ಅರಸು ಕಟ್ಟಿಸಿದ್ದನು. ಅದಕ್ಕೆ ಚನ್ನಪಟ್ಟಣವೆನ್ನುತ್ತಿದ್ದರು. ಕೋಟೆಯು ಈಗ ತೀರ ಹಾಳಾಗಿದೆ.

ಸ್ವಾದೆ.—ಸಿರಶಿಯ ಉತ್ತರಕ್ಕೆ ೧೦ ಮೈಲಿನ ಮೇಲೆ, ಜ. ಸ. (೮೧) ೫೦೧೭. ಇದು ಪೂರ್ವ ಕಾಲದಲ್ಲಿ ಹೆಸರಾದ ರಾಜಧಾನಿ ಇತ್ತು. ಈಗ ಹಳೆ ಕೋಟೆ ಮಾತ್ರ ಉಳಿದದೆ. ಸ್ವಾದೆಯು ಈಗ ಮೂರು ಬಗೆಯ ಧರ್ಮ ಗುರುಗಳ ಮುಖ್ಯ ಸ್ಥಾನವಾಗಿದೆ.

ಇಲ್ಲಿಯ ಜೈನ ಮಠವು ೮ನೇ ಶತಕದಿಂದ ನಡಿಯುತ್ತ ಬಂದದ್ದಿರುತ್ತದೆಂದು ತೋರುತ್ತದೆ. ಇದರಲ್ಲಿ ೮ನೇ ಶತಕದ ಲಿಪಿಯುಂಟು.

ಹೈಗ ಬ್ರಾಹ್ಮಣರ ಗುರು ಇರುವ ಮಠಕ್ಕೆ ಹೊನ್ನಳ್ಳಿ ಮಠವೆನ್ನುವರು. ಅಹಿಛತ್ರನಗರದ ವಿಶ್ವಪತಿ ದೀಕ್ಷಿತನೆಂಬ ಬ್ರಾಹ್ಮಣನ ಮಗನಾದ ಗುಣನಿಧಿ ಯೆಂಬವನು ಚಿಕ್ಕಂದಿನಲ್ಲಿ ಧರ್ಮ ಮಾರ್ಗವನ್ನು ಅವಲಂಬಿಸಿ ಕಾಶಿಗೆ ಹೋಗಿ ವಿದ್ಯಾಭ್ಯಾಸ ಮಾಡಿದನು. ಅಲ್ಲಿ ಅವನಿಗೆ ಶಂಕರಾಚಾರ್ಯರ ದರ್ಶನವಾಗಿ ಅವರು ಗುಣನಿಧಿಗೆ ಸನ್ಯಾಸಾಶ್ರಮ ಕೊಟ್ಟು ನಾರಸಿಂಹನ ಮೂರ್ತಿಯನ್ನೂ ವೊಂದು ಲಿಂಗವನ್ನೂ ಕೊಟ್ಟು ಅವನನ್ನು ವಿಶ್ವವಂದ್ಯ ಸರಸ್ವತಿ ಯೆಂಬ ಹೆಸರಿನಿಂದ ಹೈಗ ಬ್ರಾಹ್ಮಣರ ಗುರುವಾಗಿ ನೇಮಿಸಿದರು. ವಿಶ್ವವಂದ್ಯನು ಮೊದಲು ಉಜ್ಜನಿಯಲ್ಲಿ ಮಠವನ್ನು ಸ್ಥಾಪಿಸಿದನು. ಅವನ ತರುವಾಯ ೬ನೇ ಸ್ವಾಮಿಯಾದ ಗಂಗಾಧರೇಂದ್ರ ಸರಸ್ವತಿ ಯೆಂಬವನು ಗೋಕರ್ಣದಲ್ಲಿ ಹೋಗಿ ನಿಂತನು. ಮುಂದೆ ೯ನೇ ಸ್ವಾಮಿಯನ್ನು ಸ್ವಾದೆಯ ಅರಸು ಕರಿಸಿಕೊಂಡು ತನ್ನ ರಾಜಧಾನಿಯಲ್ಲಿ ಇಟ್ಟು ಕೊಂಡನು. ಈಗ ಸಿರಶಿ, ಸುಪೆ, ಯಲ್ಲಾಪುರ, ಅಂಕೋಲೆ, ಮುಂತಾದ ಕಡೆಯಲ್ಲಿ ಇರುವ ಹೈಗರು ಈ ಮಠಕ್ಕೆ ನಡಕೊಳ್ಳುತ್ತಾರೆ. ವೈಶಾಖ ಪೂರ್ಣಿಮೆಯಲ್ಲಿ ನಾರಸಿಂಹನ ರಥೋತ್ಸವದಲ್ಲಿ ಸುಮಾರು ೫೦೦೦ ಜನ ಕೂಡಿ ೮೦೦೦ ರೂಪಾಯಿಯ ವರೆಗೆ ಮಾರಾಟವಾಗುತ್ತದೆ.

ಮೂರನೇದು ವಾದಿರಾಜ ಸ್ವಾಮಿಯ ಮಠವಿರುತ್ತದೆ. ಇದನ್ನು ಸ್ಥಾಪಿಸಿದ ವಾದಿರಾಜ ಸ್ವಾಮಿಯ ವೃಂದಾವನವು ಈ ಮಠದಲ್ಲಿಯೇ ಇರುತ್ತದೆ. ಈ ಮಠಕ್ಕೆ ವೈಷ್ಣವ

ಬ್ರಾಹ್ಮಣರು ಬಹಳ ಮಾನ ಕೊಡುತ್ತಾರೆ. ವಾದಿರಾಜ ಸ್ವಾಮಿಗಳು ೧೬ನೇ ಶತಕದ ಕಡೆಯಲ್ಲಿ ಆದರು. ಇವರು ನಾನಾ ಪ್ರಕಾರದ ಧರ್ಮ ಮತಗಳನ್ನು ವಾದಿಸುವಂಥ ವಾದಿಗಳನ್ನು ಜಯಸಿದ್ದರಿಂದ ಇವರಿಗೆ ಈ ಹೆಸರು ಬಂತೆಂದು ಹೇಳುತ್ತಾರೆ. ಈ ಸ್ವಾಮಿಗಳು ನಾರಾಯಣನೆಂಬ ಪಂಡಿತನನ್ನು ಜಯಸಿದ್ದರಿಂದ ಅವನು ಸತ್ತ ಬಳಿಕ ಪಿಶಾಚನಾಗಿ ನಾರಾಯಣ ಭೂತನೆಂಬ ಹೆಸರಿನಿಂದ ಈ ಸ್ವಾಮಿಗಳ ಚಾಕರಿಯನ್ನು ಮಾಡುತ್ತಿದ್ದನಂತೆ. ಸ್ವಾಮಿಗಳ ಪಲ್ಲಕ್ಕಿಯನ್ನು ಭೋಯಿಗಳು ಹಿಂದೆ ಮಾತ್ರ ಹೊರುವರು; ಮುಂದಿನ ದಂಡಿಗೆಯನ್ನು ನಾರಾಯಣ ಭೂತನು ಯಾರಿಗೂ ಕಾಣಿಸದೆ ಹೊರುವನಂತೆ. ಈ ಮಠದಲ್ಲಿ ನಾರಾಯಣ ಭೂತನ ಸ್ಥಳವೂ ಮೂರ್ತಿಯೂ ಈಗ್ಯೂ ಉಂಟು. ಸ್ವಾದೆಯ ಅರಸಪ್ಪನಾಯಕನು ವಾದಿರಾಜ ಸ್ವಾಮಿಗಳನ್ನು ಬಹುಮಾನ ಮಾಡಿ ತನ್ನ ರಾಜಧಾನಿಯಲ್ಲಿ ಇಟ್ಟು ಕೊಂಡನು. ಸ್ವಾಮಿಗಳು ಸ್ವಾದಿಯಲ್ಲಿ ತ್ರಿವಿಕ್ರಮ, ಕೃಷ್ಣ, ಹನುಮಂತ, ಈಶ್ವರ, ಈ ದೇವಸ್ಥಾನಗಳನ್ನು ಕಟ್ಟಿಸಿದರು, ೧೫೮೦. ಅರಸಪ್ಪನಾಯಕನು ಇವರ ಮಠಕ್ಕೆ ಇನಾಮು ಭೂಮಿಗಳನ್ನು ಕೊಟ್ಟಿದ್ದಾನೆ. ಫಾಲ್ಗುಣ ಪೂರ್ಣಿಮೆಯಲ್ಲಿ ತ್ರಿವಿಕ್ರಮ ದೇವರ ರಥೋತ್ಸವಕ್ಕೆ ಸುಮಾರು ೪೦೦೦ ಜನ ಕೂಡಿ ೮೦೦೦ ರೂಪಾಯಿಯ ವರೆಗೆ ವ್ಯಾಪಾರವಾಗುತ್ತದೆ.

ಸ್ವಾದೆಯು ಪೂರ್ವಕಾಲದಲ್ಲಿ ಬಹು ದೊಡ್ಡ ಪಟ್ಟಣವಿತ್ತು. ಈ ಪಟ್ಟಣಕ್ಕೆ ಮೂರು ಸುತ್ತು ಕೋಟೆ ಇತ್ತೆಂತಲೂ, ಯೆಲ್ಲಕ್ಕೂ ಹೊರ ಸುತ್ತಿನ ಕೋಟೆಯು ಮೂರು ಮೈಲು ಚಚ್ಚೌಕು ಇತ್ತೆಂತಲೂ ಹೇಳುತ್ತಾರೆ. ವಿಜಯನಗರದ ಪೂರ್ವದಲ್ಲಿ ಸ್ವಾದೆಯಲ್ಲಿ ದೊಡ್ಡ ಅರಸರು ಆಳಿರ ಬಹುದೆಂದು ತೋರುತ್ತದೆ. ವಿಜಯನಗರವು ಹಾಳಾದ ಬಳಿಕ ಇಮ್ಮಡಿ ಅರಸಪ್ಪ ನಾಯಿಕನು ಸ್ವತಂತ್ರನಾಗಿ ಆಳ ಹತ್ತಿದನು, ೧೫೯೦. ಇವನ ವಂಶದ ಲಿಂಗವಂತ ಅರಸರು ೧೭೬೦ರ ವರೆಗೆ ಸ್ವಾದೆಯಲ್ಲಿ ಆಳಿದರು. ಇವರು ವಿಜಾಪುರದ ಬಾದಶಹನಿಗೆ ಕಪ್ಪ ಕೊಡುತ್ತಿದ್ದರು. ಸನ್ ೧೭೬೪ರಲ್ಲಿ ಹೈದರನು ದಂಡೆತ್ತಿ ಬರಲಾಗಿ, ಆಗಿನ ಅರಸನಾದ ಸವಾಯಿ ಇಮ್ಮಡಿ ಸದಾಶಿವ ನಾಯಕನು ಗೋವೆಗೆ ಓಡಿ ಹೋದನು. ಗೋವೆಯಲ್ಲಿ ಅವನ ವಂಶದವರು ಈಗ್ಯೂ ಕೆಲವು ಆಸ್ತಿಯನ್ನು ಉಪಭೋಗಿಸುತ್ತಾರೆ. ಸ್ವಾದೆಯಲ್ಲಿ ಈಗ ಇಮ್ಮಡೀ ಅರಸರು ಕಟ್ಟಿಸಿದ್ದೊಂದು ಕೋಟೆಯುಂಟು. ಅದು ಹಾಳು ಬಿದ್ದದೆ. ಅದರೊಳಗೆ ವೊಂದು ಕಡೆಯಲ್ಲಿ ೧೦ ಫೂಟು ಚಚ್ಚೌಕಾದದ್ದೊಂದು ನುಣುಪು ಕಲ್ಲನ್ನು ಬಹು ಸುಂದರವಾಗಿ ಚಿತ್ರಗಳನ್ನು ಕೊರಿದಂಥ ಮೂರು ಫೂಟು ಯೆತ್ತರವಾದ ಕಂಬಗಳ ಮೇಲೆ ನಿಲ್ಲಿಸಿದ್ದಾರೆ. ಅದು ಸ್ವಾದೆಯ ಅರಸರ ಸಿಂಹಾಸನವೆಂದು ಹೇಳುವರು.

**ಇತಿಹಾಸ.**

ಸ್ವಾದೆಯಲ್ಲಿ ೫ ಶಿಲಾಲಿಪಿಗಳಿರುತ್ತವೆ. ಅವುಗಳಲ್ಲಿ ಯೆರಡು ಶಾಲಿವಾಹನ ಶಕದ ೭೦೦ನೇ, ೭೦೬ನೇ ವರ್ಷಗಳಲ್ಲಿ ಬರಿಸಿದ ಲೇಖಗಳಿವೆ. ಯೆರಡನೇ ಲೇಖವು ಚಾಮುಂಡ ರಾಜನೆಂಬ ಜೈನ ಅರಸು ಬರಿಸಿದ್ದಿರುತ್ತದೆ. ಆದ್ದರಿಂದ ಚಾಲುಕ್ಯರ ಕಾಲದಲ್ಲಿ ಸ್ವಾದೆಯಲ್ಲಿ ಜೈನ ಅರಸರು ಆಳಿದ

**ಲಿಪಿಗಳು.**

ರೆಂದು ಸಿದ್ಧವಾಗುತ್ತದೆ. ಮೂರನೇ ಲಿಪಿಯು ಸುಧಾಪುರದ ಸದಾಶಿವರಾಯನೆಂಬವನು ಶಾ. ಶ. ೧೧೬೧ರಲ್ಲಿ ಬರಿಸಿದ್ದಿರುತ್ತದೆ. ಉಳಿದ ಯೆರಡು ಲಿಪಿಗಳು ೧೬ನೇ ಶತಕದಲ್ಲಿ ಇಮ್ಮಡಿ ಮನೆತನದ ಅರಸರು ಬರಿಸಿದ ಲೇಖಗಳಿವೆ.

ಸುಪೆ.—ಹಲ್ಯಾಳಧ ವಾಯವ್ಯಕ್ಕೆ ೧೮ ಮೈಲಿನ ಮೇಲೆ ಸಣ್ಣ ಹಳ್ಳಿಯು. ಈ ಹಳ್ಳಿಯ ಹೆಸರು ಸುಪೇ ತಾಲೂಕಿಗೆ ಕೊಡಲ್ಪಟ್ಟಿದೆ. ಈ ವೂರು ಕಾಳೀ ನದಿಗೆ ಉಜಳಿ ಯೆಂಬ ಹೊಳೆ ಕೂಡುವ ಸಂಗಮದ ಬಳಿಯಲ್ಲಿ ಇರುತ್ತದೆ. ಪಟಕಿ, ಮೈಲೆ, ಜ್ವರ, ಈ ಮೂರು ಪಿಡುಗುಗಳು ಸುಪೇ ತಾಲೂಕಿಗೆ ಆಗಾಗ್ಗೆ ಬರುವಂತೆ ಈ ಊರಿಗೂ ಬರುತ್ತವೆ. ಇಲ್ಲಿ ಮಹಾಲ ಕಚೇರಿ, ಆಸಪತ್ರಿ, ಪೋಲೀಸ ಚೌಕಿ, ಮುಶಾಫರೀ ಬಂಗಲೆ ಇರುತ್ತವೆ; ಆದರೆ ೮೫ಕ್ಕಿಂತ ಹೆಚ್ಚು ಮನೆಗಳಿಲ್ಲ. ಊರಿನ ಸುತ್ತು ಮುತ್ತು ಬತ್ತದ ಗದ್ದೆಗಳೂ, ಅಡಿಕೆಯ ತೋಟಗಳೂ ಭವ್ಯವಾದ ತೇಗಿನ ಬನಗಳೂ ಇರುತ್ತವೆ. ಉಜಳೀ, ಕಾಳೀ, ಹೊಳೆಗಳು ಕೂಡಿದ ಸ್ಥಳದಲ್ಲಿ ಸಣ್ಣದೊಂದು ನಡುಗಡ್ಡೆಯಲ್ಲಿ ರಾಮಲಿಂಗನ ಗುಡಿಯುಂಟು. ಅದಕ್ಕೆ ಸರಕಾರದಿಂದ ೬೦೦ ರೂಪಾಯಿಯ ನೇಮಣೂಕು ನಡಿಯುತ್ತದೆ.

ತದಡಿ.—ಕುಮಟೆಯ ಉತ್ತರಕ್ಕೆ ೬ ಮೈಲಿನ ಮೇಲೆ, ಸಣ್ಣ ಬಂದರವು, ತದಡೀ ಹೊಳೆಯ ಮುಖದ ದಂಡೆಯಲ್ಲಿ. ಈ ಊರಲ್ಲಿ ರೋಗೋಪದ್ರವು ವಿಶೇಷವಿರುತ್ತದೆ.

ಉಂಭಲಿ.—ಸಿರಶಿಯ ದಕ್ಷಿಣಕ್ಕೆ ೧೦ ಮೈಲಿನ ಮೇಲೆ ಸಣ್ಣ ಹಳ್ಳಿಯು. ಈ ಹಳ್ಳಿಯ ಬಳಿಯಲ್ಲಿ ತದಡೀ ಹೊಳೆಯು ೪೦೦ ಫೂಟು ಯೆತ್ತರವಾದ ಗುಡ್ಡದ ಮೇಲಿಂದ ಕೆಳಗೆ ಆಳವಾದ ಮಡುವಿನಲ್ಲಿ ಬೀಳುತ್ತದೆ. ಈ ತಡಸಲಿಗೆ ಇಂಗ್ಲಿಷದಲ್ಲಿ "ಲಶಿಂಗಟನ್ ಫಾಲ್ಸ" ಯೆಂದೆನ್ನುವರು. ಇದನ್ನು ಕಾನಡಾ ಜಿಲ್ಲೆಯ ಲಶಿಂಗಟನ್ನನೆಂಬ ಕಲೆಕ್ಟರನು ಗೊತ್ತು ಹಚ್ಚಿದ್ದರಿಂದ ಅವನ ಹೆಸರು ಈ ತಡಸಲಿಗೆ ಬಂದದೆ. (೧ನೇ ಭಾಗ ನೋಡು).

ಉಳವಿ.—ಸುಪೆಯ ದಕ್ಷಿಣಕ್ಕೆ ೨೦ ಮೈಲಿನ ಮೇಲೆ, ರಾಕ್ಷಸ ಘಟ್ಟದ ತಲೆಯ ಮೇಲೆ, ಜ. ಸ. (೮೧) ೨೦೦. ಉಳವಿಯ ಸುತ್ತು ಮುತ್ತು ಭವ್ಯವಾದ ಅಡವಿಯು ಹಬ್ಬಿರುತ್ತದೆ; ಪಡಕಲ್ಲೆಂಬ ಹಳ್ಳಿಯ ದಿಕ್ಕಿನಲ್ಲಿ ಮಾತ್ರ ಅಡವಿಯು ಸ್ವಲ್ಪ ಕಡಿಮೆ ಯುಂಟು. ಆದ್ದರಿಂದ ಇಲ್ಲಿಯ ಹವೆಯು ರೋಗಕಾರಕವಿರುತ್ತದೆ. ಈ ಊರಲ್ಲಿ ಹಾಳು ಬಿದ್ದಂಥ ಮನೆಗಳೂ, ಗುಡಿಗಳೂ, ಹೊಂಡಗಳೂ ಬಾವಿಗಳೂ ಬಹಳ ಇರುತ್ತವೆ. ಆದ್ದರಿಂದ ಇದು ಮೊದಲು ದೊಡ್ಡ ಗ್ರಾಮವಿತ್ತೆಂದು ತೋರುತ್ತದೆ. ಗವಿಮಠವೆಂಬಲ್ಲಿ ಯೆರಡು ಮೂರು ಸಣ್ಣ ಸಣ್ಣ ನೆಲಮನೆಗಳಿರುತ್ತವೆ. ಅಲ್ಲಿ ವಿರಕ್ತರಾದ ಲಿಂಗವಂತರು ಧ್ಯಾನ ಮಾಡುತ್ತಿದ್ದರೆಂದು ಹೇಳುತ್ತಾರೆ. ವಡಕಲ್ಲಿನ ಬಳಿಯಲ್ಲಿ ಬಹು ಪುರಾತನ ಕಾಲ ದ್ದೊಂದು ದೊಡ್ಡ ಇಮಾರತು ಇರುತ್ತದೆ. ಅದರ ಬಳಿಯಲ್ಲಿ ಯಾವಾಗಲೂ ತುಂಬಿ ಹರಿಯುತ್ತಿರುವಂಥ ಹೊಂಡವಿರುತ್ತದೆ. ಉಳವಿಯ ಪೂರ್ವಕ್ಕೆ "ಬುಡಬುಡತಳೆ" ಯೆಂಬ ದೊಂದು ಬಹು ಸುಂದರವಾಗಿ ಕಟ್ಟಿದ ಹೊಂಡದೊಳಗೆ ಯಾವಾಗಲೂ ಸಣ್ಣ ದೊಡ್ಡ ಗುಳ್ಳೆಗಳು ಯೇಳುತ್ತಿರುತ್ತವೆ. ಜಾತ್ರೆಯ ಕಾಲಕ್ಕೆ ಯಾತ್ರಿಕರು ಈ ಹೊಂಡದಲ್ಲಿ ಭಕ್ತಿಯಿಂದ ಸ್ನಾನ ಮಾಡುತ್ತಾರೆ.

ಲಿಂಗವಂತರ ಧರ್ಮಗುರುವಾದ ಬಸವೇಶ್ವರನು ಕಲ್ಯಾಣಪುರದಲ್ಲಿ ಬಿಜ್ಜಳ ರಾಜನನ್ನು ಕೊಲ್ಲಿಸಿದ ಬಳಿಕ (೧೧೬೭) ಉಳವಿಗೆ ಓಡಿ ಬಂದು ವೊಂದು ಬಾವಿಯೊಳಗೆ ಹಾರಿ ಕೊಂಡು ಮಡಿದನೆಂದು ಹೇಳುತ್ತಾರೆ. ಆ ಕಾಲಕ್ಕೆ ಉಳವಿಗೆ ವೃಷಭಪುರವೆಂಬ ಹೆಸರಿತ್ತು. ಬಸವೇಶ್ವರನ ಗುಡಿಯು ಜಂಬೂರೀ ಇಟ್ಟಂಗಿಗಳಿಂದ ಕಟ್ಟಿದ್ದು ಸಾಮಾನ್ಯ ತರದ್ದಿರುತ್ತದೆ. ಇದರ ಸುತ್ತು ಮುತ್ತು ಅವಾರದ ಗೋಡೆಯುಂಟು. ಗುಡಿಯ ಬಳಿಯಲ್ಲಿ ಉತ್ತಮವಾದದ್ದೊಂದು ಹೊಂಡವಿರುತ್ತದೆ. ಲಿಂಗವಂತರು ಈ ದೇವಸ್ಥಾನಕ್ಕೆ ಬಹಳ ನಡಕೊಳ್ಳುತ್ತಾರೆ. ಫೆಬ್ರುವಾರೀ ತಿಂಗಳಲ್ಲಿ ಬಸವೇಶ್ವರನ ಉತ್ಸವದಲ್ಲಿ ಮೈಸೂರು ಶೀಮೆ, ಧಾರವಾಡ, ಬೆಳಗಾವಿ, ಮುಂತಾದ ಕಡೆಯಿಂದ ಸುಮಾರು ೧೫೦೦೦ ಲಿಂಗವಂತ ಜನ ಕೂಡುತ್ತದೆ. ಈ ಜಾತ್ರೆಯಲ್ಲಿ ೧೦೦೦೦ ರೂಪಾಯಿಯ ವರೆಗೆ ಮಾರಾಟವಾಗುತ್ತದೆ.

ಹೈದರನ ಪೂರ್ವದಲ್ಲಿ ಉಳವಿಯಲ್ಲಿ ಚನ್ನೂರನೆಂಬ ಹೊಲಿಯನು ಆಳುತ್ತಿದ್ದನೆಂದು ಹೇಳತ್ತಾರೆ. ವೀರಭದ್ರನ ಹೊಂಡದ ಬಳಿಯಲ್ಲಿ ಅವನ ಮನೆಯ ಕುರುಹು ಈಗ್ಯೂ ಇರುತ್ತದೆ. ಆ ಹೊಲಿಯನನ್ನು ದೂಡಿ ಹೈದರನು ಉಳವಿಯನ್ನು ಆಕ್ರಮಿಸಿದನು. ಟೀಪುನ ತರುವಾಯ ಬಾರ್ದೆ ಬಾಬೂರಾಯನೆಂಬವನು ಕೆಲವು ದಿವಸ ಉಳವಿಯ ವೊಡಿಯನಾಗಿದ್ದನು. ಈ ಬಾಬೂರಾಯನು ಕಟ್ಟಿಸಿದ ಸಣ್ಣ ಕೋಟೆಯು ಈಗ್ಯೂ ಇರುತ್ತದೆ.

ಯಾನ ಅಥವಾ ಭೈರವಕ್ಷೇತ್ರ.—ಕುಮಟೆಯ ಈಶಾನ್ಯಕ್ಕೆ ೧೫ ಮೈಲಿನ ಮೇಲೆ, ದೇವೀಮನೀ ಘಟ್ಟಕ್ಕೂ ವಡ್ಡೀ ಘಟ್ಟಕ್ಕೂ ನಡುವೆ, ಹೆಸರಾದ ದೇವಸ್ಥಾನವು. ವಡ್ಡೀ ಘಟ್ಟದಿಂದ ಸುಮಾರು ೩ ಮೈಲಿನ ಮೇಲೆ ವೊಂದು ಗುಡ್ಡದ ಇಳಕಲಿನಲ್ಲಿ ಸುಮಾರು ೧೫೦ ಫೂಟು ಉದ್ದ, ೧೦ ಫೂಟು ಅಗಲು, ೧೦ ಫೂಟು ಯೆತ್ತರ ಇರುವದೊಂದು ಗವಿಯುಂಟು. ಈ ಗವಿಯ ಮಧ್ಯ ಭಾಗದಲ್ಲಿ ವೊಂದು ಕಣಶಿಲೆಯ ಲಿಂಗವಿರುತ್ತದೆ. ಮೇಲಿನ ಛಾವಣಿಯೊಳಗಿಂದ ಈ ಲಿಂಗದ ಮೇಲೆ ಸಣ್ಣ ನೀರಿನ ಧಾರೆಯು ಸರ್ವ ಕಾಲವೂ ಬೀಳುತ್ತಿರುತ್ತದೆ. ಈ ಲಿಂಗಕ್ಕೆ ಭೈರವೇಶ್ವರನೆನ್ನುವರು. ಈ ಗವಿಯಲ್ಲಿಯೇ ಹೈಗ ಜಾತಿಯ ಪೂಜಾರಿಗಳು ಕುಟುಂಬ ಸಹಿತವಾಗಿ ವಾಸಿಸುತ್ತಾರೆ. ಈ ದೇವಸ್ಥಾನಕ್ಕೆ ಸರಕಾರದಿಂದ ೬೦ ರೂಪಾಯಿಯ ನೇಮಣೂಕು ನಡಿಯುತ್ತದೆ. ಈ ಗವಿಯ ಬಳಿಯಲ್ಲಿ ಮತ್ತೊಂದು ಸಣ್ಣ ಗವಿಯೊಳಗೆ ೯ ಫೂಟು ಯೆತ್ತರವಾದ ಚಂಡಿಯಮ್ಮನೆಂಬ ದೇವತೆಯ ಯೆರಕಿನ ಮೂರ್ತಿಯುಂಟು. ಈ ಮೂರ್ತಿಗೆ ಭಕ್ತರು ಪಾರ್ವತಿಯೆನ್ನುವರು. ಮಾಘವದ್ಯ ದ್ವಾದಶಿಯಲ್ಲಿ ಈ ಭೈರವೇಶ್ವರನ ಜಾತ್ರೆಯಾಗುತ್ತದೆ. ಸುಮಾರು ೧೦೦೦ ಜನ ಕೂಡಿ ೫೦೦ ರೂಪಾಯಿಯ ವರೆಗೆ ಮಾರಾಟವಾಗುತ್ತದೆ.

ಈ ಯಾನಗವಿಯು ಮೊದಲು ಅತಿ ಸುಂದರವಾಗಿ ಇತ್ತೆಂತಲೂ, ಇದರಲ್ಲಿ ಚಿನ್ನವೂ

ರತ್ನಗಳೂ ತುಂಬಿದ್ದವೆಂತಲೂ, ರಕ್ತಾಕ್ಷ, ಕೃಷ್ಣಾಕ್ಷರೆಂಬ ಇಬ್ಬರು ಅಣ್ಣ ತಮ್ಮಂದಿರಾದ ದೈತ್ಯರು ಈ ಗವಿಯನ್ನು ಆಕ್ರಮಿಸಿದ್ದರಿಂದ ಶಿವನು ಯುದ್ಧ ಮಾಡಿ ಅವರನ್ನು ಓಡಿಸಿದನೆಂತಲೂ ಸಹ್ಯಾದ್ರಿ ಖಂಡದಲ್ಲಿ ಬರಿದದೆ.

ಯಲ್ಲಾಪುರ.— ಹಲ್ಯಾಳದ ದಕ್ಷಿಣಕ್ಕೆ ಸುಮಾರು ೨೫ ಮೈಲಿನ ಮೇಲೆ, ಜ. ಸ. (೮೧) ೨೦೪೮. ಮಾಮಲೇದಾರನ ಕಚೇರಿಯೂ ಕಾನ್ಸರ್ವೇಟರನೆಂಬ ಅಡಿವೀ ಖಾತೆಯ ಅಧಿಕಾರಿಯ ಕಚೇರಿಯೂ, ಆಸಪತ್ರಿಯೂ, ಮುಶಾಫರೀ ಬಂಗಲೆಯೂ ಕನ್ನಡ ಶಾಲೆಯೂ ಉಂಟು. ಆಸಪತ್ರಿಯಲ್ಲಿ ಸನ್ ೧೮೮೦ರಲ್ಲಿ ಈ ವೂರಿನ ನಿವಾಸಿಗಳ ಸಂಖ್ಯೆಕ್ಕಿಂತ ಹೆಚ್ಚು ಜನರು (೨೫೩೩) ಔಷಧ ತಕ್ಕೊಂಡರು. ಇದರಿಂದ ಇಲ್ಲಿಯ ಹವೆಯ ಲಕ್ಷಣವು ತಿಳಿಯುತ್ತದೆ. ಊರಿನ ಪೂರ್ವಕ್ಕೆ ಜೋಡ ತಲಾವೆಂಬ ಯೆರಡು ದೊಡ್ಡ ಕೆರೆಗಳಿರುತ್ತವೆ. ಇಲ್ಲಿ ದುರಗಮ್ಮನ ಗುಡಿಯು ತಕ್ಕಮಟ್ಟಿಗೆ ಪ್ರಸಿದ್ಧವಿರುತ್ತದೆ. ಈ ಅಮ್ಮನ ಜಾತ್ರೆಯಲ್ಲಿ ಕೋಣ, ಕುರಿ, ಕೋಳಿಗಳನ್ನು ಕಡಿಯುವರು.

# ೧೫ನೇ ಭಾಗ.

## ಸಂಸ್ಥಾನಗಳು.

### ೧ನೇ ಪ್ರಕರಣ.

### ಕೊಲ್ಲಾಪುರದ ಸಂಸ್ಥಾನವು.

೧. ವರ್ಣನೆ.— ಈ ಸಂಸ್ಥಾನವು ಉತ್ತರ ಅಕ್ಷಾಂಶ ೧೬°, ೧೦′ರಿಂದ ೧೫°, ೫೦′ರ ವರೆಗೆ, ಪೂರ್ವ ರೇಖಾಂಶ ೭೪°, ೪೪′ರಿಂದ ೭೩°, ೪೩′ರ ವರೆಗೆ, ಇಷ್ಟು ಕ್ಷೇತ್ರದೊಳಗೆ ಇರುತ್ತದೆ. ಉತ್ತರ ಮೇರೆಯಲ್ಲಿ ವಾರಣಾ ನದಿ; ಪೂರ್ವಕ್ಕೆ ಕೃಷ್ಣಾ, ದೂಧಗಂಗಾ, ಮಿರ್ಜಿ ಸಾಂಗಲೀ ಸಂಸ್ಥಾನಗಳು, ಚಿಕ್ಕೋಡೀ ತಾಲೂಕು; ದಕ್ಷಿಣಕ್ಕೆ ಬೆಳಗಾವೀ ಜಿಲ್ಲೆ; ಪಶ್ಚಿಮಕ್ಕೆ ಸಹ್ಯಾದ್ರಿ. ಈ ಹದ್ದಿನೊಳಗೆ ರಾಯಬಾಗ, ಕಡಕೋಳ, ಯೆಂಬ ಹೊರಚಲ್ಲಿದ ಮಹಾಲುಗಳು ಸಹ ಬರುತ್ತವೆ. ಸಂಸ್ಥಾನದ ಕ್ಷೇತ್ರಫಲ ೨೮೯೩ ಚಚ್ಚೌಕು ಮೈಲು, ಜನಸಂಖ್ಯೆ (೧೮೮೧) ೮೦೦೦೦೦, ಅಂದರೆ ಮೈಲಿಗೆ ೩೦೦ರಂತೆ ಬಿತ್ತು. ಸಂಸ್ಥಾನದ ವಸೂಲು ೩೦೮೮೩೪೦ ರೂಪಾಯಿ ಇರುತ್ತದೆ.